ವಿಶ್ವವಾಣಿ
ವಿಶ್ವಾಸವೇ ವಿಶ್ವ

ಇಂದಿನಿಂದ 2ನೇ ಟೆಸ್ಟ್

ಭಾರತ ಮತ್ತು ಇಂಗ್ಲೆಂಡ್ ನಡುವೆ ನಡೆಯುತ್ತಿರುವ ಐದು ಪಂದ್ಯಗಳ ಟೆಸ್ಟ್ ಸರಣಿಯ ಮೊದಲನೇ ಪಂದ್ಯ ಆಂಗ್ಲರು ಗೆದ್ದಿದ್ದು, ಬರ್ಮಿಂಗ್‌ಹ್ಯಾಮ್ ಎಡ್ಜ್‌ಬಾಸ್ಟನ್ ಮೈದಾನದಲ್ಲಿ ಇಂದಿನಿಂದ ಆರಂಭವಾಗಲಿರುವ ಎರಡನೇ ಟೆಸ್ಟ್ ಪಂದ್ಯದಲ್ಲಿ ತಿರುಗೇಟು ನೀಡಲು ಭಾರತ ತಂಡ ಸಜ್ಜಾಗಿದೆ.

ಸೊಂಪಾದ ಪುಟಗಳು

ಮಮ್ಮಿಗಳಿಂದ ಅಸ್ಥಿಭಂಗವನ್ನು ಗುಣಪಡಿಸುವವರೆಗೆ...
ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ 6

ಆಟೋ-ಬೈಕ್ ಟ್ಯಾಕ್ಸಿ ಡಿಕ್ಕಿ ತಪ್ಪಿಸಬಾರದೇಕೆ?
ಸಿಂಹಾವಲೋಕನ
ದು.ಗು.ಲಕ್ಷ್ಮಣ 7

ದಾರಿದೀಪೋಕ್ತಿ



ನಿಮ್ಮ ಹಿಂದಿನ ಅಥವಾ ಕೊನೆಯ ಪ್ರಮಾದಕ್ಕಿಂತ ಮುಂದಿನ ನಡೆ ಏನು ಎಂಬುದು ಮುಖ್ಯ. ಆಗಿ ಹೋದ ಪ್ರಮಾದವನ್ನು ಸರಿಪಡಿಸುವುದು ಸಾಧ್ಯವಿಲ್ಲ. ಆದರೆ ಅದಾದ ಬಳಿಕ ನೀವು ಏನು ಮಾಡುತ್ತೀರಿ ಎಂಬುದು ಮುಖ್ಯವಾಗುತ್ತದೆ.

ವಕ್ರತುಂಡೋಕ್ತಿ

ನಾಯಿಗಳು ಡಾಗ್ ಫುಡ್‌ನ್ನು ಇಷ್ಟಪಡದಿದ್ದರೆ, ಎಷ್ಟೇ ಆಕರ್ಷಕ ಪ್ಯಾಕೇಜ್ ಮಾಡಿದರೂ ಪ್ರಯೋಜನವಿಲ್ಲ.

ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್ ಬೆಲೆ ಇಳಿಕೆ

ದೆಹಲಿ: ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್ ಬೆಲೆಯನ್ನು ಸತತ 4ನೇ ಬಾರಿಗೆ ಇಳಿಕೆ ಮಾಡಲಾಗಿದ್ದು, ಈ ಬಾರಿ ₹58.50ಯಷ್ಟು ಕಡಿಮೆ ಮಾಡಲಾಗಿದೆ. 19 ಕೆ.ಜಿ. ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್ ಬೆಲೆಯು ದೆಹಲಿಯಲ್ಲಿ ಮಂಗಳವಾರದಿಂದ ₹1,665ಕ್ಕೆ ತಗ್ಗಿದೆ. ಮನೆಬಳಕೆಯ ಎಲ್‌ಪಿಜಿ ಸಿಲಿಂಡರ್ ಬೆಲೆಯಲ್ಲಿ ವ್ಯತ್ಯಾಸ ಆಗಿಲ್ಲ. ವಿಮಾನಗಳಲ್ಲಿ ಬಳಕೆ ಮಾಡುವ ಇಂಧನದ (ಎಟಿಎಫ್) ಬೆಲೆಯನ್ನು ಶೇ.7.5ರಷ್ಟು ಹೆಚ್ಚು ಮಾಡಲಾಗಿದೆ.

ಫನ್‌ತರಂಗ
- ರಘುಪತಿ ಶೃಂಗೇರಿ -

'ಸರ್ಕಾರಕ್ಕೆ ಸಿಎಟಿ ಶಾಕ್'
(ಪೊಲೀಸ್ ಆಯುಕ್ತರನ್ನು ಅಮಾನತು ಗೊಳಿಸಿದ ಪ್ರಕರಣ)



ಮಾತಿನ ಮಲ್ಲರಿಗೆ ಕಾಂಗ್ರೆಸ್ ವರಿಷ್ಠರ ಎಚ್ಚರಿಕೆ, ನಿಷ್ಠ ಇಕ್ಬಾಲ್‌ಗೆ ಡಿಕೆಶಿ ನೋಟಿಸ್ | ಸುರ್ಜೇವಾಲಗೆ ಜಮೀರ್ ಸಮಜಾಯಿಸಿ

ಬಾಯ್ಬಿಟ್ರೆ ನೋಟಿಸ್



ಸಂಘಟನೆ ಕುರಿತು ಮಾರ್ಗದರ್ಶನ ನೀಡಲು ರಣದೀಪ್ ಸಿಂಗ್ ಸುರ್ಜೇವಾಲ ಅವರು ಆಗಮಿಸಿದ್ದು, ಶಾಸಕರ ಅಹವಾಲುಗಳನ್ನು ಸ್ವೀಕರಿಸಲಾಗುತ್ತಿದೆ. ಕೆಲವು ಶಾಸಕರ ಹೇಳಿಕೆಗಳ ಮಧ್ಯೆ ಪಕ್ಷದಲ್ಲಿ ಶಿಸ್ತು ತರಲು ಪ್ರಯತ್ನಿಸುತ್ತಿದ್ದಾರೆ. ಇದರ ಹೊರತಾಗಿ ನಾಯಕತ್ವ ಬದಲಾವಣೆ, ಸಚಿವ ಸಂಪುಟ ವಿಸ್ತರಣೆ ಕುರಿತು ಯಾವುದೇ ಚರ್ಚೆ ಇಲ್ಲ. ಯಾರೊಬ್ಬರೂ ಮಾಧ್ಯಮಗಳ ಮುಂದೆ ಮಾತನಾಡುವಂತಿಲ್ಲ. ಇಕ್ಬಾಲ್ ಹುಸೇನ್, ಬಿ.ಆರ್.ಪಾಟೀಲ್, ಬಾಲಕೃಷ್ಣ ಯಾರೇ ಆಗಲಿ, ಈ ವಿಚಾರವಾಗಿ ಮಾಧ್ಯಮಗಳ ಮುಂದೆ ಯಾರೂ ಮಾತನಾಡಬಾರದು. ಮುಖ್ಯಮಂತ್ರಿ ಸ್ಥಾನದಲ್ಲಿ ಸಿದ್ದರಾಮಯ್ಯ ಅವರಿದ್ದು, ನಾವೆಲ್ಲರೂ ಅವರ ಕೈ ಬಲಪಡಿಸಬೇಕು.
– **ಡಿ.ಕೆ.ಶಿವಕುಮಾರ್** ಉಪಮುಖ್ಯಮಂತ್ರಿ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: 'ಬದಲಾವಣೆ, ಮಹಾಕ್ರಾಂತಿ' ನೆಪದಲ್ಲಿ ರಾಜ್ಯ ಕಾಂಗ್ರೆಸ್‌ನಲ್ಲಿ ವಿವಾದದ ಸ್ವರೂಪ ತೀವ್ರವಾಗುತ್ತಿರುವ ಬೆನ್ನಲ್ಲೇ ಹೈಕಮಾಂಡ್ ಸೂಚನೆಯಂತೆ 'ಬಾಯ್ಬಿಟ್ರೆ ನೋಟಿಸ್' ಎನ್ನುವ ಎಚ್ಚರಿಕೆಯ ಸಂದೇಶವನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ರವಾನಿಸಿದ್ದಾರೆ. ಶಾಸಕರೊಂದಿಗೆ ಕಳೆದ ಎರಡು ದಿನಗಳಿಂದ ಪ್ರತ್ಯೇಕ ಸಭೆ ನಡೆಸುತ್ತಿರುವ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ರಾಜ್ಯಕ್ಕೆ ಆಗಮಿಸಿದ್ದು, ಈ ವೇಳೆ ಹಲವು ಶಾಸಕರು ಆರೋಪ, ಪ್ರತ್ಯಾರೋಪ ಮಾಡಿದ್ದಾರೆ. ಉಸ್ತುವಾರಿಗಳು ರಾಜ್ಯದಲ್ಲಿರುವಾಗಲೇ ಕೆಲ ಶಾಸಕರು ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಹೇಳಿಕೆ ನೀಡಿರುವುದರಿಂದ ಹೈಕಮಾಂಡ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ. ಇದರ ಬೆನ್ನಲ್ಲೇ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಯಾರೇ ಬಹಿರಂಗ ಹೇಳಿಕೆ ನೀಡಿದರೂ ಅವರ ವಿರುದ್ಧ ಕ್ರಮವಹಿಸಲಾಗುವುದು ಎಂದು ಎಚ್ಚರಿಸಿದ್ದಾರೆ.

- ಕಾಂಗ್ರೆಸ್ ನಾಯಕರಿಗೆ ಸ್ಪಷ್ಟ ಎಚ್ಚರಿಕೆ ನೀಡಿದ ಡಿ.ಕೆ.ಶಿವಕುಮಾರ್
- ಯಾರ ಪರ, ವಿರೋಧ ಮಾತನಾಡಿದರೂ ಶಿಸ್ತು ಕ್ರಮದ ಎಚ್ಚರಿಕೆ
- ಹೈಕಮಾಂಡ್ ಸೂಚನೆಯ ಬೆನ್ನಲ್ಲೇ ಡಿಸಿಎಂ ಡಿಕೆಶಿ ಸ್ಪಷ್ಟನೆ

ಪಕ್ಷದ ವರ್ಚಸ್ಸಿಗೆ ಧಕ್ಕೆಯಾಗುವಂತಹ ಹೇಳಿಕೆ ನೀಡಿದರೆ ನೋಟಿಸ್ ನೀಡುವುದಾಗಿ ಡಿಕೆ ಹೇಳಿದ ಬೆನ್ನಲ್ಲೇ, ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿಯಾಗಬೇಕು ಎಂದಿದ್ದ ರಾಮನಗರ ಶಾಸಕ ಇಕ್ಬಾಲ್ ಹುಸೇನ್‌ಗೆ ನೋಟಿಸ್ ಜಾರಿಯಾಗಿದೆ. ಈ ಮೂಲಕ ತಮ್ಮ ಆಪ್ತರಿಗೆ ನೋಟಿಸ್ ನೀಡಿರುವ ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ವಿಷಯದಲ್ಲಿ ಮಾತನಾಡಿರುವ ನಾಯಕರಿಗೂ ನೋಟಿಸ್ ನೀಡುವ ಸುಳಿವು ನೀಡಿದ್ದಾರೆ.

ಶಾಸಕರಿಗೂ ಸುರ್ಜೇವಾಲ ಎಚ್ಚರಿಕೆ: ಮಂಗಳವಾರ ಭೇಟಿಯಾದ ಕೆಲ ಶಾಸಕರು ಈ ಹಿಂದೆ ಮುಖ್ಯಮಂತ್ರಿ ಬದಲಾವಣೆ, ಸಚಿವ ಸ್ಥಾನದ ಆಕಾಂಕ್ಷೆಗೆ ಸಂಬಂಧಿಸಿದಂತೆ ಬಹಿರಂಗ ಹೇಳಿಕೆ ನೀಡಿದ್ದರು.

→ 4

ಇಕ್ಬಾಲ್ ಹುಸೇನ್‌ಗೆ ನೋಟಿಸ್

ಮುಂದಿನ ದಿನಗಳಲ್ಲಿ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗುವುದು ನಿಶ್ಚಿತ ಎಂದು ಶಾಸಕ ಇಕ್ಬಾಲ್ ಹುಸೇನ್ ಹೇಳಿದ್ದು ತೀವ್ರ ವಿವಾದಕ್ಕೆ ಕಾರಣವಾಗಿತ್ತು. ಯಾರ ಪರ-ವಿರೋಧ ಮಾತನಾಡಿದ್ದರೂ ನೋಟಿಸ್ ನೀಡುವುದಾಗಿ ಡಿಕೆಶಿ ಸ್ಪಷ್ಟಪಡಿಸಿದ್ದರು. ಇದರ ಮೊದಲ ಭಾಗವಾಗಿ ತಮ್ಮ ಆಪ್ತ ಇಕ್ಬಾಲ್ ಹುಸೇನ್‌ಗೆ ನೋಟಿಸ್ ನೀಡುವ ಮೂಲಕ ಉಳಿದವರಿಗೆ ಎಚ್ಚರಿಕೆ ಸಂದೇಶ ರವಾನಿಸಿದ್ದಾರೆ.

ವರದಿ ಸಲ್ಲಿಸಿದ ಜಮೀರ್

ಬಿ.ಆರ್.ಪಾಟೀಲ್ ಮಾಡಿರುವ ವಸತಿ ಇಲಾಖೆ ಆರೋಪಕ್ಕೆ ಸಂಬಂಧಿಸಿದಂತೆ ಸಚಿವ ಜಮೀರ್ ಅಹ್ಮದ್ ಸುರ್ಜೇವಾಲ ಅವರನ್ನು ಭೇಟಿಯಾಗಿ ವಿವರಣೆ ನೀಡಿದ್ದಾರೆ. ವಸತಿ ಇಲಾಖೆಯಲ್ಲಿ ಹೊಸದಾಗಿ ಯಾವ ಮನೆಗಳನ್ನೂ ಹಂಚಿಕೆ ಮಾಡಿಲ್ಲ. ಈಗಾಗಲೇ ಮಂಜೂರಾಗಿರುವ ಮನೆಗಳ ಕಾಮಗಾರಿಗಳನ್ನು ಪೂರ್ಣಗೊಳಿಸಲು ಆದ್ಯತೆ ನೀಡಲಾಗಿದೆ. ಹೀಗಾಗಿ ಹೊಸ ಮನೆಗಳ ಹಂಚಿಕೆಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬುದು ಆಧಾರರಹಿತ ಎಂದು ಸಮರ್ಥಿಸಿಕೊಂಡಿದ್ದಾರೆ ಎನ್ನಲಾಗಿದೆ.

ಹೈಕೋರ್ಟ್ ಆದೇಶ, ಕಡತ ಹಸ್ತಾಂತರಿಸಲು ಸೂಚನೆ | ಬಿ.ನಾಗೇಂದ್ರಗೆ ಢವಢವ

ವಾಲ್ಮೀಕಿ ಹಗರಣ ಸಿಬಿಐಗೆ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ನಡೆದ ಅಕ್ರಮ ಹಣ ವರ್ಗಾವಣೆ ಪ್ರಕರಣದ ತನಿಖೆಯನ್ನು ಸಿಬಿಐಗೆ ವರ್ಗಾಯಿಸುವಂತೆ ಹೈಕೋರ್ಟ್ ಎಸ್‌ಐಟಿಗೆ ಸೂಚನೆ ನೀಡಿದೆ.

ಸಿಬಿಐ ಈವರೆಗೆ ಬ್ಯಾಂಕ್ ವಿಚಾರಕ್ಕೆ ಸೀಮಿತವಾಗಿ ತನಿಖೆ ನಡೆಸುತ್ತಿತ್ತು. ಇನ್ಮುಂದೆ ಸಿಬಿಐನಿಂದ ಸಮಗ್ರ ತನಿಖೆಯಾಗಬೇಕು ಎಂದು ಕೋರಿ ಶಾಸಕರಾದ ಬಸನಗೌಡ ಪಾಟೀಲ್ ಯತ್ನಾಳ್, ರಮೇಶ ಜಾರಕಿಹೊಳಿ, ಮಾಜಿ ಶಾಸಕರಾದ ಅರವಿಂದ ಲಿಂಬಾವಳಿ ಮತ್ತು ಕುಮಾರ್ ಬಂಗಾರಪ್ಪ ಅವರು ರಿಟ್ ಅರ್ಜಿ ಸಲ್ಲಿಸಿದ್ದರು. ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠ, ತೀರ್ಪು ಕಾಯ್ದಿರಿಸಿತ್ತು. ಮಂಗಳವಾರ ತೀರ್ಪು ಪ್ರಕಟಿಸಿದ ಹೈಕೋರ್ಟ್, ವಿಶೇಷ ತನಿಖಾ ತಂಡದ ತನಿಖೆಯನ್ನು ರದ್ದುಗೊಳಿಸಿ, ಪ್ರಕರಣದ ಸಮಗ್ರ ತನಿಖೆಗೆ ನಡೆಸುವಂತೆ ಸಿಬಿಐಗೆ ಸೂಚಿಸಿದೆ. ಅಲ್ಲದೇ ಎಸ್‌ಐಟಿ ಸಂಗ್ರಹಿಸಿದ ಎಲ್ಲ ದಾಖಲೆಗಳನ್ನು ಸಿಬಿಐಗೆ ವರ್ಗಾಯಿಸುವಂತೆ ಆದೇಶಿಸಿದೆ.

ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದ ತನಿಖೆಯನ್ನು ಸಿಬಿಐಗೆ ವಹಿಸುವಂತೆ ಕೋರಿ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಕೂಡ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. ಈ ಪ್ರಕರಣದಲ್ಲಿ ಹಣ ದುರುಪಯೋಗದ ಆರೋಪ ಗಳಿದ್ದು, ತನಿಖೆಯನ್ನು ಸಿಬಿಐಗೆ ವಹಿಸಬೇಕೆಂದು ಬ್ಯಾಂಕ್ ಮನವಿ ಮಾಡಿತ್ತು. ಆದರೆ, ಹೈಕೋರ್ಟ್ ಈ ಮನವಿಯನ್ನು ತಿರಸ್ಕರಿಸಿತ್ತು.

ಏನಿದು ಪ್ರಕರಣ?: ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧೀಕ್ಷಕ ಚಂದ್ರಶೇಖರನ್ ಆತ್ಮಹತ್ಯೆಯ ನಂತರ ಈ ಬಹುಕೋಟಿ ಹಗರಣ ಬೆಳಕಿಗೆ ಬಂದಿದೆ. ಚಂದ್ರಶೇಖರನ್ ಅವರು ಆತ್ಮಹತ್ಯೆಗೂ ಮುನ್ನ ಬರೆದಿದ್ದ ಡೆತ್‌ನೋಟ್‌ನಲ್ಲಿ ಮೂವರು ಹೆಸರು ಹಾಗೂ ಬಹುಕೋಟಿ ಹಗರಣ ನಡೆದಿರುವ ಬಗ್ಗೆ ಉಲ್ಲೇಖಿಸಿದ್ದರು.

→ 4

- ಯುನಿಯನ್ ಬ್ಯಾಂಕ್ ಅರ್ಜಿ ತಿರಸ್ಕಾರ, ಬಿಜೆಪಿ ನಾಯಕರ ಅರ್ಜಿ ಪುರಸ್ಕಾರ
- ವಿಶೇಷ ತನಿಖಾ ತಂಡದ ತನಿಖೆ ರದ್ದು, ಪ್ರಕರಣದ ಸಮಗ್ರ ತನಿಖೆಗೆ ಸಿಬಿಐಗೆ ಸೂಚನೆ
- ಮಾಜಿ ಸಚಿವ ಬಿ.ನಾಗೇಂದ್ರ ಸೇರಿದಂತೆ ಹಲವರಿಗೆ ಢವ ಢವ ಶುರು

2024-25 ನೇ ಸಾಲಿನ ಯೋಜನೆಗಳಿಗೆ ಮೀಸಲಿಟ್ಟ 187 ಕೋಟಿ ಮೊತ್ತದಲ್ಲಿ 88 ಕೋಟಿ ಹಣವನ್ನು ಪ್ರಭಾವಿಗಳ ಕೈವಾಡದಿಂದ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಎಂ.ಜಿ ರಸ್ತೆಯ ಶಾಖೆಯ ಅನಧಿಕೃತ ಖಾತೆಗೆ ವರ್ಗಾವಣೆ ಮಾಡಲಾಗಿತ್ತು. ಇದರ ಹಿಂದೆ ಯಾರಿದ್ದಾರೆ ಎಂಬುದನ್ನು ಬಹಿರಂಗಪಡಿಸಲು ಹಾಗೂ ಪರಿಶಿಷ್ಟ ಜನರಿಗೆ ಆದ ಅನ್ಯಾಯವನ್ನು ಖಂಡಿಸಿ ಅವರಿಗೆ ನ್ಯಾಯ ಒದಗಿಸುವ ಸಲುವಾಗಿ ಈ ಪ್ರಕರಣವನ್ನು ಸಿಬಿಐಗೆ ವಹಿಸುವಂತೆ ನಾವು ಕೋರ್ಟ್ ಮೊರೆ ಹೋಗಿದ್ದೆವು. ಸದ್ಯ ಕೋರ್ಟ್ ನಮ್ಮ ಮನವಿಯನ್ನು ಪುರಸ್ಕರಿಸಿದೆ.
– **ಅರವಿಂದ ಲಿಂಬಾವಳಿ**, ಮಾಜಿ ಸಚಿವ

ವಿರೋಧಿಸಿದ್ದ ವಿಜಯೇಂದ್ರ ಬಣ

ಇನ್ನು ಈ ಹಿಂದೆ ವಾಲ್ಮೀಕಿ ಹಗರಣ ಬಹಿರಂಗವಾಗುತ್ತಿದ್ದಂತೆ ಸರಕಾರದ ವಿರುದ್ಧ ಹೋರಾಟ ರೂಪಿಸಿ, ಪಾದಯಾತ್ರೆ ಮಾಡಲು ರಮೇಶ್ ಜಾರಕಿಹೊಳಿ, ಅರವಿಂದ ಲಿಂಬಾವಳಿ ಅವರು ಹೋರಾಟ ರೂಪಿಸಿದ್ದರು. ವಕ್ಫ್ ಮಾದರಿಯಲ್ಲಿಯೇ ವಾಲ್ಮೀಕಿ ಹಗರಣದ ಬಗ್ಗೆಯೂ ಹೋರಾಟ ರೂಪಿಸಲು ಮುಂದಾದ ಸಮಯದಲ್ಲಿ, ವಿಜಯೇಂದ್ರ ಬಣದಿಂದ ಇದಕ್ಕೆ ತೀವ್ರ ವಿರೋಧ ವ್ಯಕ್ತವಾಗಿತ್ತು. ಪಕ್ಷದ ವರಿಷ್ಠರ ಬಳಿಗೆ ಈ ವಿಷಯವನ್ನು ತೆಗೆದುಕೊಂಡು ಹೋಗಿದ್ದರಿಂದ, ಅನಿವಾರ್ಯವಾಗಿ ಹೋರಾಟ ಕೈಬಿಟ್ಟು ಕಾನೂನಾತ್ಮಕ ಹೋರಾಟಕ್ಕೆ ಅರವಿಂದ ಲಿಂಬಾವಳಿ ಬಣ ತೀರ್ಮಾನಿಸಿತ್ತು.

ಎಸಿಪಿ ಅಮಾನತು ರದ್ದುಗೊಳಿಸಿ ಕೇಂದ್ರ ಆಡಳಿತಾತ್ಮಕ ನ್ಯಾಯಮಂಡಳಿ ಆದೇಶ

ಕಾಲ್ತುಳಿತ ತಡೆಗೆ ಮಾರ್ಗಸೂತ್ರ ಜಾರಿ

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿಜಯೋತ್ಸವದ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸಂಭವಿಸಿದ ಕಾಲ್ತುಳಿತ ದುರಂತ ಹಿನ್ನೆಲೆಯಲ್ಲಿ ಕರ್ನಾಟಕ ಪೊಲೀಸ್ ಇಲಾಖೆಯು ಸಾರ್ವಜನಿಕ ಸಮಾರಂಭಗಳಲ್ಲಿ ಜನಸಂದಣಿ ನಿಯಂತ್ರಣಕ್ಕಾಗಿ ಮಾರ್ಗಸೂಚಿ ಬಿಡುಗಡೆ ಮಾಡಿದೆ. ಹೆಚ್ಚು ಜನ ಸೇರುವ ಕಾರ್ಯಕ್ರಮಗಳಲ್ಲಿ ಜನಜಂಗುಳಿ ನಿಯಂತ್ರಣಕ್ಕೆ ಈ ಮಾರ್ಗಸೂಚಿ ಜಾರಿಗೆ ತರಲಾಗಿದ್ದು, ಯಾವುದೇ ಬಹಳಷ್ಟು ಸಂಖ್ಯೆಯಲ್ಲಿ ಜನ ಸೇರುವ ಸಭೆ ಸಮಾರಂಭಗಳಿಗೆ ಈ ಮಾರ್ಗಸೂಚಿಗಳು ಅನ್ವಯವಾಗಲಿದೆ.

ಹಬ್ಬಗಳು, ಪ್ರತಿಭಟನೆಗಳು, ಮೆರವಣಿಗೆಗಳು ಮತ್ತು ಕ್ರೀಡಾ ಕೂಟಗಳಂತಹ ಬೃಹತ್ ಜನ ಸಮುದಾಯ ಸೇರುವ ಯಾವುದೇ ಕಾರ್ಯಕ್ರಮಗಳಲ್ಲಿ ಸಾರ್ವಜನಿಕ ಭದ್ರತೆ, ಕಾನೂನು-ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ಈ ಮಾರ್ಗಸೂಚಿ ಜಾರಿಗೆ ತರಲಾಗಿದೆ. ಸಾರ್ವಜನಿಕ ಕಾರ್ಯಕ್ರಮಕ್ಕೂ ಮುನ್ನ ಸ್ಥಳದ ಸಂಪೂರ್ಣ ಪರಿಶೀಲನೆ ಮತ್ತು ಕಾರ್ಯಕ್ರಮ ಆಯೋಜಕರ ಸಹಯೋಗದೊಂದಿಗೆ ವಿವರವಾದ ಯೋಜನೆ ರಚಿಸುವುದು ಈಗ ಕಡ್ಡಾಯ.

→ 4

- ಸಾರ್ವಜನಿಕರ ಪ್ರವೇಶ ದ್ವಾರಗಳಲ್ಲಿ ತರಬೇತಿ ಪಡೆದ ಸಿಬ್ಬಂದಿಯನ್ನು ನಿಯೋಜಿಸಬೇಕು.
- ಜನಸಂದಣಿಯನ್ನು ಸುಗಮಗೊಳಿಸಲು ಕ್ಯೂಆರ್ ಕೋಡ್ ಅಥವಾ ಬಯೋಮೆಟ್ರಿಕ್ ತಂತ್ರಜ್ಞಾನದ ಬಳಕೆ ಮತ್ತು ವಿಭಿನ್ನ ವರ್ಗಗಳಿಗೆ (ಉದಾಹರಣೆ: ಪುರುಷರು, ಮಹಿಳೆಯರು, ವೃದ್ಧರು, ವಿಶೇಷಚೇತನರು) ಪ್ರತ್ಯೇಕ ಪ್ರವೇಶ ದ್ವಾರಗಳನ್ನು ಒದಗಿಸಬೇಕು.
- ತುರ್ತು ನಿರ್ಗಮನ ಮಾರ್ಗಗಳನ್ನು ಸ್ಪಷ್ಟವಾಗಿ ಗುರುತಿಸಬೇಕು ಮತ್ತು ಯಾವುದೇ ಸಂದರ್ಭದಲ್ಲಿಯೂ ಲೌಡ್‌ಸ್ಪೀಕರ್‌ಗಳ ಮೂಲಕ ಸಾರ್ವಜನಿಕರಿಗೆ ಸೂಚನೆಗಳನ್ನು ನೀಡುವ ವ್ಯವಸ್ಥೆ ಇರಬೇಕು.
- ತುರ್ತು ವಾಹನಗಳಾದ ಅಂಬುಲೆನ್ಸ್‌ಗಳಿಗೆ ಪಾರ್ಕಿಂಗ್ ವ್ಯವಸ್ಥೆ ಸೇರಿದಂತೆ ವೈದ್ಯಕೀಯ ನೆರವಿನ ವ್ಯವಸ್ಥೆಗಳನ್ನು ಖಚಿತಪಡಿಸಿಕೊಳ್ಳಬೇಕು.

ವಿಕಾಸ್ ಮೇಲುಗೈ

ಆರ್‌ಸಿಬಿ ವಿಜಯೋತ್ಸವ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಉಂಟಾಗಿದ್ದ ಕಾಲ್ತುಳಿತದಲ್ಲಿ 11 ಅಭಿಮಾನಿಗಳ ಸಾವು ಪ್ರಕರಣದಲ್ಲಿ ಹೆಚ್ಚುವರಿ ಪೊಲೀಸ್ ಆಯುಕ್ತರಾಗಿದ್ದ ವಿಕಾಸ್ ಕುಮಾರ್ ಅವರನ್ನು ಅಮಾನತು ಮಾಡಿ ಸರಕಾರ ಹೊರಡಿಸಿದ್ದ ಆದೇಶವನ್ನು ಕೇಂದ್ರ ಆಡಳಿತಾತ್ಮಕ ನ್ಯಾಯಮಂಡಳಿ(ಸಿಎಟಿ) ರದ್ದುಪಡಿಸಿ ಆದೇಶಿಸಿದೆ. ತಮ್ಮನ್ನು ಅಮಾನತು ಮಾಡಿರುವ ಸರಕಾರದ ಆದೇಶ ಪ್ರಶ್ನಿಸಿ ವಿಕಾಸ್ ಕುಮಾರ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಬಿ.ಕೆ.ಶ್ರೀವಾತ್ಸವ್, ಸದಸ್ಯ ಸಂತೋಷ್ ಮೆಹ್ರಾ ಅವರಿದ್ದ ಪೀಠ ಈ ಆದೇಶ ನೀಡಿದೆ. ಅಲ್ಲದೆ, ತಕ್ಷಣ ಅರ್ಜಿದಾರರನ್ನು ಅದೇ ಹುದ್ದೆಗೆ ಮರುನಿಯೋಜನೆಗೆ ಮಾಡುವಂತೆ ಆದೇಶದಲ್ಲಿ ತಿಳಿಸಿದೆ. ಆದರೆ ಈ ಬಗ್ಗೆ ಪ್ರತಿಕ್ರಿಯಿಸಿರುವ ಸಿಎಂ ಸಿದ್ದರಾಮಯ್ಯ ಅವರು, ಸಿಎಟಿ ಅರ್ಜಿಗೆ ಮೇಲ್ಮನವಿ ಸಲ್ಲಿಸಲು ಸರಕಾರಕ್ಕೆ ಅವಕಾಶವಿದ್ದು, ಆ ಬಗ್ಗೆ ಪರಿಶೀಲನೆ ನಡೆಸಲಾಗುವುದು ಎಂದು ಸ್ಪಷ್ಟಪಡಿಸಿದ್ದಾರೆ.

ಭಾರತ-ಪಾಕ್ ಕೈದಿಗಳ ಪಟ್ಟಿ ವಿನಿಮಯ

ದೆಹಲಿ: ಭಾರತ ಮತ್ತು ಪಾಕಿಸ್ತಾನವು ಏಕಕಾಲಕ್ಕೆ ತಮ್ಮ ತಮ್ಮ ವಶದಲ್ಲಿರುವ ನಾಗರಿಕ ಕೈದಿಗಳ ಮತ್ತು ಮೀನುಗಾರರ ಪಟ್ಟಿಯನ್ನು ಪರಸ್ಪರ ವಿನಿಮಯ ಮಾಡಿಕೊಂಡಿವೆ. ತನ್ನ ದೇಶದ ಜೈಲುಗಳಲ್ಲಿ ದಾಖಲಾದ 49 ನಾಗರಿಕರು ಮತ್ತು 270 ಮೀನುಗಾರರು ಸೇರಿ 319 ಭಾರತೀಯ ಕೈದಿಗಳ ಪಟ್ಟಿಯನ್ನು ಪಾಕಿಸ್ತಾನ ಹಸ್ತಾಂತರಿಸಿದೆ. ಭಾರತವು ಸಹ 263 ನಾಗರಿಕರು, 77 ಮೀನುಗಾರರು ಸೇರಿ 340 ಪಾಕಿಸ್ತಾನಿ ಕೈದಿಗಳ ಪಟ್ಟಿ ಬಿಡುಗಡೆ ಮಾಡಿದೆ. ಒಪ್ಪಂದದ ಪ್ರಕಾರ, ಉಭಯ ದೇಶಗಳು ವರ್ಷಕ್ಕೆ ಎರಡು ಬಾರಿ ಅಂದರೆ, ಜನವರಿ 1 ಮತ್ತು ಜುಲೈ 1 ರಂದು ಪರಸ್ಪರ ಬಂಧನದಲ್ಲಿದ್ದ ಕೈದಿಗಳ ಪಟ್ಟಿ ವಿನಿಮಯ ಮಾಡಿಕೊಳ್ಳಬೇಕು. ಅದರಂತೆ ಜು.1ರಂದು ಕೈದಿಗಳ ಪಟ್ಟಿ ವಿನಿಮಯ ಮಾಡಿಕೊಂಡಿವೆ.

ಕಾರ್ಖಾನೆಯಲ್ಲಿ ಸ್ಫೋಟ: ಸಾವಿನ ಸಂಖ್ಯೆ 42ಕ್ಕೆ ಏರಿಕೆ

ಹೈದರಾಬಾದ್: ತೆಲಂಗಾಣದ ಸಂಗಾರೆಡ್ಡಿ ಜಿಲ್ಲೆಯ ಪಾಶಮೈಲಾರಂ ಕೈಗಾರಿಕಾ ಪ್ರದೇಶದಲ್ಲಿರುವ ಸಿಗಾಚಿ ಫಾರ್ಮಾ ಕಂಪನಿಯ ಔಷಧ ಘಟಕದಲ್ಲಿ ಸೋಮವಾರ ಸಂಭವಿಸಿದ ರಿಯಾಕ್ಟರ್ ಸ್ಫೋಟದಲ್ಲಿ ಮೃತಪಟ್ಟವರ ಸಂಖ್ಯೆ 42ಕ್ಕೆ ಏರಿಕೆಯಾಗಿದೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಮೂವರು ಗಾಯಾಳುಗಳು ಅಸ್ವಸ್ಥರಾದ ಬಳಿಕ ಮೃತಪಟ್ಟಿದ್ದಾರೆ. ಅವಶೇಷಗಳನ್ನು ತೆಗೆಯುವಾಗ ಹಲವಾರು ಶವಗಳು ಪತ್ತೆಯಾಗಿವೆ. ಸತ್ತವರಲ್ಲಿ ಕೆಲವರ ಮೃತದೇಹ ಸಂಪೂರ್ಣ ಸುಟ್ಟುಹೋಗಿದ್ದು, ಗುರುತು ಪತ್ತೆ ಹಚ್ಚಲು ಡಿಎನ್‌ಎ ಪರೀಕ್ಷೆ ನಡೆಸಲಾಗುವುದು. ರಕ್ಷಣಾ ಕಾರ್ಯಾಚರಣೆ ಅಂತಿಮ ಹಂತದಲ್ಲಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪರಿತೋಷ್ ಪಂಕಜ್ ತಿಳಿಸಿದ್ದಾರೆ.

10 ವರ್ಷ ಮೀರಿದ ವಾಹನಗಳಿಗೆ ಡೀಸೇಲ್ ಇಲ್ಲ

ದೆಹಲಿ: ದೆಹಲಿ ಸರಕಾರವು ಜುಲೈ 1ರಿಂದಲೇ 15 ವರ್ಷಗಳಿಗಿಂತ ಹಳೆಯದಾದ ಪೆಟ್ರೋಲ್ ವಾಹನಗಳು ಮತ್ತು 10 ವರ್ಷಗಳಿಗಿಂತ ಹಳೆಯದಾದ ಡೀಸೆಲ್ ವಾಹನಗಳನ್ನು ರಸ್ತೆಯಲ್ಲಿ ಓಡಿಸುವುದನ್ನು ನಿಷೇಧಿಸಿದೆ. ಇದರ ಭಾಗವಾಗಿ ದೆಹಲಿಯಲ್ಲಿ ಅವಧಿ ಮೀರಿದ ವಾಹನಗಳಿಗೆ ಪೆಟ್ರೋಲ್ ಅಥವಾ ಡೀಸೆಲ್ ಹಾಕದಿರಲು ನಿಯಮ ರೂಪಿಸಿದೆ. ಈ ನಿಯಮಗಳ ಕಟ್ಟುನಿಟ್ಟಿನ ಜಾರಿಯನ್ನು ಖಚಿತಪಡಿಸಿಕೊಳ್ಳಲು ದೆಹಲಿ ಸಾರಿಗೆ ಇಲಾಖೆ, ದೆಹಲಿ ಪೊಲೀಸ್ ಮತ್ತು ಸಂಚಾರ ಸಿಬ್ಬಂದಿಯೊಂದಿಗೆ ಸಮನ್ವಯದೊಂದಿಗೆ, ಜೀವಿತಾವಧಿಯ ವಾಹನಗಳಿಗೆ ಇಂಧನ ಪೂರೈಕೆಯನ್ನು ಮೇಲ್ವಿಚಾರಣೆ ಮಾಡಲು ಮತ್ತು ತಡೆಯಲು ಸಮಗ್ರ ಕಾರ್ಯತಂತ್ರವನ್ನು ಜಾರಿಗೆ ತಂದಿದೆ.

ರಾಜ್ಯದಲ್ಲಿ ಒಂದೇ ದಿನದಲ್ಲಿ ಏಳು ಮಂದಿ ಸಾವು | ಹಾಸನ ಜಿಲ್ಲೆಯಲ್ಲೇ ಮತ್ತೆ ಮೂವರು ಬಲಿ

ಹೃದಯಾಘಾತ: ನಿಲ್ಲದ ಸಾವಿನ ಓಟ

ಬೆಂಗಳೂರು: ಹೃದಯಾಘಾತದಿಂದ ಮಂಗಳವಾರ ಒಂದೇ ದಿನದಲ್ಲಿ ರಾಜ್ಯದಲ್ಲಿ ವೈದ್ಯ ಸೇರಿದಂತೆ ಒಟ್ಟು ಏಳು ಮಂದಿ ಮೃತಪಟ್ಟಿದ್ದಾರೆ. ಹಾಸನದಲ್ಲಿ ಮೂವರು, ಧಾರವಾಡ ಜಿಲ್ಲೆಯಲ್ಲಿ ಇಬ್ಬರು, ಶಿವಮೊಗ್ಗ ಜಿಲ್ಲೆಯಲ್ಲಿ ಒಬ್ಬರು, ತುಮಕೂರು ಜಿಲ್ಲೆಯಲ್ಲಿ ಒಬ್ಬರು ಮೃತಪಟ್ಟಿದ್ದಾರೆ. ಮೃತದಲ್ಲಿ ಮೂವರು 30 ವರ್ಷ ಒಳಗಿನವರಾಗಿದ್ದರೆ, ಇತರ ನಾಲ್ವರು 44-48 ವರ್ಷ ವಯಸ್ಸಿನವರಾಗಿದ್ದಾರೆ.

ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲೂಕಿನ ಸೋಮನಹಳ್ಳಿ ಕೊಪ್ಪಲು ಗ್ರಾಮದ ಸಂಜಯ್ (27), ತಾಲೂಕಿನ ಕೊಮ್ಮೆನಹಳ್ಳಿಯ ಗೃಹಿಣಿ ಹರ್ಷಿತಾ (22) ಹಾಗೂ ಬೇಲೂರು ತಾಲೂಕಿನ ಮಾದೀಹಳ್ಳಿಯ ರವಿಕುಮಾರ್ (30) ಮೃತರು.

ಸಂಜಯ್ ಸೋಮವಾರ ರಾತ್ರಿ ಸ್ನೇಹಿತರೊಂದಿಗೆ ಪಾರ್ಟಿ ಮುಗಿಸಿ ಬಂದ ನಂತರ ರಕ್ತದೊತ್ತಡ ಹೆಚ್ಚಾಗಿದ್ದು, ಎದೆ ನೋವು ಕಾಣಿಸಿಕೊಂಡಿತ್ತು. ಅವರನ್ನು ಸೋಮನಹಳ್ಳಿ ಪ್ರಾಥಮಿಕ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿತ್ತು. ಹೆಚ್ಚಿನ ಚಿಕಿತ್ಸೆಗಾಗಿ ಬೇರೊಂದು ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯದಲ್ಲಿ ಮೃತಪಟ್ಟಿದ್ದಾರೆ. ಸಾವಿನ ಬಗ್ಗೆ ಅನುಮಾನ ವ್ಯಕ್ತಪಡಿಸಿರುವ ಸಂಬಂಧಿಕರು, ಹಳ್ಳಿ ಮೈಸೂರು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಒಂದೂವರೆ ತಿಂಗಳ ಬಾಣಂತಿಯಾಗಿದ್ದ ಹರ್ಷಿತಾ, ತವರೂರಾದ ಶಿವಮೊಗ್ಗ ಜಿಲ್ಲೆಯ ಆಯನೂರಿಗೆ ತೆರಳಿದ್ದರು. ಅಲ್ಲಿ ಹೃದಯಾಘಾತ ಆಗಿದ್ದು, ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯೆ ಮೃತಪಟ್ಟಿದ್ದಾರೆ. ಪತಿಯ ಊರಾದ ಕೊಮ್ಮೆನಹಳ್ಳಿಯಲ್ಲಿ ಅಂತ್ಯಕ್ರಿಯೆ ನಡೆಯಿತು.

ರವಿಕುಮಾರ್ ಅವರು ಒಂಬತ್ತು ತಿಂಗಳ ಮಗನ ಜತೆ ಆಟವಾಡುವಾಗ ಹೃದಯಾಘಾತ ಸಂಭವಿಸಿದೆ. ಮಾದೀಹಳ್ಳಿ ಗ್ರಾಮದ ಅವರು, ತವರೂರಾದ ಸಂಶಟ್ಟಿಹಳ್ಳಿಯಲ್ಲಿದ್ದ ಪತ್ನಿ ನೋಡಲು ಹೋಗಿದ್ದರು. ಸೋಮವಾರ ಸಂಜೆ ಮಗು ಜತೆ ಆಟವಾಡುವಾಗ ಎದೆನೋವಿನಿಂದ ಕುಸಿದು ಬಿದ್ದಿದ್ದಾರೆ. ಆಸ್ಪತ್ರೆಗೆ ಕರೆದೊಯ್ಯುವಷ್ಟರಲ್ಲಿಯೇ ಮೃತಪಟ್ಟಿದ್ದಾರೆ. ಕೃಷಿಕರಾಗಿದ್ದ ಅವರು 2 ವರ್ಷಗಳ ಹಿಂದೆ ವಿವಾಹವಾಗಿದ್ದರು. ಮಾದೀಹಳ್ಳಿಯಲ್ಲಿ ಮಂಗಳವಾರ ಅಂತ್ಯಕ್ರಿಯೆ ನೆರವೇರಿತು.

ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲೂಕಿನ ಹೊಳೆಹೊನ್ನೂರು ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಹಿರಿಯ ವೈದ್ಯಾಧಿಕಾರಿಯಾಗಿದ್ದ ಡಾ.ಸಂದೀಪ್ (48) ಅವರು ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆ. ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸಿ ಮನೆಗೆ ತೆರಳಿದ ನಂತರ ಅವರಿಗೆ ರಾತ್ರಿ ಎದೆನೋವು ಕಾಣಿಸಿಕೊಂಡಿದೆ. ತಕ್ಷಣವೇ ಹೊರವಲಯದ ನಾರಾಯಣ ಹೃದಯಾಲಯದಲ್ಲಿ ದಾಖಲಾಗಿದ್ದರು. ಆದರೆ ಚಿಕಿತ್ಸೆ ಫಲಿಸದೆ ಸಾವನ್ನಪ್ಪಿದ್ದಾರೆ.

→ 4

ಡಾ.ಸಂದೀಪ್

ಹೆಬ್ಬಾಕ ಸ್ವಾಮಿ

ಫಕ್ಕಿರಪ್ಪ

ಮುತ್ತಪ್ಪ

ರಾಜ್ಯದಲ್ಲಿ ಎಳೆಯ ವಯಸ್ಸಿನವರ, ಯುವ ಜನರ ಹಠಾತ್ ನಿಧನಕ್ಕೆ ಕಾರಣಗಳೇನು? ಕೋವಿಡ್ ಲಸಿಕೆಯ ದುಷ್ಪರಿಣಾಮಗಳೇನಾದರೂ ಇರಬಹುದೇ? ಎಂದು ಕೂಲಂಕಷವಾಗಿ ಅಧ್ಯಯನ ನಡೆಸಲು ಇದೇ ಸಮಿತಿಗೆ ಕಳೆದ ಫೆಬ್ರವರಿ ತಿಂಗಳಲ್ಲೇ ಆದೇಶ ನೀಡಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಹೃದ್ರೋಗಿಗಳನ್ನು ಪರಿಶೀಲನೆಗೊಳಪಡಿಸಿ, ವಿಶ್ಲೇಷಣೆ ಮಾಡುವ ಕಾರ್ಯ ಕೂಡ ಪ್ರಗತಿಯಲ್ಲಿದೆ.
– **ಸಿದ್ದರಾಮಯ್ಯ**, ಮುಖ್ಯಮಂತ್ರಿ

ಇತ್ತೀಚೆಗೆ ಹೃದಯಾಘಾತಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಹೃದಯಾಘಾತಗಳನ್ನು ಅಧಿಸೂಚಿತ ಕಾಯಿಲೆ ಎಂದು ಪರಿಗಣಿಸುವ ಕುರಿತಂತೆ ಹಾಸನ ಪ್ರಕರಣಗಳ ವರದಿ ಬಂದ ಬಳಿಕ ಚರ್ಚೆ ನಡೆಸಲಾಗುವುದು.
– **ದಿನೇಶ್ ಗುಂಡೂರಾವ್**, ಆರೋಗ್ಯ ಸಚಿವ

ಸಮಾಚಾರ ಸಣ್ಣದಲ್ಲ

4636 ವೈದ್ಯರು, ಸಿಬ್ಬಂದಿ ವರ್ಗಾವಣೆ

ಬೆಂಗಳೂರು: ದಶಕದ ಬಳಿಕ ಆರೋಗ್ಯ ಇಲಾಖೆಯಲ್ಲಿ ಪೂರ್ಣಪ್ರಮಾಣದಲ್ಲಿ ಕೌನ್ಸೆಲಿಂಗ್ ಮೂಲಕ ವರ್ಗಾವಣೆ ನಡೆಯುತ್ತಿದ್ದು, ಕಳೆದ ನಾಲ್ಕು ದಿನಗಳಿಂದ ಆರೋಗ್ಯ ಸೌಧದಲ್ಲಿ ಸತತವಾಗಿ ವೈದ್ಯರು, ಸಿಬ್ಬಂದಿಗಳೊಂದಿಗೆ ವರ್ಗಾವಣೆ ಕೌನ್ಸೆಲಿಂಗ್ ನಡೆಸಲಾಗುತ್ತಿದೆ. ಪ್ರಕ್ರಿಯೆಯನ್ನು ಖುದ್ದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಪರಿಶೀಲನೆ ನಡೆಸಿದರು. ಕೌನ್ಸೆಲಿಂಗ್ ಗೆ ಅರ್ಜಿ ಹಾಕಿ ವರ್ಗಾವಣೆ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದ ವೈದ್ಯರು ಹಾಗೂ ಆರೋಗ್ಯ ಇಲಾಖೆ ಸಿಬ್ಬಂದಿಗಳೊಂದಿಗೆ ವ್ಯವಸ್ಥೆ ಕುರಿತಂತೆ ಸಚಿವರು ಚರ್ಚೆ ನಡೆಸಿದರು. ಹಲವು ವರ್ಷಗಳ ಬಳಿಕ ಆರೋಗ್ಯ ಇಲಾಖೆಯಲ್ಲಿ ಕೌನ್ಸೆಲಿಂಗ್ ಮೂಲಕ ವರ್ಗಾವಣೆ ನಡೆಸುತ್ತಿರುವುದಕ್ಕೆ ಸಚಿವ ದಿನೇಶ್ ಗುಂಡೂರಾವ್ ಅವರಿಗೆ ಆರೋಗ್ಯ ಇಲಾಖೆ ವೈದ್ಯರು ಹಾಗೂ ಸಿಬ್ಬಂದಿಗಳು ಧನ್ಯವಾದ ತಿಳಿಸಿದರು. ಪಾರದರ್ಶಕವಾಗಿ ಕೌನ್ಸೆಲಿಂಗ್ ವರ್ಗಾವಣೆ ಪ್ರಕ್ರಿಯೆ ನಡೆಸಲಾಗುತ್ತಿದೆಯಾ ಎಂದು ಇದೇ ವೇಳೆ ಸಚಿವ ದಿನೇಶ್ ಗುಂಡೂರಾವ್ ಸಿಬ್ಬಂದಿಗಳೊಂದಿಗೆ ಚರ್ಚಿಸಿ, ಪರಿಶೀಲನೆ ನಡೆಸಿದರು. ಸಚಿವರ ಪರಿಶೀಲನೆ ವೇಳೆ ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಹರ್ಷ ಗುಪ್ತಾ, ಇಲಾಖೆ ಆಯುಕ್ತರಾದ ಕೆ.ಬಿ ಶಿವಕುಮಾರ್ ಅವರು ಉಪಸ್ಥಿತರಿದ್ದರು. ಇಲ್ಲಿಯ ವರೆಗೆ ಕೌನ್ಸೆಲಿಂಗ್ ಗೆ ಒಟ್ಟು 5148 ಅರ್ಜಿ ಸಲ್ಲಿಸಿದ್ದು, ಒಟ್ಟು 4636 ವೈದ್ಯರು/ಸಿಬ್ಬಂದಿಗಳ ವರ್ಗಾವಣೆ ನಡೆಸಲಾಗಿದೆ. 251 ಸಿಬ್ಬಂದಿಗಳು ಕೌನ್ಸೆಲಿಂಗ್ ಗೆ ಗೈರು ಹಾಜರಾಗಿದ್ದಾರೆ. 261 ಪ್ರಕರಣಗಳಲ್ಲಿ ವಿನಾಯಿತಿ ನೀಡಲಾಗಿದೆ. ಯಾವುದೇ ಸಿಬ್ಬಂದಿ, ವೈದ್ಯರ ತಕಾರಾರುಗಳಿದ್ದರೆ ಸಲ್ಲಿಕೆ ಮಾಡಲು ಅವಕಾಶ ಕೂಡ ಕಲ್ಪಿಸಿಕೊಡಲಾಗಿದೆ.

ಆರ್‌ಟಿಒದಿಂದ 114 ಆಟೋಗಳ ಜಪ್ತಿ

ಬೆಂಗಳೂರು: ಸಾರ್ವಜನಿಕರಿಂದ ನಿಗದಿಪಡಿಸಿದ್ದಕ್ಕಿಂತಲೂ ಅಧಿಕ ಪ್ರಯಾಣ ದರ ವಸೂಲಿ ಮಾಡುತ್ತಿರುವ ಆಟೋ ಚಾಲಕರಿಗೆ ಆರ್‌ಟಿಒ ಅಧಿಕಾರಿಗಳು ಬಿಸಿ ಮುಟ್ಟಿಸಿದ್ದು, ಒಂದೇ ದಿನ 299 ಪ್ರಕರಣ ದಾಖಲಿಸಿಕೊಂಡು, 114 ಆಟೋಗಳನ್ನು ಜಪ್ತಿ ಮಾಡಿದ್ದಾರೆ. ಆ್ಯಪ್ ಆಧಾರಿತ ಆಟೋಗಳು ಹಾಗೂ ಇನ್ನಿತರೆ ಆಟೋ ಚಾಲಕರು ಪ್ರಯಾಣಿಕರಿಂದ ನಿಗದಿಗಿಂತ ಹೆಚ್ಚು ದರ ವಸೂಲಿ ಮಾಡುವ ಮೂಲಕ ಹಗಲು ದರೋಡೆಗಿಳಿದಿರುವ

ದೂರುಗಳು ಬರುತ್ತಿವೆ. ಹೀಗಾಗಿ, ನಗರದಲ್ಲಿನ ಎಲ್ಲಾ ಪ್ರಾದೇಶಿಕ ಸಾರಿಗೆ ಕಚೇರಿಗಳಿಂದ ತಲಾ ಎರಡು ತಂಡಗಳಂತೆ ಒಟ್ಟು 22 ತಂಡಗಳು ಕಾರ್ಯಾಚರಣೆ ಕೈಗೊಂಡು ಅಧಿಕ ದರ ವಸೂಲಿ ಮಾಡುತ್ತಿದ್ದ ಆಟೋ ಚಾಲಕರಿಗೆ ಬಿಸಿ ಮುಟ್ಟಿಸಿದ್ದಾರೆ. ನಿಯಮ ಉಲ್ಲಂಘನೆಗೆ ಸಂಬಂಧಿಸಿದಂತೆ 299 ಪ್ರಕರಣ ದಾಖಲಿಸಿ, 114 ಆಟೋಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದಾರೆ. ಬೆಂಗಳೂರು ದಕ್ಷಿಣದ ಅಧಿಕಾರಿಗಳು ಒಟ್ಟು 48 ಪ್ರಕರಣಗಳನ್ನು ದಾಖಲಿಸುವ ಮೂಲಕ ಅಗ್ರಸ್ಥಾನದಲ್ಲಿದ್ದರೆ, ಬೆಂಗಳೂರು ಪಶ್ಚಿಮ 36 ಪ್ರಕರಣಗಳೊಂದಿಗೆ ಎರಡನೇ ಸ್ಥಾನದಲ್ಲಿದೆ. ಬೆಂಗಳೂರು ಕೇಂದ್ರ 19 ವಾಹನಗಳನ್ನು ವಶಪಡಿಸಿಕೊಳ್ಳುವ ಮೂಲಕ ವಾಹನ ವಶಪಡಿಸಿಕೊಳ್ಳುವ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಸಂಸದ ಪಿಸಿ.ಮೋಹನ್ ಅವರು, ಆಟೋ ಚಾಲಕರು ಸಾರ್ವಜನಿಕರನ್ನು ಸುಲಿಗೆ ಮಾಡುತ್ತಿರುವುದಕ್ಕೆ ಕಿಡಿಕಾರಿದರು. ಕರ್ನಾಟಕ ಹೈಕೋರ್ಟ್ ಮೇ 2024 ರಲ್ಲಿ ಆಟೋ ದರಗಳಿಗೆ ಮಿತಿ ವಿಧಿಸಿತು. ಆಟೋ ಚಾಲಕರು ಒಂದು ವರ್ಷಕ್ಕೂ ಹೆಚ್ಚು ಕಾಲ ಕಾನೂನನ್ನು ಉಲ್ಲಂಘಿಸಿದ್ದಾರೆ. ಈ ಉಲ್ಲಂಘನೆ ಮುಂದುವರಿಯಲು ಸಾಧ್ಯವಿಲ್ಲ. ದೇಶದ ಕಾನೂನು ಸರ್ವೋಚ್ಚವಾಗಿದೆ. ಸಾರಿಗೆ ಇಲಾಖೆ ಕ್ರಮ ಕೈಗೊಳ್ಳಬೇಕು, ಅಕ್ರಮ ಪರವಾನಗಿಗಳನ್ನು ರದ್ದುಗೊಳಿಸಬೇಕು, ಅಗ್ರಿಗೇಟರ್ ಪರವಾನಗಿಗಳನ್ನು ರದ್ದುಗೊಳಿಸಬೇಕು ಮತ್ತು ಪ್ರಯಾಣಿಕರನ್ನು ಶೋಷಣೆಯಿಂದ ರಕ್ಷಿಸಬೇಕು ಎಂದು ಆಗ್ರಹಿಸಿದ್ದರು.

ವಿರಾಮ
ಪ್ರತಿ ಭಾನುವಾರ

ವಿಶೇಷಚೇತನ ಸ್ನೇಹಿಯಾಗಿ ಗ್ರಾಮೀಣ ಪ್ರದೇಶ | ತರಂಗಿಣಿ ಕಾರ್ಯಕ್ರಮಕ್ಕೆ ಸಚಿವ ಪ್ರಿಯಾಂಕ್ ಖರ್ಗೆ ಚಾಲನೆ

ಅರಿವು ಕೇಂದ್ರಗಳಿಗೆ ಅಲೆಕ್ಸಾ ಸಾಧನ ವಿತರಣೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದ ಗ್ರಾಮೀಣ ಪ್ರದೇಶಗಳ ಅರಿವು ಕೇಂದ್ರಗಳನ್ನು ವಿಶೇಷ ಚೇತನ ಸ್ನೇಹಿಯಾಗಿಸುವ ನಿಟ್ಟಿನಲ್ಲಿ, ಅಲೆಕ್ಸಾ ಸಹಾಯಕ ಸಾಧನ ವಿತರಿಸುವ ತರಂಗಿಣಿ ಕಾರ್ಯಕ್ರಮಕ್ಕೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಚಾಲನೆ ನೀಡಿದರು.

ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಬಳಿಕ ಮಾತನಾಡಿ, ಸ್ಟೇಟ್ ಸ್ಟ್ರೀಟ್ ಕಂಪನಿಯ ಸಿಎಸ್‌ಆರ್ ಅನುದಾನದೊಂದಿಗೆ ಯುನೈಟೆಡ್ ವೇ ಬೆಂಗಳೂರು ಸಂಸ್ಥೆ ಸಹಯೋಗದಲ್ಲಿ ತರಂಗಿಣಿ ಕಾರ್ಯಕ್ರಮ ಅನುಷ್ಠಾನ ಮಾಡಲಾಗುತ್ತಿದ್ದು, ವಿಶೇಷವಾಗಿ ದೃಷ್ಟಿ ಸವಾಲಿರುವವರಿಗೆ ಕೇಳುವಿಕೆಯೇ ಕಲಿಕೆಯ ವಿಧಾನವಾಗಿದೆ. ಹೀಗಾಗಿ, ಅಲೆಕ್ಸಾ ಸಾಧನವು ಗ್ರಾಮೀಣ ಅರಿವು ಕೇಂದ್ರಗಳಲ್ಲಿ ಪ್ರಸ್ತುತ ಲಭ್ಯವಿರುವ ಸೌಲಭ್ಯಗಳ ಪಟ್ಟಿಗೆ ಒಂದು ಅತ್ಯುತ್ತಮ ಸೇರ್ಪಡೆಯಾಗಿದ್ದು, ಗ್ರಂಥಾಲಯ ಮೇಲ್ವಿಚಾರಕರು ಸಮುದಾಯದ ಎಲ್ಲಾ ವರ್ಗದ ಜನರೊಂದಿಗೆ ತೊಡಗಿಸಿಕೊಳ್ಳಲು ಸದರಿ ಸಾಧನವು ಸಹಾಯಕವಾಗಲಿದೆ ಎಂದು ಹೇಳಿದರು.

ಮೊದಲ ಹಂತದಲ್ಲಿ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ ಹಾಗೂ ರಾಮನಗರ ಜಿಲ್ಲಾ ಪಂಚಾಯತಿಗಳ ವ್ಯಾಪ್ತಿಯ ಆಯ್ದ 200 ಅರಿವು ಕೇಂದ್ರಗಳಿಗೆ ತರಂಗಿಣಿ ಕಾರ್ಯಕ್ರಮದಡಿ ಅಲೆಕ್ಸಾ ಸಹಾಯಕ ಸಾಧನ ವಿತರಿಸಲಾಗುತ್ತಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಈಗಾಗಲೇ ಅರಿವು ಕೇಂದ್ರಗಳನ್ನು ವಿಶೇಷಚೇತನ ಸ್ನೇಹಿಯಾಗಿಸಲು ದರ್ಶಿನಿ ಕಾರ್ಯಕ್ರಮ ಚಾಲನೆಗೊಳಿಸಿದ್ದು, ಎಂಟು ಸಹಾಯಕ ಸಾಧನಗಳನ್ನು ಅರಿವು ಕೇಂದ್ರಗಳಲ್ಲಿ ವಿತರಿಸಲಾಗಿದೆ. ತರಂಗಿಣಿ ಹೆಮ್ಮೆಯ ಗರಿಯಾಗಿ ಅರಿವು ಕೇಂದ್ರಗಳಿಗೆ ಸೇರ್ಪಡೆಯಾಗುತ್ತಿದೆ. ಬಳಕೆದಾರ ಸ್ನೇಹಿಯಾದ ಅಲೆಕ್ಸಾ ಸಾಧನವು ಶಾಲಾ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪೋಷಕರು, ಹಿರಿಯ ನಾಗರಿಕರು ಸೇರಿದಂತೆ ವಿಶೇಷಚೇತನ ವ್ಯಕ್ತಿಗಳು ಬಳಸಲು ಅನುಕೂಲಕರವಾಗಿದ್ದು, ತಮ್ಮ ಧ್ವನಿಯನ್ನು ಬಳಸಿ ತಂತ್ರಜ್ಞಾನದೊಂದಿಗೆ ಸಂವಾದ ನಡೆಸಬಹುದು. ಇದು ಮಾಹಿತಿಗೆ ಸುಲಭ ಪ್ರವೇಶ ಒದಗಿಸುವುದರ ಮೂಲಕ ಕಲಿಕೆಯನ್ನು ಸದೃಢಗೊಳಿಸುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪಂ.ರಾಜ್ ಅಪರ ಮುಖ್ಯ ಕಾರ್ಯದರ್ಶಿ ಉಮಾ ಮಹಾದೇವನ್, ಪಂಚಾಯತ್ ರಾಜ್ ಆಯುಕ್ತೆ ಡಾ.ಅರುಂಧತಿ ಚಂದ್ರಶೇಖರ್ ಹಾಗೂ ಇನ್ನಿತರ ಅಧಿಕಾರಿಗಳು, ಸ್ಟೇಟ್ ಸ್ಟ್ರೀಟ್ ಕಂಪನಿ ಹಾಗೂ ಯುನೈಟೆಡ್ ವೇ ಬೆಂಗಳೂರು ಸಂಸ್ಥೆಯ ಪ್ರತಿನಿಧಿಗಳು ಹಾಜರಿದ್ದರು.

ಅಲೆಕ್ಸಾ ಸಹಾಯಕ ಸಾಧನ ವಿತರಿಸುವ ತರಂಗಿಣಿ ಕಾರ್ಯಕ್ರಮಕ್ಕೆ ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಚಾಲನೆ ನೀಡಿದರು. ಪಂ.ರಾಜ್ ಅಪರ ಮುಖ್ಯ ಕಾರ್ಯದರ್ಶಿ ಉಮಾ ಮಹಾದೇವನ್, ಆಯುಕ್ತೆ ಡಾ.ಅರುಂಧತಿ ಚಂದ್ರಶೇಖರ್ ಉಪಸ್ಥಿತರಿದ್ದರು.

ರಾಜ್ಯದ ಗ್ರಾಮೀಣ ಪ್ರದೇಶಗಳ ಅರಿವು ಕೇಂದ್ರಗಳನ್ನು ವಿಶೇಷ ಚೇತನ ಸ್ನೇಹಿಯಾಗಿಸುವ ನಿಟ್ಟಿನಲ್ಲಿ, ಅಲೆಕ್ಸಾ ಸಹಾಯಕ ಸಾಧನ ವಿತರಿಸುವ ತರಂಗಿಣಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿದ್ದು, ವಿಶೇಷವಾಗಿ ದೃಷ್ಟಿ ಸವಾಲಿರುವವರಿಗೆ ಕೇಳುವಿಕೆ ಮೂಲಕ ಎಲ್ಲಾ ವರ್ಗದ ಜನರೊಂದಿಗೆ ತೊಡಗಿಸಿಕೊಳ್ಳಲು ಸಹಾಯಕವಾಗಲಿದೆ.

– ಪ್ರಿಯಾಂಕ್ ಖರ್ಗೆ
ಪಂಚಾಯತ್ ರಾಜ್ ಸಚಿವ

ಅರಿವು ಕೇಂದ್ರಗಳ ಅಗಾಧ ಸಾಧನೆ

ಗ್ರಾಮ ಪಂಚಾಯತಿಗಳ ಮೇಲ್ವಿಚಾರಣೆಯ ಮೂಲಕ ಗ್ರಾಮ ಪಂಚಾಯತಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರಗಳ ಅಭಿವೃದ್ಧಿಯಲ್ಲಿ ಅಗಾಧವಾದ ಸಾಧನೆಯಾಗಿದೆ. ಗ್ರಂಥಾಲಯಗಳನ್ನು ಅರಿವು ಕೇಂದ್ರಗಳಾಗಿ ಮೇಲ್ದರ್ಜೆಗೇರಿಸುವ ಮೂಲಕ ಡಿಜಿಟಲ್ ಕಲಿಕಾ ಸಾಮಾಗ್ರಿಗಳು, ವೃತ್ತಿಪರ ಮಾರ್ಗದರ್ಶನ ವ್ಯವಸ್ಥೆ, ಸಂವಿಧಾನದ ಶೈಕ್ಷಣಿಕ ವ್ಯವಸ್ಥೆ, ವಿಶೇಷ ಚೇತನ ಸ್ನೇಹಿ ತಾಂತ್ರಿಕತೆ ಹಾಗೂ ನುರಿತ ವ್ಯಕ್ತಿಗಳಿಂದ ಜ್ಞಾನಾರ್ಜನೆ ಮುಂತಾದ ಸೌಲಭ್ಯಗಳನ್ನು ಒದಗಿಸಲು ಕ್ರಮವಹಿಸಲಾಗಿದೆ, ಗ್ರಾಮೀಣ ಪ್ರದೇಶದಲ್ಲಿ ಒಟ್ಟು 5888 ಅರಿವು ಕೇಂದ್ರಗಳು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದ್ದು, 5767 ಅರಿವು ಕೇಂದ್ರಗಳನ್ನು ಡಿಜಿಟಲೀಕರಣ ಮಾಡಲಾಗಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಮಾಹಿತಿ ಹಂಚಿಕೊಂಡರು.

ಚಿನ್ನಾಭರಣ ಕಳವು: ಐವರ ಸೆರೆ

50 ಲಕ್ಷ ರು.ಮೌಲ್ಯದ 478 ಗ್ರಾಂ ಚಿನ್ನಾಭರಣಗಳ ಜಪ್ತಿ

ಬೆಂಗಳೂರು: ಜ್ಯೂವೆಲರಿ ಅಂಗಡಿಯ ಕೆಲಸ ಗಾರನನ್ನು ಹೆದರಿಸಿ, ಚಿನ್ನಾಭರಣಗಳನ್ನು ದೋಚಿದ್ದ ಹೊರರಾಜ್ಯದ ಐವರನ್ನು ಬಂಧಿಸಿರುವ ಕೆ.ಆರ್.ಪುರಂ ಪೊಲೀಸರು 50 ಲಕ್ಷ ಮೌಲ್ಯದ 478 ಗ್ರಾಂ ಚಿನ್ನಾಭರಣಗಳನ್ನು ಜಪ್ತಿ ಮಾಡಿದ್ದಾರೆ.

ರಾಜಸ್ಥಾನದ ರಾಯಪುರ್ ನ ನಾರಾಯಣಲಾಲ್(43)ಜೋದ್ ಪುರ್ ಕೀರರಾಮ್(35)ಪುಷ್ಪೇಂದ್ರಸಿಂಗ್(35) ಮಹೇಂದ್ರ ಗೆಲ್ಹೋಟ್(27)ಹಾಗೂ ದಿಲೀಪ್ ಕುಮಾರ್(36)ಬಂಧಿತ ಆರೋಪಿಗಳು. ಬಂಧಿತ ಆರೋಪಿಗಳಿಂದ 50 ಲಕ್ಷ ಮೌಲ್ಯದ 478 ಗ್ರಾಂ ಚಿನ್ನಾಭರಣಗಳು, ಕೃತ್ಯಕ್ಕೆ ಬಳಸಿದ 1 ದ್ವಿ ಚಕ್ರ ವಾಹನ ಹಾಗೂ ಚಾಕುವನ್ನು ವಶಪಡಿಸಿಕೊಳ್ಳಲಾಗಿದೆ. ಕೆ. ಆರ್ ಪುರಂನ ಸೀಗೆಹಳ್ಳಿ ಮುಖ್ಯ ರಸ್ತೆಯ ಜ್ಯೂವೆಲರಿ ಅಂಗಡಿಯಲ್ಲಿ ಮಧ್ಯಾಹ್ನ ಕೆಲಸಗಾರನನ್ನು ಬಿಟ್ಟು ಊಟಕ್ಕೆಂದು ಮನೆಗೆ ಹೋಗಿದ್ದಾಗ ಸಂಜೆ 4 ಗಂಟೆಯ ಸಮಯದಲ್ಲಿ ಇಬ್ಬರು ಅಪರಿಚಿತ ವ್ಯಕ್ತಿಗಳು ಅಂಗಡಿಯೊಳಗೆ ಬಂದು, ಕೆಲಸಗಾರನಿಗೆ ಚಾಕು ತೋರಿಸಿ ಹೆದರಿಸಿ, 6 ಟ್ರೇಗಳಲಿದ್ದ 600 ಗ್ರಾಂ ತೂಕದ 41 ಚಿನ್ನದ ಚೈನ್‌ಗಳನ್ನು ದೋಚಿದ್ದು ಈ ಕುರಿತು ಕೆ.ಆರ್ ಪುರಂ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಮೂವರು ಆರೋಪಿಗಳನ್ನು ಸುದೀರ್ಘ ವಿಚಾರಣೆ ನಡೆಸಿ ಮತ್ತಿಬ್ಬರು ಸಹಚರರ ಬಗ್ಗೆ ಮಾಹಿತಿಯನ್ನು ನೀಡಿದ್ದು, ಮೂವರು ಆರೋಪಿಗಳು ಚಿನ್ನಾಭರಣಗಳನ್ನು ಅವರುಗಳ ವಾಸದ ಮನೆಯಲ್ಲಿಟ್ಟಿರುವುದಾಗಿ, ಮತ್ತೊರ್ವ ಆರೋಪಿಯು ಚಿನ್ನಾಭರಣಗಳನ್ನು ಬೋರುಂಡ ಗ್ರಾಮದಲ್ಲಿ ಚಿನ್ನದ ಕೆಲಸ ಮಾಡುವ ಓರ್ವ ವ್ಯಕ್ತಿಗೆ ಮಾರಾಟ ಮಾಡಿರುವುದಾಗಿ ತಿಳಿಸಿರುತ್ತಾನೆ. ಪ್ರಕರಣದಲ್ಲಿ ಭಾಗಿಯಾಗಿದ್ದ ಮತ್ತಿಬ್ಬರು ಸಹಚರರನ್ನು ರಾಜಸ್ಥಾನದ ರಾಜ್ಯದ ಪಾಲಿ ಜಿಲ್ಲೆಯ ಡೋಲಾಕ ಗ್ರಾಮದಲ್ಲಿ ಬಂಧಿಸಲಾಗಿದೆ. ಈ ಕಾರ್ಯಾಚರಣೆಯನ್ನು ವೈಟ್‌ಫೀಲ್ಡ್ ವಿಭಾಗದ ಡಿಸಿಪಿ ಡಾ. ಶಿವಕುಮಾರ್ ಗುಣಾರೇ ಮಾರ್ಗದರ್ಶನದಲ್ಲಿ ಕೆ.ಆರ್.ಪುರ ಪೊಲೀಸ್ ಇನ್ಸ್‌ಪೆಕ್ಟರ್ ರಾಮಮೂರ್ತಿ ಮತ್ತವರ ಸಿಬ್ಬಂದಿ ಪ್ರಕರಣ ಭೇದಿಸುವಲ್ಲಿ ಯಶಸ್ವಿಯಾಗಿದೆ.

ಚಿನ್ನ,ಬೆಳ್ಳಿ ಕಳ್ಳರಿಬ್ಬರ ಬಂಧನ

ಬೆಂಗಳೂರು: ಬೀಗ ಹಾಕಿರುವ ಮನೆಗಳನ್ನು ಗುರುತಿಸಿ ಕಳವು ಮಾಡುತ್ತಿದ್ದ ಇಬ್ಬರು ಕುಖ್ಯಾತ ಕನ್ನಗಳ್ಳರನ್ನು ರಾಜರಾಜೇಶ್ವರಿ ನಗರ ಪೊಲೀಸರು ಬಂಧಿಸಿ 58.60 ಲಕ್ಷ ಮೌಲ್ಯದ ಮಾಲುಗಳನ್ನು ಜಪ್ತಿ ಮಾಡಿದ್ದಾರೆ. ತಮಿಳುನಾಡಿನ ವಿಲ್ಲುಪುರಂ ಮೂಲದ ರಾಜರಾಜೇಶ್ವರಿ ನಗರದ ಮಣಿ ಅಲಿಯಾಸ್ ನಾಗಮಣಿ(47), ರವಿಕುಮಾರ್(45) ಬಂಧಿತ ಆರೋಪಿಗಳು. ಬಂಧಿತ ಆರೋಪಿಗಳಿಂದ 58.60 ಲಕ್ಷ ಮೌಲ್ಯದ 537.94 ಗ್ರಾಂ ಚಿನ್ನಾಭರಣ, 7 ಕೆ.ಜಿ 840 ಗ್ರಾಂ ಬೆಳ್ಳಿಯ ವಸ್ತುಗಳು ಹಾಗೂ 1 ದ್ವಿ ಚಕ್ರ ವಾಹನ ವಶವನ್ನು ವಶಪಡಿಸಿಕೊಳ್ಳಲಾಗಿದೆ. ರಾಜರಾಜೇಶ್ವರಿ ನಗರದ ಬಿಇಎಂಎಲ್ 5ನೇ ಹಂತದ ಮನೆಗೆ ಬೀಗ ಹಾಕಿ ದೊರೆಸ್ವಾಮಿ ಅವರು ಪತ್ನಿ ಜತೆ ಅನಾರೋಗ್ಯ ಸಮಸ್ಯೆಯಿಂದ ಪ್ರೆಸ್ಟೀಜ್ ಬಾಗ್‌ಮನೆ, ಅಪಾರ್ಟ್‌ಮೆಂಟ್‌ನ ಕೊಠಡಿಯ ಬೀರುವಿನಲ್ಲಿದ್ದ 55 ಗ್ರಾಂ ಚಿನ್ನಾಭರಣ, 3 ಕೆ.ಜಿ 500 ಗ್ರಾಂ ಬೆಳ್ಳಿ ವಸ್ತು, ನಗದನ್ನು ಕಳುವು ಮಾಡಲಾಗಿತ್ತು. ಕಳೆದ ಜೂ.12 ರಂದು ಬಿಇಎಂಎಲ್ 5ನೇ ಹಂತದ 2ನೇ ಕ್ರಾಸ್‌ನಲ್ಲಿ ಮಣಿಯನ್ನು ಬಂಧಿಸಿ ಆತ ನೀಡಿದ ಮಾಹಿತಿ ಆಧರಿಸಿ ಕಾರ್ಯಾಚರಣೆ ಕೈಗೊಂಡು ರಾಜರಾಜೇಶ್ವರಿ ದೇವಸ್ಥಾನದ ಪಕ್ಕದ ಮನೆ ಬಳಿ ರವಿಕುಮಾರ್‌ನನ್ನು ಬಂಧಿಸಿ ವಿಚಾರಣೆ ನಡೆಸಿದಾಗ ಕಳವು ಮಾಡಿರುವುದನ್ನು ತಪ್ಪೊಪ್ಪಿಕೊಂಡಿದ್ದಾರೆ.

6 ಬಾರಿ ತಲಾಖ್, ಗರ್ಭಪಾತ ಮಾಡಿಸಿದ್ದ ಸೈಕೋ ಪತಿ ವಿರುದ್ಧ ಎಫ್‌ಐಆರ್

ಪರರ ಜತೆ ಪಲ್ಲಂಗ ಹತ್ತಲು ಹೆಂಡತಿಗೆ ಹಿಂಸೆ

ಬೆಂಗಳೂರು: ಪರಸ್ತ್ರೀಯರ ಸಹವಾಸ ಹೊಂದಿರುವ ಪತಿ ತನ್ನನ್ನು ರಾಜಕಾರಣಿಯೊಬ್ಬರಿಗೆ ಹಣಕ್ಕಾಗಿ ಮಾರಾಟ ಮಾಡಲು ಸಂಚು ರೂಪಿಸುತ್ತಿದ್ದಾನೆ ಎಂದು ಆರೋಪಿಸಿ ಮಹಿಳೆಯೊಬ್ಬರು ಪೊಲೀಸ್ ಠಾಣೆ ಮೆಟ್ಟಿಲೇರಿದ ಘಟನೆ ನಡೆದಿದೆ.

21 ವರ್ಷದ ಮಹಿಳೆ ನೀಡಿರುವ ದೂರಿನನ್ವಯ ಆಕೆಯ ಪತಿ, ಮಾವ ಹಾಗು ಅತ್ತೆಯ ವಿರುದ್ಧ ಬನಶಂಕರಿ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ದೂರುದಾರ ಮಹಿಳೆಗೆ 2021ರಲ್ಲಿ ಆರೋಪಿಯೊಂದಿಗೆ ವಿವಾಹವಾಗಿದ್ದು, ನಾಲ್ಕು ತಿಂಗಳು ಕಳೆಯುವಷ್ಟರಲ್ಲಿ ದಾಂಪತ್ಯದಲ್ಲಿ ಬಿರುಕು ಉಂಟಾಗಿದೆ. ಪತಿ ತನಗೆ ಕಿರುಕುಳ ನೀಡಲಾರಂಭಿಸಿದ ಎಂದು ಮಹಿಳೆ ದೂರಿನಲ್ಲಿ ಆರೋಪಿಸಿದ್ದಾರೆ.

ದೈಹಿಕ ಹಿಂಸೆಯಿಂದ ಗರ್ಭಪಾತ: ಗರ್ಭಿಣಿಯಾಗಿದ್ದ ತನಗೆ ದೈಹಿಕ ಹಿಂಸೆ ನೀಡಿದ್ದರಿಂದ ಗರ್ಭಪಾತವಾಯಿತು. ಇದು ನನಗೆ ಶಾಶ್ವತವಾಗಿ ಭಾವನಾತ್ಮಕ ಮತ್ತು ದೈಹಿಕ ಆಘಾತಕ್ಕೆ ಕಾರಣವಾಯಿತು. ಪರಸ್ತ್ರೀಯರ ಸಹವಾಸ ಹೊಂದಿರುವ ಪತಿ ನನ್ನನ್ನು ವೇಶ್ಯಾವಾಟಿಕೆಗೆ ಬಳಸಿಕೊಳ್ಳಲು ಯತ್ನಿಸುತ್ತಿದ್ದಾನೆ. ಇದನ್ನು ವಿರೋಧಿಸಿದ್ದಕ್ಕೆ ಚಾಕು ಮತ್ತು ಪಿಸ್ತೂಲ್ ತೋರಿಸಿ ಕೊಲ್ಲುವುದಾಗಿ ಬೆದರಿಕೆ ಹಾಕುತ್ತಿದ್ದಾನೆ ಎಂದು ದೂರಿದ್ದಾರೆ.

ಅಲ್ಲದೆ, ನನ್ನ ಕುಟುಂಬಕ್ಕೂ ಹಾನಿ ಮಾಡುವುದಾಗಿ ಬೆದರಿಕೆ ಹಾಕುತ್ತಿದ್ದಾನೆ. ಪತಿ ನನಗೆ ಬೆದರಿಕೆ ಹಾಕಿದ್ದಾನೆ. ಇದಕ್ಕೆಲ್ಲಾ ಕುಮ್ಮಕ್ಕು ನೀಡುವಂತೆ ಆತನನ್ನು ರಕ್ಷಿಸುವ ಪ್ರಭಾವಿ ವ್ಯಕ್ತಿಗಳ ಬೆಂಬಲವಿದೆ. ನೀನು ಕಾನೂನಾತ್ಮಕವಾಗಿ ಏನೂ ಮಾಡಲು ಸಾಧ್ಯವಿಲ್ಲ. ನನಗೆ ಮಂತ್ರಿಗಳು ಮತ್ತು ರೌಡಿಗಳ ಬೆಂಬಲವಿದೆ ಎಂದು ಬೆದರಿಕೆ ಹಾಕುತ್ತಿದ್ದಾನೆ ಎಂದು ಸಂತ್ರಸ್ತೆ ಆರೋಪಿಸಿದ್ದಾರೆ.

ರಾಜಕಾರಣಿಗೆ ಮಾರಾಟ ಮಾಡಲು ಪ್ಲಾನ್

ಹಣಕ್ಕಾಗಿ ನನ್ನನ್ನು ಓರ್ವ ರಾಜಕಾರಣಿಗೆ ಮಾರಾಟ ಮಾಡಲು ಯೋಜಿಸಿದ್ದಾನೆ ಎಂದು ನನಗೆ ತಿಳಿದುಬಂದಿದೆ. ಇದರ ನಂತರ ಆತನ ಮನೆಯಿಂದ ತಪ್ಪಿಸಿಕೊಂಡು ಕಳೆದ 2 ತಿಂಗಳಿನಿಂದ ನನ್ನ ತಾಯಿಯೊಂದಿಗೆ ವಾಸವಿದ್ದೇನೆ. ಜೂನ್ 4ರಂದು, ನನ್ನ ಬಟ್ಟೆ ಮತ್ತು ವೈಯಕ್ತಿಕ ವಸ್ತುಗಳನ್ನು ತೆಗೆದುಕೊಳ್ಳಲು ನಾನು ಪತಿಯ ಮನೆಗೆ ಹೋಗಿದ್ದಾಗ ಆತ, ನನಗೆ ಹಾಗೂ ನನ್ನ ತಾಯಿಯ ಕುತ್ತಿಗೆಗೆ ಚಾಕು ಇಟ್ಟು ಬೆದರಿಕೆ ಹಾಕಿದ್ದ. ಆ ದಿನ ಎಲ್ಲರೆದುರು 6 ಬಾರಿ ತಲಾಖ್ ಹೇಳಿದ್ದಾನೆ ಎಂದು ದೂರಿನಲ್ಲಿ ಮಹಿಳೆ ಉಲ್ಲೇಖಿಸಿದ್ದಾರೆ. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡಿರುವ ಬನಶಂಕರಿ ಠಾಣೆ ಪೊಲೀಸರು ತನಿಖೆ ಆರಂಭಿಸಿರುವುದಾಗಿ ತಿಳಿಸಿದ್ದಾರೆ.

26 ರೋಗಿಗಳನ್ನು ವಿಕ್ಟೋರಿಯಾ ಆಸ್ಪತ್ರೆಯ ಎಚ್‌ಬ್ಲಾಕ್‌ಗೆ ಸ್ಥಳಾಂತರ

ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಬೆಂಕಿ ಅವಘಡ

ಬೆಂಗಳೂರು: ಬೆಂಗಳೂರಿನ ಪ್ರಮುಖ ಸಾರ್ವಜನಿಕ ಆಸ್ಪತ್ರೆ ವಿಕ್ಟೋರಿಯಾದಲ್ಲಿ ಬೆಳಗಿನ ಜಾವ 3 ಗಂಟೆ ಸುಮಾರಿಗೆ ಅಗ್ನಿ ಅವಘಡ ಸಂಭವಿಸಿದೆ. ಸಿಬ್ಬಂದಿಗಳು, ಅಗ್ನಿಶಾಮಕ ದಳ ತಕ್ಷಣ ಕಾರ್ಯಪ್ರವೃತ್ತರಾಗಿದ್ದರಿಂದ ಅದೃಷ್ಟವಶಾತ್ ಯಾವುದೇ ಪ್ರಾಣ ಹಾನಿ ಸಂಭವಿಸಿಲ್ಲ.

ಮಂಗಳವಾರ ಬೆಳಗಿನ ಜಾವ 3 ಗಂಟೆಗೆ ವಿಕ್ಟೋರಿಯಾ ಆಸ್ಪತ್ರೆಯ ಬರ್ನ್ಸ್ ಬ್ಲಾಕ್‌ನಲ್ಲಿರುವ ಸೆಮಿನಾರ್ ಕೊಠಡಿಯಲ್ಲಿ ಸಣ್ಣ ಬೆಂಕಿ ಕಾಣಿಸಿಕೊಂಡಿದೆ. ಸ್ವಿಚ್ ಬೋರ್ಡ್‌ನಲ್ಲಿ ಶಾರ್ಟ್ ಸರ್ಕ್ಯೂಟ್ ಆದ ಕಾರಣ ಈ ಬೆಂಕಿ ಸಂಭವಿಸಿದೆ. ಅಗ್ನಿಶಾಮಕ ದಳದವರು ತಕ್ಷಣ ಸ್ಥಳಕ್ಕೆ ಬಂದು ಬೆಂಕಿಯನ್ನು ನಂದಿಸಿದರು. ಈ ವಾರ್ಡ್‌ನಲ್ಲಿ ಒಟ್ಟು 26 ರೋಗಿಗಳಿದ್ದರು. ಅದರಲ್ಲಿ 14 ಪುರುಷರು, 5 ಮಹಿಳೆಯರು ಮತ್ತು 7 ಮಕ್ಕಳು ಇದ್ದು, ಐಸಿಯುನಲ್ಲಿ 5 ರೋಗಿಗಳನ್ನು ದಾಖಲಿಸಲಾಗಿತ್ತು. ಭಾರಿ ಹೊಗೆಯ ಕಾರಣದಿಂದ ಮತ್ತು ಮುನ್ನೆಚ್ಚರಿಕಾ ಕ್ರಮವಾಗಿ, ಎಲ್ಲಾ ಬರ್ನ್ಸ್ ರೋಗಿಗಳನ್ನು (26 ರೋಗಿಗಳು) ವಿಕ್ಟೋರಿಯಾ ಆಸ್ಪತ್ರೆಯ ಎಚ್ ಬ್ಲಾಕ್‌ಗೆ ಸ್ಥಳಾಂತರಿಸಲಾಯಿತು. ರೋಗಿಗಳಿಗೆ ಯಾವುದೇ ತೊಂದರೆಯಾಗದಂತೆ ವೈದ್ಯಕೀಯ ಚಿಕಿತ್ಸೆಯನ್ನು ಮುಂದುವರಿಸಲಾಯಿತು.



ಬೆಳಗಿನ ಜಾವ 3:15ರ ಸುಮಾರಿಗೆ ಅಗ್ನಿ ಅವಘಡ

ಮಂಗಳವಾರ ಮುಂಜಾನೆ 3:15ರ ಸುಮಾರಿಗೆ ಮಹಾಬೋಧಿ ಬರ್ನ್ಸ್ ಸೆಂಟನರ್ ಸೆಮಿನಾರ್ ಕೊಠಡಿಯಲ್ಲಿ ಬೆಂಕಿ ಕಾಣಿಸಿಕೊಂಡ ಬಗ್ಗೆ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಗೆ ಮಾಹಿತಿ ಸಿಕ್ಕಿತು. ತಕ್ಷಣವೇ ಚಾಮರಾಜಪೇಟೆ ಅಗ್ನಿಶಾಮಕ ಠಾಣೆಯಿಂದ ಒಂದು ವಾಹನವನ್ನು ಸ್ಥಳಕ್ಕೆ ಕಳುಹಿಸಲಾಯಿತು. ಬೆಂಕಿ ಇಡೀ ಬ್ಲಾಕ್‌ಗೆ ಹರಡುವ ಮುನ್ನವೇ ಅದನ್ನು ನಂದಿಸಲಾಯಿತು. ಬಿಎಂಸಿಆರ್‌ಐನ ಡೀನ್ ಮತ್ತು ನಿರ್ದೇಶಕ ಡಾ. ರಮೇಶ್ ಕೃಷ್ಣ, ವೈದ್ಯಕೀಯ ಅಧೀಕ್ಷಕ ಡಾ. ದೀಪಕ್ ಮತ್ತು ಇತರ ಸಂಬಂಧಪಟ್ಟ ವೈದ್ಯರು ಆಸ್ಪತ್ರೆಗೆ ಭೇಟಿ ನೀಡಿ ರೋಗಿಗಳಿಗೆ ಚಿಕಿತ್ಸೆ ಮುಂದುವರಿಸಲು ಕ್ರಮ ಕೈಗೊಂಡರು. ಎಲ್ಲಾ ರೋಗಿಗಳು, ರೋಗಿಗಳ ಸಹಾಯಕರು, ವೈದ್ಯರು ಮತ್ತು ಸಿಬ್ಬಂದಿ ಸುರಕ್ಷಿತವಾಗಿದ್ದಾರೆ. ಪರಿಸ್ಥಿತಿ ನಿಯಂತ್ರಣದಲ್ಲಿದೆ ಎಂದು ಆಸ್ಪತ್ರೆ ತಿಳಿಸಿದೆ.

ಜೂನ್‌ನಲ್ಲಿ 32.2 ಮಿ.ಮೀ ಮಳೆ

ಬೆಂಗಳೂರು: ಬೆಂಗಳೂರಿನಲ್ಲಿ ಮೇ ತಿಂಗಳಿನಲ್ಲಿ ಭಾರೀ ಅಬ್ಬರದಿಂದ ಸುರಿದ ಮಳೆಯು ಜೂನ್ ವೇಳೆಗೆ ವಾಡಿಕೆಗಿಂತ ಕಡಿಮೆಯಾಗಿದ್ದು, ಕೇವಲ 32.2 ಮಿ.ಮೀ ಮಳೆ ದಾಖಲಾಗಿದೆ ಎಂದು ಹವಾಮಾನ ಇಲಾಖೆಯ ವಿಜ್ಞಾನಿ ಡಾ. ಎನ್ ಪುವಿಯರಸನ್ ಹೇಳಿದ್ದಾರೆ. ಮುಂಗಾರು ಮಳೆಯು ಜೂನ್‌ನಲ್ಲಿ ಕರಾವಳಿ -ಮಲೆನಾಡು ಜಿಲ್ಲೆಗಳಲ್ಲಿ ಆರ್ಭಟಿಸಿದರೂ ಕೂಡಾ ಬೆಂಗಳೂರಿ ನಲ್ಲಿ ಮಾತ್ರ ಹಗುರವಾದ ಗಾಳಿ ಮಳೆಯಾಗಿದೆ. ಮೇ ತಿಂಗಳಿನಲ್ಲ ಉತ್ತಮವಾದ ಮಳೆಯಾದ ಹಿನ್ನೆಲೆ ಜೂನ್‌ನಲ್ಲಿ ಮಳೆಯ ಕೊರತೆಯುಂಟಾ ಗಿದ್ದು, ಜೂನ್ ತಿಂಗಳಲ್ಲಿ ಕೇವಲ 32.2 ಮಿ.ಮೀ ಮಳೆಯಾಗಿದೆ. ಇದು ಸಾಮಾನ್ಯಕ್ಕಿಂತ ಶೇ.57ರಷ್ಟು ಮಳೆ ಕಡಿಮೆ, ಅಂದರೆ ವಾಡಿಕೆಗಿಂತ ಶೇ.57ರಷ್ಟು ಮಳೆ ಕೊರತೆಯಾಗಿದೆ. ವಾಡಿಕೆಯಂತೆ ನಗರದಲ್ಲಿ 74.9 ಮಿ.ಮೀ ಮಳೆಯಾಗಬೇಕಿತ್ತು. ಬೆಂಗಳೂರು ಗ್ರಾಮಾಂತರದಲ್ಲಿ 33.5 ಮಿ.ಮೀ ಮಳೆಯಾಗಿದೆ. ಇದು ಕೂಡ ಸಾಮಾನ್ಯಕ್ಕಿಂತ ಶೇ.50ರಷ್ಟು ಕಡಿಮೆ. ಮೇ ತಿಂಗಳಲ್ಲಿ ಹೆಚ್ಚು ಮಳೆಯಾದ ಕಾರಣ ಜೂನ್‌ನಲ್ಲಿ ಮಳೆ ಕಡಿಮೆಯಾಗಿದೆ ಎಂದು ವಿಜ್ಞಾನಿ ಡಾ. ಎನ್. ಪುವಿಯರಸನ್ ಹೇಳಿದ್ದು, ಜುಲೈನಲ್ಲಿ 'ಸಾಮಾನ್ಯಕ್ಕಿಂತ ಹೆಚ್ಚು' ಮಳೆಯಾಗುವ ನಿರೀಕ್ಷೆ ಯಿದೆ. ಆದರೆ ಈಶಾನ್ಯ, ಪೂರ್ವ ಮತ್ತು ದಕ್ಷಿಣದ ಕೆಲವು ಭಾಗಗಳಲ್ಲಿ ಮಳೆ ಕೊರತೆಯಾಗುವ ಸಾಧ್ಯತೆಯಿದೆ ಎಂದು ಹೇಳಿದರು.

ಯೂಟ್ಯೂಬ್ ನೋಡಿ ಕಳ್ಳತನ ಮಾಡುತ್ತಿದ್ದವ ಅಂದರ್

ಬೆಂಗಳೂರು: ಅಪ್ರಾಪ್ತ ವಯಸ್ಸಿನಿಂದಲೇ ಕಳ್ಳತನ ಆರಂಭಿಸಿದ್ದ ನಗರದ ಮೋಸ್ಟ್ ವಾಂಟೆಡ್ ಮನೆಗಳ್ಳನನ್ನು ಮಡಿವಾಳ ಠಾಣೆ ಪೊಲೀಸರು ಹೆಡೆಮುರಿ ಕಟ್ಟಿದ್ದಾರೆ.

ಪೊಲೀಸರ ಜಾಲದಿಂದ ತಪ್ಪಿಸಿಕೊಳ್ಳಲು ಸರ್ವ ಪ್ರಯತ್ನಗಳನ್ನ ಮಾಡಿದ್ದ ಖದೀಮ ಪ್ರಕಾಶ್ ಅಲಿಯಾಸ್ ಬಾಲಾಜಿ(43)ಯನ್ನು ಅತ್ತಿಬೆಲೆಯ ಆತನ ನಿವಾಸದಲ್ಲಿ ಬಂಧಿಸಲಾಗಿದೆ. ಆತನಿಂದ 779 ಗ್ರಾಂ ಚಿನ್ನಾಭರಣ, 100 ಗ್ರಾಂ ಬೆಳ್ಳಿಯ ವಸ್ತುಗಳು, 2 ದ್ವಿಚಕ್ರ ವಾಹನ ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

2001ರಿಂದಲೇ ಅಪರಾಧ ಕೃತ್ಯಗಳನ್ನು ಆರಂಭಿಸಿದ್ದ ಆರೋಪಿ, ಚಿಂದಿ ಆಯುವ ಕೆಲಸದ ಜತೆಗೆ ಮನೆಗಳ್ಳತನ ಆರಂಭಿಸಿದ್ದ. ಮಾರಾಟಕ್ಕೆ ಸಿದ್ಧವಾಗಿರುವ ಮನೆ, ಅಪಾರ್ಟ್‌ಮೆಂಟ್‌ಗಳಿಗೆ ಖರೀದಿದಾರನಂತೆ ವಿಚಾರಿಸುವ ನೆಪದಲ್ಲಿ ಹೋಗುತ್ತಿದ್ದ ಆರೋಪಿ ಬೀಗದ ಕೀಗಳ ಮಾಡ್ಯೂಲ್ ಅನ್ನು ನಕಲು ಮಾಡಿಕೊಳ್ಳುತ್ತಿದ್ದ. ಕೆಲವೊಮ್ಮೆ ಮನೆಯ ಬಳಿ ಇರಿಸಿ ಹೋಗುವ ಬೀಗಗಳ ಮಾಡ್ಯೂಲ್ ಪಡೆದುಕೊಂಡು ಬರುತ್ತಿದ್ದ. ನಂತರ ಆ ಕೀಗಳ ಡ್ಯೂಪ್ಲಿಕೇಟ್ ತಯಾರಿಸಿಕೊಂಡು ಐದಾರು ತಿಂಗಳುಗಳ ಬಳಿಕ ಸುಲಭವಾಗಿ ಕಳ್ಳತನ ಮಾಡುತ್ತಿದ್ದ. ಮಹಿಳೆಯರಿರುವ ಕಡೆ ಚಿನ್ನಾಭರಣ ಇರುತ್ತದೆ ಎಂದು ಹೆಚ್ಚಾಗಿ ಮಹಿಳಾ ಚಪ್ಪಲಿಗಳಿರುವ ಮನೆಗಳನ್ನು ಟಾರ್ಗೆಟ್ ಮಾಡುತ್ತಿದ್ದ ಎಂದು ಪೊಲೀಸರು ವಿವರಿಸಿದ್ದಾರೆ.

ನಾನಾ ಪ್ಲ್ಯಾನ್: ಕಳ್ಳತನ ಮಾಡಲು ಹೋಗುವಾಗ ಇ-ಕಾಮರ್ಸ್ ಕಂಪನಿಗಳ ಯೂನಿಫಾರ್ಮ್, ಬ್ಯಾಗ್ ಧರಿಸುತ್ತಿದ್ದ ಆರೋಪಿ, ಹೆಚ್ಚಾಗಿ ಇತರರ ಅನುಮಾನದಿಂದ ಪಾರಾಗುತ್ತಿದ್ದ. ಕದ್ದ ಮಾಲನ್ನು ಮಾರಾಟ ಮಾಡಿ ಬಂದ ಹಣವನ್ನು ಬೆಟ್ಟಿಂಗ್, ಮದ್ಯ ಪಾನ, ಮಾದಕ ಮತ್ತಿತರ ಚಟಗಳಿಗೆ ಬಳಸಿಕೊಳ್ಳುತ್ತಿದ್ದ. ಪದೇ ಪದೇ ಬಂಧನವಾದ ಬಳಿಕ ಆರೋಪಿಯ ದಾಖಲಾತಿಗಳೆಲ್ಲವನ್ನೂ ಪೊಲೀಸರು ಕಪ್ಪುಪಟ್ಟಿಗೆ ಸೇರಿಸಿದ್ದರು. ಆದ್ದರಿಂದ ತಾನು ಗಿರವಿ ಇಡಲು ಸಾಧ್ಯವಾಗದಿದ್ದಾಗ ರಾಜೀವ್ ಗಾಂಧಿ ಎಂಬಾತನ ಮೂಲಕ ಕದ್ದ ಮಾಲನ್ನು ಮಾರಾಟ ಮಾಡಿಸುತ್ತಿದ್ದ.

ಆರೋಪಿ ವಿರುದ್ಧ 140 ಪ್ರಕರಣ

ಆರೋಪಿತನ ಬಂಧನದಿಂದ ಮಡಿವಾಳ, ಹುಳಿಮಾವು ಠಾಣೆಗಳಲ್ಲಿ ತಲಾ 3 ಪ್ರಕರಣ, ಮೈಕೋ ಲೇಔಟ್, ಬಂಡೆಪಾಳ್ಯ, ಸುಬ್ರಹ್ಮಣ್ಯಪುರ, ಎಚ್‌ಎಸ್‌ಆರ್ ಲೇಔಟ್, ಆರ್.ಆರ್. ನಗರ, ಬೇಗೂರು ಠಾಣೆಗಳಲ್ಲಿ ತಲಾ ಒಂದೊಂದು ಪ್ರಕರಣ ಬೆಳಕಿಗೆ ಬಂದಿವೆ. ಸದ್ಯ ಪ್ರಕಾಶ್ ಜತೆಗೆ ರಾಜೀವ್ ಗಾಂಧಿಯನ್ನೂ ಬಂಧಿಸಲಾಗಿದ್ದು, ಹೆಚ್ಚಿನ ತನಿಖೆ ನಡೆಸಲಾಗುತ್ತಿದೆ. ಆರೋಪಿ ವಿರುದ್ಧ ಈವರೆಗೆ ಬರೋಬ್ಬರಿ 140 ಪ್ರಕರಣ ದಾಖಲಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

IN THE COURT OF THE XLII ADDL CITY CIVIL AND SESSIONS JUDGE AT BENGALURU. (CCH-43)
P &S. C. No 312 of 2025

PETITIONERS: (1), Smt. JAMUNA BABY, aged about 58 years, Wife of (Late) G. Kumar. Aadhar No. 7149 7886 2676, (2). Sri. K. CHARAN KUMAR, aged about 37 years, Son of (Late) G. Kumar, Aadhar No. 2715 1444 2242, (3). Sri. K. RAJU, aged about 35 years, Son of (Late) G. Kumar, Aadhar No. 7566 7343 1186. All residing at No. 3, 2nd Floor, Datturi Ramanna Galli, Sadar Patrappa Road Cross, Bengaluru-560 002. -V/s-
RESPONDENT: NILL

PUBLIC NOTICE

Whereas the Petitioners have filed the above Petition under Section 372 of the Indian Succession Act praying the Hon'ble Court to grant Succession Certificate in their favour to enable them to execute the Money Decree obtained by the deceased G. Kumar, the husband of the Petitioner No. 1 and father of the petitioners Nos. 2 & 3, who expired on 28/08/2024, in O. S. No. 6400/2011 against one Sri. J. T. Satish Chandra.

Interested persons are hereby informed to appear before the Hon'ble XLII Additional City Civil and Sessions Judge's Court CCH:43, Bengaluru 07-08-2025 at 11:00 A.M. in person or by pleader duly instructed to show cause against the granting of the Succession Certificate, failing which, the matter will be heard and determined without any claim or objection.

SCHEDULE

Succession Certificate in favour of the petitioners enabling them to execute the money decree obtained by the deceased G. Kumar against J. T. Satish Chandra in O. S. No. 6400 of 2011.

Given under my hand and the seal of the Court on 23-06-2025

By order of the Court, Senior Sheristedar, City Civil Court, Bengaluru.

Advocate for Petitioner:
H. DINESH SHETTY
#38, 'Samrudhi', 13th Main, J. C. Nagar, Kurubarahalli, Bengaluru-560086.

ಕಾಲ್ತುಳಿತ ದುರಂತ ಪ್ರಕರಣದಲ್ಲಿ ಅಮಾನತುಗೊಂಡಿದ್ದ ಅಧಿಕಾರಿಗಳ ಮರು ನಿಯೋಜನೆಗೆ ಆದೇಶ

ಅಧಿಕಾರಿಗಳ ಮರುನಿಯೋಜನೆಗೆ ಸಿಎಟಿ ಆದೇಶ

ಬೆಂಗಳೂರು: ಆರ್‌ಸಿಬಿ ವಿಜಯೋತ್ಸವ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಉಂಟಾಗಿದ್ದ ಕಾಲ್ತುಳಿತದಲ್ಲಿ 11 ಅಭಿಮಾನಿಗಳ ಸಾವು ಪ್ರಕರಣದಲ್ಲಿ ಹೆಚ್ಚುವರಿ ಪೊಲೀಸ್ ಆಯುಕ್ತರಾಗಿದ್ದ ವಿಕಾಸ್ ಕುಮಾರ್ ರನ್ನು ಅಮಾನತು ಮಾಡಿ ಸರಕಾರ



ಹೊರಡಿಸಿದ್ದ ಆದೇಶವನ್ನು ಕೇಂದ್ರ ಆಡಳಿತಾತ್ಮಕ ನ್ಯಾಯಮಂಡಳಿ(ಸಿಎಟಿ) ರದ್ದುಪಡಿಸಿ ಆದೇಶಿಸಿದೆ.

ತಮ್ಮನ್ನು ಅಮಾನತು ಮಾಡಿರುವ ಸರಕಾರದ ಆದೇಶ ಪ್ರಶ್ನಿಸಿ ವಿಕಾಸ್ ಕುಮಾರ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಬಿ.ಕೆ.ಶ್ರೀವಾತ್ಸವ್, ಸದಸ್ಯ ಸಂತೋಷ್ ಮೆಹ್ರಾ ಅವರಿದ್ದ ಪೀಠ ಈ ಆದೇಶ ನೀಡಿದೆ. ಅಲ್ಲದೆ, ತಕ್ಷಣ ಅರ್ಜಿದಾರರನ್ನು ಅದೇ ಹುದ್ದೆಗೆ ಮರುನಿಯೋಜನೆಗೆ ಮಾಡುವಂತೆ ಆದೇಶದಲ್ಲಿ ತಿಳಿಸಿದೆ.

ಘಟನೆಗೆ ಕಾರಣರಾದ ಅಧಿಕಾರಿಗಳನ್ನು ನಿರ್ಲಕ್ಷ್ಯದ ಆರೋಪದಲ್ಲಿ ಅಮಾನತು ಮಾಡಿರುವ ಆದೇಶಕ್ಕೆ ಸೂಕ್ತ ಪುರಾವೆಗಳಿಲ್ಲ. ಜತೆಗೆ, ಜನರನ್ನು ನಿಯಂತ್ರಣ ಮಾಡುವುದಕ್ಕೆ ವ್ಯವಸ್ಥೆ ಮಾಡುಕೊಳ್ಳುವುದಕ್ಕೆ ಸಮಯವಿತ್ತು ಎಂಬುದನ್ನು ತೋರಿಸುವುದಕ್ಕೂ ಸಾಕ್ಷ್ಯಾಧಾರಗಳಿಲ್ಲ. ವಿಜಯೋತ್ಸವ ಆಚರಣೆಗೆ ಸಂಘಟನೆಕಾರರು ಸೂಕ್ತ ಮನವಿ ಸಲ್ಲಿಸದ ಪರಿಣಾಮ ಪೊಲೀಸರು ಅನುಮತಿಯೂ ನೀಡಿರಲಿಲ್ಲ. ಅಲ್ಲದೆ, ಘಟನೆಗೆ ಕಾರಣ ಪತ್ತೆಗೆ ರಚನೆ ಮಾಡಿರುವ ಆಯೋಗ ಈವರೆಗೂ ವರದಿ ನೀಡಿಲ್ಲ. ಪೊಲೀಸ್ ಸಿಬ್ಬಂದಿಯೂ ಕೂಡ ಮನುಷ್ಯರೇ ಆಗಿದ್ದಾರೆ. ಅವರು ಮಾಂತ್ರಿಕರಲ್ಲ, ದೇವರೂ ಅಲ್ಲ, ಅಷ್ಟು ಜನದಟ್ಟಣೆ ನಿಯಂತ್ರಿಸಲು ಪೊಲೀಸರ ಬಳಿ ಅಲ್ಲಾದ್ದೀನ್ ದೀಪದಂತಹ ಮಾಂತ್ರಿಕ ದೀಪವಿಲ್ಲ. ಸೂಕ್ತ ಸಿದ್ಧತೆ ಮಾಡಿಕೊಳ್ಳಲು ಪೊಲೀಸರಿಗೆ ಸಮಯ ನೀಡಬೇಕಿತ್ತು ಎಂದು ಪೀಠ ಹೇಳಿದೆ.

ಜತೆಗೆ, ವಿಜಯೋತ್ಸವ ಕಾರ್ಯಕ್ರಮ ಆಯೋಜನೆಗೆ ಪೊಲೀಸರು ಅನುಮತಿ ನೀಡಿಲ್ಲ. ಆದ್ದರಿಂದ, ಸಕಾರಣವಿಲ್ಲದೆ ಪೊಲೀಸ್ ಅಧಿಕಾರಿಗಳನ್ನು ಅಮಾನತುಗೊಳಿಸಲಾಗಿದೆ. ಹೀಗಾಗಿ ಹೆಚ್ಚುವರಿ ಪೊಲೀಸ್ ಆಯುಕ್ತ (ಪಶ್ಚಿಮ) ವಿಕಾಸ್ ಕುಮಾರ್ ಅಮಾನತು ಆದೇಶ ರದ್ದು ಮಾಡಲಾಗುತ್ತಿದ್ದು, ತಕ್ಷಣ ಅವರನ್ನು ಸೇವೆಗೆ ಮರು ನಿಯೋಜಿಸಬೇಕು ಎಂದು ಪೀಠ ತಿಳಿಸಿದೆ. ಜತೆಗೆ, ಅಮಾನತು ಅವಧಿಯ ವೇತನ, ಭತ್ಯೆ ಸಹಿತ ಸೇವೆಯೆಂದು ಪರಿಗಣಿಸಬೇಕು.

ಸರಕಾರದ ಆದೇಶದಿಂದ ನೊಂದ ಅಧಿಕಾರಿಗಳಲ್ಲಿ ಒಬ್ಬರು ನ್ಯಾಯಾಲಯ ಸಂಪರ್ಕಿಸಿ ಆದೇಶ ತನ್ನ ಪರವಾಗಿ ಬಂದಲ್ಲಿ ಇದೇ ರೀತಿಯಲ್ಲಿ ಸರಕಾರದಿಂದ ಕ್ರಮಕ್ಕೆ ಗುರಿಯಾದವರಿಗೂ ಈ ಆದೇಶ ಅನ್ವಯವಾಗಲಿದೆ ಎಂಬುದಾಗಿ ಅಮೃತ್ ಲಾಲ್ ಬೆರ್ರಿ ಮತ್ತು ಕೇಂದ್ರ ಅಬಕಾರಿ ಆಯುಕ್ತರು ಪ್ರಕರಣದಲ್ಲಿ ಸುಪ್ರೀಂಕೋರ್ಟ್ ತಿಳಿಸಿದೆ. ಈ ನಿಟ್ಟಿನಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಘಟನೆಯಲ್ಲಿ ಸರಕಾರ ಅಮಾನತು ಮಾಡಿರುವ ಇತರ ಅಧಿಕಾರಿಗಳಿಗೂ ಈ ಆದೇಶದಂತೆ ಅಧಿಕಾರಿಗಳನ್ನು ಮರು ನಿಯೋಜಿಸುವ ನಿರೀಕ್ಷೆ ಮಾಡುತ್ತಿದೆ ಎಂದು ಪೀಠ ತನ್ನ ಆದೇಶದಲ್ಲಿ ತಿಳಿಸಿದೆ.



ಪ್ರಕರಣದ ಹಿನ್ನೆಲೆ

2025ರ ಜೂನ್ 4ರಂದು ನಡೆದ ಆರ್‌ಸಿಬಿ ವಿಜಯೋತ್ಸವದಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಉಂಟಾಗಿದ್ದ ಕಾಲ್ತುಳಿತದಿಂದ 11 ಮಂದಿ ಸಾವನ್ನಪ್ಪಿದ್ದರು. ಘಟನೆ ಸಂಬಂಧ ಪೊಲೀಸರ ನಿರ್ಲಕ್ಷ್ಯವೇ ಕಾರಣ ಎಂದು ತಿಳಿಸಿದ್ದ ಸರಕಾರ, ಬೆಂಗಳೂರು ಪೊಲೀಸ್ ಆಯುಕ್ತ ದಯಾನಂದ್, ಅರ್ಜಿದಾರ ವಿಕಾಸ್ ಕುಮಾರ್ ಮತ್ತಿತರರನ್ನು ಅಮಾನತು ಮಾಡಿ ಆದೇಶಿಸಿತ್ತು. ಈ ಆದೇಶವನ್ನು ವಿಕಾಸ್ ಕುಮಾರ್ ಸಿಎಟಿಯಲ್ಲಿ ಪ್ರಶ್ನಿಸಿದ್ದರು.

ಆರ್‌ಸಿಬಿ ಆಹ್ವಾನದಿಂದ ಜನದಟ್ಟಣೆ: ಸಿಎಟಿ

ಜೂನ್ 3ರಂದು ನಡೆದಿದ್ದ ಪಂದ್ಯದಲ್ಲಿ ಆರ್‌ಸಿಬಿ ಜಯಗಳಿಸಿತ್ತು. ಅಂದು ರಾತ್ರಿ ನಗರದ ಬೀದಿಗಳಲ್ಲಿ ಸಾರ್ವಜನಿಕರು ವಿಜಯೋತ್ಸವ ನಡೆಸುತ್ತಿದ್ದರು. ಅವರನ್ನು ನಿಯಂತ್ರಿಸುವಲ್ಲಿ ಇಡೀ ಪೊಲೀಸ್ ವ್ಯವಸ್ಥೆ ನಿರತವಾಗಿತ್ತು. ಈ ನಡುವೆ ವಿಜಯೋತ್ಸವ ಕಾರ್ಯಕ್ರಮಕ್ಕೆ ಪೊಲೀಸರ ಅನುಮತಿ ಪಡೆಯದೆ ಆರ್‌ಸಿಬಿ ಸಾಮಾಜಿಕ ಜಾಲತಾಣಗಳಲ್ಲಿ ಕರೆ ಕೊಟ್ಟಿದೆ. ಹೀಗಾಗಿ ಸುಮಾರು 3 ರಿಂದ 5 ಲಕ್ಷ ಜನ ಸೇರಿದ್ದರು. ಇದೇ ವೇಳೆ ವಿಧಾನಸೌಧದ ಆವರಣದಲ್ಲಿ ರಾಜ್ಯ ಸರಕಾರ ಮತ್ತೊಂದು ಕಾರ್ಯಕ್ರಮ ಆಯೋಜಿಸಿದ್ದು, ಅದಕ್ಕಾಗಿ ಪೊಲೀಸರನ್ನು ನಿಯೋಜಿಸಲಾಗಿತ್ತು. ಸಮಯದ ಕೊರತೆ ಮತ್ತು ಅತ್ಯಂತ ಕಡಿಮೆ ಅವಧಿಯಲ್ಲಿ ಸೂಕ್ತ ವ್ಯವಸ್ಥೆ ಕಲ್ಪಿಸಲು ಪೊಲೀಸರಿಗೆ ಸಾಧ್ಯವಾಗಿಲ್ಲ. ಆರ್‌ಸಿಬಿ ಆಹ್ವಾನದಿಂದ ಜನದಟ್ಟಣೆ ಹೆಚ್ಚಾಗಿ ಘಟನೆ ಸಂಭವಿಸಿದೆ ಎಂದು ಪೀಠ ಹೇಳಿದೆ.

ಎಸಿ ಅಪೂರ್ವ ಬಿದರಿ ವಿರುದ್ಧ ಎಫ್‌ಐಆರ್

ಬೆಂಗಳೂರು: ಬೆಂಗಳೂರು ದಕ್ಷಿಣ ಉಪವಿಭಾಗದ ಉಪವಿಭಾಗಾಧಿಕಾರಿ (ಎಸಿ) ಮತ್ತು ಕರ್ನಾಟಕ ಆಡಳಿತ ಸೇವೆ (ಕೆಎಎಸ್) ಅಧಿಕಾರಿ ಅಪೂರ್ವ ಬಿದರಿ ವಿರುದ್ಧ 53 ಅರೆ ನ್ಯಾಯಿಕ ಪ್ರಕರಣಗಳಲ್ಲಿ ದೋಷಪೂರಿತ ಆದೇಶಗಳನ್ನು ಹೊರಡಿಸಿದ ಆರೋಪದ ಮೇಲೆ ಕಾನೂನು ಕ್ರಮ ಜರುಗಿಸಲು ನಿರ್ಧರಿಸಲಾಗಿದೆ. ಕಂದಾಯ ಇಲಾಖೆಯ ಬೆಂಗಳೂರು ವಿಭಾಗದ ಪ್ರಾದೇಶಿಕ ಆಯುಕ್ತರು ಜಿಲ್ಲಾಧಿಕಾರಿಗೆ (ಡಿಸಿ) ಶಿಸ್ತು ಕ್ರಮದ ಸೂಚನೆ ನೀಡಿದ್ದಾರೆ.

ಅಪೂರ್ವ ಬಿದರಿ ಅವರು ಬೆಂಗಳೂರು ದಕ್ಷಿಣ ಉಪವಿಭಾಗದ ಸಹಾಯಕ ಆಯುಕ್ತರಾಗಿ (ಎಸಿ) ಕಾರ್ಯನಿರ್ವಹಿಸುತ್ತಿದ್ದ ಸಂದರ್ಭದಲ್ಲಿ, ಅರೆ-ನ್ಯಾಯಿಕ ಪ್ರಕರಣಗಳನ್ನು ವಿಲೇವಾರಿ ಮಾಡುವಲ್ಲಿ ಗಂಭೀರ ತಪ್ಪುಗಳನ್ನು ಎಸಗಿದ್ದಾರೆ ಎಂದು ಆರೋಪಿಸಲಾಗಿದೆ. ಅವರು ತಮ್ಮ ಅಧಿಕಾರಾವಧಿಯಲ್ಲಿ ಹೊರಡಿಸಿದ ಆದೇಶಗಳನ್ನು ಪರಿಶೀಲಿಸಲು ಕಂದಾಯ ಇಲಾಖೆಯು ವಿಶೇಷ ತಂಡ ರಚಿಸಿತ್ತು. ಈ ತಂಡವು ಅಪೂರ್ವ ಅವರು ಅಧಿಕಾರ ವಹಿಸಿಕೊಂಡ ದಿನಾಂಕದಿಂದ ನಿರ್ವಹಿಸಿದ 53 ಅರೆ ನ್ಯಾಯಿಕ ಪ್ರಕರಣಗಳ ಕಡತಗಳನ್ನು ಪರಿಶೀಲಿಸಿತ್ತು. ಪರಿಶೀಲನೆಯಲ್ಲಿ ಈ ಪ್ರಕರಣಗಳಲ್ಲಿ ಆದೇಶ ಹೊರಡಿಸುವಾಗ ಗಂಭೀರ ದೋಷಗಳು ಕಂಡುಬಂದಿವೆ. ಕರ್ನಾಟಕ ಭೂಕಂದಾಯ ಅಧಿನಿಯಮ, 1964ರ ಸೆಕ್ಷನ್ 35ರ ಅಡಿಯಲ್ಲಿ ಈ ದೋಷಗಳನ್ನು ಗಂಭೀರ ಶಿಸ್ತು ಉಲ್ಲಂಘನೆಯೆಂದು ಪರಿಗಣಿಸಲಾಗಿದೆ. ಇದರ ಪರಿಣಾಮವಾಗಿ, ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಯಿತು, ಮತ್ತು ಈ ಪ್ರಸ್ತಾವನೆಯನ್ನು ಸರಕಾರದ ಮಟ್ಟದಲ್ಲಿ ಪರಿಶೀಲಿಸಿದ ನಂತರ, ಅಪೂರ್ವ ಬಿದರಿ ವಿರುದ್ಧ ಕಾನೂನು ಕ್ರಮಕ್ಕೆ ಸೂಚನೆ ನೀಡಲಾಗಿದೆ.

ಮಾಧ್ಯಮ ಅಧಿಕಾರಸ್ಥರ ಓಲೈಕೆ ಮಾಡಬಾರದು

ಊಹಾ ಪತ್ರಿಕೋದ್ಯಮ ಪತ್ರಿಕಾ ವೃತ್ತಿಗೆ ಮತ್ತು ಸಮಾಜಕ್ಕೆ ಅಪಾಯ: ಮುಖ್ಯಮಂತ್ರಿ ಸಿದ್ದರಾಮಯ್ಯ

ಬೆಂಗಳೂರು: ನಿಜ ಸುದ್ದಿಗಾಗಿ ಹೋರಾಟ ನಡೆಸುವ ಸಂದರ್ಭ ಬಂದಿದೆ ಎಂದರೆ, ಸುಳ್ಳು ಸುದ್ದಿಗಳು ಹೆಚ್ಚಾಗಿವೆ ಅಂಥ ತಾನೇ ಅರ್ಥ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಶ್ನಿಸಿದರು.

ಕರ್ನಾಟಕ ಮಾಧ್ಯಮ ಅಕಾಡೆಮಿ, ವಾರ್ತಾ ಇಲಾಖೆ, ಕಾರ್ಯನಿರತ ಪತ್ರಕರ್ತರ ಸಂಘದ ಸಂಯುಕ್ತಾಶ್ರಯದಲ್ಲಿ ನಡೆದ ಪತ್ರಿಕಾ ದಿನಾಚರಣೆ-2025 ಹಾಗೂ ನಿಜ ಸುದ್ದಿಗಾಗಿ ಸಮರ ಸಂವಾದವನ್ನು ಉದ್ಘಾಟಿಸಿ, ಪತ್ರಕರ್ತರ ಉಚಿತ ಬಸ್ ಪಾಸ್ ಮತ್ತು ಪತ್ರಕರ್ತರ ಆರೋಗ್ಯ ಸಂಜೀವಿನಿ ಯೋಜನೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಊಹಾ ಪತ್ರಿಕೋದ್ಯಮ ಪತ್ರಿಕೋದ್ಯಮಕ್ಕೆ ಮತ್ತು ಸಮಾಜಕ್ಕೂ ಅಪಾಯ ಎಂದರು.

ಮಾಧ್ಯಮ ಸ್ವತಂತ್ರವಾಗಿ, ನಿರ್ಭೀತಿಯಿಂದ ಸುದ್ದಿ ಮಾಡಬೇಕು ಎನ್ನುವುದರಲ್ಲಿ ನಂಬಿಕೆ ಇಟ್ಟುಕೊಂಡಿರುವವನು ನಾನು. ಜವಾಹರಲಾಲ್ ನೆಹರೂ ಅವರೂ ಇದನ್ನೇ ನಂಬಿದ್ದರು ಮತ್ತು ಪಾಲಿಸಿದ್ದರು. ಯಾವುದೇ ಚಾನಲ್‌ಗಳು ನನ್ನ ಬಗ್ಗೆ ಎಷ್ಟು ಸುಳ್ಳು ಹೇಳಿದರೂ ನಾನು ಯಾರಿಗೂ ಫೋನ್ ಕೂಡ ಮಾಡುವುದಿಲ್ಲ. ನನ್ನ ಕಾರಿನ ಮೇಲೆ ಕಾಗೆ ಕೂತಿದ್ದನ್ನು ಚರ್ಚೆ ನಡೆಸಿ ಮೂಢನಂಬಿಕೆ ಬಿತ್ತುವುದನ್ನು ಪತ್ರಿಕಾವೃತ್ತಿ ಎಂದು ಕರೆಯಬೇಕಾ ? ಜನರನ್ನು ಮೌಢ್ಯಕ್ಕೆ ತಳ್ಳುವುದು ಪತ್ರಿಕಾ ವೃತ್ತಿಯಾ ಎಂದು ಪ್ರಶ್ನಿಸಿದರು.

ನಾನು ಇವತ್ತು ಗ್ರಾಮೀಣ ಪತ್ರಕರ್ತರ ಉಚಿತ ಬಸ್ ಪಾಸ್ ಮತ್ತು ಆರೋಗ್ಯ ಸಂಜೀವಿನಿ ಉದ್ಘಾಟಿಸಿ ಪತ್ರಕರ್ತರಿಗೆ ಅನುಕೂಲ ಒದಗಿಸಿದ್ದೇವೆ. ನಮ್ಮ ಪರವಾಗಿ ಬರೆಯಲಿ ಎನ್ನುವ ಕಾರಣದಿಂದ ಜಾರಿ ಮಾಡಿರುವುದಲ್ಲ. ಸತ್ಯ ಬರೆಯಿರಿ, ಜನರ ಪರವಾಗಿ, ಪ್ರಜಾಪ್ರಭುತ್ವದ ಪರವಾಗಿ ಇರಿ ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿಗಳು ಗ್ರಾಮೀಣ ಪತ್ರಕರ್ತರಿಗೆ ಉಚಿತ ಬಸ್ ಪಾಸ್ ಯೋಜನೆಯನ್ನು ಲೋಕಾರ್ಪಣೆಗೊಳಿಸಿ, ಫಲಾನುಭವಿಗಳಿಗೆ ಬಸ್ ಪಾಸ್ ವಿತರಿಸಿದರು. ಇದರಿಂದ 5500 ಕ್ಕೂ ಹೆಚ್ಚು ಗ್ರಾಮೀಣ ಪತ್ರಕರ್ತರು ಪ್ರಯೋಜನೆ ಪಡೆಯಲಿದ್ದು, 16 ಕೋಟಿ ವೆಚ್ಚವಾಗಲಿದೆ. ಮುಖ್ಯಮಂತ್ರಿ ಮಾಧ್ಯಮ ಸಂಜೀವಿನಿಯಲ್ಲಿ ಮಾನ್ಯತೆ ಪಡೆದ ಪತ್ರಕರ್ತರಿಗೆ ಹಾಗೂ ಅವರ ಅವಲಂಬಿತ ಕುಟುಂಬದ ಸದಸ್ಯರಿಗೆ 5 ಲಕ್ಷದವರೆಗೆ ನಗದು ರಹಿತ ಚಿಕಿತ್ಸೆಯನ್ನು ನೀಡಲಾಗುತ್ತಿದೆ. ಈ ಯೋಜನೆಯಡಿ ರಾಜ್ಯದ 25000 ಪತ್ರಕರ್ತರು ಸೇರ್ಪಡೆಯಾಗಿದ್ದು, ಪ್ರತಿ ವರ್ಷ ಇದಕ್ಕೆ 3.60 ಕೋಟಿ ವೆಚ್ಚವಾಗುತ್ತಿದ್ದು, ಈಗಾಗಲೇ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನಲ್ಲಿ 6.79 ಕೋಟಿ ಠೇವಣಿ ಇರಿಸಲಾಗಿದೆ. ಅಲ್ಲದೆ ಫಲಾನುಭವಿಗಳಿಗೆ ಮಾಧ್ಯಮ ಅಕಾಡೆಮಿಯಿಂದ ಎಸ್ ಸಿ ಪಿ/ ಟಿಎಸ್ ಪಿ ಯೋಜನೆಯಲ್ಲಿ ಮೋಜೋ ಕಿಟ್ ಸಹ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ಮುಖ್ಯಮಂತ್ರಿಗಳ ಕಾರ್ಯದರ್ಶಿ ಬಿ.ಬಿ. ಕಾವೇರಿ, ವಾರ್ತಾ ಇಲಾಖೆ ಆಯುಕ್ತ ಹೇಮಂತ್ ನಿಂಬಾಳ್ಕರ್, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್ ಸೇರಿ ಅನೇಕರಿದ್ದರು.



ಕರ್ನಾಟಕ ಮಾಧ್ಯಮ ಅಕಾಡೆಮಿ, ವಾರ್ತಾ ಇಲಾಖೆ, ಕಾರ್ಯನಿರತ ಪತ್ರಕರ್ತರ ಸಂಘದ ಸಂಯುಕ್ತಾಶ್ರಯದಲ್ಲಿ ನಡೆದ ಪತ್ರಿಕಾ ದಿನಾಚರಣೆ-2025 ಹಾಗೂ ನಿಜ ಸುದ್ದಿಗಾಗಿ ಸಮರ ಸಂವಾದ, ಪತ್ರಕರ್ತರ ಉಚಿತ ಬಸ್ ಪಾಸ್ ಮತ್ತು ಪತ್ರಕರ್ತರ ಆರೋಗ್ಯ ಸಂಜೀವಿನಿ ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚಾಲನೆ ನೀಡಿದರು.

ಮುಖ್ಯಾಂಶಗಳು

- ಸ್ವಾತಂತ್ರ್ಯಪೂರ್ವದಲ್ಲಿ ಜನರನ್ನು ಎಚ್ಚರಿಸುವ, ಸ್ವಾತಂತ್ರ್ಯ ಹೋರಾಟದ ಪರವಾಗಿ ಪತ್ರಿಕೆಗಳು ಕೆಲಸ ಮಾಡಿದ್ದವು.
- ಸಂವಿಧಾನದ ಮೌಲ್ಯಗಳು ಮತ್ತು ಸತ್ಯವನ್ನು ಮರೆಮಾಚುವ ಕೆಲಸ ಆಗಬಾರದು.
- ಎಲ್ಲ ಜನರಿಗೂ ಸಮಾನ ಅವಕಾಶ ಮತ್ತು ಜಾತಿ-ವರ್ಗ ರಹಿತ ಸಮಾಜ ಸೃಷ್ಟಿಯಾಗಬೇಕು ಎನ್ನುವುದು ಸಂವಿಧಾನದ ಮೌಲ್ಯ. ಇದನ್ನು ಎತ್ತಿ ಹಿಡಿಯುವುದು ಪತ್ರಿಕಾ ವೃತ್ತಿಯ ಜವಾಬ್ದಾರಿ.
- ದ್ವೇಷದ, ಪ್ರೀತಿಯಿಲ್ಲದ ಸಮಾಜ ಸೃಷ್ಟಿಸುವ ಪ್ರಯತ್ನಕ್ಕೆ ಮಾಧ್ಯಮಗಳು ಬೆಂಬಲಿಸಬಾರದು.
- ನನ್ನ ಮಾತುಗಳನ್ನು ಕೇವಲ ಪಕ್ಷದ ಚೌಕಟ್ಟಿನಲ್ಲಿ ಮಾತ್ರ ನೋಡದೆ ಸಮಾಜ ಮುಖಿಯಾಗಿ ಕೂಡ ನೋಡಬೇಕು.

40 ವರ್ಷಗಳ ಹಿಂದೆ ಚಾಲ್ತಿಯಿದ್ದ ಪತ್ರಿಕೋದ್ಯಮ ಈಗಿಲ್ಲ. ಈಗ ಕಾರ್ಪೊರೇಟ್ ವಲಯದೊಳಗೆ ಪತ್ರಿಕಾರಂಗ ತೆರೆದುಕೊಳ್ಳುತ್ತಿದೆ. ಮಾರ್ಚ್ 31, 2021ಕ್ಕೆ ದೇಶದ ಮಾಧ್ಯಮಗಳು ಒಟ್ಟು 2.51 ಟ್ರಿಲಿಯನ್ ಬಂಡವಾಳ ಹೊಂದಿದೆ. ಕೆಲವೇ ವ್ಯಕ್ತಿಗಳಲ್ಲಿ ದೇಶದ 70 ಮೀಡಿಯಾಗಳು ವಶವಾಗಿದೆ. ಕೋವಿಡ್-19 ಸಂದರ್ಭದಲ್ಲಿ ಸುಮಾರು 4000 ಪತ್ರಕರ್ತರು ತಮ್ಮ ಕೆಲಸವನ್ನು ಕಳೆದುಕೊಂಡರು. ಮಾಧ್ಯಮಗಳು ಸಹ ತನ್ನ ವ್ಯಾಪಾರಿ ಮನೋಭಾವದಿಂದ ನೈಜ ಪತ್ರಿಕೋದ್ಯಮವನ್ನು ಮರೆತಂತಿದೆ. ಇದು ಪತ್ರಕರ್ತ ಹಾಗೂ ಮಾಧ್ಯಮ ಈ ಇಬ್ಬರ ಭವಿಷ್ಯಕ್ಕೂ ಮಾರಕ.

- ಪಿ. ಸಾಯಿನಾಥ್ ಹಿರಿಯ ಪತ್ರಕರ್ತ

ನಿಜ ಸುದ್ದಿಯನ್ನು ವ್ಯಾಖ್ಯಾನಿಸಿದಾಗ ಅದರಲ್ಲಿ ಹತ್ತು ಹಲವು ಪದರಗಳು ತೆರೆದುಕೊಳ್ಳುತ್ತದೆ. ಕಳೆದ 20 ವರ್ಷಗಳಿಗೆ ಹೋಲಿಸಿದರೆ ಮಾಧ್ಯಮಗಳು ಮಲಿನಗೊಂಡಿದೆ. ನೋಡುಗರನ್ನು ಹೆಚ್ಚಿಸುವ, ವ್ಯಾಪಾರೀಕರಣದಲ್ಲಿ ಕೆಲಸವನ್ನು ಕೆಲವೊಂದು ಮಾಧ್ಯಮ ಮಾಡುತ್ತಿದೆ. ಇದು ಸಮಾಜಕ್ಕೆ ಮಾರಕ. ಮಾಧ್ಯಮಗಳು ಅಶ್ಲೀಲ ಭಾಷೆ ಬಳಸಿ ಸಮಾಜವನ್ನು ವಿರೂಪಗೊಳಿಸಬಾರದು. ಮಾಧ್ಯಮ ಸ್ವಾತಂತ್ರ್ಯವನ್ನು ಸಹ ಸದ್ಬಳಕೆ ಮಾಡಬೇಕೇ ವಿನಃ ಅದನ್ನು ಸ್ವಾರ್ಥಕ್ಕೆ ಬಳಸಿಕೊಳ್ಳಬಾರದು.

- ರೆಹಮತ್ ತರೀಕೆರೆ ಹಿರಿಯ ಸಾಹಿತಿ

ಸಮಾಚಾರ ಸಣ್ಣದಲ್ಲ

ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ನೆಲಮಂಗಲ-ಅಂಚೆಪಾಳ್ಯ ಕೆಪಿಟಿಸಿಎಲ್ 220 ಕೆವಿ ಟವರ್‌ನ ತುರ್ತು ದುರಸ್ಥಿ ಕಾರ್ಯ ಸಲುವಾಗಿ ಬುಧವಾರ ಮಧ್ಯಾಹ್ನ 12 ಗಂಟೆಯಿಂದ ಸಂಜೆ 5 ಗಂಟೆವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ. ಅಂಚೆಪಾಳ್ಯ, ಮಾಗಡಿ ಹಾಗೂ ನಾಗಮಂಗಲ ಸ್ಟೇಷನ್‌ಗಳ ಕುಣಿಗಲ್ ತಾಲೂಕಿನ ಬಹುತೇಕ ಪ್ರದೇಶಗಳು, ಕುಣಿಗಲ್, ಹುಲಿಯೂರು ದುರ್ಗ, ಯಡವಾಣಿ, ನಿಸ್ಸಾಲೆ, ಚೌಡನಕುಪ್ಪೆ, ಕುದೂರು, ತಿಪ್ಪಸಂದ್ರ, ಉಲ್ಲೇನ ಹಳ್ಳಿ, ಶ್ರೀಗಿರಿಪುರ, ನೇರಳಕೆರೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ

ಸಹಾಯ ಕೇಂದ್ರ ಆರಂಭ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಸಾರ್ವಜನಿಕರ ಅನುಕೂಲಕ್ಕಾಗಿ ನಾಗರಿಕ ಸಹಾಯ ಕೇಂದ್ರ (ಸಿಎಸಿ) ತೆರೆದಿದ್ದು, ಕುಂದು ಕೊರತೆಗಳು ಅಥವಾ ಮನವಿಗಳ ಕುರಿತು 94831-66622 ಸಂಖ್ಯೆಗೆ ಕರೆ ಮಾಡಿ ತಿಳಿಸ ಬಹುದು. ಈ ಕೇಂದ್ರವು ನಿತ್ಯ ಬೆ.10 ರಿಂದ ಸಂಜೆ 6ರವರೆಗೆ ಕಾರ್ಯನಿರ್ವಹಿಸಲಿದ್ದು, ಕರೆಗಳನ್ನು ಸ್ವೀಕರಿಸಿ ಕೇಂದ್ರದ ಇ ಗವರ್ನೆನ್ಸ್ ಇಲಾಖೆ ಅಭಿವೃದ್ಧಿ ಪಡಿಸಿರುವ ಐಪಿಜಿಆರ್‌ಎಸ್ ಲಾಗಿನ್ ಬಳಸಿ ತಂತ್ರಾಂಶದಲ್ಲಿ ಅಳವಡಿಸಿ, ಪರಿಹಾರ ಕ್ರಮ ಕೈಗೊಳ್ಳಲಾಗುವುದು ಎಂದು ಪ್ರಾಧಿಕಾರದ ಆಯುಕ್ತರು ತಿಳಿಸಿದ್ದಾರೆ. ಸಾರ್ವಜನಿಕರು ತಮ್ಮ ಅಹವಾಲುಗಳನ್ನು ಸರಕಾರದ ಏಕೀಕೃತ ಸಾರ್ವಜನಿಕ ಕುಂದುಕೊರತೆ ನಿವಾರಣಾ ವ್ಯವಸ್ಥೆ (ಐಪಿಜಿಆರ್ ಎಸ್ ವೆಬ್ ಆ್ಯಪ್) ಅಥವಾ ನಾಗರಿಕ ಸಹಾಯ ಕೇಂದ್ರಕ್ಕೆ ಕರೆ ಮಾಡುವ ಮೂಲಕ ಅಥವಾ ನೇರವಾಗಿ ಪ್ರಾಧಿಕಾರಕ್ಕೆ ಸಲ್ಲಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಧನ ಸಹಾಯಕ್ಕಾಗಿ ಅರ್ಜಿ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ 2025-26ನೇ ಸಾಲಿಗೆ ವೃತ್ತಿ ರಂಗ ಭೂಮಿ ಕಾಯಕಲ್ಪ ಯೋಜನೆಯಡಿ ಧನಸಹಾಯಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ನೋಂದಾಯಿತ ವೃತ್ತಿ ನಾಟಕ ಕಂಪನಿಗಳು ಅರ್ಜಿ ಸಲ್ಲಿಸಬಹುದಾಗಿದೆ. ನಿಗದಿತ ಅರ್ಜಿ ನಮೂನೆ ಹಾಗೂ ಮಾರ್ಗಸೂಚಿಯನ್ನು ಇಲಾಖೆಯ ಜಾಲತಾಣ www.kannadasiri.karnataka.gov.in ನಲ್ಲಿ ಪಡೆದು, ಭರ್ತಿ ಮಾಡಿ ಅಗತ್ಯ ದಾಖಲೆಗಳನ್ನು ಲಗತ್ತಿಸಿ 2025ನೇ ಜುಲೈ 15ರಿಂದ ಆಗಸ್ಟ್ 15 ರೊಳಗೆ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು ಇವರಿಗೆ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

88ನೇ ಕನ್ನಡ ಸಾಹಿತ್ಯ ಸಮ್ಮೇಳನ ಚರಿತ್ರೆ ಸೃಷ್ಟಿಸಲಿದೆ

ಸಮ್ಮೇಳನ ಯಶಸ್ಸಿಗೆ ಸಂಪೂರ್ಣ ಸಹಕಾರ: ಸಚಿವ ಜಮೀರ್ ಅಹ್ಮದ್ ಖಾನ್ ಭರವಸೆ

ಬೆಂಗಳೂರು: ಬಳ್ಳಾರಿಯಲ್ಲಿ ನಡೆಯಲಿರುವ 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಹೊಣೆಗಾರಿಕೆ ದೊರೆತಿರುವುದು ನನ್ನ ಅದೃಷ್ಟ, ಸಮ್ಮೇಳನ ಚಾರಿತ್ರಿಕವಾಗಿಸಲು ಕನ್ನಡ ಸಾಹಿತ್ಯ ಪರಿಷತ್ತಿಗೆ ಸಂಪೂರ್ಣ ಸಹಕಾರ ನೀಡುಲಾಗುವುದು ಎಂದು ಬಳ್ಳಾರಿ ಉಸ್ತುವಾರಿ ಸಚಿವ ಜಮೀರ್ ಅಹ್ಮದ್ ಭರವಸೆ ನೀಡಿದರು.

ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಕಚೇರಿಯಲ್ಲಿ ಮಂಗಳವಾರ ಪರಿಷತ್ ಪದಾಧಿಕಾರಿಗಳ ಜತೆ ನಡೆದ ಸಭೆಯಲ್ಲಿ ಮಾತನಾಡಿದ ಸಚಿವರು, ಕನ್ನಡಿಗರ ಹೆಮ್ಮೆಯ ಉತ್ಸವವನ್ನು ಚಾರಿತ್ರಿಕವಾಗಿ ನಡೆಸಲು ಜಿಲ್ಲಾಡಳಿತವನ್ನು ಸಂಪೂರ್ಣ ಸಜ್ಜುಗೊಳಿಸಿ ಸರಕಾರದ ಕಡೆಯಿಂದ ಎಲ್ಲಾ ನೆರವನ್ನು ದೊರಕಿಸಲಾಗುವುದು. ಬೂಕರ್ ಪ್ರಶಸ್ತಿ ವಿಜೇತರಾದ ಬಾನು ಮುಷ್ತಾಕ್ ಅವರು ಸಮ್ಮೇಳನದ ಅಧ್ಯಕ್ಷತೆ ವಹಿಸುತ್ತಿರುವುದು ಸಂತಸದ ವಿಷಯ. ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಲಿರುವ ಐದನೆಯ ಮಹಿಳೆ ಮತ್ತು ಮೊದಲ ಅಲ್ಪಸಂಖ್ಯಾಂತ ಮಹಿಳೆ ಆಗಲಿದ್ದಾರೆ. ಬಳ್ಳಾರಿಯಲ್ಲಿ ಸಮ್ಮೇಳನ ನಡೆಸುವ ಅವಕಾಶ ಸಿಕ್ಕಿರುವುದು ನನ್ನ, ನಾಡೋಜ ಡಾ.ಮಹೇಶ ಜೋಶಿ ಅವರ ಮತ್ತು ಬಾನು ಮುಷ್ತಾಕ್ ಅವರ ಅದೃಷ್ಟ ಎಂದು ಬಣ್ಣಿಸಿದರು.

ಸಭೆಯಲ್ಲಿ ಕಸಾಪ ಗೌರವ ಕಾರ್ಯದರ್ಶಿ ಬಿ.ಎಂ.ಪಟೇಲ್ ಪಾಂಡು, ಮಾಧ್ಯಮ ಸಂಚಾಲಕ ಎನ್.ಎಸ್.ಶ್ರೀಧರಮೂರ್ತಿ, ಬಳ್ಳಾರಿ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಕಾರ್ಯ ನಿರ್ವಹಣಾಧಿಕಾರಿ ಮೊಹಮದ್ ಹ್ಯಾರಿಸ್ ಸುಮೇರ್, ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ.ವಿ.ಜೆ ಭಾಗವಹಿಸಿದ್ದರು.

ಪರಿಷತ್ ಪದಾಧಿಕಾರಿಗಳ ಜತೆ ನಡೆದ ಸಭೆಯಲ್ಲಿ ಜಮೀರ್ ಅಹ್ಮದ್ ಖಾನ್, ಮಹೇಶ ಜೋಶಿ, ಪ್ರಶಾಂತ ಕುಮಾರ್ ಮಿಶ್ರಾ, ಮಹಮ್ಮದ್ ಹ್ಯಾರಿಸ್ ಸುಮೇರ್, ಶೋಭಾರಾಣಿ ವಿ.ಜೆ., ಬಿ.ಎಂ. ಪಟೇಲ್ ಪಾಂಡು ಪಾಲ್ಗೊಂಡಿದ್ದರು

ಇದುವರೆಗೂ ಅವಿಭಜಿತ ಬಳ್ಳಾರಿ ಜಿಲ್ಲೆಯಲ್ಲಿ ಐದು ಕನ್ನಡ ಸಾಹಿತ್ಯ ಸಮ್ಮೇಳನಗಳು ನಡೆದಿದ್ದು ಇದು ಆರನೆಯದು ಮತ್ತು ಸ್ವಾತಂತ್ರ್ಯ ನಂತರ ನಡೆಯುತ್ತಿರುವ ಎರಡನೆಯ ಸಮ್ಮೇಳನವಾಗಿದೆ. ಈಗಾಗಲೇ ಬಳ್ಳಾರಿಯಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ ಸಭೆಯಲ್ಲಿ 88ನೇಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಬೂಕರ್ ಪುರಸ್ಕಾರದ ಮೂಲಕ ಜಾಗತಿಕ ಮನ್ನಣೆ ಪಡೆದಿರುವ ಬಾನು ಮುಷ್ತಾಕ್ ಅವರನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ.

-ಮಹೇಶ್ ಜೋಶಿ ಕಸಾಪ ಅಧ್ಯಕ್ಷ

ಕಾಂಗ್ರೆಸ್‌ಗೂ, ಮಾನಸಿಕ ಅಸ್ವಸ್ಥರಿಗೂ ಸಂಬಂಧವಿದೆಯೇ

ಬೆಂಗಳೂರು: ಕಾಂಗ್ರೆಸ್ ಅಧಿಕಾರ ಮತ್ತು ಮಾನಸಿಕ ಅಸ್ವಸ್ಥರಿಗೂ ಏನಾದರೂ ಸಂಬಂಧ ಇದೆಯೇ ಎಂದು ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಪ್ರಶ್ನಿಸಿದ್ದಾರೆ.

ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಬೆಂಗಳೂರಿನ ಚಾಮರಾಜಪೇಟೆಯಲ್ಲಿ ಹಸುವಿನ ಕೆಚ್ಚಲು ಕತ್ತರಿಸಿದ ಭೀಭತ್ಸ ಕೃತ್ಯ ನಡೆದು ತಣ್ಣಗಾಗಿತ್ತು. ಆಗ ಕೃತ್ಯ ಎಸಗಿದಾತ ಮಾನಸಿಕ ಅಸ್ವಸ್ಥ ಎಂದಿದ್ದರು. ಅದರ ನಂತರ ಭಟ್ಕಳದಲ್ಲಿ ಪ್ರಕರಣ ಆಗಿದೆ. ಚಿಕ್ಕಮಗಳೂರು ಜಿಲ್ಲೆ ಕಡೂರು, ಹೊಸನಗರ, ಬೆಳಗಾವಿಯಲ್ಲಿ ಇಂಥ ಘಟನೆಗಳಾಗಿವೆ. ಅಂದರೆ ಹಸುವಿನ ಕೆಚ್ಚಲು ಕತ್ತರಿಸುವ ಇಷ್ಟೊಂದು ಮಾನಸಿಕ ಅಸ್ವಸ್ಥರು ಯಾಕೆ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಬಳಿಕ ಹುಟ್ಟಿಕೊಂಡರು ಎಂದರು. ಹುಣ್ಣಿಮೆ ಬಂದಾಗ ಕೆಲವರಿಗೆ ಹುಚ್ಚು ಕೆದರುತ್ತಂತೆ. ಕಾಂಗ್ರೆಸ್ ಬಂದಾಗ ಈ ಹುಚ್ಚು ಹೆಚ್ಚಾಗುತ್ತದೆಯೇ? ಎಂದ ಅವರು, ಇದು ಪ್ರತ್ಯೇಕ ಘಟನೆ ಅಲ್ಲ. ಗೋವನ್ನು ದೇವರೆಂದು ಪೂಜಿಸುವ ಸಂಸ್ಕೃತಿ ವಿರೋಧಿಸುವ ವಿಕೃತಿ ಇರುವವರು ಇಂಥ ಕೆಲಸ ಮಾಡುತ್ತಿದ್ದಾರೆ. ಸಕಲ ಜೀವಿಗಳಿಗೂ ಲೇಸನ್ನೇ ಬಯಸು ಎಂಬ ಬಸವಣ್ಣನವರ ತತ್ವವನ್ನು ವಿರೋಧಿಸುವ ಮಾನಸಿಕತೆ ಇದರ ಹಿಂದಿದೆ ಎಂದರು.

70-80 ರು. ತಲುಪಿದ ತೆಂಗಿನಕಾಯಿ ಧಾರಣೆ

ಬೆಂಗಳೂರು: ಮಾರುಕಟ್ಟೆಯಲ್ಲಿ ಮೊದಲ ಬಾರಿಗೆ ತೆಂಗನಕಾಯಿ ದರ ಇತಿಹಾಸ ಸೃಷ್ಟಿಸಿದ್ದು, ಶತಕ ದರ ಸಮೀಪಿಸುವ ಮೂಲಕ ಸಾರ್ವಕಾಲಿಕ ದಾಖಲೆ ನಿರ್ಮಿಸಿದೆ.

ಸಾಮಾನ್ಯವಾಗಿ ಒಂದು ಕೆ.ಜಿ ತೆಂಗಿನಕಾಯಿಗೆ 30 ರು. ಆಸುಪಾಸಿನಲ್ಲಿರುತ್ತಿತ್ತು. ಆದರೆ ಇದೀಗ ದ್ವಿಗುಣಗೊಂಡಿದ್ದು, ಒಂದು ಕೆ.ಜಿಗೆ ಬರೋಬ್ಬರಿ 70-80 ರು.ಗೆ ತಲುಪಿದೆ. ಒಂದೆಡೆ ತೆಂಗು ಬೆಳೆಗಾರರಿಗೆ ಸಂತಸ ನೀಡಿದ್ದರೆ ಸಾಮಾನ್ಯರಿಗೆ ಹೊರೆಯಾಗಿ ಪರಿಣಮಿಸಿದೆ. ತೆಂಗಿನಕಾಯಿ ಜತೆ ಕೊಬ್ಬರಿ, ಕೊಬ್ಬರಿ ಎಣ್ಣೆ, ಎಳನೀರು ದರದಲ್ಲೂ ಭಾರೀ ಏರಿಕೆಯಾಗಿದೆ. ಶುದ್ಧ ಕೊಬ್ಬರಿ ಎಣ್ಣೆ ಲೀಟರ್‌ಗೆ 500 ರು. ಆದರೆ, ಎಳನೀರು ಒಂದಕ್ಕೆ 80 ರು. ಆಗಿದೆ. ಈ ಮೂಲಕ ಹಿಂದೆಂದಿಗಿಂತಲೂ ಈ ಸಲ ಭಾರೀ ಏರಿಕೆಯಾಗಿದೆ ಎಂದು ವ್ಯಾಪಾರಿಗಳು ಹೇಳುತ್ತಿದ್ದಾರೆ.

ಶೀಘ್ರದಲ್ಲೇ ಕೆ.ಜಿ ತೆಂಗಿನಕಾಯಿ ಬೆಲೆ 100 ರು.ಗೂ ಅಧಿಕವಾಗುವ ಸಾಧ್ಯತೆಯಿದ್ದು, ಇನ್ನೂ 6 ತಿಂಗಳು ದರ ಇಳಿಕೆ ಸಾಧ್ಯತೆ ಇಲ್ಲ ಎನ್ನುತ್ತಿದ್ದಾರೆ. ಗರಿ ರೋಗದ ಪರಿಣಾಮ ಇಳುವರಿಯಲ್ಲಿ ಭಾರಿ ಇಳಿಕೆಯಾಗಿದ್ದು, ಇದರಿಂದಾಗಿ ತೆಂಗು ದುಬಾರಿಯಾಗಿದೆ. ಕಲ್ಪತರುನಾಡು ತುಮಕೂರಲ್ಲೆ ತೆಂಗಿನಕಾಯಿ ಬೆಲೆ 60-70 ರು. ತಲುಪಿದೆ. ಎಳನೀರು ಬೇಡಿಕೆ ಹೆಚ್ಚಿದ್ದು ಬೆಲೆ ಕೂಡ ಗಗನಕ್ಕೇರಿದೆ. ಸದ್ಯ ಒಂದು ಎಳನೀರಿಗೆ 70 ರು. ಇದೆ. ಸ್ವಲ್ಪ ದೊಡ್ಡ ಗಾತ್ರದ ಗುಣಮಟ್ಟದ ಎಳನೀರು 70 ರು.ಗೆ ಮಾರಾಟವಾಗುತ್ತಿದೆ. ಕೊಬ್ಬರಿ ಬೆಲೆ ಆಕಾಶಕ್ಕೇರಿರುವುದರಿಂದ ಕೊಬ್ಬರಿ ಎಣ್ಣೆ ಧಾರಣೆಯೂ ಹೆಚ್ಚಾಗಿದೆ. ಎಂಟು ತಿಂಗಳ ಹಿಂದೆ ಕೊಬ್ಬರಿಎಣ್ಣೆ ಲೀಟರ್‌ಗೆ 180 ರು.ನಂತೆ ಮಿಲ್‌ನಲ್ಲಿ ಮಾರಾಟವಾಗುತ್ತಿತ್ತು. ಈಗ 520 ರು. ಆಗಿದೆ. ಮೊದಲು 5-6 ಲೀಟರ್ ಕೊಬ್ಬರಿ ಎಣ್ಣೆ ತೆಗೆದುಕೊಂಡು ಹೋಗುತ್ತಿದ್ದವರು, ಈಗ ಅರ್ಧ ಲೀಟರ್ ತೆಗೆದುಕೊಂಡು ಹೋಗುತ್ತಿದ್ದಾರೆ. ಅಡುಗೆಗೆ, ದೀಪಕ್ಕೆ ಕೊಬ್ಬರಿ ಎಣ್ಣೆ ಬಳಕೆ ಗಣನೀಯ ತಗ್ಗಿದ್ದು, ತಲೆಗೆ ಹಚ್ಚಲು ಮಾತ್ರ ಬಳಸುತ್ತಿದ್ದಾರೆ.

ಬೆಲೆ ಏರಿಕೆಗೆ ಕಾರಣ

- ಕಳೆದ ಕೆಲವು ವರ್ಷಗಳಿಂದ ಬೆಲೆ ಕುಸಿತದಿಂದ ಕಂಗಾಲಾಗಿದ್ದ ತೆಂಗು ಬೆಳೆಗಾರರು
- ಬಹುತೇಕರು ಅಡಿಕೆಯತ್ತ ಒಲವು ತೋರಿದ್ದು, ತೆಂಗು ಬೆಳೆಯುವ ಪ್ರದೇಶವನ್ನು ಅಡಿಕೆ ಆವರಿಸಿಕೊಂಡಿದೆ.
- ಜತೆಗೆ ಗರಿ ರೋಗ ಕೂಡ ತೆಂಗಿಗೆ ಹೆಚ್ಚಾಗಿದೆ.
- ಪರಿಣಾಮ ಇಳುವರಿ ಭಾರೀ ಪ್ರಮಾಣದಲ್ಲಿ ಕಡಿಮೆಯಾಗಿದೆ.
- ಈ ಹಿನ್ನೆಲೆ ಉತ್ಪಾದನೆ ಕುಂಠಿತವಾಗಿದೆ.
- ಮಾರುಕಟ್ಟೆಗೆ ನಿರೀಕ್ಷಿತ ಪ್ರಮಾಣದಲ್ಲಿ ಮಾಲು ಬಾರದಿರುವುದರಿಂದ ಬೆಲೆ ಹೆಚ್ಚಳಕ್ಕೆ ಕಾರಣವಾಗಿದೆ.

ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಅಧ್ಯಕ್ಷ ಎಸ್.ಇ ಸುಧೀಂದ್ರ ಭರವಸೆ

ಜೈವಿಕ ಇಂಧನ ಕ್ಷೇತ್ರದಲ್ಲಿ ಬಂಡವಾಳ ಹೂಡಿಕೆ ಹೆಚ್ಚಳ

ಬೆಂಗಳೂರು: ಸರಕಾರವು ಈಗಾಗಲೇ ಪ್ರಸ್ತಾಪಿಸಿರುವ ಪ್ರೋತ್ಸಾಹ ಅಂಶಗಳಿಗೆ ಅನುಮೋದನೆ ನೀಡಿದರೆ ಮುಂದಿನ ಐದು ವರ್ಷಗಳಲ್ಲಿ ಜೈವಿಕ ಇಂಧನ ಕ್ಷೇತ್ರದಲ್ಲಿ ಹೆಚ್ಚು ಬಂಡವಾಳ ಹೂಡಿಕೆಯಾಗಲಿದೆ ಎಂದು ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಅಧ್ಯಕ್ಷ ಎಸ್.ಇ ಸುಧೀಂದ್ರ ಭರವಸೆ ವ್ಯಕ್ತಪಡಿಸಿದ್ದಾರೆ.

ಎಐಸಿಸಿ ಪ್ರಧಾನ ಕಾರ್ಯದರ್ಶಿರಣದೀಪ್ ಸಿಂಗ್ ಸುರ್ಜೇವಾಲ ಅವರನ್ನು ಎಸ್.ಇ ಸುಧೀಂದ್ರ ಅವರು ಭೇಟಿ ಮಾಡಿದರು. ಈ ವೇಳೆ ರಾಜ್ಯದಲ್ಲಿ ಜೈವಿಕ ಇಂಧನ ಕ್ಷೇತ್ರದ ಅಭಿವೃದ್ಧಿಗಾಗಿ ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಸ್ಥಾನದ ಜವಾಬ್ದಾರಿ ವಹಿಸಿ ಯಶಸ್ವಿಯಾಗಿ ಕಾರ್ಯನಿರ್ವಹಿಸಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಸುರ್ಜೇವಾಲ ಅವರಿಗೆ ಕೃತಜ್ಞತೆ ಸಲ್ಲಿಸಿದರು.

ಈ ಭೇಟಿಯ ಸಂದರ್ಭದಲ್ಲಿ 2024-25ನೇ ಸಾಲಿನಲ್ಲಿ ರಾಜ್ಯದಲ್ಲಿ ಜೈವಿಕ ಇಂಧನ ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಕೈಗೊಂಡಿರುವ ಕಾರ್ಯಯೋಜನೆಗಳ ವಿವರವಾದ ವರದಿಯನ್ನು ಸಲ್ಲಿಸಿದರು. ಈ ಸಂದರ್ಭದಲ್ಲಿ ತಾವು ಮಂಡಳಿಯಲ್ಲಿ ಕಳೆದ ಒಂದು ವರ್ಷದಲ್ಲಿ ಜೈವಿಕ ಇಂಧನ ಕ್ಷೇತ್ರದ ಉನ್ನತೀಕರಣ ಹಾಗೂ ವಾಣಿಜ್ಯೀಕರಣಗೊಳಿಸಲು ಹಲವಾರು ಕಾರ್ಯಯೋಜನೆಗಳು, ಅನುಷ್ಠಾನ ಮಾರ್ಗಸೂಚಿಗಳನ್ನು ರೂಪಿಸಿದ್ದಾಗಿ ಹಾಗೂ ಅದನ್ನು ಅನುಷ್ಠಾನಗೊಳಿಸಲು ಪ್ರಯತ್ನಿಸುತ್ತಿರುವುದನ್ನು ವಿವರಿಸಿದರು.

ಅದರಲ್ಲೂ ಪ್ರಮುಖವಾಗಿ ರಾಜ್ಯದಲ್ಲಿ ಜೈವಿಕ ಇಂಧನ ಕ್ಷೇತ್ರದಲ್ಲಿ ಬಂಡವಾಳ ಹೂಡಿಕೆಗೆ ಪೂರಕ ವಾತಾವರಣ ನಿರ್ಮಾಣ ಮಾಡಲು ನೂತನ ಕರ್ನಾಟಕ ರಾಜ್ಯ ಜೈವಿಕ ಇಂಧನ ನೀತಿ ರಚನೆ ಕಾರ್ಯ ಪ್ರಗತಿಯಲ್ಲಿರುವುದನ್ನು ಗಮನಕ್ಕೆ ತಂದು ನೂತನ ಜೈವಿಕ ಇಂಧನ ನೀತಿಯಲ್ಲಿ ಬಂಡವಾಳ ಹೂಡಿಕೆಗಾಗಿ ಪ್ರಸ್ತಾಪಿಸಲಾಗಿರುವ ಪ್ರೋತ್ಸಾಹಕ ಅಂಶ ಗಳನ್ನು ಸರಕಾರವು ಅನುಮೋದಿಸಿ ಘೋಷಿಸಿದರೆ ಮುಂದಿನ 05 ವರ್ಷಗಳಲ್ಲಿ 1 ಲಕ್ಷ ಕೋಟಿಗೂ ಅಧಿಕ ಬಂಡವಾಳ ಹೂಡಿಕೆಯಾಗಲಿದೆ ಎಂಬ ಆಶಾಭಾವ ಇದೆ ಎಂದು ಅಂಕಿ ಅಂಶಗಳ ಸಮೇತ ವಿವರಿಸಿದರು.

ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಅವರನ್ನು ಎಸ್.ಇ ಸುಧೀಂದ್ರ ಭೇಟಿ ಮಾಡಿ ಜೈವಿಕ ಇಂಧನ ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಕೈಗೊಂಡಿರುವ ಕಾರ್ಯ ಯೋಜನೆಗಳ ಬಗ್ಗೆ ವಿವರಿಸಿದರು.

ಕೃಷ್ಣಾ ಅಚ್ಚುಕಟ್ಟು ಪ್ರದೇಶಗಳಿಗೆ 8ರಿಂದ ಹೆಚ್ಚು ನೀರು: ಸಚಿವ

ಬೆಂಗಳೂರು: ಆಲಮಟ್ಟಿ ಹಾಗೂ ನಾರಾಯಣಪುರ ಜಲಾಶಯಗಳಲ್ಲಿ 80.58 ಟಿಎಂಸಿ ನೀರು ಸಂಗ್ರಹವಾಗಿದ್ದು, ಜುಲೈ 8ರಿಂದ ಕೃಷ್ಣಾ ಅಚ್ಚುಕಟ್ಟು ಪ್ರದೇಶಗಳಿಗೆ ಹೆಚ್ಚು ನೀರು ಹರಿಸಲು ತೀರ್ಮಾನ ಕೈಗೊಳ್ಳಲಾಗಿದೆ ಎಂದು ಅಬಕಾರಿ ಮತ್ತು ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ತಿಳಿಸಿದ್ದಾರೆ.



ವಿಕಾಸಸೌಧದಲ್ಲಿ ಸಚಿವ ಆರ್.ಬಿ ತಿಮ್ಮಾಪೂರ ಅವರ ಅಧ್ಯಕ್ಷತೆಯಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯ 2025-26 ನೇ ಸಾಲಿನ ಮುಂಗಾರು ಹಂಗಾಮಿನ ನೀರಾವರಿ ಸಲಹಾ ಸಮಿತಿ ಸಭೆ ನಡೆಸಲಾಯಿತು. ಆಲಮಟ್ಟಿ ಮತ್ತು ನಾರಾಯಣಪುರ ಡ್ಯಾಂಗಳಲ್ಲಿ 80.58 ನೀರು ಸಂಗ್ರಹವಾಗಿದ್ದು, ಕಳೆದ ಸಾಲಿಗಿಂತ 54.77 ಟಿಎಂಸಿ ಹೆಚ್ಚುವರಿ ನೀರು ಸಂಗ್ರಹವಾಗಿದೆ. ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಿ ಕೃಷ್ಣಾ ಮೇಲ್ದಂಡೆ ಯೋಜನೆಯ ಅಚ್ಚುಕಟ್ಟು ಪ್ರದೇಶವು ಮುಂಗಾರು ಹಂಗಾಮಿನ ಮಳೆ ಆಧರಿತವಾಗಿದ್ದು, ಮಳೆಯನ್ನು ಆಧರಿಸಿ ಅವಶ್ಯಕತೆಗೆ ತಕ್ಕಂತೆ ನೀರು ಹರಿಸಲು ಸಚಿವರು ಸೂಚಿಸಿದರು. ಜುಲೈ 8 ರಿಂದ ಮುಂದಿನ 120 ದಿನಗಳಿಗೆ ಮುಂಗಾರು ಹಂಗಾಮಿಗೆ ನೀರು ಪೂರೈಸಲು ತೀರ್ಮಾನಿಸಲಾಗಿದೆ. ಒಳಹರಿವು ಆಧರಿಸಿ ಕಾಲುವೆಗಳಿಗೆ ಸತತವಾಗಿ ನೀರು ಬಿಡಲು ಸಚಿವ ತಿಮ್ಮಾಪೂರ ಅವರು ಅಧಿಕಾರಿಗಳಿಗೆ ತಿಳಿಸಿದರು.

ಪ್ರವಾಸಿ ಪ್ರಪಂಚ ಅಂದ್ರೆ ಬರೀ ಪತ್ರಿಕೆ ಅಷ್ಟೇ ಅಲ್ಲ! ಕ್ಷಣ ಕ್ಷಣಕ್ಕೂ ಮಾಹಿತಿ ನೀಡುವ ಸಮಗ್ರ ವೆಬ್‌ಸೈಟ್
ವಿಸಿಟ್ ಮಾಡಿ
www.pravasiprapancha.com

ಎತ್ತಿನಭುಜ ಚಾರಣ ಒಂದು ತಿಂಗಳು ಬಂದ್

ಚಿಕ್ಕಮಗಳೂರು: ಜಿಲ್ಲೆಯ ಕೆಲವೆಡೆ ನಿರಂತರ ಮಳೆಯಾ ಗುತ್ತಿರುವ ಹಿನ್ನೆಲೆ ಇಂದಿನಿಂದ ಒಂದು ತಿಂಗಳು ಎತ್ತಿನಭುಜ ಚಾರಣವನ್ನು ಬಂದ್ ಮಾಡಲಾಗಿದೆ. ಮೂಡಿಗೆರೆ ತಾಲೂಕಿನ ಸುಪ್ರಸಿದ್ಧ ಎತ್ತಿನಭುಜಕ್ಕೆ ಪ್ರವಾಸಿಗರು 7 ಕಿ.ಮೀ. ಚಾರಣ ಮಾಡಿ ಪ್ರಕೃತಿ ಸೌಂದರ್ಯ ಸವಿಯುತ್ತಿದ್ದರು. ಆದರೆ ಜಿಲ್ಲೆಯಲ್ಲಿ ನಿರಂತರ ಮಳೆಯಿಂದಾಗಿ ಭಾರೀ ಮಂಜು ಕವಿಯುತ್ತಿದ್ದು, ಪ್ರವಾಸಿಗರ ಹಿತದೃಷ್ಟಿಯಿಂದ ಅರಣ್ಯ ಇಲಾಖೆ ಚಾರಣಕ್ಕೆ ಬ್ರೇಕ್ ಹಾಕಿದೆ.

ಕರ್ನಾಟಕ ಸರ್ಕಾರ
ಪುರಸಭೆ ಕಾರ್ಯಾಲಯ, ಕಂಪ್ಲಿ. ಬಳ್ಳಾರಿ ಜಿಲ್ಲೆ.
Email : ka.kampli.tmc@gmail.com
website : www.kamplitown.mrc.gov.in

ಕ್ರ.ಸಂ. ಪು.ಸ.ಕಂ/ನೈರ್ಮಲ್ಯ/ನೀ.ಸ./ಹೊಗು/01/2025–26 ದಿನಾಂಕ : 27.06.2025

ಟೆಂಡರ್ ಪ್ರಕಟಣೆ (ಇ–ಪೋರ್ಟಲ್ ಮೂಲಕ)

2026–26 ನೇ ಸಾಲಿನ ಪುರಸಭೆ ನಿಧಿಯಲ್ಲಿ ಮಂಜೂರಾದ ಹೊರಗುತ್ತಿಗೆ ಸಿಬ್ಬಂಧಿಗಳನ್ನು ಸರಬರಾಜು ಮಾಡಲು ಈ ಕೆಳಕಂಡ ಇಂಡೆಂಟ್‌ಗಳಿಗೆ ಟೆಂಡರ್ ಕರೆಯಲಾಗಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ತಿದ್ದುಪಡಿ ನಿಯಮಗಳು 2001 ರ ಅನ್ವಯ ಸ್ಟ್ಯಾಂಡರ್ಡ್ ಬಿಡ್ ಟೆಂಡರ್ ಡಾಕ್ಯುಮೆಂಟ್ ನಿಯಮಾವಳಿಗಳಂತೆ ನೋಂದಾಯಿತ ಮತ್ತು ಪರವಾನಿಗೆ ಪಡೆದ ಮ್ಯಾನ್ ಪವರ್ ಏಜೆನ್ಸಿಗಳು ಟೆಂಡರ್‌ನ್ನು **https://kppp.karnataka.gov.in/kppp** ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ.
ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: **ದಿನಾಂಕ 14.07.2025 ಸಂಜೆ 5.00 ಗಂಟೆವರೆಗೆ.** ಟೆಂಡರ್‌ಗಳನ್ನು ತೆರೆಯುವ ದಿನಾಂಕ: **ದಿನಾಂಕ 16.07.2025 ಬೆಳಿಗ್ಗೆ 11.00 ಗಂಟೆಗೆ**
Indent No & Name of Work: Supply of 14 Drivers 3 Driver Cum Operator and 10 Helpers to the SWM vehicles of TMC Kampli - DMA/2025-26/SE5554. **Estimate Cost (in Lakhs):** 70.90. **Cat:** Others

ಸಹಿ/– ಮುಖ್ಯಾಧಿಕಾರಿಗಳು, ಪುರಸಭೆ, ಕಂಪ್ಲಿ.
ಡಿಐಪಿಆರ್/ಬಳ್ಳಾರಿ/230/ಕೆಎಸ್‌ಎಂಸಿಎ/2025–26

ಕರ್ನಾಟಕ ಸರಕಾರ
ಜಿಲ್ಲಾ ಕುಷ್ಠರೋಗ ನಿರ್ಮೂಲನಾ ಅಧಿಕಾರಿಗಳ ಕಾರ್ಯಾಲಯ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ
ಕಛೇರಿ ಆವರಣ, ವಿಜಯಪುರ. ದೂರವಾಣಿ ಸಂಖ್ಯೆ:08352–253174
ಇ–ಮೇಲ್: dlovijapur@gmail.com
ಸಂಖ್ಯೆ: ಜಿ.ಕು.ನಿ.ಅ.ವಿ/KaBHI/Recruiment/14/2025–26
ದಿನಾಂಕ: 30.06.2025

ಪ್ರಕಟಣೆ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ಬ್ರೈನ್ ಹೆಲ್ತ್ ಇನಿಶಿಯೇಟಿವ್ (KaBHI) ಕಾರ್ಯಕ್ರಮ ವಿಜಯಪುರ ಅಡಿ 2025–26 ನೇ ಸಾಲಿನ ಮಾರ್ಗಸೂಚಿಯಲ್ಲಿ ಖಾಲಿ ಇರುವ ಗುತ್ತಿಗೆ ಆಧಾರದ ಮೇಲೆ ಒಟ್ಟು 06 ವಿವಿಧ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ, 1) ತಜ್ಞವೈದ್ಯರು–01 DM or DNB Neurology or MD/DNB General Medicine or MBBS with 5 years experience., 2) ಶುಶ್ರೂಕ/ ಶುಶ್ರೂಕಿ–01, 3) ಫೀಜಿಯೋಥೆರಪಿಸ್ಟ್–01, 4) ಕ್ಲಿನಿಕಲ್ ಸೈಕೊಲಾಜಿಸ್ಟ್–1, 5) ಸ್ಪೀಚ್ ಥೆರಪಿಸ್ಟ್ (ಸ್ಪೀಚ್ ಲ್ಯಾಂಗ್ವೇಜ್ ಪ್ಯಾಥೋಲಾಜಿಸ್ಟ್)–01, 6) ಜಿಲ್ಲಾ ಸಂಯೋಜನಕರು–01, ಹುದ್ದೆಗಳಿಗೆ ಅವಶ್ಯ ಇರುವ ವಿದ್ಯಾರ್ಹತೆ, ಅನುಭವ, ಗುತ್ತಿಗೆ ವೇತನ, ವಯೋಮಿತಿ, ಗುತ್ತಿಗೆ ಅವಧಿ ಕರ್ತವ್ಯ ನಿರ್ವಹಿಸಬೇಕಾದ ವಿವರವನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಕುಷ್ಠರೋಗ ನಿರ್ಮೂಲನಾ ಅಧಿಕಾರಿಗಳ ಕಛೇರಿಯಲ್ಲಿ ಕೆಲಸದ ಸಮಯದಲ್ಲಿ ಪಡೆಯಬಹುದಾಗಿದೆ.
ಅರ್ಜಿಗಳನ್ನು ಸದಸ್ಯ ಕಾರ್ಯದರ್ಶಿಗಳಾದ ಜಿಲ್ಲಾ ಕುಷ್ಠರೋಗ ನಿರ್ಮೂಲನಾ ಅಧಿಕಾರಿಗಳು ವಿಜಯಪುರ ಇವರ ಕಛೇರಿಗೆ ದಿನಾಂಕ:09.07.2025 ಮತ್ತು 10.07.2025 ಸಮಯ ಬೆಳಿಗ್ಗೆ 10.30 ರಿಂದ ಸಂಜೆ 5.30 ರ ಒಳಗಾಗಿ ಸಲ್ಲಿಸಲು ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಮೊ ಸಂಖ್ಯೆ: 9535309564
* ಸದರಿ ನೇಮಕಾತಿಯಲ್ಲಿ KaBHI ಕಾರ್ಯಕ್ರಮದಲ್ಲಿ ನಿಮ್ಹಾನ್ಸ್ ಅಡಿಯಲ್ಲಿ ಅನುಭವ ಹೊಂದಿರುವ ಅಭ್ಯರ್ಥಿಗಳಿಗೆ ಮೊದಲ ಆದ್ಯತೆ ನೀಡಲಾಗುವುದು, ವಿದ್ಯಾರ್ಹತೆಯಲ್ಲಿ ಗಳಿಸಿದ ಅಂಕಗಳು ಮತ್ತು ಸಂದರ್ಶನದಲ್ಲಿ ಗಳಿಸಿದ ಅಂಕಗಳಂತೆ ರೋಸ್ಟರ್ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು.
* ಶೈಕ್ಷಣಿಕ ವಿದ್ಯಾರ್ಹತೆ ದಾಖಲೆಗಳ ಪರಿಶೀಲನೆಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇರ ಸಂದರ್ಶನ ದಿನಾಂಕ ತಿಳಿಸಲಾಗುವುದು.

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ವಿಜಯಪುರ
ವಾಸಾಸಂಇ/ವಿಜಯಪುರ/158/ಕೆಎಸ್‌ಎಂಸಿಎ/2025–26

ನಗರಸಭೆ ಕಾರ್ಯಾಲಯ ನೆಲಮಂಗಲ
ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ–562123, ದೂ.: 080–27722735, ಸಹಾಯವಾಣಿ: 080–27723627, Web : www.nelamangala.mrc.gov.in, Email : itstaff_nelamangala@gmail.com
ಸಂಖ್ಯೆ:ನಸನೆ:ಪ್ರಮಂಆಯೋ:ವಿವ:01/2025–26 ದಿನಾಂಕ : 30.06.2025

ಸಾರ್ವಜನಿಕ ಪ್ರಕಟಣೆ

ವಿಷಯ: ಪ್ರಧಾನ ಮಂತ್ರಿ ಆವಾಸ್ (ನಗರ) 2.0 ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ.
ಉಲ್ಲೇಖ: ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ರಾಜೀವ್ ಗಾಂಧಿ ವಸತಿ ನಿಗಮ ಬೆಂಗಳೂರುರವರ ಪತ್ರದ ಸಂಖ್ಯೆ:RGHCL/p1/PUO/01/2025-26ದಿನಾಂಕ: 25.05.2025
ವಿಷಯಕ್ಕೆ ಸಂಬಂಧಿಸಿದಂತೆ ನೆಲಮಂಗಲ ನಗರಸಭೆ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ವಸತಿ ರಹಿತ/ನಿವೇಶನ ರಹಿತರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಉಲ್ಲೇಖ ಪತ್ರದಂತೆ ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಆವಾಸ್ 2.0 ಯೋಜನೆಯಡಿ ಕಚ್ಚಾಮನೆ/ನಿವೇಶನ ಹೊಂದಿರುವ ವಸತಿ ರಹಿತರು ಹಾಗೂ ನಿವೇಶನ ರಹಿತ ಕುಟುಂಬಗಳಿಗೆ ವಸತಿ ಸೌಲಭ್ಯ ಕಲ್ಪಿಸಲು ಕೇಂದ್ರ ಸರ್ಕಾರವು ಆನ್‌ಲೈನ್ Unified Web Portal ನಲ್ಲಿ ಅರ್ಜಿಗಳನ್ನು ಆಹ್ವಾನಿಸಿದೆ. ಅದರಂತೆ ವಸತಿ ರಹಿತ/ನಿವೇಶನ ರಹಿತರನ್ನು ಗುರ್ತಿಸಲು ನಗರಸಭೆಯಿಂದ (Rapid Demand Survey) ಸಮೀಕ್ಷೆಯನ್ನು ಕೈಗೊಳ್ಳಲಾಗುತ್ತಿದೆ.
ನೆಲಮಂಗಲ ನಗರಸಭೆ ವ್ಯಾಪ್ತಿಯಲ್ಲಿ ವಾಸಿಸುವ ಎಲ್ಲಾ ವರ್ಗದ ಅರ್ಹ ವಸತಿರಹಿತ/ನಿವೇಶನ ರಹಿತರು ವಸತಿ ಸೌಲಭ್ಯ ಪಡೆಯಲು ಕೇಂದ್ರ ಸರ್ಕಾರದ https/pmay.urban.gov.in ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 15.07.2025 ಆಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ನಗರಸಭೆ ಕಾರ್ಯಾಲಯದಲ್ಲಿ ವಸತಿ ಶಾಖೆಯನ್ನು ಸಂಪರ್ಕಿಸಲು ತಿಳಿಸಿದೆ.
ನಿವೇಶನ ರಹಿತ/ವಸತಿ ರಹಿತರು ವಸತಿ ಸೌಲಭ್ಯ ಪಡೆಯಲು ಕೆಳಕಂಡ ಅರ್ಹತೆ ಹೊಂದಿರಬೇಕು.
(1) ಫಲಾನುಭವಿಯು ಖಡ್ಡಾಯವಾಗಿ ಮಹಿಳೆಯಾಗಿರತಕ್ಕದ್ದು, ಪುರುಷರಾಗಿದ್ದಲ್ಲಿ ಮಾಜಿ ಯೋಧರು, ವಿಧುರರು, ಅಂಗವಿಕಲರು, ಹಿರಿಯನಾಗರೀಕರು, ವಿಚ್ಛೇದಿತರಾಗಿರಬೇಕು. (2) ವಾರ್ಷಿಕ ಆದಾಯ ಆರ್ಥಿಕ ದುರ್ಬಲ ವರ್ಗದವರಿಗೆ 3.00 ಲಕ್ಷ (EWS), ಕಡಿಮೆ ಆದಾಯದ ವರ್ಗದವರಿಗೆ 3.00 ರಿಂದ 6.00 ಲಕ್ಷ, (LIG) ಮಧ್ಯಮ ಆದಾಯದ ವರ್ಗದವರಿಗೆ : 6.00 ರಿಂದ 9.00 ಲಕ್ಷ (MIG) ರೂ. ಗಳಾಗಿರಬೇಕು (3) ಅರ್ಜಿದಾರರು ಕಳೆದ 20 ವರ್ಷಗಳಲ್ಲಿ ರಾಜ್ಯ/ಕೇಂದ್ರ ಸರ್ಕಾರಗಳ ಯಾವುದೇ ವಸತಿ ಯೋಜನೆಗಳಡಿ ಸೌಲಭ್ಯ ಪಡೆದಿರಬಾರದು. (4) ನಗರಸಭೆ ವ್ಯಾಪ್ತಿಯಲ್ಲಿ ದಿನಾಂಕ: 01.09.2024 ರೊಳಗೆ ವಾಸಿಸುತ್ತಿದ್ದ ಹಾಗೂ ಹಾಲಿ ವಾಸವಿರುವವರು ಯೋಜನೆಯಡಿ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. (5) ರಾಜ್ಯದ ಯಾವುದೇ ಭಾಗದಲ್ಲಿ ವಸತಿ/ನಿವೇಶನ ಹೊಂದಿರದವರು ನಿವೇಶನ ರಹಿತರಾಗಿರುತ್ತಾರೆ. (6) ನಿವೇಶನವಿರುವ ಪಕ್ಕಾ ಮನೆಯಿರದೇ ಕಚ್ಚಾ ಮನೆಯಲ್ಲಿ ವಾಸಿಸುವವರು ವಸತಿ ರಹಿತರಾಗಿರುತ್ತಾರೆ. (7) ಈ ಹಿಂದೆ ಪ್ರಧಾನ ಮಂತ್ರಿ ಆವಾಸ್ ನಗರ ಯೋಜನೆಯಡಿ ಫಲಾನುಭವಿಯಾಗಿ ಆಯ್ಕೆಯಾಗಿ ಮನೆ ನಿರ್ಮಿಸಿಕೊಳ್ಳದೆ ದಿನಾಂಕ:31.12.2023 ರ ನಂತರ ಅರ್ಹತೆ ರದ್ದಾದ ಫಲಾನುಭವಿಗಳು ಕೂಡ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.
ಅರ್ಜಿದಾರರು ಅರ್ಜಿಯ ಜೊತೆ ಸಲ್ಲಿಸಬೇಕಾದ ದಾಖಲೆಗಳು : (1) ಕುಟುಂಬದ ಎಲ್ಲಾ ಸದಸ್ಯರ ಆಧಾರ ಕಾರ್ಡ್‌ಗಳ ನಕಲು (2) ಜಾತಿ/ಆದಾಯ ದೃಢೀಕರಣ ಪತ್ರದ ನಕಲು (3) ಪಡಿತರ ಚೀಟಿ ನಕಲು (4) ಚುನಾವಣ ಗುರುತಿನ ಚೀಟಿ ನಕಲು (5) ಬ್ಯಾಂಕ್ ಪಾಸ್ ಪುಸ್ತಕದ ನಕಲು (6) ಪಾಸ್ ಅಳತೆ ಫೋಟೊ (7) ವಸತಿ ರಹಿತರಾಗಿದ್ದಲ್ಲಿ ನಿವೇಶನಕ್ಕೆ ಸಂಬಂಧಿಸಿದ ಹಕ್ಕು ಪತ್ರ/ಕ್ರಯಪತ್ರ/ ದಾನಪತ್ರ/ ಖಾತಪತ್ರದ ನಕಲು (8) ಪಾನ್ ಕಾರ್ಡ್ ಇದ್ದಲ್ಲಿ ನಕಲು.

ಸಹಿ/–	ಸಹಿ/–	ಸಹಿ/–	ಸಹಿ/–
ಎನ್ ಗಣೇಶ್	ಆನಂದ್ ಜಿ	ಪದ್ಮನಾಭ ಬಿ	ರಾಮೇಗೌಡ ಡಿ
ಮಾನ್ಯ ಅಧ್ಯಕ್ಷರು	ಮಾನ್ಯ ಉಪಾಧ್ಯಕ್ಷರು	ಮಾನ್ಯ ಸ್ಥಾಯಿ ಸಮಿತಿ ಅಧ್ಯಕ್ಷರು	ಪೌರಾಯುಕ್ತರು (ಪ್ರಭಾರ)
ನಗರಸಭೆ, ನೆಲಮಂಗಲ	ನಗರಸಭೆ, ನೆಲಮಂಗಲ	ನಗರಸಭೆ, ನೆಲಮಂಗಲ	ನಗರಸಭೆ, ನೆಲಮಂಗಲ

ಆಟೋದಲ್ಲಿ ಪ್ರೇಮಿಗಳ ಆತ್ಮಹತ್ಯೆ

ಗೋಕಾಕ್: ಪ್ರೀತಿಗೆ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಆಟೋದಲ್ಲಿ ಪ್ರೇಮಿಗಳಿಬ್ಬರು ಆತ್ಮಹತ್ಯೆಗೆ ಶರಣಾದ ಘಟನೆ ಬೆಳಗಾವಿ ಜಿಲ್ಲೆಯ ಗೋಕಾಕ್ ತಾಲೂಕಿನ ಚಿಕ್ಕನಂದಿ ಗ್ರಾಮದ ಹೊರ ವಲಯದಲ್ಲಿ ನಡೆದಿದೆ. ರಾಘವೇಂದ್ರ ಜಾಧವ್ (28), ರಂಜಿತಾ ಚೋಬರಿ (26) ಮೃತ ದುರ್ದೈವಿಗಳು. ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಮುನವಳ್ಳಿ ಪಟ್ಟಣದ ನಿವಾಸಿಗಳಾಗಿದ್ದ ಇವರು ಪರಸ್ಪರ ಪ್ರೀತಿಸುತ್ತಿದ್ದರು. ರಾಘವೇಂದ್ರನನ್ನು ಪ್ರೀತಿಸುತ್ತಿದ್ದ ರಂಜಿತಾ ಚೋಬರಿ ಗೆ ಬೇರೊಬ್ಬ ಯುವಕನ ಜತೆ ನಿಶ್ಚಿತಾರ್ಥವಾಗಿತ್ತು. ತಾನು ಪ್ರೀತಿಸಿದ ಹುಡುಗನ ಜತೆ ಮದುವೆಗೆ ಒಪ್ಪದ ಹಿನ್ನೆಲೆಯಲ್ಲಿ ಮನನೊಂದು ಯುವತಿ ಬೇಸರಗೊಂಡಿದ್ದಳು. ಇನ್ನೇನು ಮನೆಯಲ್ಲಿ ನಿಶ್ಚಿತಾರ್ಥ ನಂತರ ಮದುವೆಗೆ ಸಿದ್ಧರಾಗುತ್ತಾರೆ ಎಂದು ತಿಳಿದ ರಂಜಿತಾ ತಾನು ಪ್ರೀತಿಸಿದ ಹುಡುಗನ ರಾಘವೇಂದ್ರನ ಜತೆ ನಿರ್ಜನ ಪ್ರದೇಶಕ್ಕೆ ತೆರಳಿ ಆಟೋದಲ್ಲಿ ನೇಣು ಬಿಗಿದು ಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸ್ಥಳಕ್ಕೆ ಗೋಕಾಕ್ ಠಾಣೆ ಪೊಲೀಸರು ಭೇಟಿನೀಡಿ ಪರಿಶೀಲನೆ ನಡೆಸಿದ್ದಾರೆ.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
"ಜ್ಞಾನ ಸಂಗಮ", ಬೆಳಗಾವಿ – 590018, ಕರ್ನಾಟಕ, ಭಾರತ
ಸಂಖ್ಯೆ:ವಿ.ತಾ.ವಿ./ಬೆ/ಸ್ಥಾ.ಅ./2025–26/ಐ.ಎಫ್.ಟಿ. ನಂ.52/1420 ದಿನಾಂಕ: 28–06–2025

ಟೆಂಡರ್ ಪ್ರಕಟಣೆ
(ದ್ವಿ–ಲಕೋಟೆ ಪದ್ಧತಿ) (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕುಲಸಚಿವರು, ವಿತಾವಿ, ಬೆಳಗಾವಿ ಇವರಿಂದ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ಸ್ ಕೆ.ಡಬ್ಲ್ಯೂ. ರ ಪ್ರಕಾರ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ನ್ನು ಆಮಂತ್ರಿಸಲಾಗಿದೆ. ಕಾಮಗಾರಿ ಹೆಸರು: **ವಿತಾವಿಯ ಬೆಳಗಾವಿಯ ಆವರಣದಲ್ಲಿರುವ ಹೊಸ ಅತಿಥಿ ಗೃಹದ ಟೆರೆಸ್ ಮೇಲೆ PUF ಶೀಟ್‌ನೊಂದಿಗೆ ಟ್ರಸ್‌ರೂಫ್‌ನ್ನು ಒದಗಿಸುವ ಕಾಮಗಾರಿ ಮೊತ್ತ ರೂ. 3,36,42,995/– (ತೆರಿಗೆ ರಹಿತ).** ಇತರೆ ಮಾಹಿತಿಗಳನ್ನು ವೆಬ್‌ಸೈಟ್: **https://kppp.karnataka.gov.in** ಮೂಲಕ ದಿನಾಂಕ: **03–07–2025 ರಿಂದ** ಪಡೆದುಕೊಳ್ಳಬಹುದು.

ಸಹಿ/– ಕುಲಸಚಿವರು
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ.
ವಾಸಾಸಂಇ/ಬೆಳಗಾವಿ/569/ಅಡ್ವರ್ಟೋ/2025–26

ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರ ಕಾರ್ಯಾಲಯ, ಸರ್ಕಾರಿ ಕೇಂದ್ರ ಮುದ್ರಣಾಲಯ, 8ನೇ ಮೈಲಿ, ಆರ್.ವಿ. ಕಾಲೇಜ್ ಅಂಚೆ, ಮೈಸೂರು ರಸ್ತೆ, ಬೆಂಗಳೂರು–560059. ದೂರವಾಣಿ: 080–28484515/28484518
ಅಧಿಸೂಚನೆ ಸಂಖ್ಯೆ: ಡಿಪಿಎಸ್/ಪಿಯುಆರ್‌ಬಿ/ಟಿಡಿಆರ್‌ಸಿ/3/2025–ಪಿಯುಆರ್/ಮ್ಯಾಪ್‌ಲಿಥೋ ದಿನಾಂಕ: 01.07.2025

ಸಂಕ್ಷಿಪ್ತ ಟೆಂಡರ್ ಅಧಿಸೂಚನೆ
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಮ್ಯಾಪ್‌ಲಿಥೋ ಮುದ್ರಣ ಕಾಗದ ಸಂಗ್ರಹಣೆಗಾಗಿ ಕರ್ನಾಟಕದ ಗಡಿಯನ್ನು ಹಂಚಿಕೊಳ್ಳುವ ರಾಜ್ಯಗಳ ವ್ಯಾಪಾರಿಗಳು/ ಟೆಂಡರ್‌ದಾರರಿಂದ ದರಗುತ್ತಿಗೆ ವ್ಯವಸ್ಥೆ ಅಡಿಯಲ್ಲಿ ಆನ್‌ಲೈನ್ ಟೆಂಡರನ್ನು ಆಹ್ವಾನಿಸಲಾಗಿದೆ. ತಯಾರಕರಿಗೆ ಭಾರತ ವ್ಯಾಪ್ತಿಗೆ ಸೀಮಿತವಾಗಿದೆ. **ಟೆಂಡರ್‌ನ ಅಂದಾಜು ಮೊತ್ತ ರೂ.194.00 ಲಕ್ಷಗಳು ಹಾಗೂ ಇ.ಎಂ.ಡಿ.ಯು ರೂ.9.70 ಲಕ್ಷಗಳಾಗಿರುತ್ತದೆ.** ಟೆಂಡರ್ ಪೂರ್ವಭಾವಿ ಸಭೆಯ ದಿನಾಂಕ: **09–07–2025, ಬೆಳಿಗ್ಗೆ 11.30ಕ್ಕೆ** ಹಾಗೂ ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ: **17–07–2025, 17.30 ಗಂಟೆಗೆ.** ಮಾಹಿತಿಯುನ್ನು https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/–
ನಿರ್ದೇಶಕರು (ಪ್ರ)
ವಾಸಾಸಂಇ/ವಾ.ಪ್ರ/1573/ಎಂಎಎ/2025–26

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ)
ನಿಗಮ ಕಚೇರಿ, ಪಿ.ಬಿ. ರಸ್ತೆ, ನವನಗರ, ಹುಬ್ಬಳ್ಳಿ. ದೂರವಾಣಿ: 0836–2223526, ವೆಬ್‌ಸೈಟ್: www.hescom.co.in
ಇ–ಮೇಲ್ ಐಡಿ: seepmc.hescom@gmail.com / eepmc1.hescom@gmail.com CIN : U31401KA2002SGC030437
No: HESCOM/SEE(PMC)/EE-P1/AEE-2/2025-26/Cys-2886 Dated: 01-07-2025

ಟೆಂಡರ್ ಪ್ರಕಟಣೆ (ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಅಧೀಕ್ಷಕ ಇಂಜಿನೀಯರ್ (ವಿ), ಪಿಎಮ್‌ಸಿ, ನಿಗಮ ಕಛೇರಿ, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಹುಬ್ಬಳ್ಳಿ ರವರಿಂದ ಪೂರ್ಣ ಗುತ್ತಿಗೆ ಆಧಾರದಡಿಯಲ್ಲಿ ಕೆಳಕಂಡ ಕಾಮಗಾರಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ.ಸಂ.	ವಿವರಗಳು	ಬಿಡ್ ಇಂಡೆಂಟ್ ಸಂಖ್ಯೆ.
1	ಹುಬ್ಬಳ್ಳಿ ನಗರ ವಿಭಾಗದ CSD-1, CSD-2, CSD-3 ಮತ್ತು CSD-4 ಉಪವಿಭಾಗಗಳಲ್ಲಿ ಹಾಲಿ ಇರುವ ಶಿತಿಲಗೊಂಡ/ಅಪಾಯಕಾರಿ ಎಲ್‌ಟಿ ಫೀಡರ್ ಪಿಲ್ಲರ್ ಬಾಕ್ಸ್‌ಗಳು ಮತ್ತು ಸಂಬಂಧಿತ ಸಾಮಾಗ್ರಿಗಳನ್ನು ಬದಲಾಯಿಸುವುದು.	HESCOM/2025-26/EL/WORK_INDENT_894 to 897 (4 Packages).

ಸದರಿ ಟೆಂಡರ್‌ಗಳ ಪೂರ್ಣ ವಿವರಗಳನ್ನು ವೆಬ್‌ಸೈಟ್: **www.kppp.karnataka.gov.in** ರಲ್ಲಿ ದಿನಾಂಕ: **02–07–2025 ನಂತರ ಪಡೆಯಬಹುದು.**

ಸಹಿ/– ಅಧೀಕ್ಷಕ ಇಂಜಿನೀಯರರು (ವಿ), (ಪಿಎಮ್‌ಸಿ), ಹೆಸ್ಕಾಂ, ಹುಬ್ಬಳ್ಳಿ.
ವಾಸಾಸಂಇ/ಧಾರವಾಡ/363/ಅಡ್ವರ್ಟೋ/2025–26

ಉಪನಿರ್ದೇಶಕರು(ಆಡಳಿತ) ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾಧಿಕಾರಿಯವರ ಕಛೇರಿ, ಸಮಗ್ರ ಶಿಕ್ಷಣ ಕರ್ನಾಟಕ, ಶಾಲಾ ಶಿಕ್ಷಣ ಇಲಾಖೆ, ಬೀದರ ಜಿಲ್ಲೆ.
No: DPI/2025-26/IND0555 Date: 25/06/2025

ಬೀದರ ಜಿಲ್ಲೆಯ 06 ಕೆ.ಪಿ.ಎಸ್ ಶಾಲೆಗಳಲ್ಲಿ ಹಾಗೂ 04 ಆದರ್ಶ ವಿದ್ಯಾಲಯ ಶಾಲೆಗಳಲ್ಲಿ ಆವಿಷ್ಕರ್ ಇನ್ನೋವೇಶನ್ ಲ್ಯಾಬ್‌ಗಳನ್ನು ಸ್ಥಾಪಿಸಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸುವ ಕುರಿತು. **ಟೆಂಡರ್ ವೇಳಾ ಪಟ್ಟಿ ಹಾಗೂ ವಿವರಗಳು:** 1) ಟೆಂಡರ್ ಗೆ ಇಟ್ಟಿರುವ ಮೊಬಲಗು **ರೂ: 79.90 ಲಕ್ಷ,** 2) ಟೆಂಡರ್ ಬಿಡಗಳನ್ನು ಸಲ್ಲಿಸಲು ಕೊನೆಯ ದಿನಾಂಕ (ವೆಬ್ ಸೈಟ್ ಮೂಲಕ) ಸಮಯ **ದಿ:05/07/2025 ಸಮಯ ಸಂಜೆ: 5.00,** 3) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ & ಸಮಯ **ದಿ:07/07/2025 ಸಮಯ ಮು:11.00 ಗಂಟೆ,** 4) ಆರ್ಥಿಕ ಬಿಡ್ ಗಳನ್ನು ತೆರೆಯ ಬಹುದಾದ ಸಂಭಾವ್ಯ ದಿನಾಂಕ & ಸಮಯ **ದಿನಾಂಕ: 08/07/2025 ಮು:11.00 ಗಂಟೆ** / ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ತಿಳಿಸಲಾಗುವುದು. 5) **ಇ.ಎಂ.ಡಿ. ಮೊಬಲಗು (ವಿದ್ಯುನ್ಮಾನ ಪ್ರಕ್ರಿಯೆ ಮೂಲಕ ಮಾತ್ರ) ರೂ: 1,59.800/–.** 6) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ 9448999388/9480695090, 7) ಅಂತರ ಜಾಲತಾಣದ ವಿಳಾಸ www.kppp.karnataka.gov.in

ಸಹಿ/–ಉಪ ನಿರ್ದೇಶಕರು (ಆಡಳಿತ)ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು ಸರ್ವ ಶಿಕ್ಷಣ ಅಭಿಯಾನ, ಬೀದರ ಜಿಲ್ಲೆ.
ವಾ.ಸಾ.ಸಂ.ಇ/ಬೀದರ/84/ಕೆ.ಎಸ್.ಎಂ.ಸಿ.&ಎ/2025–26

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ, ಡಾ: ಎಮ್.ಹೆಚ್. ಮರೀಗೌಡ ರಸ್ತೆ, ಬೆಂಗಳೂರು – 560 029
ಫೋನ್: 26096832/26096833/26096910 ಇಮೇಲ್: purchase@kmf.coop
ಸಂ. ಕಹಾಮ/ಖರೀದಿ/ಬ್ರಿಕ್ಕೆಟ್–ಟೆಂಡರ್/2025–26 ದಿನಾಂಕ: 02.07.2025

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆಪಿಪಿ–ಪೋರ್ಟಲ್ ಮೂಲಕ)

ಕರ್ನಾಟಕ ಹಾಲು ಮಹಾಮಂಡಳವು ನಂದಿನಿ ಹೈಟೆಕ್ ಮೆಗಾ ಪೌಡರ್ ಪ್ಲಾಂಟ್–ರಾಮನಗರ , ನಂದಿನಿ ಹೈಟೆಕ್ ಪ್ರಾಡಕ್ಟ್ ಘಟಕ–ಚನ್ನರಾಯಪಟ್ಟಣ ಮತ್ತು ಧಾರವಾಡ, ಹಾಸನ, ಗುಬ್ಬಿ ಹಾಗೂ ಶಿಕಾರಿಪುರ ಪಶು ಆಹಾರ ಘಟಕಗಳಿಗೆ ಅರೆವಾರ್ಷಿಕ ಅವಧಿಗೆ ಅಗತ್ಯವಿರುವ ಬಯೋಮಾಸ್ ಫ್ಯೂಯಲ್ ಬ್ರಿಕ್ಕೆಟ್ ಉರುವಲುಗಳನ್ನು ಖರೀದಿಸಲು ಅರ್ಹ ಟೆಂಡರ್‌ದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ವಿವರಗಳು ಈ ರೀತಿ ಇವೆ.

ಕ್ರ. ಸಂ.	ಸಾಮಗ್ರಿಗಳ ವಿವರ	ಟೆಂಡರ್ ಅಧಿಸೂಚನೆ ಸಂಖ್ಯೆ	ಪರಿಮಾಣ	ಇಎಂಡಿ (ರೂ.)
1.	ನಂದಿನಿ ಹೈಟೆಕ್ ಮೆಗಾ ಪೌಡರ್‌ಪ್ಲಾಂಟ್ – ರಾಮನಗರ	KMF/PUR/ TENDER-802/2025-26	10000 MT	15,00,000/-
2.	ನಂದಿನಿ ಹೈಟೆಕ್ ಪ್ರಾಡಕ್ಟ್ ಘಟಕ–ಚನ್ನರಾಯಪಟ್ಟಣ	KMF/PUR/ /TENDER-803/2025-26	6000 MT	12,00,000/-
3.	ಧಾರವಾಡ–ಪಶು ಆಹಾರ ಘಟಕ	KMF/PUR/ /TENDER-804/2025-26	1000 MT	1,80,000/-
4.	ಹಾಸನ–ಪಶು ಆಹಾರ ಘಟಕ	KMF/PUR/ /TENDER-805/2025-26	900 MT	1,60,000/-
5.	ಗುಬ್ಬಿ–ಪಶು ಆಹಾರ ಘಟಕ	KMF/PUR/ /TENDER-806/2025-26	480 MT	90,000/-
6.	ಶಿಕಾರಿಪುರ–ಪಶು ಆಹಾರ ಘಟಕ	KMF/PUR/ /TENDER-807/2025-26	600 MT	1,05,000/-

ಟೆಂಡರ್ ದಾಖಲಾತಿಯನ್ನು ವೆಬ್‌ಸೈಟ್ https://kppp.karnataka.gov.in ನಲ್ಲಿ download ಮಾಡಿಕೊಳ್ಳಬಹುದಾಗಿರುತ್ತದೆ.
No: 080-8046010000/8068948777.
1) ಟೆಂಡರ್ ಡೌನ್‌ಲೋಡ್ ಪ್ರಾರಂಭದ ದಿನಾಂಕ : 02.07.2025 ರಿಂದ. 2) ಟೆಂಡರ್ ಪೂರ್ವಭಾವಿ ಸಭೆ ದಿನಾಂಕ : 05.07.2025 ರಂದು ಬೆಳಗ್ಗೆ 11.00 ಗಂಟೆಗೆ. 3) ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ : 16.07.2025 ರಂದು ಸಂಜೆ 5.00 ಗಂಟೆಯವರೆಗೆ. 4) ಟೆಕ್ನಿಕಲ್ ಟೆಂಡರ್ ತೆರೆಯುವ ದಿನಾಂಕ : 17.07.2025 ರಂದು ಸಂಜೆ 5.05 ಗಂಟೆಗೆ. 5) ಕಮರ್ಷಿಯಲ್ ಟೆಂಡರ್ ತೆರೆಯುವ ದಿನಾಂಕ : ತಾಂತ್ರಿಕ ಟೆಂಡರ್‌ಗಳ ಪರಿಶೀಲನೆಯ ನಂತರ. ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ವೀಕ್ಷಿಸಬಹುದು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/– ನಿರ್ದೇಶಕರು (ಖರೀದಿ)

ಆಪ್ತರೊಂದಿಗೆ ಬಿಆರ್‌ಪಿ ಸಂಭಾಷಣೆ | ಸಾಮಾಜಿಕ ಜಾಲತಾಣದಲ್ಲಿ ವಿಡಿಯೊ ವೈರಲ್

ಸಿದ್ದರಾಮಯ್ಯ ಲಾಟರಿ ಹೊಡೆದು ಸಿಎಂ ಆದ

ಮಂಡ್ಯ: ಜೆಡಿಎಸ್‌ನಿಂದ ಬಂದ 8 ಶಾಸಕರಲ್ಲಿ ನಾನು ಒಬ್ಬ. ಸಿದ್ದರಾಮಯ್ಯ ನೇತೃತ್ವದಲ್ಲಿ ಕಾಂಗ್ರೆಸ್ ಸೇರಿದ್ದೇವೆ. ಕೆಲವರು ಮಂತ್ರಿಗಳಾಗಿದ್ದಾರೆ. ಸಿದ್ದರಾಮಯ್ಯ ಲಕ್ಕಿ. ಲಾಟರಿ ಹೊಡೆದು ಮುಖ್ಯ ಮಂತ್ರಿಯಾದ' ಎಂದು ಕಾಂಗ್ರೆಸ್ ಶಾಸಕ ಬಿ.ಆರ್. ಪಾಟೀಲ್ ಹೇಳಿದರು. ಕೆ.ಆರ್. ಪೇಟೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಅಪಸ್ವರ ಎದ್ದಿದೆ ಎಂಬ ಕಾರಣಕ್ಕೆ ಪಕ್ಷದ ಉಸ್ತುವಾರಿ ಸುರ್ಜೇವಾಲ ಬಂದಿದ್ದರು. ಶಾಸಕರ ನೋವು ಏನಿದೆ ಎಂದು ತಿಳಿದು ಕೊಳ್ಳಲು ನಮ್ಮನ್ನೆಲ್ಲ ಕರೆಸಿದ್ದರು. ನಾನು 45 ನಿಮಿಷ ಮಾತನಾಡಿ ಎಲ್ಲ ಮಾಹಿತಿ ನೀಡಿದ್ದೇನೆ. ಗಂಭೀರವಾಗಿ ಪರಿಗಣಿಸಿದ್ದಾರೆ. ಏನು ಕ್ರಮ ತೆಗೆದುಕೊಳ್ಳುತ್ತಾರೆ ಎಂಬುದು ಅವರಿಗೆ ಬಿಟ್ಟದ್ದು' ಎಂದರು. ನನಗೆ ಸಿದ್ಧಾಂತವೇ ಗಾಡ್ ಫಾದರ್. ನಾನು ಹಾಗೂ ಸಿದ್ದರಾಮಯ್ಯ ರೈತ ಚಳವಳಿಯಿಂದ ಬಂದಿದ್ದೇವೆ. ರೈತ ನಾಯಕ ನಂಜುಂಡಸ್ವಾಮಿ ಹುರಿದುಂಬಿಸಲಿಲ್ಲ ಎಂದರೆ ಸಿದ್ದರಾಮಯ್ಯ ರಾಜಕೀಯಕ್ಕೆ ಬರುತ್ತಿರಲಿಲ್ಲ. ಕೆಲವರಿಗೆ ಗಾಡೂ ಇದ್ದಾರೆ, ಗಾಡ್‌ಫಾದರೂ ಇದ್ದಾರೆ' ಎಂದು ಹೇಳಿದರು.

ಹೇಳಿಕೆ ಬಗ್ಗೆ ಮಾಹಿತಿಯಿಲ್ಲ

ಶಾಸಕ ಬಿ.ಆರ್.ಪಾಟೀಲ್ ರವರು ಸಿದ್ದರಾಮಯ್ಯರವರು ಅದೃಷ್ಟದಿಂದ ಮುಖ್ಯಮಂತ್ರಿಯಾಗಿದ್ದಾರೆ ಎಂಬ ಹೇಳಿಕೆಗೆ ಸಿಎಂ ಸಿದ್ದರಾಮಯ್ಯ ಪ್ರತಿಕ್ರಿಯಿಸಿ, ಅವರ ಹೇಳಿಕೆ ಬಗ್ಗೆ ಮಾಹಿತಿಯಿಲ್ಲ. ಬಿ.ಆರ್.ಪಾಟೀಲ್ ಹಾಗೂ ನಾನು ಒಟ್ಟಿಗೆ ಶಾಸಕರಾಗಿದ್ದರಿಂದ ಹಾಗೂ ನನಗೆ ಮುಖ್ಯಮಂತ್ರಿಯಾಗಲು ಅವಕಾಶ ದೊರೆತಿದ್ದರಿಂದ, ಬಿ.ಆರ್.ಪಾಟೀಲ್ ರವರು ಈ ರೀತಿ ಹೇಳಿಕೆ ನೀಡಿರಬಹುದು ಎಂದು ಹೇಳಿದರು.

ಸಿಎಂ ಬದಲಾವಣೆ ಬಗ್ಗೆ ಮಾತನಾಡುವ ಶಕ್ತಿ ನನಗೆ ಇಲ್ಲ. ಅದೆಲ್ಲವೂ ಹೈಕಮಾಂಡ್‌ಗೆ ಬಿಟ್ಟದ್ದು. ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಆಗುವ ವಿಷಯ ನನಗೆ ಗೊತ್ತಿಲ್ಲ. ನಾಯಕತ್ವದ ವಿಚಾರದ ಬಗ್ಗೆ ಸುರ್ಜೇವಾಲ ಮಾತಾಡಿಲ್ಲ. ಸಿದ್ದರಾಮಯ್ಯ ಮೇಲೆ ಕೆಲ ವಿಚಾರದಲ್ಲಿ ಬೇಸರ ಇದೆ. ಅದನ್ನು ಹೇಳಿಕೊಂಡಿದ್ದೇವೆ.
–ಬಿ.ಆರ್. ಪಾಟೀಲ್, ಶಾಸಕ

ಬಾಯ್ಬಿಟ್ರೆ ನೋಟಿಸ್

← ಮೊದಲಪುಟದಿಂದ

ಆದ್ದರಿಂದ ತಮ್ಮನ್ನು ಭೇಟಿಯಾದ ಶಾಸಕರಿಗೆ ಸುರ್ಜೇವಾಲ, ಒಟ್ಟಾರೆ ರಿಪೋರ್ಟ್ ಕಾರ್ಡ್ ಪಡೆಯುವುದರೊಂದಿಗೆ ಈ ರೀತಿಯ ಬಹಿರಂಗ ಹೇಳಿಕೆ ನೀಡದಂತೆ, ಯಾವುದೇ ಸಮಸ್ಯೆಯಿದ್ದರೂ ಸೂಕ್ತ ವೇದಿಕೆಯಲ್ಲಿ ವಿಷಯವನ್ನು ಪ್ರಸ್ತಾಪಿಸಿ ಎನ್ನುವ ಸ್ಪಷ್ಟ ಎಚ್ಚರಿಕೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪರಂ, ಜಮೀರ್ ಪ್ರತ್ಯೇಕ ಭೇಟಿ: ಮೂರು ದಿನಗಳ ಭೇಟಿಯಲ್ಲಿ ಸಚಿವರಿಗೆ ಪ್ರತ್ಯೇಕ ಭೇಟಿಗೆ ಅವಕಾಶ ನೀಡದಿದ್ದರೂ ಗೃಹ ಸಚಿವ ಡಾ.ಜಿ.ಪರಮೇಶ್ವರ್, ಜಮೀರ್ ಅಹ್ಮದ್ ಸೇರಿದಂತೆ ಕೆಲ ಸಚಿವರು ಸಮಯ ತೆಗೆದುಕೊಂಡು ಭೇಟಿಯಾಗಿದ್ದಾರೆ. ಈ ವೇಳೆ ಗೃಹ ಸಚಿವ ಡಾ.ಜಿ.ಪರಮೇಶ್ವರ ಅವರು, ರಾಜ್ಯದಲ್ಲಿ ನಡೆಯುತ್ತಿರುವ ಬೆಳವಣಿಗೆ ಬಗ್ಗೆ ಬೇಸರ ವ್ಯಕ್ತಪಡಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಯಾರೇ ಇರಲಿ ಪಕ್ಷದ ವೇದಿಕೆಯಲ್ಲಿ ಚರ್ಚೆ ಮಾಡಬೇಕು. ಅದಕ್ಕೆಂದೇ ವೇದಿಕೆಯಿದೆ. ಬೇರೆ ಕಡೆ ಮಾತನಾಡಲು ಅವಕಾಶವಿಲ್ಲ. ಶಾಸಕರು ಅವರ ಸಮಸ್ಯೆಗಳನ್ನು ಹೇಳಿಕೊಂಡಿದ್ದಾರೆ. ಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ. ಈಗೇನಿದ್ದರೂ ಪಕ್ಷ ಸಂಘಟನೆಯ ಬಗ್ಗೆ ಮಾತ್ರ ಮಾತು.
–ರಣದೀಪ್ ಸಿಂಗ್ ಸುರ್ಜೇವಾಲ, ರಾಜ್ಯ ಕಾಂಗ್ರೆಸ್ ಉಸ್ತುವಾರಿ

ಜಯಾನಂದ ದೇವಾಡಿಗ ನಿಧನ

ಮಂಗಳೂರು: ದೇವರಾಜ ಅರಸು ಪ್ರಶಸ್ತಿ ಪುರಸ್ಕೃತ, ಹಿಂದುಳಿದ ವರ್ಗಗಳ ನಾಯಕ ಜಯಾನಂದ ದೇವಾಡಿಗ (92) ಅವರು ಮಂಗಳವಾರ ನಿಧನರಾಗಿದ್ದಾರೆ. ದಕ್ಷಿಣ ಕನ್ನಡ–ಉಡುಪಿ ಜಿಲ್ಲಾ ಹಿಂದುಳಿದ ಜಾತಿಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿಯಾಗಿ, ಹಿಂದುಳಿದ ಜಾತಿಗಳನ್ನು ಒಗ್ಗೂಡಿಸಿಕೊಂಡು ಚಿನ್ನಪ್ಪ ರೆಡ್ಡಿ ವರದಿ, ಮಂಡಲ ವರದಿಯ ಜಾರಿಗೆ ಒತ್ತಾಯಿಸಿ ಹೋರಾಟಗಳನ್ನು ಸಂಘಟಿಸಿದವರು ಜಯಾನಂದ ದೇವಾಡಿಗ. ಇವರು ಹಿರಿಯ ಕಾಂಗ್ರೆಸ್ಸಿಗ, ಮಾಜಿ ಮುಖ್ಯಮಂತ್ರಿ ದೇವರಾಜು ಅರಸು ಅವರ ಆತ್ಮೀಯರಾಗಿದ್ದರು.

ವಾಲ್ಮೀಕಿ ಹಗರಣ ಸಿಬಿಐಗೆ

← ಮೊದಲಪುಟದಿಂದ

ಈ ಬೆನ್ನಲ್ಲೇ ಬ್ಯಾಂಕ್‌ನಿಂದ 94 ಕೋಟಿ ರು. ಅಕ್ರಮವಾಗಿ ವರ್ಗಾವಣೆಯಾಗಿದೆ. ಹಣ ವರ್ಗಾವಣೆಯಾದ ಬಗ್ಗೆ ಯಾವುದೇ ಮೇಲ್, ಮೆಸೇಜ್ ಬಂದಿಲ್ಲ. ಬ್ಯಾಂಕ್ ಸಿಬ್ಬಂದಿಯಿಂದಲೇ ನಕಲಿ ದಾಖಲೆ ಸೃಷ್ಟಿಸಿ ವಂಚನೆ ಎಸಗಿದ್ದಾರೆ ಎಂದು ಆರೋಪಿಸಿ ನಿಗಮದ ಪ್ರಧಾನ ವ್ಯವಸ್ಥಾಪಕ ರಾಜಶೇಖರ್ ಅವರು ದೂರು ನೀಡಿದ್ದರು. ದೂರಿನ ಆಧಾರದ ಮೇಲೆ ಬ್ಯಾಂಕ್‌ನ 6 ಸಿಬ್ಬಂದಿ ವಿರುದ್ಧ ಹೈಗ್ರೌಂಡ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಬಳಿಕ ಸಚಿವ ಬಿ. ನಾಗೇಂದ್ರ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ನಂತರ ಇಡಿ ಅವರನ್ನು ವಶಕ್ಕೆ ಪಡೆದುಕೊಂಡು ಬಂಧನಕ್ಕೆ ಒಳಪಡಿಸಿತ್ತು.

ಎಲ್ಲೆಲ್ಲಿ ಹಣ ವರ್ಗಾವಣೆ?: ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿನ ವರ್ಗಾವಣೆಯಾದ ಒಟ್ಟು 187 ಕೋಟಿ ರುಪಾಯಿಯಲ್ಲಿ 94 ಕೋಟಿ ಹೈದರಾಬಾದ್ ಫಸ್ಟ್ ಬ್ಯಾಂಕ್‌ನ 18 ನಕಲಿ ಖಾತೆಗಳಿಗೆ ವರ್ಗಾವಣೆ ಆಗಿತ್ತು. ಇದೆಲ್ಲವೂ ಮಾಜಿ ಸಚಿವ ನಾಗೇಂದ್ರ, ಆಪ್ತ ನೆಕ್ಕಂಟಿ ನಾಗರಾಜ್ ಹಾಗೂ ಆಂಧ್ರದ ನಾಗೇಶ್ವರ್ ರಾವ್ ಸೂಚನೆಯಂತೆ ವರ್ಗಾವಣೆಯಾಗಿತ್ತು. ಹೀಗೆ ವರ್ಗಾವಣೆ ಆದ ಹಣವನ್ನು ಮಧ್ಯವರ್ತಿ ಸತ್ಯನಾರಾಣ ವರ್ಮಾ ಬಿಡಿಸಿಕೊಂಡಿದ್ದನು. ಈ 18 ನಕಲಿ ಖಾತೆಗಳಿಂದ ಬೇರೆ ಖಾತೆಗಳಿಗೆ 94 ಕೋಟಿ ರು. ವರ್ಗಾವಣೆ ಮಾಡಲಾಗಿತ್ತು. ನೆಟ್ ಬ್ಯಾಂಕಿಂಗ್, ಆರ್‌ಟಿಜಿಎಸ್, ಫೋನ್ ಪೇ, ಗೂಗಲ್ ಪೇ ಮೂಲಕ ಹಣವನ್ನು ವರ್ಗಾವಣೆ ಮಾಡಿ, ಆ ಹಣವನ್ನು ಸತ್ಯನಾರಾಯಣ ವರ್ಮಾ ಡ್ರಾ ಮಾಡಿಕೊಂಡು ನೆಕ್ಕಂಟಿ ನಾಗರಾಜ್, ನಾಗೇಶ್ವರ್ ರಾವ್ ಜತೆಗೂಡಿ ಹಣ ಹಂಚಿಕೆ ಮಾಡಿಕೊಂಡಿದ್ದರು.

ಪದ್ಮನಾಭ್‌ಗೆ ಸಿಕ್ಕಿದ್ದು ಭರ್ತಿ 5 ಕೋಟಿ ರು. ಪಾಲು: ನಿಗಮದ ಎಂಡಿಯಾಗಿದ್ದ ಪದ್ಮನಾಭಗೆ 5 ಕೋಟಿ ರುಪಾಯಿ ಪಾಲು ಬಂದಿತ್ತು. ಈ ಹಣದಲ್ಲಿ ಅರ್ಧ ಹಣವನ್ನು ಮಗನ ಸ್ನೇಹಿತನ ಮನೆಯಲ್ಲಿ, ಅಂದರೆ ನೆಲಮಂಗಲದ ಗೋವಿನಹಳ್ಳಿಯ ಕೆಂಪೇಗೌಡ ಮನೆಯಲ್ಲಿದ್ದ ಇಟ್ಟಿದ್ದ. ಕೆಂಪೇಗೌಡ ಮನೆಯಲ್ಲಿ ಎಸ್‌ಐಟಿ ಅಧಿಕಾರಿಗಳು 3.64 ಕೋಟಿ ರು. ಜಪ್ತಿ ಮಾಡಿದ್ದರು. ಅಲ್ಲದೆ, ಪದ್ಮನಾಭ ಸ್ನೇಹಿತರೊಬ್ಬರ ಕಾರಿನಲ್ಲಿ ಬಚ್ಚಿಟ್ಟಿದ್ದ 30 ಲಕ್ಷ ರುಪಾಯಿ ನಗದು ಕೂಡ ಜಪ್ತಿಯಾಗಿತ್ತು. ಅಲ್ಲದೆ, ನಾಗೇಂದ್ರ ಆಪ್ತ ಹರೀಶ್‌ಗೆ 25 ಲಕ್ಷ ರು., ದದ್ದಲ್ ಆಪ್ತನಿಗೆ 55 ಲಕ್ಷ ರು., ದದ್ದಲ್ ಆಪ್ತ ಹಂಪಣ್ಣಗೆ 55 ಲಕ್ಷ ರು. ನೀಡಿರುವುದು ತನಿಖೆಯಲ್ಲಿ ತಿಳಿದುಬಂದಿತ್ತು. ಹೀಗೆ 94 ಕೋಟಿ ರು. ನೆಕ್ಕಂಟಿ ನಾಗರಾಜ್ ಮತ್ತು ಸತ್ಯನಾರಾಯಣ ವರ್ಮಾ ಹಂಚಿಕೆ ಮಾಡಿದ್ದರು.

ಕಾಲ್ತುಳಿತ ತಡೆಗೆ ಮಾರ್ಗಸೂತ್ರ ಜಾರಿ

← ಮೊದಲಪುಟದಿಂದ

ಕಾರ್ಯಕ್ರಮ ನಡೆಯುವ ಸ್ಥಳದ ಸಾಮರ್ಥ್ಯ, ತುರ್ತು ನಿರ್ಗಮನ ಮಾರ್ಗಗಳ ಲಭ್ಯತೆ ಮತ್ತು ತಂತ್ರಜ್ಞಾನದ ಬಳಕೆಯ ಸಾಧ್ಯತೆಗಳನ್ನು ಪರಿಶೀಲಿಸಲೇಬೇಕು. ಜನಸಂದಣಿ ನಿರ್ವಹಣೆಗೆ ಪೊಲೀಸರ ಹೊಣೆಗಾರಿಕೆಗಳು, ಟ್ರಾಫಿಕ್ ನಿಯಂತ್ರಣ, ವೈದ್ಯಕೀಯ ನೆರವು ಮತ್ತು ಟಿಕೆಟ್ ವ್ಯವಸ್ಥೆಗಳನ್ನು ಮಾಡಲೇಬೇಕು ಎಂದು ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

ತುರ್ತು ಪರಿಸ್ಥಿತಿ ನಿರ್ವಹಣೆ: ಪ್ರತಿಭಟನೆ ಅಥವಾ ಹವಾಮಾನ ದುರಂತಗಳಂತಹ ಅನಿರೀಕ್ಷಿತ ಪರಿಸ್ಥಿತಿಗಳಿಗೆ ತಯಾರಿ ನಡೆಸಲು ಸಿಮ್ಯುಲೇಷನ್ ಡ್ರಿಲ್‌ಗಳನ್ನು ನಡೆಸುವ ಮೂಲಕ ರಕ್ಷಣಾ ತಂಡಗಳ ಜವಾಬ್ದಾರಿಗಳನ್ನು ಮೊದಲೇ ಗುರುತಿಸಬೇಕು. ಯಾವುದೇ ಘಟನೆಯ ಸಮಯದಲ್ಲಿ, ಪೊಲೀಸರು ಅನಗತ್ಯ ತಕರಾರುಗಳನ್ನು ತಪ್ಪಿಸಿ, ಸ್ಥಳೀಯರ ಸುರಕ್ಷತೆಗೆ ಆದ್ಯತೆ ನೀಡಬೇಕು. ಜನಸಂದಣಿ ನಿಯಂತ್ರಿಸಲು ಅಥವಾ ಚದುರಿಸಲು ಬಲವನ್ನು ಬಳಸುವ ಅನಿವಾರ್ಯತೆ ಬಂದಾಗ, ಮೂರು ಬಾರಿ ಎಚ್ಚರಿಕೆಗಳನ್ನು ನೀಡಿದ ನಂತರವೇ ಕಾನೂನು ರೀತಿ ನಡೆದುಕೊಳ್ಳಬೇಕು ಮತ್ತು ಕಾನೂನುಬದ್ಧ ಬಂಧನಕ್ಕೆ ಮುಂದಾಗಬೇಕೆಂದು ಎಂದು ಮಾರ್ಗಸೂಚಿಯಲ್ಲಿದೆ. ಜನಸಂದಣಿಯ ಸಂಚಾರ, ತೆಗೆದುಕೊಂಡ ನಿರ್ಧಾರಗಳು ಮತ್ತು ನೀಡಿದ ಎಚ್ಚರಿಕೆಗಳನ್ನು ಆಡಿಯೋ/ವಿಡಿಯೋ ದಾಖಲೆಗಳ ಮೂಲಕ ದಾಖಲಿಸಬೇಕು. ಕರ್ನಾಟಕ ಪೊಲೀಸ್ ಕಾಯಿದೆ ಮತ್ತು ಬಿಎನ್‌ಎಸ್‌ಎಸ್ ಪಾಲನೆಯ ಮೂಲಕ ಸಾರ್ವಜನಿಕ ಭದ್ರತೆ, ಕಾನೂನು ಸುವ್ಯವಸ್ಥೆ ಮತ್ತು ಮಾನವ ಘನತೆ ಎತ್ತಿಹಿಡಿಯುವ ಗುರಿ ಹೊಂದಿದೆ ಎಂದು ಮಾರ್ಗಸೂಚಿಯಲ್ಲಿ ಉಲ್ಲೇಖಿಸಲಾಗಿದೆ.

ಹೃದಯಾಘಾತ: ನಿಲ್ಲದ ಸಾವಿನ ಓಟ

← ಮೊದಲಪುಟದಿಂದ

ತುಮಕೂರು ಗ್ರಾಮಾಂತರ ಕ್ಷೇತ್ರದ ಊರುಕೆರೆ ಗ್ರಾಮ ಪಂಚಾಯಿತಿ ಅಧ್ಯಕ್ಷ ಹೆಬ್ಬಾಕ ಸ್ವಾಮಿ (36) ಹೃದಯಾಘಾತದಿಂದ ಮೃತಪಟ್ಟಿದ್ದಾರೆ. ತುಮಕೂರು ನಗರದಲ್ಲಿರುವ ಕೋತಿ ತೋಪಿನಲ್ಲಿರುವ ಶಾಲೆಗೆ ಮಗಳನ್ನು ಬಿಟ್ಟು ಮನೆಗೆ ಬಂದಿದ್ದರು. ಮನೆಯಲ್ಲಿ ತಲೆಸುತ್ತಿ ಬಿದ್ದಿದ್ದಾರೆ. ತಕ್ಷಣ ಸಿದ್ಧಗಂಗಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ. ಧಾರವಾಡ ಜಿಲ್ಲೆಯ ನವಲಗುಂದ ತಾಲೂಕಿನ ಯಮನೂರ ಗ್ರಾಮದ ನಿವಾಸಿ ಫಕ್ಕಿರಪ್ಪ ಮಲ್ಲಪ್ಪ ಬಣಗಾರ (45) ಹೃದಯಾಘಾತದಿಂದ ನಿಧನರಾಗಿದ್ದಾರೆ. ನವಲಗುಂದದ ಸಿದ್ದಾಪುರ ಓಣಿಯ ನಿವಾಸಿ ಮುತ್ತಪ್ಪ ಶಂಕರಪ್ಪ ಪೂಜಾರ (44) ಹೃದಯಾಘಾತದಿಂದ ನಿಧನರಾಗಿದ್ದಾರೆ.

ಪಾಠದ ಅವಧಿಯಲ್ಲಿ ಇತರ ಚಟುವಟಿಕೆ ಬಂದ್

ಶಿಕ್ಷಕರ ಪಠ್ಯೇತರ ಸೇವೆಗೆ ಕಡಿವಾಣ

ಬೆಂಗಳೂರು: ಶಿಕ್ಷಕರು ಪಾಠ ಮಾಡುವುದಕ್ಕಿಂತ ಬೇರೆ ಕೆಲಸದಲ್ಲಿಯೇ ಹೆಚ್ಚು ಸಮಯ ಕಳೆಯುವಂತಾಗಿದೆ ಎನ್ನುವ ಆರೋಪ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ ಬೆನ್ನಲ್ಲೇ, ಇದೀಗ ಶಿಕ್ಷಕರಿಗೆ ಪಾಠ ಮಾಡಲು ಹೆಚ್ಚು ಸಮಯ ನೀಡುವ ಹಾಗೂ ಹೆಚ್ಚುವರಿ ಕೆಲಸಗಳಿಗೆ ಬ್ರೇಕ್ ಹಾಕುವ ನಿಟ್ಟಿನಲ್ಲಿ ರಾಜ್ಯ ಸರಕಾರವು ಮಹತ್ವದ ತೀರ್ಮಾನ ಕೈಗೊಂಡಿದೆ.

ವಿವಿಧ ತರಬೇತಿ, ಸಭೆ, ಸಮೀಕ್ಷೆಯ ನೆಪದಲ್ಲಿ ಶಿಕ್ಷಕರಿಗೆ ಪಾಠ ಮಾಡಲು ಸಮಯ ಸಿಗುತ್ತಿಲ್ಲ ಎನ್ನುವ ಆರೋಪವಿರುವುದರಿಂದ, ಶಾಲಾ ಸಮಯದಲ್ಲಿ ಶಿಕ್ಷಕರು ಮತ್ತು ಮುಖ್ಯೋಪಾಧ್ಯಾಯರು ಯಾವುದೇ ಸಮೀಕ್ಷೆ, ಸಭೆಗಳಿಗೆ ತೆರಳುವಂತಿಲ್ಲ. ಶಾಲಾ ಅವಧಿಯಲ್ಲಿ ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ಸಹ ಸಭೆಗಳಿಗೆ ಶಿಕ್ಷಕರನ್ನು ಕರೆಯುವಂತಿಲ್ಲ ಎನ್ನುವ ಸ್ಪಷ್ಟ ಸುತ್ತೋಲೆಯನ್ನು ಸರಕಾರ ಹೊರಡಿಸಿದೆ.

ರಾಜ್ಯದಲ್ಲಿ 46,757 ಸರಕಾರಿ ಶಾಲೆಗಳಿವೆ. ಇದರಲ್ಲಿ 42.92 ಲಕ್ಷ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, 1.77 ಲಕ್ಷ ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಸರಕಾರಿ ಶಾಲೆಗಳ ಶಿಕ್ಷಕರನ್ನು ಇಲಾಖೆ ಸಭೆ, ತರಬೇತಿ, ಸಮೀಕ್ಷೆ ಕಾರ್ಯ ಸೇರಿದಂತೆ ವಿವಿಧ ಕೆಲಸಗಳಲ್ಲಿ ತೊಡಗಿಸಿಕೊಳ್ಳುವುದರಿಂದ ವಿದ್ಯಾರ್ಥಿಗಳಿಗೆ ಪಾಠ ಮಾಡಲು ಅಡ್ಡಿಯಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ತರಗತಿ ಅವಧಿಯಲ್ಲಿ ಶಿಕ್ಷಕರು ಯಾವುದೇ ಸಭೆ ಅಥವಾ ಸಮೀಕ್ಷೆಗಳಲ್ಲಿ ಭಾಗವಹಿಸದಂತೆ ಸೂಚನೆ ನೀಡಲಾಗಿದೆ.

ಶಿಕ್ಷಕರನ್ನು ಶಾಲಾ ಅವಧಿಯ ಸಮಯದಲ್ಲಿ ತರಬೇತಿಗಳಿಗೆ ನಿಯೋಜಿಸುವಂತಿಲ್ಲ. ಒಂದು ವೇಳೆ ಡಿಡಿಪಿಐ ಅಥವಾ ಬಿಇಒ ಮೌಖಿಕ ಅಥವಾ ಲಿಖಿತವಾಗಿಯೂ ಶಾಲಾ ಸಮಯದಲ್ಲಿ ಶಿಕ್ಷಕರನ್ನು ಎಲ್ಲಿಗೂ ಆಹ್ವಾನಿಸುವಂತಿಲ್ಲ. ಈ ರೀತಿಯ ಸೂಚನೆಗಳನ್ನು ಮೀರಿಯೂ ಶಿಕ್ಷಕರು ತೆರಳಿದಲ್ಲಿ ಅವರಿಗೆ ಯಾವುದೇ ಸರಕಾರಿ ಕೆಲಸದ ಮೇಲೆ (ಒಒಡಿ) ಅವಕಾಶ ಕಲ್ಪಿಸುವುದಿಲ್ಲ ಎಂದು ಸ್ಪಷ್ಟವಾಗಿ ತಿಳಿಸಲಾಗಿದೆ. ಅಲ್ಲದೆ, ಶಾಲಾ ಅವಧಿಯಲ್ಲಿ ಡಿ.ಸಿ, ಸಿಇಒಗಳು ಸಹ ಶಿಕ್ಷಕರು ಮತ್ತು ಮುಖ್ಯೋಪಾಧ್ಯಾಯರನ್ನು ಒಳಗೊಂಡ ಸಭೆಗಳನ್ನು ನಡೆಸುವಂತಿಲ್ಲ ಎಂದು ಸ್ಪಷ್ಟವಾಗಿ ಸೂಚಿಸಲಾಗಿದೆ.

ಸರಕಾರಿ ಶಾಲೆಗಳಲ್ಲಿ ಶಾಲೆಯ ಸಮಯದಲ್ಲಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಶಾಲೆಯಲ್ಲಿಯೇ ಹಾಜರಿದ್ದು, ಶಿಕ್ಷಣದ ಹಕ್ಕು ಕಾಯಿದೆಯ ಅಡಿಯಲ್ಲಿ ಪ್ರತಿದಿನ ಶಾಲೆಯ ಹಂತದಲ್ಲಿ ಬೋಧನೆ ಮತ್ತು ಕಲಿಕೆ ನಡೆಸಲು ಅನುವಾಗಬೇಕು. ಸರಕಾರಿ ಶಾಲೆಗಳಲ್ಲಿ ಕಲಿಕೆ ಫಲಿತಾಂಶಗಳನ್ನು ಸುಧಾರಿಸಲು ಮತ್ತು ಉತ್ತಮ ಬೋಧನೆ ನೀಡಲು ಶಿಕ್ಷಕರೂ ಹಾಗೂ ಶಾಲಾ ಮುಖ್ಯೋಪಾಧ್ಯಾಯರೂ ಸಂಪೂರ್ಣವಾಗಿ ಶಾಲೆಯಲ್ಲಿ ಹಾಜರಿರುವುದು ಅತ್ಯಂತ ಅಗತ್ಯವಾಗಿರುವ ಹಿನ್ನೆಲೆಯಲ್ಲಿ ಈ ಸುತ್ತೋಲೆ ಹೊರಡಿಸಲಾಗಿದೆ.

ಶಾಲಾ ದಿನಗಳಲ್ಲಿ ಪರೀಕ್ಷೆ ಬೇಡ

ಶಾಲೆಗಳು ನಡೆಯುವ ದಿನದಲ್ಲಿ ಕೆಪಿಸಿಎಸ್‌ಸಿ ಸೇರಿದಂತೆ ರಾಜ್ಯ, ಕೇಂದ್ರ ಸರಕಾರಗಳು ನಡೆಸುವ ಪರೀಕ್ಷೆ ಅಥವಾ ಯಾವುದೇ ಬಾಹ್ಯ ಪರೀಕ್ಷೆಗಳನ್ನು ಶಾಲೆಯ ಆವರಣದಲ್ಲಿ ನಡೆಸಬಾರದು.

ಈ ನಿಬಂಧನೆಯನ್ನು ಉಲ್ಲಂಘಿಸಿದ ಜಿಲ್ಲಾ ಉಪ ನಿರ್ದೇಶಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಡಯಟ್ ಪ್ರಾಂಶುಪಾಲರು, ಶಾಲಾ ಮುಖ್ಯೋಪಾಧ್ಯಾಯರ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು. ಇಂತಹ ಪರೀಕ್ಷೆಗಳನ್ನು ನಡೆಸಲು ಅವಕಾಶ ನೀಡಬೇಕಾದಲ್ಲಿ, ಅದು ಸಾರ್ವಜನಿಕ ರಜೆ ಅಥವಾ ಬೇಸಿಗೆ ರಜೆಯ ಸಮಯದಲ್ಲಿ ಮಾತ್ರ ನಿಯಮಗಳಂತೆ ನೀಡುವುದು ಎಂದು ಸ್ಪಷ್ಟವಾಗಿ ತಿಳಿಸಲಾಗಿದೆ.

ಸಮಾಚಾರ ಸಣ್ಣದಲ್ಲ

ಜಾತಿ ಗಣತಿ ಮಾಡುವ ಅಧಿಕಾರ ರಾಜ್ಯಕ್ಕಿಲ್ಲ



ದಾವಣಗೆರೆ: ಜಾತಿ ಗಣತಿ ಮಾಡುವ ಅಧಿಕಾರ ಕೇಂದ್ರ ಸರಕಾರಕ್ಕೆ ಇದೆಯೇ ಹೊರತು ರಾಜ್ಯ ಸರಕಾರಕ್ಕೆ ಅಲ್ಲ. ರಾಜಕೀಯ ಹಿತಾಸಕ್ತಿಗೆ ವೀರಶೈವ ಲಿಂಗಾಯತ ಧರ್ಮದ ಒಳಪಂಗಡಗಳನ್ನು ಛಿದ್ರಗೊಳಿಸಿ ಗೊಂದಲ ಸೃಷ್ಟಿಸುವುದಕ್ಕೆ ಪಂಚಪೀಠಗಳು ಅವಕಾಶ ನೀಡುವುದಿಲ್ಲ ಎಂದು ರಂಭಾಪುರಿ ಪೀಠದ ವೀರ ಸೋಮೇಶ್ವರ ಸ್ವಾಮೀಜಿ ತಿಳಿಸಿದರು.ಸುದ್ದಿಗಾರರೊಂದಿಗೆ ಮಾತನಾಡಿ, ಕೇಂದ್ರ ಸರಕಾರ ಜನಗಣತಿಯ ಜೊತೆಗೆ ಜಾತಿಗಣತಿಗೆ ಅನುಮೋದನೆ ನೀಡಿದೆ. ಕೇಂದ್ರ ಸರಕಾರ ನಿರ್ಧಾರ ಕೈಗೊಂಡ ಮರುಗಳಿಗೆಯಲ್ಲಿ ರಾಜ್ಯ ಸರಕಾರ ಕೂಡ ಜಾತಿಗಣತಿಯ ಜತೆಗೆ ಸಾಮಾಜಿಕ ಸಮೀಕ್ಷೆ ಕೈಗೊಳ್ಳಲು ಮತ್ತೊಮ್ಮೆ ಮುಂದಾಗಿದೆ. ಜನರ ದಾರಿ ತಪ್ಪಿಸುವ ಈ ಪ್ರಯತ್ನವನ್ನು ವಿರೋಧಿಸುತ್ತೇವೆ' ಎಂದು ಮಾಹಿತಿ ನೀಡಿದರು.

ಭಾರತದಲ್ಲಿ ಮಾತ್ರ ಹಿಂದೂಗಳಿಗೆ ಸುರಕ್ಷಿತ

ಜೇವರ್ಗಿ: 100 ಕೋಟಿ ಜನಸಂಖ್ಯೆ ಇರುವ ಹಿಂದೂಗಳಿಗೆ ಬದುಕಲು ಭಾರತ ಒಂದೇ ಆಸರೆಯಾಗಿದೆ. ಹಿಂದುಗಳನ್ನು ಬೇರೆ ಯಾವುದೇ ದೇಶಗಳು ಸೇರಿಸಿಕೊಳ್ಳಲ್ಲ. ನಮಗಾಗಿ ಇರುವ ದೇಶವನ್ನು ಉಳಿಸಲು ಹಿಂದುಗಳೆಲ್ಲರೂ ಒಟ್ಟಾಗಬೇಕಿದೆ ಎಂದು ಶ್ರೀರಾಮ್ ಸೇನೆಯ ಸಂಸ್ಥಾಪಕ ಅಧ್ಯಕ್ಷ ಪ್ರಮೋದ್ ಮುತಾಲಿಕ್ ಕರೆ ನೀಡಿದರು. ಜೇವರ್ಗಿಯಲ್ಲಿ ನಡೆದ ಚಿಂತನಾ ಸಭೆಯಲ್ಲಿ ಮಾತನಾಡಿ, ಮುಸ್ಲಿಂ, ಕ್ರಿಶ್ಚಿಯನ್ನರಿಗಾಗಿ ಅನೇಕ ದೇಶಗಳಿವೆ. ಮುಸ್ಲಿಂರಿಗಾಗಿಯೇ 57 ರಾಷ್ಟ್ರಗಳು ಇದ್ದಾವೆ. ಆದರೆ, ಹಿಂದೂಗಳಿಗೆ ಬದುಕಲಿಕ್ಕೆ ಇರುವ ಏಕೈಕ ರಾಷ್ಟ್ರಭಾರತ ಒಂದೇಯಾಗಿದೆ. ಹಿಂದೂಗಳು ಒಟ್ಟಾಗದಿದ್ದರೆ ಭಾರತದ ಮುಂದಿನ ಪೀಳಿಗೆಗಳಿಗೆ ಭವಿಷ್ಯವಿಲ್ಲ ಎಂದು ಆತಂಕ ವ್ಯಕ್ತಪಡಿಸಿದರು.

ಶಾರ್ಟ್ ಸರ್ಕ್ಯೂಟ್: ತಾಯಿ, ಮಗ ಸಾವು

ದಾವಣಗೆರೆ: ನಗರದ ಕಾಯಿಪೇಟೆಯ ಮನೆಯೊಂದರಲ್ಲಿ ಮಂಗಳವಾರ ಬೆಳಗಿನ ಜಾವ 4 ಗಂಟೆಗೆ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಸಂಭವಿಸಿದ ಅಗ್ನಿ ಅವಘಡದಲ್ಲಿ ಇಬ್ಬರು ಮೃತಪಟ್ಟಿದ್ದಾರೆ. ನಗರದ ಕಾಯಿಪೇಟೆ ನಿವಾಸಿ ಬಿಜೆಪಿ ಮುಖಂಡ ರುದ್ರಮುನಿಸ್ವಾಮಿ ಅವರಿಗೆ ಸಂಬಂಧಿಸಿದ ಮನೆಯಲ್ಲಿ ಈ ಘಟನೆ ನಡೆದಿದ್ದು, ರುದ್ರಮುನಿಸ್ವಾಮಿ ಅವರ ಸಂಬಂಧಿ 75 ವರ್ಷದ ವಿಮಲಾ ಹಾಗೂ ವಿಮಲಾ ಅವರ ಪುತ್ರ 35 ವರ್ಷದ ಕುಮಾರ ಮೃತಪಟ್ಟವರು. ಕುಟುಂಬದ ಇನ್ನೂ ನಾಲ್ವರು ಗಾಯಗೊಂಡಿದ್ದು, ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಮಂಗಳವಾರ ನಸುಕಿನ 4 ಗಂಟೆಗೆ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಕಾಣಿಸಿಕೊಂಡಿದೆ. ಮನೆಯಲ್ಲಿದ್ದ ಆರು ಜನರ ಪೈಕಿ ನಾಲ್ವರು ಹೊರಬಂದಿದ್ದಾರೆ. ತಾಯಿ ಮಗ ಇದ್ದ ರೂಮಿನಲ್ಲಿ ದಟ್ಟ ಹೊಗೆ ಆವರಿಸಿಕೊಂಡಿದ್ದು, ಹೊರ ಬರಲು ಸಾಧ್ಯವಾಗಿಲ್ಲ. ನಂತರ ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕ ಮತ್ತು ತುರ್ತು ಸೇವಾ ಸಿಬ್ಬಂದಿ ಕೊಠಡಿಯಲ್ಲಿ ಸಿಲುಕಿದ್ದ ತಾಯಿ ಮತ್ತು ಮಗನನ್ನು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಿದರು. ಆದರೆ ಗಂಭೀರವಾಗಿ ಗಾಯಗೊಂಡಿದ್ದರಿಂದ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ.

ವಿಶ್ವವಾಣಿ ಕ್ಲಬ್ ಹೌಸ್
02.07.2025
ಬುಧವಾರದ ಅತಿಥಿ

ಶ್ರೀಮತಿ ನಾಗರತ್ನ ಸಾಲಗಾಮೆ
ವಿಷಯ
ಗೌರಮ್ಮನ ವಚನಗಳು
vishwavani.news

40 ವರ್ಷದೊಳಗಿನ ವಯಸ್ಕರೇ ಬಲಿ | ತಪಾಸಣೆಗೆ ಮುಗಿಬಿದ್ದ ಜನ

ರಾಜ್ಯದಲ್ಲಿ ಹೃದಯಾಘಾತ ಹೆಚ್ಚಳ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಹೃದಯಕ್ಕೆ ಸಂಬಂಧಪಟ್ಟ ಕಾಯಿಲೆಗೆ ಗುರಿಯಾಗುತ್ತಿರುವವರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದೆ. ಇನ್ನೂ ಬಾಳಿ ಬದುಕಬೇಕಾದ ಯುವಜನತೆಯರು, ಸಣ್ಣ ವಯಸ್ಸಿನಲ್ಲಿಯೇ ಈ ಕಾಯಿಲೆಗೆ ಬಲಿಯಾಗುತ್ತಿದ್ದಾರೆ. 40 ವರ್ಷದೊಳಗಿನ ವಯಸ್ಕರೇ ಹೃದಯಾಘಾತದಿಂದ ಸಾವಿಗೀಡಾಗುತ್ತಿದ್ದು, ಕಾರಣ ನಿಗೂಢವಾಗಿದೆ.

ಹಾಸನ ಜಿಲ್ಲೆಯೊಂದರಲ್ಲೇ ಒಂದು ತಿಂಗಳ ಅವಧಿಯಲ್ಲಿ 20ಕ್ಕೂ ಹೆಚ್ಚು ಮಂದಿ ಹೃದಯಾಘಾತದಿಂದ ಮೃತಪಟ್ಟಿರುವುದು ವೈದ್ಯಕೀಯ ಕ್ಷೇತ್ರವನ್ನು ಅಚ್ಚರಿಗೆ ದೂಡಿದೆಯಲ್ಲದೇ ಕಾರಣ ಪತ್ತೆ ಹಚ್ಚುವ ಸವಾಲನ್ನೂ ಮುಂದಿವರಿಸಿದೆ. ದೈಹಿಕವಾಗಿ ಸದೃಢವಾಗಿರುವವರೂ ತೀವ್ರ ಹೃದಯಾಘಾತ, ಹೃದಯ ಸ್ತಂಭನದಿಂದ ಮೃತಪಡುತ್ತಿದ್ದಾರೆ. ಹೃದಯ ಸಂಬಂಧಿ ಸಮಸ್ಯೆಗಳ ಕಾರಣ ಆಸ್ಪತ್ರೆಗಳಿಗೆ ಭೇಟಿ ನೀಡುವವರ ಸಂಖ್ಯೆ ಹೆಚ್ಚಳವಾಗಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಂಕಿಅಂಶಗಳ ಪ್ರಕಾರ, ರಾಜ್ಯದಲ್ಲಿ ವಾರ್ಷಿಕ ಅಂದಾಜು 96,150 ಜನರು ತೀವ್ರ ಹೃದಯಾಘಾತದಿಂದ ಬಳಲುತ್ತಿದ್ದಾರೆ. 45 ವರ್ಷಕ್ಕಿಂತ ಕಡಿಮೆ ವಯಸ್ಸಿನ ವ್ಯಕ್ತಿಗಳಲ್ಲಿ ಶೇ. 35 ರಷ್ಟು ಹೃದಯಾಘಾತ ಸಂಭವಿಸುತ್ತಿದೆ.

ಯಾಕೆ ಈ ಕಾಯಿಲೆಯಿಂದಾಗಿ ಹೆಚ್ಚಿನವರು ತಮ್ಮ ಪ್ರಾಣವನ್ನು ಕಳೆದುಕೊಳ್ಳುತ್ತಿದ್ದಾರೆ ಎನ್ನುವುದನ್ನು ನೋಡುವುದಾದರೆ, ಕೆಲವರು ತಮ್ಮ ದೈಹಿಕ ಫಿಟ್ನೆಸ್ ಕಾಯ್ದುಕೊಳ್ಳುವ ಸಲುವಾಗಿ ಜಿಮ್‌ನಲ್ಲಿ ಮಾಡುವ ಅತಿಯಾದ ವರ್ಕೌಟ್ ನಿಂದಾಗಿ, ಹೃದಯಕ್ಕೆ ಅತಿಯಾದ ಒತ್ತಡ ಬೀಳುವುದರಿಂದ, ಇಂದಿನ ದಿನಗಳಲ್ಲಿ ಹೃದಯಕ್ಕೆ ಸಂಬಂಧಪಟ್ಟ ಸಮಸ್ಯೆಗಳು ಹೆಚ್ಚಾಗುತ್ತಿವೆ, ಎನ್ನುವ ಕೂಗು ಒಂದು ಕಡೆ ಯಾದರೆ, ಜಡಜೀವನ ಶೈಲಿ, ಅನಾರೋಗ್ಯಕಾರಿ ಆಹಾರಪದ್ಧತಿಯಿಂದಾಗಿಯೂ ಕೂಡ ಸಣ್ಣ ವಯಸ್ಸಿನಲ್ಲಿಯೇ ಹೃದಯದ ಸಮಸ್ಯೆಗಳು ಕಾಣಿಸಿ ಕೊಳ್ಳುತ್ತಿದೆ ಎನ್ನುವ ಮಾತು ಇನ್ನೊಂದು ಕಡೆ.

ಮಕ್ಕಳಲ್ಲಿ ಹೃದಯಾಘಾತ ಹೆಚ್ಚು: ಸಣ್ಣ ವಯಸ್ಸಿನ ಮಕ್ಕಳು ಹೃದಯಾಘಾತಕ್ಕೆ ಒಳಗಾಗುತ್ತಿರುವುದಕ್ಕೆ ಕಾರಣಗಳನ್ನು ಹುಬ್ಬಳ್ಳಿಯ ಕರ್ನಾಟಕ ವೈದ್ಯಕೀಯ ಕಾಲೇಜು ಸಂಶೋಧನಾ ಸಂಸ್ಥೆಯ (ಕೆಎಂಸಿಆರ್‌ಐ) ವೈದ್ಯರು ಪತ್ತೆ ಹಚ್ಚಿದ್ದಾರೆ. ಧಾರವಾಡ ಜಿಲ್ಲೆಯ ಆರು ಶಾಲೆಗಳಲ್ಲಿ 8 ಮತ್ತು 9 ನೇ ತರಗತಿಯ 30 ಮಂದಿ ಅಧಿಕ ತೂಕದ (ಸ್ಥೂಲಕಾಯ) ವಿದ್ಯಾರ್ಥಿಗಳನ್ನು ವೈದ್ಯರು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿದ್ದರು. ಈ ವಿದ್ಯಾರ್ಥಿಗಳನ್ನು ಆಸ್ಪತ್ರೆಯ ಬಹುಶಿಸ್ತೀಯ ಸಂಶೋಧನಾ ಘಟಕದಲ್ಲಿ ಸರಣಿ ವೈದ್ಯಕೀಯ ಪರೀಕ್ಷೆಗಳಿಗೆ ಒಳಪಡಿಸಲಾಯಿತು. 30 ವಿದ್ಯಾರ್ಥಿಗಳಲ್ಲಿ 26 ವಿದ್ಯಾರ್ಥಿಗಳು ಅಸಹಜವಾದ ಬೆಳವಣಿಗೆ ನ್ಯೂನ್ಯತೆ ಹೊಂದಿದ್ದರು. ಇವರಲ್ಲಿ ಅನೇಕರು ಅಧಿಕ ರಕ್ತದೊತ್ತಡ ಮತ್ತು ಮಧುಮೇಹದಿಂದ ಬಳಲುತ್ತಿದ್ದರು. ಹನ್ನೊಂದು ವಿದ್ಯಾರ್ಥಿಗಳಲ್ಲಿ ಟ್ರೈಗ್ಲಿಸರೈಡ್ ಮಟ್ಟ ಹೆಚ್ಚಾಗಿದ್ದರೆ, ನಾಲ್ವರು ವಿದ್ಯಾರ್ಥಿಗಳಲ್ಲಿ ಹೋಮೋಸಿಸ್ಟೀನ್ ಮತ್ತು ಲಿಪೋಪ್ರೋಟೀನ್ ಮಟ್ಟ ಹೆಚ್ಚಾಗಿತ್ತು.

ಈ ಸಂಬಂಧದ ಸಂಶೋಧನಾ ವರದಿಯನ್ನು ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ, ಶಿಕ್ಷಣ ಸಚಿವಾಲಯ ಮತ್ತು ಆರೋಗ್ಯ ಸಚಿವಾಲಯಕ್ಕೆ ಸಲ್ಲಿಸಲಾಗಿದೆ. ವರದಿಯಲ್ಲಿ ನೀತಿ ಬದಲಾವಣೆಯ ತುರ್ತು ಅಗತ್ಯವನ್ನು ವಿವರಿಸಲಾಗಿದೆ. ಶಿಕ್ಷಣ ಸಂಸ್ಥೆಗಳು ಪಠ್ಯೇತರ ದೈಹಿಕ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳ ಭಾಗವಹಿಸುವಿಕೆಯನ್ನು ಉತ್ತೇಜಿಸಬೇಕು ಎಂದು ವರದಿಯಲ್ಲಿ ಶಿಫಾರಸು ಮಾಡಲಾಗಿದೆ. ಸರಕಾರ ಆರೋಗ್ಯ ನೀತಿಯಲ್ಲಿ ಬದಲಾವಣೆ ತಂದು ಪರೀಕ್ಷೆಗೆ ಅನುವು ಮಾಡಿಕೊಟ್ಟರೆ ಮಕ್ಕಳು ಹೃದಯಾಘಾತಕ್ಕೆ ಒಳಗಾಗುವ ಸಾಧ್ಯತೆಯನ್ನು ತಪ್ಪಿಸಬಹುದು ಎಂದು ವರದಿಯಲ್ಲಿ ಮನವಿ ಮಾಡಿದ್ದಾರೆ.

ಹೃದಯದ ಆರೋಗ್ಯಕ್ಕೆ ಬೇಕಾದ ಸಲಹೆಗಳು

ಹೃದಯದ ಆರೋಗ್ಯ ಚೆನ್ನಾಗಿರಬೇಕು ಎಂದರೆ ಆರೋಗ್ಯಕರ ಆಹಾರ ಪದ್ಧತಿಯನ್ನು ಸೇವನೆ ಮಾಡುವುದು, ನಿಯಮಿತವಾಗಿ ವ್ಯಾಯಾಮ, ಯೋಗಾಭ್ಯಾಸ ಮಾಡುವುದು, ವರ್ಷಕ್ಕೆ ಒಮ್ಮೆ ಯಾದರೂ ಹೃದಯದ ಪರೀಕ್ಷೆ ಮಾಡಿಸಿ ಕೊಳ್ಳುವುದು, ದೇಹದ ತೂಕ ಹಾಗೂ ಬೊಜ್ಜನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳುವುದು. ಹೃದಯಕ್ಕೆ ಮಾರಕ ವಾಗಿರುವ ಅಭ್ಯಾಸಗಳಿಂದ ದೂರವಿರುವುದು. ಉದಾಹರಣೆಗೆ ಧೂಮ ಪಾನ ಮತ್ತು ಮದ್ಯಪಾನವನ್ನು ಬಿಟ್ಟುಬಿಡು ವುದು ಇವೆಲ್ಲವೂ ಕೂಡ ಹೃದ ಯದ ಆರೋಗ್ಯವನ್ನು ಅಚ್ಚುಕಟ್ಟಾಗಿ ಕಾಪಾಡುತ್ತವೆ.

ಹೃದಯಾಘಾತದ ಸಮಯದಲ್ಲಿ ಗೋಲ್ಡನ್ ಅವರ್ ಎಂದರೇನು?

ಗೋಲ್ಡನ್ ಅವರ್ ಹೃದಯಾಘಾತದ ನಂತರ ಮೊದಲ 60 ನಿಮಿಷಗಳ ನಿರ್ಣಾಯಕ ಅವಧಿಯನ್ನು ಸೂಚಿಸುತ್ತದೆ. ಈ ಅವಧಿಯಲ್ಲಿ, ಆಂಜಿಯೋಪ್ಲ್ಯಾಸ್ಟಿಯಂತಹ ವಿಧಾನಗಳ ಮೂಲಕ ರಕ್ತದ ಹರಿವನ್ನು ಮರುಸ್ಥಾಪಿಸುವುದು ಅಥವಾ ಹೆಪ್ಪುಗಟ್ಟುವಿಕೆ-ಬಸ್ಟಿಂಗ್ ಔಷಧಿಗಳನ್ನು (ಥ್ರಂಬೋಲಿಟಿಕ್ಸ್) ನಿರ್ವಹಿಸುವಂತಹ ತಕ್ಷಣದ ವೈದ್ಯಕೀಯ ಮಧ್ಯಸ್ಥಿಕೆಯು ಬದುಕುಳಿಯುವ ಸಾಧ್ಯತೆಗಳನ್ನು ಸುಧಾರಿಸುತ್ತದೆ. ಹೃದಯ ಸ್ನಾಯುವಿನ ಹಾನಿಯನ್ನು ಕಡಿಮೆ ಮಾಡುತ್ತದೆ. ಈ ಗಂಟೆ ಯೊಳಗೆ ವೇಗವಾಗಿ ಚಿಕಿತ್ಸೆ ಪ್ರಾರಂಭವಾಗುತ್ತದೆ, ಹೃದಯಾಘಾ ತವನ್ನು ಅನುಭವಿಸುತ್ತಿರುವ ವ್ಯಕ್ತಿಗೆ ಉತ್ತಮ ಫಲಿತಾಂಶವನ್ನು ನೀಡುತ್ತದೆ. ರೋಗಲಕ್ಷಣಗಳ ಆರಂಭಿಕ ಗುರುತಿಸುವಿಕೆ ಮತ್ತು ತ್ವರಿತ ಕ್ರಮವು ಈ ನಿರ್ಣಾಯಕ ಸಮಯದಲ್ಲಿ ಜೀವ ಉಳಿಸುತ್ತದೆ.



ಹೃದಯಾಘಾತದ ಮುನ್ನ ಬರುವ ಲಕ್ಷಣಗಳು

- ಇದ್ದಕ್ಕಿದಂತೆ ಎದೆಯಲ್ಲಿ ನೋವು, ಒತ್ತಡ ಕಾಣಿಸಿಕೊಳ್ಳಲು ಶುರುವಾಗುತ್ತದೆ
- ಕಣ್ಣಿನಲ್ಲಿ ಉರಿ ಕಾಣಿಸಿಕೊಳ್ಳುತ್ತದೆ, ಕೈಗಳ ತೋಳುಗಳಲ್ಲಿ ಕುತ್ತಿಗೆ ಭುಜಗಳ ಭಾಗದಲ್ಲಿ ಕೂಡ ನೋವು ಕಂಡು ಬರುತ್ತದೆ
- ಇದ್ದಕ್ಕಿದಂತೆ ಉಸಿರಾಟದ ಸಮಸ್ಯೆ ಕಾಣಿಸಿಕೊಳ್ಳುತ್ತದೆ
- ತುಂಬಾ ಸುಸ್ತು ಮತ್ತು ಆಯಾಸ ಕಂಡುಬರುವುದು
- ಹೃದಯದ ಬಡಿತದಲ್ಲಿ ಏರುಪೇರು ಆಗುವುದು

ತಪ್ಪಿಸುವುದು ಹೇಗೆ?

ಆರೋಗ್ಯಕರ ಆಹಾರ: ಹಣ್ಣುಗಳು, ತರಕಾರಿಗಳು, ಧಾನ್ಯಗಳು, ನೇರ ಪ್ರೋಟೀನ್‌ಗಳು ಮತ್ತು ಆರೋಗ್ಯಕರ ಕೊಬ್ಬುಗಳಿಂದ ಸಮೃದ್ಧವಾಗಿರುವ ಸಮತೋಲಿತ ಆಹಾರವನ್ನು ಸೇವಿಸಿ.

ನಿಯಮಿತ ವ್ಯಾಯಾಮ: ಶಕ್ತಿ ತರಬೇತಿ ವ್ಯಾಯಾಮಗಳ ಜತೆಗೆ ವಾರಕ್ಕೆ ಕನಿಷ್ಠ 150 ನಿಮಿಷಗಳ ಮಧ್ಯಮ ಏರೋಬಿಕ್ ಚಟುವಟಿಕೆಯ ಗುರಿಯನ್ನು ಹೊಂದಿರಿ.

ಧೂಮಪಾನ ಮತ್ತು ಅತಿಯಾದ ಮದ್ಯಪಾನ ತಪ್ಪಿಸಿ: ಧೂಮಪಾನ ತ್ಯಜಿಸಿ ಮತ್ತು ಮಧ್ಯಮ ಮಟ್ಟಕ್ಕೆ ಮದ್ಯ ಸೇವನೆ ಮಿತಿಗೊಳಿಸಿ.

ಒತ್ತಡವನ್ನು ನಿರ್ವಹಿಸಿ: ಒತ್ತಡವನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಧ್ಯಾನ, ಯೋಗ ಅಥವಾ ಹವ್ಯಾಸಗಳಂತಹ ಒತ್ತಡವನ್ನು ಕಡಿಮೆ ಮಾಡುವ ತಂತ್ರಗಳನ್ನು ಅಭ್ಯಾಸ ಮಾಡಿ.

ನಿಯಮಿತ ತಪಾಸಣೆಗಳು: ತಪಾಸಣೆ, ರಕ್ತದೊತ್ತಡ ಪತ್ತೆಹಚ್ಚುವಿಕೆ ಮತ್ತು ಕೊಲೆಸ್ಟ್ರಾಲ್ ತಪಾಸಣೆಯಿಂದ ನಿಯಮಿತವಾಗಿ ಆರೋಗ್ಯ ವೃತ್ತಿಪರರನ್ನು ಭೇಟಿ ಮಾಡಿ.

ಹೃದಯಘಾತಕ್ಕೆ ಪ್ರಮುಖ ಕಾರಣಗಳು

ದೈನಂದಿನ ಒತ್ತಡದ ಜೀವನಶೈಲಿ ಅತಿಯಾದ ಮಾನಸಿಕ ಒತ್ತಡ ಹಾಗೂ ಆಹಾರಕ್ರಮದಿಂದಾಗಿ ಹೃದಯ ಸಂಬಂಧಿ ಕಾಯಿಲೆಗಳು ಇಂದಿನ ದಿನಗಳಲ್ಲಿ ಹೃದಯಕ್ಕೆ ಸಂಬಂಧಪಟ್ಟ ಸಮಸ್ಯೆಗಳು ಹೆಚ್ಚಾಗುತ್ತಿದೆ ಎಂದು ಮೇಲ್ನೋಟಕ್ಕೆ ಸಾಬೀತಾಗಿದೆ. ಇದರ ಹೊರತಾಗಿ ನೋಡುವುದಾದರೆ, ಮಧು ಮೇಹ ಕಾಯಿಲೆ ಇದ್ದವರು, ಹೈ ಕೊಲೆಸ್ಟ್ರಾಲ್ ಹಾಗೂ ಅಧಿಕ ರಕ್ತದೊತ್ತಡದ ಕಾಯಿಲೆಯಿಂದ ಬಳಲುತ್ತಿರು ವವರಲ್ಲಿಯೂ ಕೂಡ ಹೃದಯಕ್ಕೆ ಸಂಬಂಧಪಟ್ಟ ಆರೋಗ್ಯ ಸಮಸ್ಯೆಗಳು ಬಹಳ ಬೇಗನೇ ಕಾಣಿಸಿಕೊಳ್ಳುತ್ತವೆ ಎಂದು ಹೇಳಲಾಗುತ್ತದೆ.

ಆಸ್ಪತ್ರೆಗಳ ಮೇಲೆ ಹೆಚ್ಚಿದ ಒತ್ತಡ

ಅದರಲ್ಲೂ ಬಹುತೇಕ ಮಂದಿ ಚಿಕ್ಕ ವಯಸ್ಸಿನವರೇ ಸಾವನ್ನಪ್ಪುತ್ತಿದ್ದಾರೆ. ಯುವಕರು-ಯುವತಿಯರು ಎಂಬ ಬೇಧವಿಲ್ಲದೆ ಸರಣಿ ಸಾವುಗಳಾಗುತ್ತಿವೆ. ಇದರಿಂದಾಗಿ ಜನರಲ್ಲಿ ಆತಂಕ ಮನೆಮಾಡಿದೆ. ಜನತೆ ಸಣ್ಣಪುಟ್ಟ ಅಸ್ವಸ್ಥತೆಗಳಿಗೂ ತಪಾಸಣೆಗಾಗಿ ಹೃದ್ರೋಗ ತಜ್ಞರ ಬಳಿ ದಾಂಗುಡಿ ಇಡುತ್ತಿದ್ದಾರೆ. ಇದರಿಂದಾಗಿ ಬೆಂಗಳೂರು, ಮೈಸೂರು, ಕಲಬುರಗಿಯಲ್ಲಿರುವ ಜಯದೇವ ಹೃದ್ರೋಗ ಸಂಸ್ಥೆಗಳಲ್ಲಿ ರೋಗಿಗಳ ಸಂಖ್ಯೆ ಹೆಚ್ಚಾಗಿದೆ. ಜತೆಗೆ ಖಾಸಗಿ ಹೃದ್ರೋಗ ತಜ್ಞರ ಬಳಿಯೂ ತಪಾಸಣೆಗೊಳಗಾಗುತ್ತಿರುವ ಸಂಖ್ಯೆ ತೀವ್ರಗೊಂಡಿದೆ. ಸಾಮರ್ಥ್ಯ ಮೀರಿ ರೋಗಿಗಳು ಬರುತ್ತಿರುವುದರಿಂದ ತಪಾಸಣೆಗೆ ಒತ್ತಡ ಹೆಚ್ಚಾಗಿದೆ. ಸಾರ್ವಜನಿಕರು ಮೊದಲು ಸಾಮಾನ್ಯ ಪರೀಕ್ಷೆಗೆ ಒಳಗಾಗಿ ನಂತರ ಹೆಚ್ಚಿನ ಚಿಕಿತ್ಸೆಗೆ ತಜ್ಞರ ಬಳಿ ಹೋಗುವಂತೆ ಮನವಿ ಮಾಡಿಕೊಳ್ಳಲಾಗುತ್ತಿದೆ. ಜಿಲ್ಲಾ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಸಾಮಾನ್ಯವಾಗಿ ದಿನಕ್ಕೆ 700 ರಿಂದ 1000 ಇಸಿಜಿಗಳಾಗುತ್ತಿದ್ದವು. ಇತ್ತೀಚೆಗೆ ಒಂದು ಸಾವಿರಕ್ಕೂ ಹೆಚ್ಚಿನ ಇಸಿಜಿ ಮಾಡಲಾಗುತ್ತಿದೆ. ಸುಮಾರು 2 ರಿಂದ 3 ಸಾವಿರ ಜನ ಕಾಲಾವಕಾಶ ಸಾಲದೇ ತೆರಳುತ್ತಿದ್ದಾರೆ ಎಂಬ ವರದಿಗಳಿವೆ.

ಹೇಮಾವತಿ ನದಿ ನೀರಿಗಾಗಿ ಆತ್ಮಹತ್ಯೆ ಮಾಡಿಕೊಳ್ಳಲು ಸಿದ್ಧ

ತುಮಕೂರು: ಹೇಮಾವತಿ ಎಕ್ಸ್‌ಪ್ರೆಸ್ ಕೆನಾಲ್ ವಿವಾದ ಮತ್ತಷ್ಟು ತೀವ್ರಸ್ವರೂಪ ಪಡೆದುಕೊಳ್ಳುತ್ತಿರುವ ಬೆನ್ನಲ್ಲೇ ಹೇಮಾವತಿ ನೀರಿಗಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದು ಶಾಸಕ ಡಾ. ರಂಗನಾಥ್ ಹೇಳಿಕೆ ನೀಡಿದ್ದಾರೆ.

ಕುಣಿಗಲ್ ತಾಲೂಕಿನ ಎಲೆಯೂರಿನಲ್ಲಿ ನಡೆದ ಕಾರ್ಯಕ್ರಮ ದಲ್ಲಿ ಮಾತನಾಡಿದ ಅವರು, ನಮ್ಮ ತಾಲೂಕಿನ ರೈತರಿಗಾಗಿ ತಗ್ಗಿ ಬಗ್ಗಿ ನಡೆಯಲು ಸಿದ್ಧನಿದ್ದೇನೆ. ನೀವು ಪೈಪ್ಲೈನ್ ಕಾಮಗಾರಿಗೆ ಅಡ್ಡಿಪಡಿಸಲು ನಿಂತರೆ ಕುಣಿಗಲ್ ತಾಲೂಕಿನ ನಾವು ಗಂಡು ಮಕ್ಕಳು ಕಚ್ಚೆ ಕಟ್ಟಿ ಹೋರಾಟ ಮಾಡೋಕೆ ತಯಾರಿದ್ದೇವೆ. ಮುಂದಿನ ದಿನಗಳಲ್ಲಿ ಬೀದಿಗೆ ಇಳಿಯುತ್ತೇವೆ. ನಮ್ಮ ತಾಲೂಕಿನ ನೀರಿಗಾಗಿ ಹೋರಾಟ ಮಾಡುತ್ತೇವೆ ಎಂದರು. ನಾನು ಸಹ ಕುಣಿಗಲ್ ತಾಲೂಕಿನ ಮಗನಾಗಿ ಆತ್ಮಹತ್ಯೆ ಮಾಡಿಕೊಳ್ಳಲು ಹಿಂದೆಮುಂದೆ ನೋಡಲ್ಲ, ನನ್ನ ತಾಲೂಕಿನ ರೈತರಿಗೋಸ್ಕರ ನನ್ನ ದೇಹ ತ್ಯಾಗಕ್ಕೂ ಸಿದ್ಧನಿದ್ದೇನೆ. ನಮ್ಮೂರು ಎಲೆಯೂರಿನಲ್ಲಿ ಈ ಮಾತು ಹೇಳುತ್ತಿದ್ದೇನೆ. ನಾನು ಬಹಳ ತಾಳ್ಮೆಯಿಂದ ನೋಡುತ್ತಿದ್ದೇನೆ ಎಂದು ವೇದಿಕೆ ಮೇಲೆ ಭಾವುಕ ಮಾತುಗಳನ್ನಾಡಿದರು.

ಶಿಡ್ಲಘಟ್ಟ ತಾಲೂಕಿನ ಜಂಗಮಕೋಟೆ ಹೋಬಳಿಯ 13 ಹಳ್ಳಿಗಳ ಫಲವತ್ತಾದ ಕೃಷಿ ಭೂಮಿಯನ್ನು ಕೈಗಾರಿಕೀಕರಣಕ್ಕೆ ವಶಪಡಿಸಿಕೊಳ್ಳಲು ಮುಂದಾಗಿರುವ ಸರಕಾರದ ಕ್ರಮ ವಿರೋಧಿಸಿ ಚಿಕ್ಕಬಳ್ಳಾಪುರ ಜಿಲ್ಲಾಧಿಕಾರಿ ಕಚೇರಿ ಎದುರು ರೈತರು ಅಹೋರಾತ್ರಿ ಧರಣಿ ನಡೆಸುತ್ತಿರುವುದು.

ನಿಯಂತ್ರಣ ತಪ್ಪಿದ ಕಾರು ಪಲ್ಟಿ: ನಾಲ್ವರ ದುರ್ಮರಣ

ದೊಡ್ಡಬಳ್ಳಾಪುರ: ಹೆದ್ದಾರಿಯಲ್ಲಿ ಓವರ್ ಟೇಕ್ ಮಾಡುವ ಭರದಲ್ಲಿ ಇನ್ನೋವಾ ಕಾರು ಪಲ್ಟಿಯಾಗಿ ನಾಲ್ವರು ಮೃತಪಟ್ಟು, ಮತ್ತೆ ನಾಲ್ವರು ಗಾಯಗೊಂಡಿರುವ ಘಟನೆ ದೊಡ್ಡ ಬಳ್ಳಾಪುರ ತಾಲೂಕಿನ ಮಾಕಳಿ ಬಳಿ ಮಂಗಳವಾರ ಬೆಳಗ್ಗೆ ನಡೆದಿದೆ. ದೊಡ್ಡಬಳ್ಳಾಪುರ ನಗರದ ಕರೇನಹಳ್ಳಿ ನಿವಾಸಿಗಳಾದ ಕಾಳಪ್ಪ, ಪುರುಷೋತ್ತಮ, ನಾರಾಯಣಪ್ಪ ಮತ್ತು ಈಶ್ವರಪ್ಪ ಮೃತರು. ಗಾಯಾಳುಗಳನ್ನು ಆಸ್ಪತ್ರೆಗೆ ರವಾನಿಸಲಾಗಿದೆ. ಮೃತರು ಮಂಗಳವಾರ ಬೆಳಗ್ಗೆ ಮಂಚೇನಹಳ್ಳಿಯ ಭೀಮೇಶ್ವರ ಬೆಟ್ಟದ ಮಹೇಶ್ವರಮ್ಮನ ದರ್ಶನಕ್ಕೆ ಹೊರಟ್ಟಿದ್ದರು. ದೊಡ್ಡಬಳ್ಳಾಪುರ - ಗೌರಿಬಿದನೂರು ರಸ್ತೆಯ ಮಾಕಳಿ ಬಳಿ ಓವರ್ ಟೇಕ್ ಮಾಡುವ ವೇಳೆ ಎದುರಿಗೆ ಕೆಎಸ್‌ಆರ್‌ಟಿಸಿ ಬಸ್ ಅಡ್ಡ ಬಂದಿದ್ದು, ಈ ವೇಳೆ ಎಡಕ್ಕೆ ಕಾರನ್ನು ತಿರುಗಿಸುವಾಗ ನಿಯಂತ್ರಣ ತಪ್ಪಿ ಪಲ್ಟಿಯಾಗಿದೆ. ಸ್ಥಳಕ್ಕೆ ದೊಡ್ಡಬಳ್ಳಾಪುರ ಗ್ರಾಮಾಂತರ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಸ್ಥಳದಲ್ಲಿ ಮೃತರ ಸಂಬಂಧಿಕರ ಆಕ್ರಂದನ ಮುಗಿಲು ಮುಟ್ಟಿದೆ.

ನಿಯಂತ್ರಣ ತಪ್ಪಿ ಕಾರು ಪಲ್ಟಿಯಾಗಿರುವುದು.

ಚಿಕ್ಕಬಳ್ಳಾಪುರ, ಬೆಂ.ಗ್ರಾಮಾಂತರ, ಕೋಲಾರ ಜಿಲ್ಲೆಗೆ ಕೊಡುಗೆ ನಿರೀಕ್ಷೆ

ನಂದಿಬೆಟ್ಟದಲ್ಲಿ ಸಂಪುಟ ಸಭೆ ಇಂದು

ಚಿಕ್ಕಬಳ್ಳಾಪುರ: ನಂದಿಗಿರಿಧಾಮದಲ್ಲಿ ಬುಧವಾರ (ಜು.2) ನಡೆಯಲಿರುವ ಸಚಿವ ಸಂಪುಟದ ಸಭೆಗೆ ಅಗತ್ಯ ಸಿದ್ದತೆಗಳನ್ನು ಮಾಡಲಾಗಿದೆ. ಚಿಕ್ಕಬಳ್ಳಾಪುರ, ಕೋಲಾರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಅಭಿವೃದ್ಧಿಗೆ ವಿಶೇಷ ಅನುದಾನ ಸಿಗುವ ಸಾಧ್ಯೆ ಇದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್ ತಿಳಿಸಿದರು.

ನಂದಿಗಿರಿಧಾಮದಲ್ಲಿ ಪೂರ್ವ ಸಿದ್ದತೆಗಳನ್ನು ಪರಿಶೀಲನೆ ನಡೆಸಿ ಸುದ್ದಿಗಾರರ ಜತೆ ಮಾತನಾಡಿದ ಅವರು, ರಾಜ್ಯ ಸಚಿವ ಸಂಪುಟ ಸಭೆ ಮೂರು ಜಿಲ್ಲೆಗಳ ಜನರ ನಿರೀಕ್ಷೆಗೆ ಪೂರಕವಾಗಿ ಯೋಜನೆಗಳ ಸಿದ್ದತೆ ಆಗಿಲ್ಲ ಎಂದು ಸರಕಾರಕ್ಕೆ ಹಣಕಾಸು ಇಲಾಖೆ ಹೇಳಿತ್ತು. ಆದ್ದರಿಂದ ಜೂನ್ 19 ರಂದು ನಂದಿಗಿರಿಧಾಮದ ಮಯೂರ ಸಭಾಂಗಣದಲ್ಲಿ ನಡೆಯಬೇಕಿದ್ದ ಸಭೆ 2 ವಾರಗಳ ವರೆಗೆ ಮುಂದೂಡಿಕೆ ಮಾಡಲಾಗಿತ್ತು. ಮುಖ್ಯಮಂತ್ರಿಗಳು ಮತ್ತೆ ದಿನಾಂಕ ನೀಡಿ, ಜುಲೈ 2 ರಂದ ಸಚಿವ ಸಂಪುಟ ಸಭೆ ನಿಗದಿ ಮಾಡಿದ್ದು, ಅದರಂತೆ ಸಭೆ ನಡೆಯಲಿದೆ. ಜಿಲ್ಲಾಡಳಿತ ಸಕಲ ಸಿದ್ಧತೆಗಳನ್ನು ಮಾಡಿಕೊಂಡಿದೆ. ಮೂರೂ ಜಿಲ್ಲೆಗಳ ಅಭಿವೃದ್ಧಿಗೆ ಈ ಸಭೆ ತುಂಬಾ ಮಹತ್ವ ಪಡೆದುಕೊಂಡಿದ್ದು, ಪ್ಯಾಕೇಜ್ ರೀತಿ ಭರಪೂರ ಅನುದಾನ ಸಿಗುವ ನಿರೀಕ್ಷೆ ಇದೆ ಎಂದು ಹೇಳಿದರು.

ಬೆಳಗ್ಗೆ ಬೋಗನಂದೀಶ್ವರನಿಗೆ ಪೂಜೆ: ಸಿಎಂ ಸಿದ್ದರಾಮಯ್ಯ ಬೆಂಗಳೂರಿನಿಂದ ರಸ್ತೆ ಮೂಲಕ ಆಗಮಿಸಿ ಪ್ರಸಿದ್ಧ ಬೋಗ ನಂದೀಶ್ವರ ದೇಗುಲಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಕೆ ಮಾಡಲಿದ್ದಾರೆ. ನಂತರ ಸಂಪುಟ ಸಚಿವರ ಜತೆ ನಂದಿಗಿರಿಧಾಮಕ್ಕೆ ಬಸ್‌ನಲ್ಲಿ ಪ್ರಯಾಣಿಸಿ ಮಧ್ಯಾಹ್ನ 12 ಗಂಟೆಗೆ ಸಚಿವ ಸಂಪುಟ ಸಭೆ ನಡೆಸಲಿದ್ದಾರೆ. ಈ ಹಿನ್ನೆಲೆ ಬುಧವಾರ ನಂದಿಗಿರಿಧಾಮಕ್ಕೆ ಖಾಸಗಿ ವ್ಯಕ್ತಿಗಳು ಹಾಗೂ ವಾಹನಗಳ ಪ್ರವೇಶಕ್ಕೆ ನಿರ್ಬಂಧಿಸಲಾಗಿದೆ ಎಂದು ಹೇಳಿದರು.

ಸಚಿವ ಸಂಪುಟ ಸಭೆ ನಡೆಯಲಿರುವ ಹಿನ್ನೆಲೆ ಚಿಕ್ಕಬಳ್ಳಾಪುರದ ನಂದಿಗಿಧಾಮಕ್ಕೆ ಸಚಿವ ಡಾ. ಎಂ.ಸಿ.ಸುಧಾಕರ್ ಅಧಿಕಾರಿಳ ಜತೆ ತೆರಳಿ ಮಂಗಳವಾರ ಪೂರ್ವ ಸಿದ್ಧತೆ ಪರಿಶೀಲನೆ ನಡೆಸಿದರು.

ದಸರಾ ಆನೆಗಳ ಆಯ್ಕೆ ಕಾರ್ಯ ಆರಂಭ
ಇನ್ನೆರಡು ವಾರಗಳಲ್ಲಿ ಪಟ್ಟಿ ಬಿಡುಗಡೆ

ಆ.4ಕ್ಕೆ ಮೈಸೂರಿಗೆ ದಸರಾ ಗಜಪಡೆ

ಮೈಸೂರು: ಈ ವರ್ಷದ ನಾಡಹಬ್ಬ ದಸರಾ ಮಹೋತ್ಸವಕ್ಕೆ ಪೂರಕ ಕೆಲಸ ಆರಂಭವಾಗಿದ್ದು, ಇದರ ಪ್ರಮುಖ ಘಟ್ಟವಾದ ಗಜಪಡೆ ಆಯ್ಕೆ ಕಸರತ್ತು ನಡೆದಿದ್ದು, ಆಗಸ್ಟ್ 4ರಂದು ವೀರನಹೊಸಹಳ್ಳಿಯಲ್ಲಿ ಮೊದಲ ಹಂತದ ಗಜಪಡೆಗೆ ಸ್ವಾಗತ ಕಾರ್ಯ ನೆರವೇರಲಿದೆ.

ದಸರಾ ಮಹೋತ್ಸವದಲ್ಲಿ ಭಾಗವಹಿಸುವ ಆನೆಗಳು 7 ಪ್ರತ್ಯೇಕ ಕ್ಯಾಂಪ್‌ಗಳಲ್ಲಿ ಇದ್ದು, ಆ ಪೈಕಿ 25 ಆನೆಗಳ ಹೆಲ್ತ್ ಕಾರ್ಡ್ ಸ್ವೀಕಾರ ಮಾಡಲಾಗಿದ್ದು ಎರಡು ವಾರಗ ಳಲ್ಲಿ ಪಟ್ಟಿ ಪ್ರಕಟವಾಗಲಿದೆ. ಮೈಸೂರು ದಸರಾಗೆ ಅರಣ್ಯಾಧಿಕಾರಿಗಳು ಈಗಾಗಲೇ 25 ಆನೆಗಳನ್ನ ಪರಿಶೀಲಿಸಿದ್ದು, ಈ ಬಾರಿಯೂ ಕೂಂಬಿಂಗ್ ಸ್ಪೆಷಲಿಸ್ಟ್ ಅಭಿಮನ್ಯು ಅಂಬಾರಿ ಹೊರುವ ಸಾಧ್ಯತೆ ಇದೆ. ಮತ್ತಿಗೋಡು ಕ್ಯಾಂಪ್‌ನಿಂದ ಭೀಮ, ಶ್ರೀಕಂಠ, ಪಾರ್ಥ, ದುಬಾರೆ ಕ್ಯಾಂಪ್ ನಿಂದ ಧನಂಜಯ, ಪ್ರಶಾಂತ್, ಕಂಜನ್, ಸುಗ್ರೀವ, ಶ್ರೀರಾಮ, ಹರ್ಷ, ಅಯ್ಯಪ್ಪ, ಹೇಮಾವತಿ, ದೊಡ್ಡಹರವೆ ಕ್ಯಾಂಪ್‌ನಿಂದ ಏಕಲವ್ಯ, ಭೀಮನಕಟ್ಟೆ ಕ್ಯಾಂಪ್‌ನಿಂದ ಗಣೇಶ, ಶ್ರೀರಂಗ, ರೂಪ, ಬಳ್ಳೆ ಕ್ಯಾಂಪ್ ನಿಂದ ಮಹೇಂದ್ರ, ದೊಡ್ಡಹರವೆ ಲಕ್ಷ್ಮಿ, ಬಂಡೀಪುರ ಹಳೇ ಕ್ಯಾಂಪ್ ನಿಂದ ಹಿರಣ್ಯ, ಲಕ್ಷ್ಮಿ, ರೋಹಿತ್, ಪಾರ್ಥಸಾರಥಿ, ಐರಾವತ, ಹಾರಂಗಿ ಕ್ಯಾಂಪ್‌ನಿಂದ ಲಕ್ಷ್ಮಣ ಮತ್ತು ಈಶ್ವರ ಆನೆಗಳ ಪರಿಶೀಲನೆ ನಡೆಸಲಾಗಿದೆ.

14ರಿಂದ 15 ಆನೆಗಳು ಜಂಬೂಸವಾರಿಗೆ

ಒಟ್ಟು 25 ಆನೆಗಳ ಪೈಕಿ 14ರಿಂದ 15 ಆನೆಗಳು ಮಾತ್ರ ದಸರಾ ಜಂಬೂಸವಾರಿಗೆ ಮೆರವಣಿಗೆಯಲ್ಲಿ ಪಾಲ್ಗೊಳ್ಳಲು ಆಯ್ಕೆಯಾಗಲಿದ್ದು 15 ದಿನಗಳ ಒಳಗೆ ಅಂತಿಮ ಪಟ್ಟಿ ಸಲ್ಲಿಸಲು ತಯಾರಿ ನಡೆಸಲಾಗುತ್ತಿದೆ. ಅಂತಿಮ ಪಟ್ಟಿ ತಯಾರಾದ ಬೆನ್ನಲ್ಲೆ ಆಗಸ್ಟ್ 4ರಂದು ಮೊದಲ ಹಂತದಲ್ಲಿ 9 ಆನೆಗಳಿಗೆ ಗಜ ಪೂಜೆ ನೆರವೇರಿಸಿ ಮೈಸೂರಿಗೆ ಕರೆಯಲಾಗುತ್ತದೆ.

ಕಾರ್ಮಿಕ ಸಚಿವ ಸಂತೋಷ ಲಾಡ್ ಹೇಳಿಕೆ

ಪ್ರಧಾನಿ ಮೋದಿ ಬದಲಾವಣೆಗೆ ಬಿಜೆಪಿ ಸಂಸದರಿಂದ ಒತ್ತಾಯ

ಹುಬ್ಬಳ್ಳಿ: ಮುಖ್ಯಮಂತ್ರಿ ಬದಲಾವಣೆ ಕಾಂಗ್ರೆಸ್ ಶಾಸಕರೇ ಒತ್ತಾಯಿಸುತ್ತಿದ್ದಾರೆ ಎಂದು ಹೇಳುವ ಬಿಜೆಪಿಗರು, ವಿದೇಶಾಂಗ ನೀತಿಯಲ್ಲಿ ವೈಫಲ್ಯ ಕಂಡಿರುವ ಹಿನ್ನೆಲೆಯಲ್ಲಿ ಪ್ರಧಾನಿ ಬದಲಾವಣೆಗೆ ಬಿಜೆಪಿ ಸಂಸದರೇ ಒತ್ತಾಯಿಸುತ್ತಿರುವ ಬಗ್ಗೆ ಯಾಕೆ ಹೇಳುತ್ತಿಲ್ಲ ಎಂದು ಸಚಿವ ಸಂತೋಷ ಲಾಡ್ ಪ್ರಶ್ನಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಡಿಎಪಿ ಸೇರಿ ವಿವಿಧ ರಸಗೊಬ್ಬರ ಕೊರತೆ ಬಗ್ಗೆ ಕೇಂದ್ರ ಸರಕಾರ, ಬಿಜೆಪಿ ನಾಯಕರು ಯಾಕೆ ಮಾತನಾಡುತ್ತಿಲ್ಲ. ಯುಪಿಎ ಅವಧಿಯಲ್ಲಿನ ಕಲ್ಲಿದ್ದಲು, 2ಜಿ ಸ್ಪೆಕ್ಟ್ರಂ ಹಗರಣಗಳ ಬಗ್ಗೆ ಬಿಜೆಪಿಯವರು ದೊಡ್ಡದಾಗಿ ಪ್ರಚಾರ ಮಾಡಿದ್ದರು. ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ನಡೆಸಿದ ವರದಿಯಲ್ಲಿ ಯಾವ ಭ್ರಷ್ಟಾಚಾರ ನಡೆದಿಲ್ಲ ಎಂದಿದೆ. ಇದರ ಬಗ್ಗೆ ಬಿಜೆಪಿ ನಾಯಕರು ಏನು ಹೇಳುತ್ತಾರೆ ಎಂದು ಪ್ರಶ್ನಿಸಿದರು. ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಅವರನ್ನು ಭಯೋತ್ಪಾದಕರ ರೀತಿ ಬಿಂಬಿಸಿದರು. ಆಡಳಿತ ಸಂಪೂರ್ಣ ವೈಫಲ್ಯ, ಭ್ರಷ್ಟಾಚಾರದ ತಾಂಡವ ಎಂದೆಲ್ಲಾ ಪ್ರಚಾರ ಮಾಡಿದ್ದರು ವರದಿ ಬಂದಿದೆ. ಈಗ ಏನು ಹೇಳುತ್ತಾರೆ? ಕಳೆದ 11 ವರ್ಷಗಳಲ್ಲಿ ಕಲ್ಲಿದ್ದಲು ಗಣಿ ಯಾರಿಗೆಲ್ಲ ಹಂಚಿಕೆಯಾಗಿದೆ? 10 ವರ್ಷದಲ್ಲಿ ಎಷ್ಟು ರಫ್ತು ಆಗಿದೆ? ಎಷ್ಟು ಪಾರದರ್ಶಕ ಕಾಯ್ದುಕೊಳ್ಳಲಾ ಗಿದೆ ಎಂಬ ಮಾಹಿತಿಯಿದೆ. ಇದನ್ನು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಮೊದಲು ಸ್ಪಷ್ಟಪಡಿಸಲಿ ಎಂದರು.

> ಹೈಕಮಾಂಡ್ ನಿರ್ಧರಿಸುತ್ತದೆ ಎಂಬ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರ ಮಾತನ್ನು ದೊಡ್ಡದಾಗಿ ಬಿಜೆಪಿಯವರು ಟೀಕೆ, ವ್ಯಂಗ್ಯಕ್ಕೆ ಮುಂದಾಗಿದ್ದಾರೆ. ಸೋನಿಯಾ ಗಾಂಧಿ ಬಗ್ಗೆ ಗೌರವಪೂರ್ವಕವಾಗಿ ಹೇಳಿಕೆಯನ್ನು ವಿವಾದ ರೂಪ ನೀಡುತ್ತಿದ್ದಾರೆ. ದೇಶದ ಸಮಸ್ಯೆಗಳ ಬಗ್ಗೆ ಮಾತನಾಡದ ಬಿಜೆಪಿಯವರು ಸಣ್ಣ ವಿಷಯ ಬಗ್ಗೆ ದೊಡ್ಡದಾಗಿ ಹೇಳುತ್ತಾ ತಿರುಗಾಡುತ್ತಿದ್ದಾರೆ.
> **ಸಂತೋಷ್ ಲಾಡ್, ಸಚಿವ**

ವಿಶ್ವವಾಣಿ

ಸಂಪಾದಕೀಯ

ಷಡ್ರಸವನ್ನು ಉಣಿಸಬೇಕಿಲ್ಲ...!

ಪುರಂದರ ದಾಸರು ಬರೆದಿರುವ 'ಧರ್ಮಕೆ ಜಯವೆಂಬ ದಿವ್ಯ ಮಂತ್ರ' ಎಂಬ ಗೀತೆಯಲ್ಲಿ 'ವಿಷವಿಕ್ಕಿದವಗೆ ಷಡ್ರಸವನುಣಿಸಲಿ ಬೇಕು..' ಎಂಬ ಒಂದು ಸಾಲು ಬರುತ್ತದೆ. ತಮಗಾದ ಅನ್ಯಾಯಕ್ಕೆ ಸೇಡು ತೀರಿಸಿಕೊಳ್ಳಲು ಮುಂದಾಗುವವರಿಗೆ ಅಥವಾ ಪ್ರತೀಕಾರವನ್ನೇ ಉಸಿರಾಗಿಸಿಕೊಂಡಿರುವವರಿಗೆ ಹಿತವಚನವನ್ನು ಹೇಳುವ ಉದ್ದೇಶದೊಂದಿಗೆ ಮೂಡಿರುವ ಗೀತೆಯಿದು. 'ಧರ್ಮ'ದ ನೆಲೆಯಲ್ಲಿ ಇದು ಅನುಕರಣೀಯ ಹಿತನುಡಿಯೇ; ಆದರೆ ಅಕ್ಷಮ್ಯ ಅಪರಾಧ ಎಸಗಿದ ದುರುಳರ ಹೆಡೆಮುರಿ ಕಟ್ಟುವ ವಿಷಯ ಬಂದಾಗ ಇಂಥ ದಾಕ್ಷಿಣ್ಯವನ್ನು ತೋರುವ ಅಗತ್ಯವಿಲ್ಲ ಎನಿಸುತ್ತದೆ. ಮಲೆ ಮಹದೇಶ್ವರ ವನ್ಯಜೀವಿ ವಲಯದಲ್ಲಿ ಐದು ಹುಲಿಗಳ ಸಾವಿಗೆ ಕಾರಣರಾದ ಆರೋಪಿಗಳ ಕುರಿತಾದ ಸುದ್ದಿಯನ್ನು ಓದಿದಾಗ, ಪ್ರಾಣಿಪ್ರಿಯರ ಮನದಲ್ಲಿ ಇಂಥದೊಂದು ಅಭಿಪ್ರಾಯ ಹಾದುಹೋಗಿದ್ದರೆ ಅದೇನೂ ಅಚ್ಚರಿಯಲ್ಲ. ದೇಗುಲದ ಗರ್ಭಗುಡಿಯಲ್ಲಿರುವ ಮೂರ್ತಿಗಳಲ್ಲಿ ಮಾತ್ರವಲ್ಲದೆ, ಗಿಡ-ಮರ, ಪ್ರಾಣಿ-ಪಕ್ಷಿ, ಕಲ್ಲು-ಮಣ್ಣಿನಲ್ಲೂ ದೇವರನ್ನು ಕಾಣುವ ಸಂಸ್ಕೃತಿ ಮತ್ತು ಪರಂಪರೆ ನಮ್ಮದು. ಅಂತೆಯೇ, ಹುಲಿ, ಸಿಂಹ, ವೃಷಭ, ನವಿಲು ಮುಂತಾದ ಪ್ರಾಣಿ-ಪಕ್ಷಿಗಳನ್ನು ನಿರ್ದಿಷ್ಟ ದೇವರುಗಳ ವಾಹನಗಳಾಗಿ ಪರಿಕಲ್ಪಿಸಿಕೊಂಡಿರುವ ಸಮಾಜ ನಮ್ಮದು. ಹೀಗಿರುವಾಗ, ತಮ್ಮ ಸ್ವಾರ್ಥ-ಲಾಲಸೆಗೆಂದು ಮತ್ತೊಂದು ಜೀವಕ್ಕೆ ವಿಷವುಣಿಸುವಂಥ ಕೃತ್ಯವನ್ನು ಸಮರ್ಥಿಸಲಾದೀತೇ? ಹುಲಿಗೆ ವಿಷವಿಕ್ಕಲು ಮುಂದಾಗುವವರ, ಜಿಂಕೆಯಂಥ ಸಾಧುಪ್ರಾಣಿಯ ಕೊಂಬನ್ನು ಕತ್ತರಿಸುವವರ, ಆನೆಯ ದಂತವನ್ನು ತರಿಯಲು ತವಕಿಸುವವರ ಧಾರ್ಷ್ಟ್ಯವನ್ನು ಯಾವ ಕಾರಣಕ್ಕೂ ಸಹಿಸಲಾಗುವುದಿಲ್ಲ. ದಿನಗಳೆದಂತೆ ಹುಲಿಗಳ ಸಂತತಿ ಕ್ಷೀಣಿಸುತ್ತಿದೆ ಎಂಬ ಅಳಲು ಎಲ್ಲೆಡೆಯಿಂದ ಕೇಳಿಬರುತ್ತಿರುವಾಗ, ಹುಲಿಗಳ ಅಸ್ತಿತ್ವದ ವಿಷಯದಲ್ಲಿ ಗಮನಾರ್ಹ ಸ್ಥಾನವನ್ನು ದಕ್ಕಿಸಿಕೊಂಡಿದ್ದ ಕರ್ನಾಟಕದಲ್ಲೇ ಇಂಥದೊಂದು ಬೆಳವಣಿಗೆಯಾಗಿರುವುದು ವಿಷಾದನೀಯ. ಅರಣ್ಯ ಪ್ರದೇಶದಲ್ಲಿ ಅಥವಾ ಮತ್ತಾವುದೇ ವನ್ಯಜೀವಿ ವಲಯದಲ್ಲಿ ಕಳ್ಳಬೇಟೆಗೆ ಮುಂದಾಗುವವರಿಗೆ ಇನ್ನಾದರೂ ತಕ್ಕ ಶಾಸ್ತಿ ಆಗಲೇಬೇಕು. ಇದು ಈ ಕ್ಷಣದ ಅನಿವಾರ್ಯತೆಯೂ ಹೌದು.

ಸೊಂಪಾದಕೀಯ

ಪೂಜಾರಿ ಮಹಾತ್ಮೆ

ರಾಮಸ್ವಾಮಿ ಅಲಿಯಾಸ್ ಪದ್ಮನಾಭ ಅನ್ನೋ ಪ್ರೊಫೆಷನಲ್ ಕಳ್ಳನೊಬ್ಬ ಕೊನೆಗೂ ಪೊಲೀಸರ ಅತಿಥಿಯಾಗಿದ್ದಾನಂತೆ. ಈ ಪದ್ಮನಾಭ ಅನ್ನೋ ವ್ಯಕ್ತಿ, ಬೆಂಗಳೂರಿನ ಪದ್ಮನಾಭನಗರದ ಪಕ್ಕದಲ್ಲಿರೋ ಚಿಕ್ಕಲಸಂದ್ರದಲ್ಲಿ ನೆಲೆಸಿದ್ದವ. ಅಲ್ಲೇ ಸುತ್ತಮುತ್ತ ಸಾಕಷ್ಟು ಬಾರಿ ಕಳ್ಳತನ ಮಾಡಿ ಬಚಾವ್ ಆಗಿದ್ದಾನೆ. ಅವನಿಗೆ ಹೀಗೆ ಬಚಾವ್ ಆಗೋಕೆ ಆ ದೇವರೇ ಕಾರಣ ಅಂದ್ರೆ ನೀವು ನಂಬಬೇಕು. ಯಾಕಂದ್ರೆ ಪ್ರತಿ ಬಾರಿ ಕದ್ದ ಮಾಲಿನ ಸಮೇತ ತನ್ನ ಸ್ವಂತ ಊರಿಗೆ ಹೋಗಿ ಅಲ್ಲಿನ ದೇವಸ್ಥಾನದಲ್ಲಿ ದೇವರ ಮುಂದೆ ಇಟ್ಟು ವಿಶೇಷ ಪೂಜೆ ಮಾಡಿ, ಈತ ತಪ್ಪೊಪ್ಪಿಗೆ ಮಾಡಿಕೊಳ್ಳುತ್ತಿದ್ದನಂತೆ. ನಂತರ ಕದ್ದ ಹಣವನ್ನು ಇಟ್ಟುಕೊಂಡು, ಬಂಗಾರವನ್ನು ಕರಗಿಸಿ ಮಾರಾಟ ಮಾಡುತ್ತಿದ್ದನಂತೆ. ಆದರೆ, ಕದ್ದ ಬಂಗಾರ ಕರಗಿಸಿ ಮಾರುತ್ತಿದ್ದ ಈ ಕಳ್ಳ ಕ್ಷಮೆ ಕೇಳಿದ ತಕ್ಷಣ ಕರಗಿದ ಆ ದೇವರು ಪಕ್ಷಪಾತಿ ಅಂತ ನೀವನ್ನಬಹುದು. ಏನು ಮಾಡೋದು, ದೇವರಿಗೂ ಈತನಿಗೂ ಹಳೆಯ ನಂಟು. 1995ರಲ್ಲಿ ಕಳ್ಳತನವನ್ನು ಪ್ರೊಫೆಷನ್ ಮಾಡಿಕೊಂಡ ಈತ ಮೊದಲು ಅದೇ ದೇವಾಲಯದಲ್ಲಿ ಪೂಜಾರಿ ಕೆಲಸ ಮಾಡುತ್ತಿದ್ದ. ದೇವರಿಗೆ ಕ್ಲೋಸ್ ಆಗಿದ್ದ ಕಾರಣ ಈ ಪೂಜಾರಿ ಕಳ್ಳತನ ಮಾಡಿ ಸುಲಭವಾಗಿ ಜಾರಿಕೊಳ್ಳಬಹುದು ಎಂದು ಬಲವಾಗಿ ನಂಬಿದ್ದ. ಅದರಂತೆಯೇ ಈತ ನಂಬಿದ್ದ ದೇವರು ಇಷ್ಟು ದಿನ ಇವನ ಕೈಬಿಟ್ಟಿರಲಿಲ್ಲ. ಹಾಗಾಗಿ ಇವನ ಕೈಗೆ ಕೋಳ ಬಿದ್ದಿರಲಿಲ್ಲ. ಕೇವಲ ಬೆಂಗಳೂರಿನಲ್ಲಿ ಅಲ್ಲದೆ ತಮಿಳುನಾಡಿನಲ್ಲೂ ಕಳ್ಳತನ ಮಾಡುತ್ತಿದ್ದ ಈತನ ಮೇಲೆ 25 ಕೇಸುಗಳಿದ್ದರೂ ನ್ಯಾಯಾಲಯಕ್ಕೆ ಹಾಜರಾಗದೆ, ಪೊಲೀಸರ ಕೈಗೆ ಸಿಕ್ಕದೆ ತನ್ನ ಕೈಚಳಕ ಮುಂದುವರಿಸಿದ್ದ. ಆದರೆ ಬಹಳ ದಿನಗಳ ನಂತರ ಬೆಂಗಳೂರಿಗೆ ಬಂದಿದ್ದ ಈತ ಮತ್ತೆ ತನ್ನ ಹೋಮ್ ಗ್ರೌಂಡ್‌ನಲ್ಲಿ ಆಟವಾಡಲು ಹೋಗಿ ಈಗ ಕಡೆಗೂ ಪೊಲೀಸರ ಅತಿಥಿ ಆಗಿದ್ದಾನೆ. ಪಾಪ, 25 ವರ್ಷಗಳಿಂದ ಇವನನ್ನು ಕಾಪಾಡಿದ ದೇವರಿಗೂ ಇವನ ಸಹವಾಸ ಸಾಕಾಗಿದೆ ಅನ್ನಿಸಿರಬೇಕು. ಆದರೆ ವಿಶೇಷ ಅಂದ್ರೆ, ಕದ್ದ ಮೇಲೆ ದೇವರ ಬಳಿ ಕ್ಷಮೆ ಕೇಳಿ ಬಚಾವ್ ಆಗುತ್ತಿದ್ದ ಈತ ಸಿಕ್ಕಿಬಿದ್ದಿರೋದು, ದೇವರ ದರ್ಶನಕ್ಕೆ ಅಂತ ಅಮರನಾಥ ಯಾತ್ರೆಗೆ ಹೋದವರ ಮನೆಗೆ ಕನ್ನ ಹಾಕಿದಾಗ. ಇದನ್ನೆಲ್ಲಾ ಕೇಳಿದ ಮೇಲಾದ್ರೂ, ದೇವರಿದ್ದಾನೆ ಅಂತ ಖಂಡಿತವಾಗಿ ನಂಬಬಹುದು ಬಿಡಿ.

ಸಂಪಾದಕರ ಸದ್ಯಶೋಧನೆ

ವಿಮಾನದ ಬಾಗಿಲುಗಳ ಮಹತ್ವ

ವಿಮಾನವೆಂದರೆ ನೂರಾರು ಪ್ರಯಾಣಿಕರ ಸುರಕ್ಷತೆ ಮತ್ತು ಜೀವಭದ್ರತೆ ಹೊತ್ತಿರುವ, ಆಧುನಿಕ ತಂತ್ರಜ್ಞಾನದ ಹಾರುವ ಯಂತ್ರ. ಅದರ ಪ್ರತಿ ಭಾಗಕ್ಕೂ ನಿರ್ದಿಷ್ಟ ಉದ್ದೇಶವಿದೆ. ಅದರಲ್ಲೂ ಬಾಗಿಲುಗಳು ಅತ್ಯಂತ ಮಹತ್ವದ ಪಾತ್ರವಹಿಸುತ್ತವೆ. ವಿಮಾನದಲ್ಲಿ ಬಾಗಿಲುಗಳು ಕೇವಲ ಒಳಹೋಗುವ ದಾರಿ ಮಾತ್ರವಲ್ಲ, ಅವು ಅವಘಡದ ಸಂದರ್ಭದಲ್ಲಿ ಜೀವ ಉಳಿಸುವ ಮಾರ್ಗವೂ ಹೌದು. ವಿಮಾನದಲ್ಲಿ ಬಾಗಿಲುಗಳು ಹಲವಾರು ಉದ್ದೇಶಗಳನ್ನು ನಿಭಾಯಿಸುತ್ತವೆ. ಪ್ರಯಾಣಿಕರು ಅಥವಾ ಸಿಬ್ಬಂದಿ ಒಳಹೊಗುವ ಹಾಗೆ ವ್ಯವಸ್ಥೆ ಮಾಡುವುದು, ವಿಮಾನದಲ್ಲಿ ಪೋಷಕ ಸಾಮಗ್ರಿಗಳನ್ನು ಲೋಡ್/ಅನ್‌ಲೋಡ್ ಮಾಡುವುದಕ್ಕೆ ಅನುವು ಮಾಡಿಕೊಡುವುದು, ತುರ್ತು ನಿರ್ಗಮನ ದ್ವಾರಗಳಾಗಿ ಕಾರ್ಯನಿರ್ವಹಿಸುವುದು, ವಿಮಾನದ ಒಳಗೆ ವಾಯು ಒತ್ತಡವನ್ನು ಸ್ಥಿರವಾಗಿ ಇರಿಸುವುದು ಬಾಗಿಲುಗಳ ಉದ್ದೇಶ. ವಿಮಾನಗಳಲ್ಲಿ ಹಲವು ಬಗೆಯ ಬಾಗಿಲುಗಳಿವೆ, ಅವುಗಳಲ್ಲಿ ಪ್ರಮುಖವಾದವು ವಿಮಾನದ ಮುಂಭಾಗ ಹಾಗೂ ಮಧ್ಯಭಾಗದಲ್ಲಿರುವ ಮುಖ್ಯ ಪ್ಯಾಸೆಂಜರ್ ಡೋರ್ (Passenger Entry Doors), ಆಹಾರ, ಪಾನೀಯ, ಇತರ ವಸ್ತುಗಳನ್ನು ವಿಮಾನದಲ್ಲಿ ಲೋಡ್ ಮಾಡುವ ಸರ್ವೀಸ್ ಡೋರ್, ತುರ್ತು ಸಂದರ್ಭದಲ್ಲಿ ಪ್ರಯಾಣಿಕರು ಹೊರ ಹೋಗಲು ಬಳಸುವ ದ್ವಾರವಾದ ಎಮರ್ಜೆನ್ಸಿ ಎಕ್ಸಿಟ್ (Emergency Exit Doors), ಕಾರ್ಗೋ ಡೋರ್ (Cargo Doors), ಲಗೇಜ್ ಮತ್ತು ಕಾರ್ಗೋಗಳನ್ನೂ ಸಾಗಿಸುವ ವಿಮಾನದ ಕೆಳಭಾಗದಲ್ಲಿ ಇರುವ ಡೋರ್‌ಗಳು, ಪೈಲಟ್‌ಗಳು ಮಾತ್ರ ಪ್ರವೇಶಿಸಬಹುದಾದ ಕಾಕ್‌ಪಿಟ್ ಎಕ್ಸೆಸ್ ಡೋರ್ (ಭದ್ರತಾ ದೃಷ್ಟಿಯಿಂದ ಈ ಬಾಗಿಲುಗಳಲ್ಲಿ ಉನ್ನತ ಮಟ್ಟದ ಲಾಕ್ ಮತ್ತು ಬುಲೆಟ್‌ಪ್ರೂಫ್ ವ್ಯವಸ್ಥೆ ಇರುತ್ತವೆ). ವಿಮಾನದ ಬಾಗಿಲುಗಳು ಬಲಿಷ್ಠವಾಗಿರುತ್ತವೆ. ಈ ಬಾಗಿಲುಗಳು pressure-resistant ಆಗಿರುತ್ತವೆ. ಏಕೆಂದರೆ 35 ಸಾವಿರ ಅಡಿ ಎತ್ತರದಲ್ಲಿ ಒಳಗೆ ಮತ್ತು ಹೊರಗಿನ ಒತ್ತಡದಲ್ಲಿ ಭಾರಿ ವ್ಯತ್ಯಾಸವಿರುತ್ತದೆ. ಬಹುತೇಕ ಬಾಗಿಲುಗಳು plug type mechanism ಹೊಂದಿರುತ್ತವೆ, ಅಂದರೆ ಬಾಗಿಲನ್ನು ಒತ್ತಡದಿಂದ ಹೊರಗಿನಿಂದ ತೆರೆಯಲು ಸಾಧ್ಯವಿಲ್ಲ. ಅಂದರೆ ಬಾಹ್ಯ ಒತ್ತಡದಿಂದಾಗಿ ಬಾಗಿಲು ಸುರಕ್ಷಿತವಾಗಿರುತ್ತದೆ. ಬಾಗಿಲುಗಳನ್ನು ಸಾಮಾನ್ಯವಾಗಿ composite material ಅಥವಾ high-strength aluminum alloy ಬಳಸಿ ತಯಾರಿಸಲಾಗುತ್ತವೆ. ಕೆಲವೊಂದು ಬಾಗಿಲುಗಳು ಮಾನ್ಯುವಲ್ ಲಾಕ್ ಹೊಂದಿರುತ್ತವೆ– ಕ್ಯಾಪ್ಟನ್ ಅಥವಾ ಸಿಬ್ಬಂದಿ ಬಾಗಿಲು ಮುಚ್ಚುವ ಮೊದಲು ಮ್ಯಾನುವಲ್ ಲಾಕ್ ತಳ್ಳಬೇಕಾಗುತ್ತದೆ. ಸಾಮಾನ್ಯವಾಗಿ, ಬಾಗಿಲು ಮುಚ್ಚಿದ ಮೇಲೆ, ಎಂಜಿನ್ ಸ್ಟಾರ್ಟ್ ಆದಾಗ ತಾನಾಗಿಯೇ ಬಾಗಿಲು ಲಾಕ್ ಆಗುತ್ತದೆ. ಬಾಗಿಲು ಮುಚ್ಚಿಲ್ಲದಿದ್ದರೆ ಅಥವಾ ಸರಿಯಾಗಿ ಲಾಕ್ ಆಗಿಲ್ಲದಿದ್ದರೆ, ಫ್ಲೈಟ್ ಡೆಕ್‌ನಲ್ಲಿ ಎಚ್ಚರಿಕೆಯ ಬೆಳಕು ಅಥವಾ ಸೂಚನೆ ನೀಡುತ್ತದೆ. ವಿಮಾನಗಳಲ್ಲಿ ಪ್ರತಿಯೊಂದು ಬಾಗಿಲಿನಲ್ಲಿ ಸ್ಲೈಡ್ ರಾಫ್ಟ್ ಸಿಸ್ಟಮ್ ಇರುತ್ತದೆ. ಬಾಗಿಲು ತೆರೆದಾಗ ತುರ್ತು ಜಂಪಿಂಗ್ ಸ್ಲೈಡ್ ತೆರಳುತ್ತದೆ. ಈ ಸ್ಲೈಡ್‌ಗಳು ಕೆಲವೊಮ್ಮೆ ಲೈಫ್ ರಾಫ್ಟ್ ಆಗಿ ಕೂಡ ಕಾರ್ಯನಿರ್ವಹಿಸುತ್ತವೆ. ಇವು ಆರು ಸೆಕೆಂಡುಗಳಲ್ಲಿ ಗಾಳಿ ತುಂಬಿಕೊಂಡು, ಪ್ರಯಾಣಿಕರು ಸುರಕ್ಷಿತವಾಗಿ ಹೊರ ಹೋಗಲು ಸಹಾಯ ಮಾಡುತ್ತವೆ. ವಿಮಾನ ವಾಹನ ತುರ್ತುಗತಿಯಲ್ಲಿ, ಬಾಗಿಲುಗಳು ಸ್ವಯಂಚಾಲಿತವಾಗಿ ತೆಗೆದುಕೊಳ್ಳುವ ಸಾಧ್ಯತೆ ಇಲ್ಲ– ಬಾಹ್ಯ ಒತ್ತಡ ಕಡಿಮೆಯಾಗುವವರೆಗೆ ಪೈಲಟ್ ಅನುಮತಿ ನೀಡಬೇಕು. ಫ್ಲೈಟ್ ಅಟೆಂಡೆಂಟ್‌ಗಳು ಬಾಗಿಲನ್ನು armed ಅಥವಾ disarmed ಸ್ಥಿತಿಯಲ್ಲಿ ಇಡುತ್ತಾರೆ. Armed ಅಂದರೆ ತುರ್ತು ಸ್ಲೈಡ್ ಸಕ್ರಿಯ ಸ್ಥಿತಿಯಲ್ಲಿ ಇರುತ್ತದೆ. ಬಾಗಿಲು ಪ್ರತಿ ಹಂತದಲ್ಲೂ 'Locked', 'Unlocked', 'Armed' ಅಥವಾ 'Disarmed' ಎಂಬ ದಿಶಾಸೂಚಕವನ್ನು ಹೊಂದಿರುತ್ತವೆ. ಬಾಗಿಲು ಸರಿಯಾಗಿ ಮುಚ್ಚಿಲ್ಲ, ಲಾಕ್ ಆಗಿಲ್ಲ ಎಂದರೆ ಪೈಲಟ್‌ಗೆ ತಕ್ಷಣ ಎಚ್ಚರಿಕೆ ಬರುತ್ತದೆ. ಬಾಗಿಲುಗಳನ್ನು ಉಪಯೋಗಿಸುವ ಸಂದರ್ಭದಲ್ಲಿ ಕೆಲ ನಿಯಮಗಳನ್ನು ಪಾಲಿಸಬೇಕು. ವಿಮಾನ ಭೂಮಿಯಲ್ಲಿ ಇದ್ದಾಗ ಮಾತ್ರ ಬಾಗಿಲುಗಳನ್ನು ತೆರೆಯಬೇಕು. ಎಂಜಿನ್ ಸ್ಟಾರ್ಟ್ ಆದ ಮೇಲೆ ಅಥವಾ ಪಾಯಿಂಟ್ ನ್ಯಾವಿಗೇಶನ್ ನಡೆಯುತ್ತಿರುವಾಗ ಬಾಗಿಲು ತೆರೆಯುವುದು ಅಪಾಯಕಾರಿಯಾಗಿದೆ. ತುರ್ತು ಸಂದರ್ಭಗಳಲ್ಲಿ ಬಾಗಿಲು ತೆರೆಯುವಾಗ ಫ್ಲೈಟ್ ಅಟೆಂಡೆಂಟ್ ಅಥವಾ ಕ್ಯಾಪ್ಟನ್‌ನ ಅನುಮತಿ ಮುಖ್ಯ.

ಮಮ್ಮಿಗಳಿಂದ ಅಸ್ಥಿಭಂಗವನ್ನು ಗುಣಪಡಿಸುವವರೆಗೆ...



ಹಿಂದಿರುಗಿ ನೋಡಿದಾಗ

ಡಾ. ನಾ.ಸೋಮೇಶ್ವರ

naasomeswara@gmail.com

ಕರ್ನಾಟಕದಲ್ಲಿ ಚೌತಿ ಹಬ್ಬ ಬಂದಿತೆಂದರೆ ಮಕ್ಕಳಿಗೆ ಬಹಳ ಸಂಭ್ರಮ. ಮೂರು ದಿನ, ಐದು ದಿನ ಅಥವಾ ಒಂಬತ್ತು ದಿನಗಳ ಕಾಲ ಗಣಪನನ್ನು ಪೂಜಿಸಿ, ನಾನಾ ರೀತಿಯ ನೈವೇದ್ಯಗಳನ್ನು ಅರ್ಪಿಸಿ, ಅವನನ್ನು ನೀರಿನಲ್ಲಿ ಮುಳುಗಿಸುವ ದಿನ ಬಂದಾಗ ಮಕ್ಕಳ ಗೋಳು, ರೋದನೆ, ಅಳು, ಹಠವನ್ನು ಹೇಳತೀರದು. ಗಣಪತಿಯನ್ನು ನೀರಿನಲ್ಲಿ ಮುಳುಗಿಸುವ ಪದ್ಧತಿಯನ್ನು ಮಕ್ಕಳು ಉಗ್ರವಾಗಿ ವಿರೋಧಿಸುವುದು ಸಾಮಾನ್ಯವಾದಾಗ ಹೆತ್ತವರಿಗೆ ಹೇಳಿಕೊಳ್ಳಲಾಗದ ಸಂಕಟ. ಮಕ್ಕಳ ಮನಸ್ಸಿಗೆ ಸಮಾಧಾನವಾಗುವಂತೆ ನಡೆದುಕೊಳ್ಳಬೇಕೋ ಅಥವಾ ಸಂಪ್ರದಾಯವನ್ನು ಪರಿಪಾಲಿಸಬೇಕೋ... ಕೊನೆಗೆ ಒಂದು ಉಪಾಯವನ್ನು ಕಂಡುಕೊಂಡರು. ಪ್ಲಾಸ್ಟರ್ ಆಫ್ ಪ್ಯಾರಿಸ್‌ನಿಂದ ತಯಾರಿಸಿದ ದೊಡ್ಡ ಗಣಪನನ್ನು ತಂದರು. ಜತೆಗೆ ಒಂದು ಪುಟ್ಟ ಮಣ್ಣಿನ ಗಣಪ. ಹಬ್ಬ ಮುಗಿದ ಮೇಲೆ ಮಣ್ಣಿನ ಗಣಪವನ್ನು ನೀರಿನಲ್ಲಿ ಬಿಟ್ಟರು. ಪ್ಲಾಸ್ಟರ್ ಆಫ್ ಪ್ಯಾರಿಸ್ ಗಣಪನನ್ನು ಅಲಂಕಾರ ಮೂರ್ತಿಯನ್ನಾಗಿ ಕಪಾಟಿನಲ್ಲಿಟ್ಟರು. ಕೆಲವು ಸಂಪ್ರದಾಯನಿಷ್ಠರು ಪೂಜೆ ಮಾಡಿದ ಗಣಪನನ್ನೇ ನೀರಿನಲ್ಲಿ ವಿಸರ್ಜಿಸಬೇಕು ಎಂದು ಪಟ್ಟು ಹಿಡಿದಾಗ, ಪ್ಲಾಸ್ಟರ್ ಆಫ್ ಪ್ಯಾರಿಸ್ ಗಣಪನನ್ನು ನೀರಿನಲ್ಲಿ ಬಿಟ್ಟರು. ಆನಂತರವೇ ಬಂತು ಸಮಸ್ಯೆ! ಪ್ಲಾಸ್ಟರ್ ಆಫ್ ಪ್ಯಾರಿಸ್ ಗಣಪನು ನೀರಿನಲ್ಲಿ ಕರಗಲೇ ಇಲ್ಲ! ಮುಂಬಯಿಯ ಕಡಲ ನೀರಿನಲ್ಲಿ ಮುಳುಗಿಸಿದ ಗಣಪನು ನೀರಿನಲ್ಲಿ ಕರಗದೆ, ಅವನ ಅವಶೇಷಗಳು ಮರುದಿನ ಸಮುದ್ರ ದಡದ ಮೇಲೆಲ್ಲ ಬಂದು ಬಿದ್ದಿರುವುದು ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಇದೇ ಅವಸ್ಥೆಯು ಕೋಲ್ಕತ್ತದ ನವರಾತ್ರಿಯ ದುರ್ಗೆಯ ಮೂರ್ತಿಗೂ ಒದಗುವುದನ್ನು ನಾವು ನೋಡಿದ್ದೇವೆ.

- **ಜಿಪ್ಸಮ್:** ಏನಿದು ಪ್ಲಾಸ್ಟರ್ ಆಫ್ ಪ್ಯಾರಿಸ್? ಇದನ್ನು ಕನ್ನಡದಲ್ಲಿ ಏನೆಂದು ಕರೆಯುತ್ತಾರೆ? ಹೆಸರೇ ಸೂಚಿಸುವ ಹಾಗೆ ಇದು ಪ್ಯಾರಿಸ್ ನಗರದಲ್ಲಿ ಮೊದಲ ಬಾರಿಗೆ ತಯಾರಿಸಲಾದ ಪ್ಲಾಸ್ಟರ್. ಪ್ಲಾಸ್ಟರನ್ನು ಕನ್ನಡದಲ್ಲಿ ಲೇಪನ, ಗಾರೆ, ಗಿಲಾವು, ಪಳಾಸ್ತ್ರಿ ಎಂದು ಕರೆಯಬಹುದು. ಸರಳವಾಗಿ 'ಪ್ಯಾರಿಸ್ ಗಿಲಾವು' ಅಥವಾ 'ಪ್ಯಾರಿಸ್ ನಗರಿಯ ಗಿಲಾವು' ಎನ್ನಬಹುದು. ಈ ಪದಪ್ರಯೋಗವು ಅರ್ಥವನ್ನು ಥಟ್ಟನೆ ಬಿಟ್ಟುಕೊಡದ ಕಾರಣ, ಮೂಲ 'ಪ್ಲಾಸ್ಟರ್ ಆಫ್ ಪ್ಯಾರಿಸ್' ಅನ್ನೇ ಬಳಸಬಹುದು. ಪ್ಲಾಸ್ಟರ್ ಆಫ್ ಪ್ಯಾರಿಸ್ (ಪಿಒಪಿ) ಎನ್ನುವುದು ಒಂದು ರಾಸಾಯನಿಕ ವಸ್ತುವಿನ ಹೆಸರು. ರಾಸಾಯನಿಕವಾಗಿ ಇದನ್ನು 'ಕ್ಯಾಲ್ಷಿಯಂ ಸಲ್ಫೇಟ್ ಡೈಹೈಡ್ರೇಟ್' ಎಂದು ಕರೆಯುವರು. ಇದನ್ನು 'ಕ್ಯಾಲ್ಸೀಕೃತ ಜಿಪ್ಸಮ್' ಅಥವಾ 'ಜಿಪ್ಸಮ್ ಪ್ಲಾಸ್ಟರ್' ಎಂದೂ ಕರೆಯು ವರು. ಕ್ಯಾಲ್ಷಿಯಂ ಸಲ್ಫೇಟ್ ಡೈಹೈಡ್ರೇಟನ್ನು 150 ಡಿಗ್ರಿ ಸೆಲ್ಷಿಯಸ್‌ವರೆಗೆ ಕಾಯಿಸುವರು. ಆಗ ಜಿಪ್ಸಮ್‌ನಲ್ಲಿರುವ ನೀರಿನಂಶವು ಆವಿಯಾಗುತ್ತದೆ. ಉಳಿದುದನ್ನು 'ಕ್ಯಾಲ್ಷಿಯಂ ಸಲ್ಫೇಟ್ ಹೆಮಿಹೈಡ್ರೇಟ್' ಎನ್ನುವರು. ಇದು ಪುಡಿ ರೂಪದಲ್ಲಿರುತ್ತದೆ. ಇದಕ್ಕೆ ನೀರನ್ನು ಬೆರೆಸಿ ಕಲಸಿದಾಗ ನಾದಿದ ಹಿಟ್ಟಿನಂಥ ಕಣಕವಾಗುತ್ತದೆ. ನೋಡನೋಡುತ್ತಿರುವಂತೆಯೇ ಈ ಕಣಕವು ಗಟ್ಟಿಯಾಗಿ ಬಿರುಸಾಗುತ್ತದೆ. ಕಲ್ಲಿನಂತೆ ಗಟ್ಟಿಯಾಗುತ್ತದೆ. ನಂತರ ಇದನ್ನು ಒಡೆದೇ ಪುಡಿಮಾಡ ಬೇಕಾಗುತ್ತದೆ. ಹಾಗಾಗಿ ಪ್ಲಾಸ್ಟರ್ ಆಫ್ ಪ್ಯಾರಿಸ್‌ನಿಂದ ಮನುಷ್ಯರ ಮೂರ್ತಿಗಳನ್ನು ಒಳಗೊಂಡಂತೆ ನಾನಾ ರೀತಿಯ ಕಲಾಕೃತಿಗಳನ್ನು ರಚಿಸುವ ಕಲೆಯು ಜಗದಾದ್ಯಂತ ಜನಪ್ರಿಯವಾಯಿತು. ಈ 'ಪಿಒಪಿ'ಯು ಆಸ್ಪತ್ರೆಯನ್ನು ಪ್ರವೇಶಿಸಿ, ಮುರಿದ ಮೂಳೆಗಳನ್ನು ತ್ವರಿತವಾಗಿ ಮರು ಜೋಡಿಸಿ, ನವಜೀವನವನ್ನು ಆರಂಭಿಸುವುದಕ್ಕೆ ಇಂಬು ಕೊಟ್ಟ ಕಥೆಯು ರೋಚಕವಾಗಿದೆ.
- **ಪ್ರಾಚೀನ ಈಜಿಪ್ಷಿಯನ್ನರು:** ಪಿಒಪಿಯ ಮೊದಲ ಬಳಕೆಯನ್ನು ಕಂಡುಕೊಂಡವರು ಪ್ರಾಚೀನ ಈಜಿಪ್ಷಿಯನ್ ವೈದ್ಯರು (ಕ್ರಿ.ಪೂ.3000–ಕ್ರಿ.ಪೂ.300). ಈಜಿಪ್ಟಿನ 'ಫೈಯುಮ್' ಮತ್ತು ಸುತ್ತಮುತ್ತಲ ಪ್ರದೇಶದ ಮರಳುಗಾಡಿನಲ್ಲಿ ಜಿಪ್ಸಮ್ ನೈಸರ್ಗಿಕವಾಗಿ ದೊರೆಯುತ್ತದೆ. ಇದನ್ನು ಕಾಯಿಸಿ, ಪುಡಿ ಮಾಡಿ, ನೀರನ್ನು ಬೆರೆಸಿ ಬಳಸುವುದನ್ನು ಅವರು ತಿಳಿದಿದ್ದರು. ಕ್ರಿ.ಪೂ.17ನೆಯ ಶತಮಾನದ 'ಎಡ್ವಿನ್ ಪ್ಯಾಪಿರಸ್ ಸುರುಳಿ'ಯಲ್ಲಿ 'ಅಸ್ಥಿಭಂಗ ಮತ್ತು ಅದರ ನಿರ್ವಹಣೆ'ಯನ್ನು ವಿವರಿಸುವಾಗ ಮೂಳೆಮುರಿದ ಭಾಗವನ್ನು ಚಲನರಹಿತವನ್ನಾಗಿಸಲು, ದಬ್ಬೆಗಳಿಗೆ ಲಿನನ್ ಬಟ್ಟೆಯನ್ನು ಸುತ್ತಿ, ಅದನ್ನು ಗೋಂದು ಮತ್ತು ಜಿಪ್ಸಮ್‌ನಲ್ಲಿ ಮುಳುಗಿಸಿ, ಹೊರತೆಗೆದು ಗಟ್ಟಿಯಾದ ದಬ್ಬೆಯನ್ನು ಮುರಿದ ಅಂಗದ ಪಾರ್ಶ್ವಗಳಲ್ಲಿ ಇಟ್ಟು ಕಟ್ಟಬೇಕು ಎನ್ನುವ ವಿವರವು ದೊರೆಯುತ್ತದೆ. ಪ್ಲಾಸ್ಟರ್ ಆಫ್ ಪ್ಯಾರಿಸ್ ಬಳಸಿ 'ಡೆಂಟಲ್ ಬ್ರಿಡ್ಜ್' ರೂಪಿಸಿ (ಕೃತಕ ದಂತ) ಅದನ್ನು ಬಂಗಾರದ ತಂತಿಗಳಿಂದ ಬಿಗಿಯುತ್ತಿದ್ದರು. ರೋಗಿಯ ಮುರಿದ ಹಲ್ಲುಗಳನ್ನು, ಪಿಒಪಿಯನ್ನು ತುಂಬಿ ಸರಿಪಡಿಸುತ್ತಿದ್ದರು. ದವಡೆ ಮುರಿದರೆ, ಅದಕ್ಕೆ ಜಿಪ್ಸಮ್ ಲೇಪಿಸಿ ಸ್ಥಿರಗೊಳಿಸುತ್ತಿದ್ದರು. ಫ್ಯಾರೋಗಳ ಮಮ್ಮೀಕರಣದಲ್ಲಿ ಮೊದಲು ದೇಹವನ್ನು ನೇಟ್ರಮ್ ಮೊದಲಾದ ರಾಸಾಯನಿಕಗಳಿಂದ ಸಂಸ್ಕರಿಸಿ ಶುಷ್ಕಗೊಳಿಸುತ್ತಿದ್ದರು. ನಂತರ ಇಡೀ ದೇಹವನ್ನು ಲಿನನ್ ಬಟ್ಟೆಯಿಂದ ಸುತ್ತಿ, ಅದರ ಮೇಲೆ ಜಿಪ್ಸಮ್ ಅನ್ನು

ಲೇಪಿಸುತ್ತಿದ್ದರು. ಆಗ ಶವಕ್ಕೆ ನಿರ್ದಿಷ್ಟ ಆಕಾರ ದೊರೆತು, ಮೂಲರೂಪವನ್ನು ಬಹುಪಾಲು ಹೋಲುತ್ತಿತ್ತು. ಹಾಗೆಯೇ ಶವವು ಯಾರದೆಂದು ಗುರುತಿಸಲು, ಜಿಪ್ಸಮ್ ಬಳಸಿ ಶವದ ಮುಖವಾಡವನ್ನು ರೂಪಿಸಿ, ಅದಕ್ಕೆ ಬಣ್ಣ ಹಚ್ಚಿ, ಮಮ್ಮೀಕೃತ ಫ್ಯಾರೋವಿನ ಮುಖಕ್ಕೆ ಹೊಂದಿಸುತ್ತಿದ್ದರು.

ಈಜಿಪ್ಷಿಯನ್ನರು ಪಿರಮಿಡ್ಡುಗಳ ಭಿತ್ತಿಯನ್ನು ರೂಪಿಸಲು ಇದೇ ಜಿಪ್ಸಮ್ ಅನ್ನು ಬಳಸುತ್ತಿದ್ದರು. ಜಗತ್ತಿನ ಪ್ರಥಮ ವೈದ್ಯ ಎಂದು ಹೆಸರಾದ 'ಇಮ್‌ಹೋಟೆಪ್'ನ ಸಮಾಧಿಯಲ್ಲಿ, ಪಿಒಪಿಯಿಂದ ತಯಾರಿಸಿದ ಕೆಲವು ಪಾತ್ರೆಗಳು, ಕೆಲವು ಶಸ್ತ್ರವೈದ್ಯಕೀಯ ಉಪಕರಣಗಳು ಹಾಗೂ ಮಿಶ್ರಣಗಳು ದೊರೆತಿವೆ. ಕೆಲವು ಮಮ್ಮಿಗಳಲ್ಲಿರುವ ಮುರಿದ ಮೂಳೆಗಳು ಹದವಾಗಿ ಕೂಡಿಕೊಂಡಿರುವುದನ್ನು ನಾವು ನೋಡಬಹುದು. ಮೂಳೆಗಳು ಇಷ್ಟು ಸೊಗಸಾಗಿ ಕೂಡಿಕೊಂಡಿರಬೇಕಾದರೆ, ಅವರು ಬಹುಶಃ ಜಿಪ್ಸಮ್ ಅನ್ನು ಬಳಸಿಯೇ ಮುರಿದ ಮೂಳೆಗಳನ್ನು ಸ್ಥಿರಗೊಳಿಸಿರಬೇಕೆಂದು ಕಾಣುತ್ತದೆ.

- **ಗ್ರೀಕ್–ರೋಮನ್ನರು:** ಗ್ರೀಕ್ ಮತ್ತು ರೋಮನ್ ವೈದ್ಯರು, ಪ್ರಾಚೀನ ಈಜಿಪ್ಷಿಯನ್ ವೈದ್ಯರು ಜಿಪ್ಸಮ್ ಅನ್ನು ಹೇಗೆ ವೈವಿಧ್ಯಮಯವಾಗಿ ಬಳಸಿದರೋ, ಹಾಗೆ ಬಳಸಿದ ಹಾಗೆ ಕಾಣುವುದಿಲ್ಲ. ಆಧುನಿಕ ವೈದ್ಯಕೀಯ ವಿಜ್ಞಾನದ ಪಿತಾಮಹ ಹಿಪ್ಪೋಕ್ರೇಟ್ಸ್ (ಕ್ರಿ.ಪೂ.460–ಕ್ರಿ.ಪೂ.370) ಮುರಿದ ಮೂಳೆಗಳನ್ನು ಸ್ಥಿರಗೊಳಿಸಲು ಲಿನೆನ್ ಬಟ್ಟೆಯನ್ನು ಮೇಣದಲ್ಲಿ ನೆನೆಯಿಸಿ, ಅದಕ್ಕೆ ಅಂಟನ್ನು ಬೆರೆಸಿ, ದೃಢವಾಗಿಸಿ ಮುರಿದ ಮೂಳೆಗಳ ಅಕ್ಕಪಕ್ಕದಲ್ಲಿಟ್ಟು ಲಿನೆನ್‌ನಿಂದ ಕಟ್ಟಿ ಸ್ಥಿರಗೊಳಿಸಬೇಕು ಎಂದಿದ್ದಾನೆ. ರೋಮನ್ ವೈದ್ಯರು ಜೇಡಿಮಣ್ಣಿನೊಡನೆ ಹಿಟ್ಟು ಅಥವಾ ಸ್ಟಾರ್ಚ್ ಬೆರೆಸಿ ಮುರಿದ ಮೂಳೆಗಳನ್ನು ಸ್ಥಿರಗೊಳಿಸುತ್ತಿದ್ದರು. ಮೊದಲನೆಯ ಶತಮಾನದ ರೋಮನ್ ಮಿಲಿಟರಿ ವೈದ್ಯಕೀಯ ಕೈಪಿಡಿಯು ಮುರಿದ ಮೂಳೆಗಳನ್ನು ಸ್ಥಿರಗೊಳಿಸಲು ವೈನ್ ಮತ್ತು ಬೂದಿ ಬೆರೆತ ದ್ರಾವಣದಲ್ಲಿ ಮರದ ತೊಗಟೆಗಳನ್ನು ಮುಳುಗಿಸಿ ಕಟ್ಟಬೇಕು ಎನ್ನುತ್ತದೆ.
- **ಪ್ರಾಚೀನ ಭಾರತೀಯರು:** ಅಸ್ಥಿಭಂಗ ಚಿಕಿತ್ಸೆಯ ಬಗ್ಗೆ ಸುಶ್ರುತ ಮಹರ್ಷಿಗಳು (ಕ್ರಿ.ಪೂ.600) ವಿಸ್ತೃತವಾಗಿ ವರ್ಣಿಸಿರುವರು. ಮೊದಲು 'ಅವಪೀಡನ', ಅಂದರೆ ಮೂಳೆಗಳನ್ನು ಹದವಾಗಿ ಎಳೆದು, ಮುರಿದ ಎರಡು ಭಾಗಗಳನ್ನು ಸ್ವಸ್ಥಾನದಲ್ಲಿ ಜೋಡಿಸುವುದು. ನಂತರ 'ಬಂಧನ', ಎಂದರೆ ಮುರಿದ ಮೂಳೆಗಳನ್ನು ಬಂಧನಕ್ಕೆ ಒಳಪಡಿಸುವುದು, ಅಂದರೆ ಅಲುಗದಂತೆ ಸ್ಥಿರಗೊಳಿಸುವುದು. ಕೊನೆಯಲ್ಲಿ 'ಭೃಂಗಕ', ಅಂದರೆ ಮುರಿದ ಮೂಳೆಗಳು ಬೇಗ ಕೂಡಿಕೊಳ್ಳಲು ಅಗತ್ಯವಾದ ಆಹಾರ ಮತ್ತು ಔಷಧಗಳನ್ನು ನೀಡುವುದು (ಅಸ್ಥಿಭಗ್ನೇಷು ತು ಸುಪಿಂಡೀಕೃತ್ಯ ಸ್ಥಿರೀಕೃತ್ಯ ಚ ಯಥಾ ಸುಖಮ್ ಬಂಧನಂ ಕಾರಯೇತ್). ಸುಶ್ರುತ ಮಹರ್ಷಿಗಳು ಜಿಪ್ಸಮ್ ಬಗ್ಗೆ ಪ್ರಸ್ತಾಪಿಸಿಲ್ಲ. ಮುರಿದ ಮೂಳೆಗಳನ್ನು ಸ್ಥಿರವಾಗಿಸಲು ದಬ್ಬೆಗಳನ್ನು ಔಷಧೀಯ ಅಂಟು ಮತ್ತು ಮೇಣದಲ್ಲಿ ಅದ್ದಿ ಆಯಕಟ್ಟಿನ ಸ್ಥಳದಲ್ಲಿಟ್ಟು, ಅದರ ಮೇಲೆ 'ಗೈರಿಕಾ' ಎಂಬ ಕೆಂಪುಮಣ್ಣು ಮತ್ತು 'ಸುಣ್ಣ'ವನ್ನು ಪುಡಿ ಮಾಡಿ ನೀರಿನಲ್ಲಿ ಬೆರೆಸಿ ಲೇಪಿಸಿದರೆ ಅದು ಕಲ್ಲಿನಂತೆ ಗಟ್ಟಿಯಾಗಿ ಮೂಳೆಗಳನ್ನು ಸ್ಥಿರವಾಗಿಸುತ್ತಿತ್ತು.
- **ಮಧ್ಯಯುಗ:** ಯುರೋಪಿನಲ್ಲಿ ಮಧ್ಯಯುಗವು ಕ್ರಿ.ಶ.800–ಕ್ರಿ.ಶ.1500ರವರೆಗೆ ಕಂಡುಬಂದಿತು. ಈ ಅವಧಿಯಲ್ಲಿ ಯುರೋಪಿಯನ್ ಹಾಗೂ ಇಸ್ಲಾಮ್ ವೈದ್ಯರು ಜಿಪ್ಸಮ್ ಬಳಕೆಯನ್ನು ಅರ್ಥಮಾಡಿಕೊಂಡಿದ್ದರು. ಚರ್ಚ್ ಮತ್ತು ಕೆಥೆಡ್ರಲ್‌ಗಳ ನಿರ್ಮಾಣದಲ್ಲಿ ಜಿಪ್ಸಮ್ ಅನ್ನು ವಿಪುಲವಾಗಿ ಬಳಸಿದರು. ಆದರೆ ವೈದ್ಯಕೀಯವಾಗಿ ಜಿಪ್ಸಮ್ ಅನ್ನು ಬಳಸಿದ ಉದಾಹರಣೆಗಳು ದೊರೆಯುವುದಿಲ್ಲ.
- **ನವೋದಯ:** 18ನೆಯ ಶತಮಾನ. ನವೋದಯದ ಕಾಲದಲ್ಲಿ ಎಲ್ಲ ಜ್ಞಾನಶಾಖೆಗಳು ಅಭಿವೃದ್ಧಿ ಹೊಂದಿದ ಹಾಗೆ ರಸಾಯನ ವಿಜ್ಞಾನವೂ ಅಭಿವೃದ್ಧಿಹೊಂದಿತು. ಆಂಟಾಯ್ನ್ ಫ್ರಾಂಕೋಯಿಸ್ ದಿ ಫ್ಯೂರೋಕ್ರಾಯ್ (1755–1809) ಎಂಬ ರಸಾಯನ ವಿಜ್ಞಾನಿಯು, ವಿಶ್ವವಿಖ್ಯಾತ ರಸಾಯನ ವಿಜ್ಞಾನಿಯಾದ ಆಂಟಾಯ್ನ್ ಲವಾಸಿಯೆ (1743–1794), ಗಯ್ಟನ್ ದ ಮೋರ್ವೆ (1737–1816) ಮತ್ತು ಕ್ಲಾಡ್ ಬೆರ್ಥೋಲೆಟ್ (1748–1822) ಮುಂತಾದ ಪ್ರಖ್ಯಾತ ವಿಜ್ಞಾನಿಗಳ ಸಹಚರನಾಗಿ ಕೆಲಸ ಮಾಡುತ್ತಿದ್ದ. ಈತನು ಜಿಪ್ಸಮ್ಮಿನ ರಾಸಾಯನಿಕ ಸಂಯೋಜನೆಯನ್ನು ಪತ್ತೆಹಚ್ಚಿದ. ಅದು ಕೈಗಾರಿಕಾ ಕ್ರಾಂತಿಯ ಕಾಲವಲ್ಲವೇ! ಹಾಗಾಗಿ ಜಿಪ್ಸಮ್ ಅನ್ನು ಬೃಹತ್ ಪ್ರಮಾಣದಲ್ಲಿ ತಯಾರಿಸುವ ಕಾರ್ಖಾನೆಗಳು ಯುರೋಪಿನಾದ್ಯಂತ ತಲೆಯೆತ್ತಿದವು. ಕಟ್ಟಡಗಳ ನಿರ್ಮಾಣದಲ್ಲಿ ಜಿಪ್ಸಮ್ ಒಂದು ಪ್ರಮಾಣಬದ್ಧವಾದ ಕಚ್ಚಾ ಸಾಮಗ್ರಿಯಾಗಿ ಪ್ರಸಿದ್ಧವಾಯಿತು.
- **ಮಾತಿಜ್ಸೇನ್:** ಪಿಒಪಿಯ ಮೊದಲ ಅಧಿಕೃತ ವೈದ್ಯಕೀಯ ಉಪಯೋಗವನ್ನು ಡಚ್ ಮಿಲಿಟರಿ ಸರ್ಜನ್ ಆಂಟೋನಿಯಸ್ ಮಾತಿಜ್ಸೆನ್ (1805–1878) ಕಂಡುಕೊಂಡ. 1851. ಇವನು ಬ್ಯಾಂಡೇಜ್ ಬಟ್ಟೆಯನ್ನು ಪಿಒಪಿಯ ಗಂಜಿಯಂಥ ದ್ರಾವಣದಲ್ಲಿ ನೆನೆಯಿಸಿ, ಅದನ್ನು ಮುರಿದ ಮೂಳೆಯ ಭಾಗಕ್ಕೆ ಸಾವಕಾಶವಾಗಿ ಸುತ್ತಿದ. ಅದರ ಮೇಲೆ ಮತ್ತಷ್ಟು ಗಂಜಿಯನ್ನು ಲೇಪಿಸಿದ. ನೋಡನೋಡುತ್ತಿರುವಂತೆಯೇ ಆ ಜಿಪ್ಸಮ್ ಪಟ್ಟಿಯು ಕಲ್ಲಿನಂತೆ ಗಟ್ಟಿಯಾಯಿತು. ಇದುವೇ ಇಂದಿಗೂ ಬಳಕೆಯಲ್ಲಿರುವ ಪ್ಲಾಸ್ಟರ್ ಕಟ್ಟಿನ ಮೊತ್ತಮೊದಲ ಪ್ರಯೋಗ. ಅಂದಿನಿಂದ, ಮುರಿದ ಮೂಳೆಗಳನ್ನು ಸ್ಥಿರಗೊಳಿಸಲು ಪಿಒಪಿ ಲೇಪನವನ್ನು ಹಾಕುವುದು ಒಂದು ಪ್ರಮಾಣಬದ್ಧವಾದ ಚಿಕಿತ್ಸೆಯಾಗಿ ಹೆಸರನ್ನು ಗಳಿಸಿತು (ಈ ಯಶಸ್ವಿ ಪ್ರಯೋಗ ವನ್ನು ಮೊದಲ ಬಾರಿಗೆ ಪ್ಯಾರಿಸ್ಸಿನಲ್ಲಿ ಮಾಡಿದ ಕಾರಣ ಜಿಪ್ಸಮ್ಮಿಗೆ ಪಿಒಪಿ ಎಂಬ ಹೆಸರು ಬಂದಿತು). 1853ರಲ್ಲಿ ಜರ್ಮನಿಯ ಒಂದು ವೈದ್ಯಕೀಯ ನಿಯತಕಾಲಿಕವು ಈ ವಿಧಾನವನ್ನು 'ಅಸ್ಥಿಭಂಗ ಚಿಕಿತ್ಸೆಯಲ್ಲಿನ ಒಂದು ಕ್ರಾಂತಿಕಾರಕ ಹೆಜ್ಜೆ' ಎಂದು ಕರೆಯಿತು. 'ಇದೊಂದು ಅತ್ಯಂತ ಸರಳವಾದ, ಆದರೆ ಅತ್ಯಂತ ಪರಿಣಾಮಕಾರಿಯಾದ ಚಿಕಿತ್ಸಾ ವಿಧಾನ' ಎಂದು ಹೊಗಳಿತು.

ಕ್ರಿಮಿಯನ್ ಯುದ್ಧವು 1853–1856ರವರೆಗೆ ನಡೆಯಿತು. ಈ ಯುದ್ಧದಲ್ಲಿ ಅನೇಕ ಸೈನಿಕರು ಸಂಕೀರ್ಣ ಮೂಳೆ ಮುರಿತಗಳಿಗೆ ತುತ್ತಾಗಿದ್ದರು. ಆಗ ಬ್ರಿಟಿಷ್ ಶುಶ್ರೂಷಕಿ ಫ್ಲಾರೆನ್ಸ್ ನೈಟಿಂಗೇಲ್ (1820–1910), ಮಾತಿಜ್ಸೇನ್ ಅವರಿಗೆ ಕರೆ ಕಳುಹಿಸಿದಳು. ಮೂಳೆ ಮುರಿತಕ್ಕೆ ಒಳಗಾದ ಎಲ್ಲ ಸೈನಿಕರಿಗೆ ಸ್ವಯಂ ಮುಂದೆ ನಿಂತು ಪಿಒಪಿ ಕಟ್ಟನ್ನು ಹಾಕಲು ನೆರವಾದಳು. ಅದುವರೆಗೂ ಬಳಕೆಯಲ್ಲಿದ್ದ ವಿವಿಧ ರೀತಿಯ ಕಟ್ಟುಗಳಿಗಿಂತ, ಈ ಹೊಸ ಕಟ್ಟು ಅತ್ಯಂತ ಪರಿಣಾಮಕಾರಿಯಾಗಿ ಗುಣಪಡಿಸುತ್ತಿದ್ದುದನ್ನು ದಾಖಲಿಸಿದಳು.

- **ವೈವಿಧ್ಯ:** ಕ್ರಿ.ಶ.1800–ಕ್ರಿ.ಶ.1940ರವರೆಗಿನ ಅವಧಿಯನ್ನು 'ಪಿಒಪಿ ಸುವರ್ಣಕಾಲ' ಎಂದು ಕರೆಯುವುದುಂಟು. ಪಿಒಪಿಯನ್ನು ಅಸ್ಥಿಭಂಗವನ್ನು ಸ್ಥಿರಪಡಿಸುವುದರಲ್ಲಿ ಬಳಸುವುದರ ಜತೆಯಲ್ಲಿ, ಜನ್ಮದತ್ತ ಅಂಗಾಲು ವಿರೂಪಗಳನ್ನು ಸರಿಪಡಿಸಲೂ ಬಳಸಲಾರಂಭಿಸಿದರು. ಪ್ರಧಾನ ಶಸ್ತ್ರಚಿಕಿತ್ಸೆಗಳಾದ ಮೇಲೆ, ಗಾಯವು ಬೇಗ ಗುಣವಾಗಲೆಂದು ಗಾಯವಾದ ಭಾಗವನ್ನು ಸ್ಥಿರಗೊಳಿಸಲು ಪಿಒಪಿಯನ್ನು ಪರಿಣಾಮಕಾರಿಯಾಗಿ ಬಳಸಿದರು. ಅಸ್ಥಿಛೇದನ ಅಥವಾ ಆಸ್ಟಿಯಾಟಮಿಯಲ್ಲಿ ಮೂಳೆಗಳನ್ನು ಛೇದಿಸುವುದುಂಟು, ಇಲ್ಲವೇ ಮೂಳೆಯ ಅಂಶವನ್ನು ಸೇರಿಸುವುದುಂಟು, ಇಲ್ಲವೇ ಮೂಳೆಗಳಿಗೆ ಹೊಸ ಆಕಾರವನ್ನು ನೀಡುವುದುಂಟು. ಕೀಲುಗಳ ಬೆಸುಗೆ ಅಥವಾ ಜಾಯಿಂಟ್ ಫ್ಯೂಶನ್ ಶಸ್ತ್ರಚಿಕಿತ್ಸೆಗಳು ಸಹ ಪಿಒಪಿ ಕಟ್ಟಿನ ಕಾರಣ ಯಶಸ್ವಿಯಾಗಲಾರಂಭಿಸಿದವು. ಭಾರತದ ಮುಂಬಯಿಯ ಕಿಂಗ್ ಎಡ್ವರ್ಡ್ ಮೆಮೋರಿಯಲ್ ಆಸ್ಪತ್ರೆ ಹಾಗೂ ವೆಲ್ಲೂರಿನ ಕ್ರಿಶ್ಚಿಯನ್ ಮೆಡಿಕಲ್ ಕಾಲೇಜಿನಲ್ಲಿ ಪಿಒಪಿ ಕಟ್ಟುಗಳನ್ನು ಹಾಕುವ ಯಶಸ್ವಿ ಪ್ರಯೋಗಗಳು ನಡೆದವು. ರಾಜಸ್ಥಾನವು ಜಿಪ್ಸಮ್ ಭರಿತ ರಾಜ್ಯವಾಗಿದ್ದುದರಿಂದ ದೇಶದ ಅಗತ್ಯಕ್ಕೆ ಬೇಕಾಗುವಷ್ಟು ಜಿಪ್ಸಮ್ ಅನ್ನು ಪೂರೈಸುತ್ತಿದೆ.
- **ಆಧುನಿಕತೆ:** ಈಗ ಮುರಿದ ಮೂಳೆಯನ್ನು ಸ್ಥಿರಗೊಳಿಸಲು ಪಿಒಪಿಯನ್ನು ಹಾಕುವ ಪ್ರಸಂಗಗಳು ಕಡಿಮೆ. 1970ರ ದಶಕದಲ್ಲಿ 'ಫೈಬರ್ ಗ್ಲಾಸ್ ಕ್ಯಾಸ್ಟಿಂಗ್' ವಸ್ತುಗಳು ದೊರೆಯಲಾರಂಭಿಸಿದವು. ಇದು ಪಿಒಪಿ ಕಟ್ಟಿಗಿಂತ ಹಗುರವಾಗಿತ್ತು. ನೀರಿನಲ್ಲಿ ನೆನೆಯುತ್ತಿರಲಿಲ್ಲ, ಹೆಚ್ಚು ದಿನ ಬಾಳಿಕೆ ಬರುತ್ತಿತ್ತು. ಆದರೆ ಇವು ಸ್ವಲ್ಪ ದುಬಾರಿ. ಹಾಗಾಗಿ ಇಂದಿಗೂ ಗ್ರಾಮೀಣ ಭಾರತದಲ್ಲಿ ಪಿಒಪಿ ಕಟ್ಟುಗಳನ್ನು ಹಾಕುವ ಪದ್ಧತಿಯಿದೆ.

ಪ್ಲಾಸ್ಟರ್ ಆಫ್ ಪ್ಯಾರಿಸ್ ಕೆಲವು ಅವಗುಣಗಳನ್ನು ಹೊಂದಿದೆ. ಮೊದಲನೆಯದು ಇದು ನೀರಿನಲ್ಲಿ ಕರಗುವುದಿಲ್ಲ. ಹಾಗಾಗಿ ಕೈಕಾಲು–ಮುಖ–ಮೂತಿ ಮುರಿದ ಗಣಪನು, ಕಾಳಿಯು ಸಮುದ್ರ ದಡದಲ್ಲಿ ಅನಾಥವಾಗಿ ಬೀಳಬೇಕಾದ ಅನಿವಾರ್ಯತೆಯೊದಗಿದೆ. ಪಿಒಪಿ ಧೂಳು ಅತ್ಯಂತ ಸೂಕ್ಷ್ಮ ಕಣಗಳನ್ನು ಉಳ್ಳಂಥದ್ದು. ಇದು ಶ್ವಾಸಕೋಶಗಳ ಒಳಗೆ ಹೋದರೆ ತೊಂದರೆಯಾಗುತ್ತದೆ. ಪಿಒಪಿಯನ್ನು ಸಾವಕಾಶವಾಗಿ ಹಾಕಬೇಕು. ಬೇಗ ಬೇಗ ಹಾಗೂ ದಪ್ಪನೆಯ ಲೇಪನವನ್ನು ಹಾಕಿದರೆ, ಉಷ್ಣತೆಯು ತೀವ್ರವಾಗಿ, ಅದು ಅಂಗವನ್ನೇ ಸುಡುವ ಸಾಧ್ಯತೆಯಿರುತ್ತದೆ. ಅದರಲ್ಲೂ ಮಕ್ಕಳು ಮತ್ತು ವೃದ್ಧರಿಗೆ ಕಟ್ಟು ಹಾಕುವಾಗ ಅತೀವ ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ.

ಡಿಜಿಟಲ್ ಇಂಡಿಯಾದ ಒಂದು ದಶಕ

ಸಾಧನಾಪಥ

ನರೇಂದ್ರ ಮೋದಿ

vveditoped@gmail.com

ಹತ್ತು ವರ್ಷಗಳ ಹಿಂದೆ, ನಾವು ಅಜ್ಞಾತ ಪ್ರದೇಶಕ್ಕೆ ಒಂದು ದಿಟ್ಟ ಪ್ರಯಾಣವನ್ನು ಬಹಳ ದೃಢ ನಿಶ್ಚಯದಿಂದ ಆರಂಭಿಸಿದೆವು. ಭಾರತೀಯರ ತಂತ್ರಜ್ಞಾನ ಬಳಕೆಯ ಸಾಮರ್ಥ್ಯದ ಬಗ್ಗೆ ದಶಕಗಳಷ್ಟು ಕಾಲ ಸಂದೇಹವಿತ್ತು, ನಾವು ಈ ದೃಷ್ಟಿಕೋನ ಬದಲಿಸಿದೆವು ಮತ್ತು ಭಾರತೀಯರು ತಂತ್ರಜ್ಞಾನ ಬಳಸುವ ಸಾಮರ್ಥ್ಯದ ಮೇಲೆ ನಂಬಿಕೆ ಇಟ್ಟೆವು. ತಂತ್ರಜ್ಞಾನದ ಬಳಕೆಯು ಶ್ರೀಮಂತರು ಮತ್ತು ಬಡವರ ನಡುವಿನ ಅಂತರವನ್ನು ಹೆಚ್ಚಿಸುತ್ತದೆ ಎಂದು ದಶಕಗಳಿಂದ ಭಾವಿಸಲಾಗಿತ್ತು, ಆದರೆ ನಾವು ಈ ಮನಸ್ಥಿತಿಯನ್ನು ಬದಲಾಯಿಸಿದ್ದೇವೆ ಮತ್ತು ಶ್ರೀಮಂತರು ಹಾಗೂ ಬಡವರ ನಡುವಿನ ಅಂತರ ನಿರ್ಮೂಲನೆ ಮಾಡಲು ತಂತ್ರಜ್ಞಾನವನ್ನು ಬಳಸಿಕೊಂಡಿದ್ದೇವೆ.

ಉದ್ದೇಶ ಸರಿಯಾಗಿದ್ದಾಗ, ನಾವೀನ್ಯವು ದುರ್ಬಲರನ್ನು ಸಬಲಗೊಳಿಸುತ್ತದೆ. ಎಲ್ಲರನ್ನೂ ಒಳಗೊಳ್ಳುವ ವಿಧಾನವಿದ್ದಾಗ, ತಂತ್ರಜ್ಞಾನ ವಂಚಿತರ ಜೀವನದಲ್ಲಿ ಅದು ಬದಲಾವಣೆ ತರುತ್ತದೆ. ಈ ನಂಬಿಕೆ ಡಿಜಿಟಲ್ ಇಂಡಿಯಾಕ್ಕೆ ಬುನಾದಿ ಹಾಕಿತು. ಇದು ಲಭ್ಯತೆಯನ್ನು ಪ್ರಜಾಪ್ರಭುತ್ವಗೊಳಿಸುವ, ಎಲ್ಲರನ್ನೂ ಒಳಗೊಂಡ ಡಿಜಿಟಲ್ ಮೂಲಸೌಕರ್ಯ ನಿರ್ಮಿಸುವ ಮತ್ತು ಎಲ್ಲರಿಗೂ ಅವಕಾಶ ಒದಗಿಸುವ ಅಭಿಯಾನವಾಗಿದೆ. 2014ರಲ್ಲಿ, ಅಂತರ್ಜಾಲ ಲಭ್ಯತೆ ಸೀಮಿತವಾಗಿತ್ತು, ಡಿಜಿಟಲ್ ಸಾಕ್ಷರತೆ ಕಡಿಮೆಯಿತ್ತು ಮತ್ತು ಸರಕಾರಿ ಸೇವೆಗಳಿಗೆ ಆನ್‌ಲೈನ್ ಪ್ರವೇಶ ವಿರಳವಾಗಿತ್ತು. ಭಾರತದಂಥ ದೊಡ್ಡ ಮತ್ತು ವೈವಿಧ್ಯಮಯ ದೇಶ ನಿಜವಾಗಿಯೂ ಡಿಜಿಟಲ್ ಆಗಲು ಸಾಧ್ಯವೇ ಎಂದು ಹಲವರು ಅನುಮಾನಿಸಿದರು. ಇಂದು, ಆ ಪ್ರಶ್ನೆಗೆ ಕೇವಲ ಡೇಟಾ ಮತ್ತು ಡ್ಯಾಶ್ ಬೋರ್ಡ್‌ಗಳಲ್ಲಿ ಮಾತ್ರವಲ್ಲ, 140 ಕೋಟಿ ಭಾರತೀಯರ ಜೀವನದಲ್ಲಿಯೂ ಉತ್ತರ ಸಿಕ್ಕಿದೆ. ನಾವು ಹೇಗೆ ಆಡಳಿತ ನಡೆಸುತ್ತೇವೆ, ಹೇಗೆ ಕಲಿಯುತ್ತೇವೆ, ವಹಿವಾಟು ನಡೆಸುತ್ತೇವೆ ಮತ್ತು ನಿರ್ಮಿಸುತ್ತೇವೆ ಎಂಬುದರಿಂದ ಹಿಡಿದು ಎಲ್ಲೆಡೆಯೂ ಡಿಜಿಟಲ್ ಇಂಡಿಯಾ ಇದೆ.

- **ಡಿಜಿಟಲ್ ಅಂತರದ ನಿವಾರಣೆ:** 2014ರಲ್ಲಿ, ಭಾರತದಲ್ಲಿ ಅಂದಾಜು 25 ಕೋಟಿ ಅಂತರ್ಜಾಲ ಸಂಪರ್ಕಗಳಿದ್ದವು. ಇಂದು, ಆ ಸಂಖ್ಯೆ 97 ಕೋಟಿಗೂ ಹೆಚ್ಚಾಗಿದೆ. ಭೂಮಿ ಮತ್ತು ಚಂದ್ರನ ನಡುವಿನ ಅಂತರದ 11 ಪಟ್ಟು ದೂರಕ್ಕೆ ಸಮಾನವಾದ 42 ಲಕ್ಷ ಕಿ.ಮೀ.ಗಳಿಗೂ ಹೆಚ್ಚು ಆಪ್ಟಿಕಲ್ ಫೈಬರ್ ಕೇಬಲ್ ಈಗ ಅತ್ಯಂತ ದೂರದ ಹಳ್ಳಿಗಳನ್ನು ಸಹ ಸಂಪರ್ಕಿಸಿದೆ. ಭಾರತವು ವಿಶ್ವದಲ್ಲೇ ಅತಿ ವೇಗದ 5–ಜಿ ಅಳವಡಿಕೆ ಹೊಂದಿದ್ದು, ಕೇವಲ ಎರಡು ವರ್ಷಗಳಲ್ಲಿ 4.81 ಲಕ್ಷ ಬೇಸ್ ಸ್ಟೇಷನ್‌ಗಳನ್ನು ಸ್ಥಾಪಿಸಲಾಗಿದೆ. ಅತಿ ವೇಗದ ಅಂತರ್ಜಾಲ ಈಗ ನಗರ ಕೇಂದ್ರಗಳು ಮತ್ತು ಗಾಲ್ವಾನ್, ಸಿಯಾಚಿನ್ ಮತ್ತು ಲಡಾಖ್ ಸೇರಿದಂತೆ ಮುಂಚೂಣಿ ಸೇನಾನೆಲೆಗಳನ್ನು ತಲುಪಿದೆ.

ನಮ್ಮ ಡಿಜಿಟಲ್ ಬೆನ್ನೆಲುಬಾಗಿರುವ ಇಂಡಿಯಾ ಸ್ಟ್ಯಾಕ್, ಯುಪಿಐನಂಥ ವೇದಿಕೆಗಳನ್ನು ಸಕ್ರಿಯಗೊಳಿಸಿದೆ, ಇದು ಈಗ ವರ್ಷಕ್ಕೆ 100+ ಬಿಲಿಯನ್ ವಹಿವಾಟು ನಿರ್ವಹಿಸುತ್ತಿದೆ. ಎಲ್ಲಾ ನೈಜ–ಸಮಯದ ಡಿಜಿಟಲ್ ವಹಿವಾಟುಗಳಲ್ಲಿ ಅಂದಾಜು ಅರ್ಧದಷ್ಟು ಭಾರತದಲ್ಲಿ ನಡೆಯುತ್ತವೆ. ನೇರ ಸವಲತ್ತು ವರ್ಗಾವಣೆ (ಡಿಬಿಟಿ) ಮೂಲಕ, 44 ಲಕ್ಷ ಕೋಟಿ ರುಪಾಯಿಗೂ ಹೆಚ್ಚು ಮೊತ್ತವನ್ನು ನೇರವಾಗಿ ನಾಗರಿಕರಿಗೆ ವರ್ಗಾಯಿಸಲಾಗಿದೆ, ಮಧ್ಯವರ್ತಿಗಳನ್ನು ತಪ್ಪಿಸಲಾಗಿದೆ ಮತ್ತು 3.48 ಲಕ್ಷ ಕೋಟಿ ರು.ನಷ್ಟು ಸೋರಿಕೆಯನ್ನು ಉಳಿಸಲಾಗಿದೆ. ಸ್ವಾಮಿತ್ವದಂಥ ಯೋಜನೆಗಳು 2.4 ಕೋಟಿಗೂ ಹೆಚ್ಚು ಆಸ್ತಿ ಕಾರ್ಡ್‌ಗಳನ್ನು ವಿತರಿಸಿವೆ ಮತ್ತು 6.47 ಲಕ್ಷ ಹಳ್ಳಿಗಳನ್ನು ನಕ್ಷೆ ಮಾಡಿವೆ, ಇದರಿಂದಾಗಿ ಹಲವು ವರ್ಷಗಳ ಕಾಲದ ಭೂ ಸಂಬಂಧಿತ ಅನಿಶ್ಚಿತತೆ ಕೊನೆಗೊಂಡಿದೆ.

- **ಎಲ್ಲರಿಗೂ ಸಮಾನ ಅವಕಾಶಗಳು:** ಭಾರತದ ಡಿಜಿಟಲ್ ಆರ್ಥಿಕತೆಯು ಎಂಎಸ್‌ಎಂಇಗಳು ಮತ್ತು ಸಣ್ಣ ಉದ್ಯಮಿಗಳನ್ನು ಹಿಂದೆಂದಿಗಿಂತಲೂ ಉತ್ತಮವಾಗಿ ಸಬಲೀಕರಣಗೊಳಿಸುತ್ತಿದೆ. ಒಎನ್‌ಡಿಸಿ (ಓಪನ್ ನೆಟ್‌ವರ್ಕ್ ಫಾರ್ ಡಿಜಿಟಲ್ ಕಾಮರ್ಸ್) ಒಂದು ಕ್ರಾಂತಿಕಾರಿ ವೇದಿಕೆಯಾಗಿದ್ದು, ಇದು ಖರೀದಿದಾರರ ಮತ್ತು ಮಾರಾಟಗಾರರ ವಿಶಾಲ ಮಾರುಕಟ್ಟೆಯೊಂದಿಗೆ ತಡೆರಹಿತ ಸಂಪರ್ಕ ಒದಗಿಸುವ ಮೂಲಕ ಅವಕಾಶಗಳ ಹೊಸ ಕಿಟಕಿ ತೆರೆದಿದೆ. ಜಿಇಎಂ (ಸರಕಾರಿ ಇ–ಮಾರ್ಕೆಟ್ ಪ್ಲೇಸ್) ಸಾಮಾನ್ಯ ಜನರಿಗೆ ಸರಕಾರದ ಎಲ್ಲಾ ಇಲಾಖೆಗಳಿಗೆ ಸರಕು ಮತ್ತು ಸೇವೆಗಳನ್ನು ಮಾರಾಟ ಮಾಡಲು ಅನುವು ಮಾಡಿಕೊಡುತ್ತದೆ. ಇದು ಜನಸಾಮಾನ್ಯರಿಗೆ ದೊಡ್ಡ ಮಾರುಕಟ್ಟೆ ಒದಗಿಸುವುದಲ್ಲದೆ, ಸರಕಾರಕ್ಕೆ ಹಣ ಉಳಿಸುತ್ತದೆ.

ಇದನ್ನು ಕಲ್ಪಿಸಿಕೊಳ್ಳಿ– ನೀವು ಮುದ್ರಾ ಸಾಲಕ್ಕೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುತ್ತೀರಿ. ನಿಮ್ಮ ಸಾಲದ ಅರ್ಹತೆಯನ್ನು ಖಾತೆ ಸಂಗ್ರಾಹಕ ಚೌಕಟ್ಟಿನ ಮೂಲಕ ನಿರ್ಣಯಿಸಲಾಗುತ್ತದೆ. ನೀವು ಸಾಲ ಪಡೆಯುತ್ತೀರಿ ಮತ್ತು ನಿಮ್ಮ ಉದ್ಯಮ ಪ್ರಾರಂಭಿಸುತ್ತೀರಿ. ನೀವು ಜಿಇಎಂನಲ್ಲಿ ನೋಂದಾಯಿಸಿಕೊಳ್ಳುತ್ತೀರಿ, ಶಾಲೆಗಳು ಮತ್ತು ಆಸ್ಪತ್ರೆಗಳಿಗೆ ಸರಬರಾಜು ಮಾಡುತ್ತೀರಿ ಮತ್ತು ನಂತರ ಒಎನ್‌ಡಿಸಿ ಮೂಲಕ ಉದ್ಯಮ ವಿಸ್ತರಿಸುತ್ತೀರಿ. ಒಎನ್‌ಡಿಸಿ ಇತ್ತೀಚೆಗೆ 20 ಕೋಟಿ ವಹಿವಾಟುಗಳನ್ನು ದಾಟಿದೆ, ಕೊನೆಯ 10 ಕೋಟಿ ವಹಿವಾಟುಗಳು ಕೇವಲ ಆರು ತಿಂಗಳಲ್ಲಿ ನಡೆದಿವೆ. ಬನಾರಸಿ ನೇಕಾರರಿಂದ ಹಿಡಿದು ನಾಗಾಲ್ಯಾಂಡಿನ ಬಿದಿರು ಕುಶಲಕರ್ಮಿಗಳವರೆಗೆ, ಮಾರಾಟಗಾರರು ಈಗ ಮಧ್ಯವರ್ತಿಗಳು ಅಥವಾ ಡಿಜಿಟಲ್ ಏಕಸ್ವಾಮ್ಯವಿಲ್ಲದೆ ದೇಶಾದ್ಯಂತ ಗ್ರಾಹಕರನ್ನು ತಲುಪುತ್ತಿದ್ದಾರೆ.

ಜಿಇಎಂ 50 ದಿನಗಳಲ್ಲಿ 1 ಲಕ್ಷ ಕೋಟಿ ರು. ಜಿಎಂವಿ ದಾಟಿದೆ, ಇದರಲ್ಲಿ 1.8 ಲಕ್ಷಕ್ಕೂ ಹೆಚ್ಚು ಮಹಿಳಾ ನೇತೃತ್ವದ ಎಂಎಸ್‌ಎಂಇಗಳು ಸೇರಿದಂತೆ 22 ಲಕ್ಷ ಮಾರಾಟಗಾರರು 46,000 ಕೋಟಿ ರು. ಮೌಲ್ಯದ ಬೇಡಿಕೆಗಳನ್ನು ಪೂರೈಸಿದ್ದಾರೆ.

- **ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ:** ಆಧಾರ್, ಕೋವಿನ್, ಡಿಜಿಲಾಕರ್ ಮತ್ತು ಫಾಸ್ಟ್ಯಾಗ್‌ನಿಂದ 'ಪಿಎಂ–ವಾಣಿ' ಮತ್ತು 'ಒಂದು ದೇಶ, ಒಂದು ಚಂದಾದಾರಿಕೆ'ಯವರೆಗೆ ಭಾರತದ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯವು ಈಗ ಜಾಗತಿಕವಾಗಿ ಅಧ್ಯಯನಕ್ಕೆ ಒಳಗಾಗುತ್ತಿದೆ ಮತ್ತು ಅಳವಡಿಸಿಕೊಳ್ಳಲ್ಪಡುತ್ತಿದೆ. ಕೋವಿನ್ ವಿಶ್ವದ ಅತಿದೊಡ್ಡ ಲಸಿಕೆ ಅಭಿಯಾನವನ್ನು ಸಕ್ರಿಯಗೊಳಿಸಿತು, 220 ಕೋಟಿ ಕ್ಯೂಆರ್–ಪರಿಶೀಲಿಸಬಹುದಾದ ಪ್ರಮಾಣಪತ್ರಗಳನ್ನು ನೀಡಿತು. 54 ಕೋಟಿ ಬಳಕೆದಾರರನ್ನು ಹೊಂದಿರುವ ಡಿಜಿಲಾಕರ್, 775 ಕೋಟಿಗೂ ಹೆಚ್ಚು ದಾಖಲೆಗಳನ್ನು ಸರಾಗ ಮತ್ತು ಸುರಕ್ಷಿತವಾಗಿರಿಸಿದೆ.

ನಮ್ಮ ಜಿ–20 ಅಧ್ಯಕ್ಷತೆ ಮೂಲಕ, ಭಾರತವು ಜಾಗತಿಕ ಡಿಪಿಐ ಭಂಡಾರ ಮತ್ತು 25 ದಶಲಕ್ಷ ಸಾಮಾಜಿಕ ಪರಿಣಾಮ ನಿಧಿ ಪ್ರಾರಂಭಿಸಿತು, ಇದು ಆಫ್ರಿಕಾ ಮತ್ತು ದಕ್ಷಿಣ ಏಷ್ಯಾದ್ಯಂತದ ರಾಷ್ಟ್ರಗಳಿಗೆ ಅಂತರ್ಗತ ಡಿಜಿಟಲ್ ಪರಿಸರ ವ್ಯವಸ್ಥೆ ಅಳವಡಿಸಿಕೊಳ್ಳಲು ಸಹಾಯ ಮಾಡುತ್ತದೆ.

- **'ಆತ್ಮನಿರ್ಭರ ಭಾರತ' ಸಂಕಲ್ಪದ ಈಡೇರಿಕೆ:** ಭಾರತ ಈಗ 1.8 ಲಕ್ಷಕ್ಕೂ ಹೆಚ್ಚು ನವೋದ್ಯಮಗಳನ್ನು ಹೊಂದಿರುವ ವಿಶ್ವದ ಅಗ್ರ 3 ನವೋದ್ಯಮ ಪೂರಕ ವ್ಯವಸ್ಥೆಗಳಲ್ಲಿ ಒಂದಾಗಿದೆ. ಆದರೆ, ಇದು ಕೇವಲ ನವೋದ್ಯಮ ಚಳವಳಿಗಿಂತ ಹೆಚ್ಚಿನದಾಗಿದೆ, ಇದು ತಂತ್ರಜ್ಞಾನದ ಪುನರುಜ್ಜೀವನವಾಗಿದೆ. ನಮ್ಮ ಯುವಜನರಲ್ಲಿನ ಕೃತಕ ಬುದ್ಧಿಮತ್ತೆ (ಎಐ) ಕೌಶಲ ಮತ್ತು ಎಐ ಪ್ರತಿಭೆಯ ವಿಷಯದಲ್ಲಿ ಭಾರತ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. 1.2 ಶತಕೋಟಿ ಇಂಡಿಯಾ ಎಐ ಮಿಷನ್ ಮೂಲಕ, ಭಾರತ ಜಾಗತಿಕವಾಗಿ ಪ್ರತಿ ಗಂಟೆಗೆ 1/ಜಿಪಿಯುಗಿಂತ ಕಡಿಮೆ ಬೆಲೆಯಲ್ಲಿ 34,000 ಜಿಪಿಯುಗಳಿಗೆ ಪ್ರವೇಶ ಸಕ್ರಿಯಗೊಳಿಸಿದೆ, ಇದು ಭಾರತವನ್ನು ಅಗ್ಗದ ಅಂತರ್ಜಾಲ ಆರ್ಥಿಕತೆ ಮಾತ್ರವಲ್ಲದೆ ಅತ್ಯಂತ ಕೈಗೆಟುಕುವ ಗಣನೆಯ ತಾಣವನ್ನಾಗಿ ಮಾಡಿದೆ.

ಭಾರತವು ಮಾನವೀಯತೆಗೆ ಮೊದಲ ಆದ್ಯತೆ ನೀಡುವ ಎಐ ಅನ್ನು ಪ್ರತಿಪಾದಿಸಿದೆ. ಎಐ ಕುರಿತ ನವದೆಹಲಿ ಘೋಷಣೆಯು ಜವಾಬ್ದಾರಿಯೊಂದಿಗೆ ನಾವೀನ್ಯವನ್ನು ಉತ್ತೇಜಿಸುತ್ತದೆ. ನಾವು ದೇಶಾದ್ಯಂತ ಎಐ ಶ್ರೇಷ್ಠತಾ ಕೇಂದ್ರಗಳನ್ನು ಸ್ಥಾಪಿಸುತ್ತಿದ್ದೇವೆ.

- **ಮುಂದಿನ ಹಾದಿ:** ಮುಂದಿನ ದಶಕ ಇನ್ನಷ್ಟು ಪರಿವರ್ತನಾತ್ಮಕವಾಗಿರುತ್ತದೆ. ನಾವು ಡಿಜಿಟಲ್ ಆಡಳಿತದಿಂದ ಜಾಗತಿಕ ಡಿಜಿಟಲ್ ನಾಯಕತ್ವದತ್ತ, 'ಭಾರತ ಮೊದಲು' ಎಂಬುದರಿಂದ 'ಜಗತ್ತಿಗೆ ಭಾರತ ಮೊದಲು' ಎಂಬುದರತ್ತ ಸಾಗುತ್ತಿದ್ದೇವೆ. ಡಿಜಿಟಲ್ ಇಂಡಿಯಾ ಕೇವಲ ಸರಕಾರಿ ಕಾರ್ಯಕ್ರಮವಾಗಿ ಉಳಿದಿಲ್ಲ, ಅದು ಜನಾಂದೋಲನವಾಗಿ ಮಾರ್ಪಟ್ಟಿದೆ. ಆತ್ಮನಿರ್ಭರ ಭಾರತ ನಿರ್ಮಿಸುವಲ್ಲಿ ಮತ್ತು ಭಾರತವನ್ನು ಜಗತ್ತಿಗೆ ವಿಶ್ವಾಸಾರ್ಹ ನಾವೀನ್ಯದ ಪಾಲುದಾರನನ್ನಾಗಿ ಮಾಡುವಲ್ಲಿ ಇದು ಕೇಂದ್ರಬಿಂದುವಾಗಿದೆ.

ಎಲ್ಲಾ ನಾವೀನ್ಯಕಾರರು, ಉದ್ಯಮಿಗಳು ಮತ್ತು ಕನಸುಗಾರರಿಗೆ ನಾನು ಹೇಳುವುದಿಷ್ಟೇ: ಮುಂದಿನ ಮಹತ್ವದ ಡಿಜಿಟಲ್ ಸಾಧನೆಗಾಗಿ ಜಗತ್ತು ಭಾರತದತ್ತ ನೋಡುತ್ತಿದೆ. ಯಾವುದು ಸಶಕ್ತಗೊಳಿಸುತ್ತದೋ ಅದನ್ನು ನಾವು ನಿರ್ಮಿಸೋಣ. ನಿಜವಾಗಿಯೂ ಮುಖ್ಯವಾದುದನ್ನು ಪರಿಹರಿಸೋಣ. ಒಗ್ಗೂಡಿಸುವ, ಒಳಗೊಳ್ಳುವ ಮತ್ತು ಉನ್ನತಿಗೇರಿಸುವ ತಂತ್ರಜ್ಞಾನದೊಂದಿಗೆ ನಾವು ಮುನ್ನಡೆಯೋಣ.

(ಲೇಖಕರು ಭಾರತದ ಪ್ರಧಾನ ಮಂತ್ರಿ)

ಒದುಗರ ಒಣಿ

ಒದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಇದುವೇ ಪತ್ರಿಕಾಧರ್ಮ

ತುರ್ತು ಪರಿಸ್ಥಿತಿಯನ್ನು ಖಂಡಿಸುವ ಲೇಖನಗಳ ಜತೆಗೆ, ಅದನ್ನು ಸಮರ್ಥಿಸುವ ಅಭಿಪ್ರಾಯಗಳನ್ನುಳ್ಳ ಸರಣಿ ಲೇಖನವನ್ನೂ ಪ್ರಕಟಿಸಿರುವುದು (ಡಾ. ಟಿ. ಎನ್.ವಾಸುದೇವಮೂರ್ತಿ ಅವರ 'ಭಿನ್ನಭಾವ' ಲೇಖನ ಮಾಲೆ, ಜೂನ್ 30 ಮತ್ತು ಜುಲೈ 1) 'ವಿಶ್ವವಾಣಿ'ಯ ಪಕ್ಷಪಾತರಹಿತ ನಡೆಗೆ ಸಾಕ್ಷಿ. ಇದುವೇ ಪತ್ರಿಕಾಧರ್ಮ. ವಿಶ್ವೇಶ್ವರ ಭಟ್ಟರು ಸಾರಥ್ಯ ವಹಿಸಿದ್ದ ಎಲ್ಲ ಪತ್ರಿಕೆಗಳಲ್ಲೂ ಈ ನಡೆ ಗೋಚರವಾಗಿತ್ತಾದರೂ ಇದೀಗ ಅವರದೇ ಪತ್ರಿಕೆ ಆಗಿರುವುದರಿಂದ ಭಟ್ಟರು ತಮ್ಮ ಸ್ವಾತಂತ್ರ್ಯದ ಗರಿಷ್ಠ ಸದುಪಯೋಗ ಪಡೆಸಿಕೊಳ್ಳುತ್ತಿರುವುದು ಎದ್ದು ಕಾಣುತ್ತಿದೆ. ಭಟ್ಟರೇ, ಕೀಪ್ ಇಟ್ ಅಪ್! ಎಮರ್ಜೆನ್ಸಿಯ ಅವಧಿಯಲ್ಲಿ ನಾನು ರಾಯಚೂರಿನ ಪ್ರತಿಷ್ಠಿತ ಕರ್ನಾಟಕ ಸಂಘದ ಕಾರ್ಯದರ್ಶಿಯಾಗಿದ್ದಾಗ, 'ತುರ್ತು ಪರಿಸ್ಥಿತಿ ಅನಿವಾರ್ಯವೇ?' ಎಂಬ ವಿಷಯ ಕುರಿತು ಸಾರ್ವಜನಿಕ ಸಂವಾದವನ್ನು ಸಂಘದ ಆವರಣದಲ್ಲಿ ಏರ್ಪಡಿಸಿದ್ದೆವು. ಜಿಲ್ಲಾಧಿಕಾರಿ ಮತ್ತು ಪೊಲೀಸ್ ವರಿಷ್ಠಾಧಿಕಾರಿಯೂ ವೇದಿಕೆಯಲ್ಲಿದ್ದು, ಇತರ ಗಣ್ಯರೊಡನೆ ಚರ್ಚೆಯಲ್ಲಿ ಭಾಗವಹಿಸಿದ್ದರು. ಮುಕ್ತವಾಗಿ ನಡೆದ ಆ ಬಿಸಿಬಿಸಿ ಚರ್ಚೆಯು ಯಾವುದೇ ಅಡ್ಡಿ ಆತಂಕಗಳಿಲ್ಲದೆ ಯಶಸ್ವಿಯಾಗಿ ಸಂಪನ್ನಗೊಂಡಿತು. ಇದನ್ನೀಗ ಏಕೆ ಹೇಳುತ್ತಿದ್ದೇನೆಂದರೆ, ತುರ್ತು ಪರಿಸ್ಥಿತಿಯ ಹೇರಿಕೆ ಎಂಬ ಅಕೃತ್ಯಕ್ಕೆ ಇಂದಿರಾ ಗಾಂಧಿ ಹೊಣೆಯಾದರೂ ನಂತರದ ಕುಕೃತ್ಯಗಳಲ್ಲಿ ಅಂದಿನ ಅನೇಕ ರಾಜಕಾರಣಿಗಳ ಮತ್ತು ಅಧಿಕಾರಿಗಳ ಪಾತ್ರವೂ ಸಾಕಷ್ಟಿತ್ತು. ಅದೇ ವೇಳೆ, ಎಮರ್ಜೆನ್ಸಿಯ ಬೆಂಕಿಯು ಪ್ರಜೆಗಳನ್ನು ಸುಡದಂತೆ ನೋಡಿಕೊಂಡ ರಾಜಕಾರಣಿಗಳು ಮತ್ತು ಅಧಿಕಾರಿಗಳು ಕೂಡ ಸಾಕಷ್ಟು ಇದ್ದರು. ನಂತರದ ವರ್ಷಗಳಲ್ಲಿ ನಾನು ಗಮನಿಸಿದ ಮತ್ತು ನನಗೆ ಕಡುಕೋಪ ತಂದ ಸಂಗತಿಯೆಂದರೆ, ಎಮರ್ಜೆನ್ಸಿಯನ್ನು ಖಂಡಿಸಿದ್ದ ಹಲವು ರಾಜಕಾರಣಿಗಳು ಕಾಂಗ್ರೆಸ್ ಪಕ್ಷ ಸೇರಿ ಅಧಿಕಾರಗಳನ್ನು ಅನುಭವಿಸಿದರು! ಈಗ ಅವರ ಫ್ಯಾಮಿಲಿಯ ಹಲವರು ಮತ್ತೆ ಬಿಜೆಪಿ ಸೇರಿದ್ದಾರೆ! ನಮ್ಮ ದೇಶದಲ್ಲಿ ಮಾನ, ಮರ್ಯಾದೆ, ನೈತಿಕತೆ ಈ ಮೂರನ್ನೂ ಬಿಟ್ಟವರೆಂದರೆ ಬಹುಸಂಖ್ಯೆಯ ರಾಜಕಾರಣಿಗಳು.

– **ಎಚ್. ಆನಂದರಾಮ ಶಾಸ್ತ್ರೀ** ಬೆಂಗಳೂರು

ಇವರು ಪ್ರಾತಃಸ್ಮರಣೀಯರು

ಕನ್ನಡದ ಮೊದಲ ಪತ್ರಿಕೆ 'ಮಂಗಳೂರು ಸಮಾಚಾರ'ವನ್ನು ಸಂಪಾದಿಸಿ ಪ್ರಕಟಿಸಿದ ರೆವರೆಂಡ್ ಹರ್ಮನ್ ಮೋಗ್ಲಿಂಗ್ ಅವರನ್ನು ನೆನೆದು ಲೇಖನ ಬರೆದ (ಜುಲೈ 1) ಚಂದ್ರಶೇಖರತನಯ ಅವರಿಗೆ ಧನ್ಯವಾದಗಳು. ಕನ್ನಡದ ದಾಸ ಸಾಹಿತ್ಯವನ್ನು (ಸುಮಾರು 170 ಕೀರ್ತನೆಗಳನ್ನು) ಮತ್ತು 3000 ಕನ್ನಡ ಗಾದೆಗಳನ್ನು ಮೊಟ್ಟಮೊದಲಿಗೆ ಸಂಗ್ರಹಿಸಿ ಪ್ರಕಟಿಸಿದ ಶ್ರೇಯವೂ ಮೋಗ್ಲಿಂಗ್ ಅವರಿಗೆ ಸಲ್ಲುತ್ತದೆ.

– **ಲಕ್ಷ್ಮಣ್ ಗೊರ್ಲಕಟ್ಟೆ** ಮೈಸೂರು

ಒದುಗರ ಒಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

- **ಗುರುನಾರಾಯಣ ಪಾತಪಲ್ಲಿ, (ಇಮೇಲ್ ಮೂಲಕ)**
  ಭಟ್ರೇ, ರಾಜಕಾರಣಿಗಳಿಗೆ ಯಾವ ವಿಷಯವನ್ನೂ ವಿವಾದವಿಲ್ಲದೇ ಬಗೆಹರಿಸಲು ಬರುವುದಿಲ್ಲವಾ?
  – **ಬೆಂಕಿ ಹಚ್ಚಿದರೆ ಚಳಿ ಕಾಯಿಸಿಕೊಳ್ಳ ಬಹುದಲ್ಲ ಎಂಬ ಯೋಚನೆ ಅಷ್ಟೇ!**

- **ಎಂ.ವಿ.ಭಟ್, ಹೊನ್ನಾವರ**
  ಭಟ್ರೇ, ನಿಮ್ಮನ್ನು ಹವ್ಯಕರ ನೆತನ್ಯಾಹು ಅಂತ ಕರೀತಾರಲ್ಲ?
  – **ಇಲ್ಲಿ ಹಮಾಸ್ ಉಗ್ರರು ಯಾರು ಎಂಬುದನ್ನು ಹೇಳಬಾರದೇ?!**

- **ಲೀಲಾವತಿ ಹಾಸ್ಯಗಾರ, ಬೆಂಗಳೂರು**
  ಭಟ್ರೇ, ಮದುವೆಯಾಗುವುದರ ಒಂದು ಲಾಭ ಏನು?
  – **ಒಂದೇ ವ್ಯಕ್ತಿಯಿಂದ ಜೀವನವಿಡೀ ಕಿರಿಕಿರಿ ಅನುಭವಿಸಬಹುದು!**

- **ವಿನಾಯಕ ಬಸರೂರು, (ಇಮೇಲ್ ಮೂಲಕ)**
  ಭಟ್ರೇ, ಹೆಂಡತಿ ಹೇಳಿದ್ದಕ್ಕೆಲ್ಲ ಗಂಡಂದಿರು ಓಕೆ ಅಂತಾರೆ, ಆದರೂ ಬೇಸರ ಮಾಡಿಕೊಳ್ತಾರಲ್ಲಾ?
  – **ಹೂಂ.. ಅದೊಂಥರಾ ಟರ್ಮ್ಸ್ ಅಂಡ್ ಕಂಡೀಷನ್ ಡ್ರಾಫ್ಟ್ ಇದ್ದ ಹಾಗೆ. ಕೊನೆಯಲ್ಲಿ 'ಐ ಅಗ್ರಿ' ಎನ್ನಲೇಬೇಕಲ್ಲ?!**

- **ರವಿ ಕಣಾಜೆ, ಕುಂದಾಪುರ**
  ಭಟ್ರೇ, ಒಳ್ಳೆಯ ಮತ್ತು ಮೃದು ಸ್ವಭಾವದ ಹೆಂಡತಿಯನ್ನು ದೇವರು ಜಗತ್ತಿನ ಎಲ್ಲ ಮೂಲೆಗಳಲ್ಲೂ ಸೃಷ್ಟಿಸಿದ್ದಾನೆ ಅಂತಾರಲ್ಲ?
  – **ಅದಿರಲಿ, ಆ ದೇವರು ಈ ಭೂಮಿಯನ್ನು ಮೂಲೆಗಳಿಲ್ಲದೇ ವೃತ್ತಾಕಾರವಾಗಿ ಯಾಕೆ ಮಾಡಿದ್ದಾನಂತೆ?!**

- **ಶರತ್ ಸಾಗರ, ಶಿವಮೊಗ್ಗ**
  ಭಟ್ರೇ, ಜೀವನದಲ್ಲಿ ಏಳಿ ಅಂದ್ರೆ ಬೀಳುತ್ತಾರಲ್ಲ?
  – **ಬೀಳದೇ ಲವ್ ಮಾಡಲು ಆಗುವುದಿಲ್ಲವಲ್ಲ?!**

- **ವಿನೋದ ಶೆಟ್ಟಿಗಾರ, (ಇಮೇಲ್ ಮೂಲಕ)**
  ಭಟ್ರೇ, ಹೆಂಡತಿಯ ಮೇಲೆ ಗೂಬೆ ಕೂರಿಸಬೇಕು ಅಂದ್ರೆ ಏನು ಮಾಡಬೇಕು?
  – **ನಾನು ಹೆಂಡತಿಯನ್ನು ಕೇಳದೆ ಏನನ್ನೂ ಮಾಡುವುದಿಲ್ಲ ಎಂದು ಹೇಳಿ, ಎಲ್ಲ ನಿರ್ಧಾರಗಳನ್ನೂ ತೆಗೆದುಕೊಳ್ಳಬೇಕು!**

- **ರಾಜೀವ ಹೆಗಡೆ, ಯಲ್ಲಾಪುರ**
  ಭಟ್ರೇ, ಯಶಸ್ವಿ ದಾಂಪತ್ಯದ ಎರಡು ಸೂತ್ರಗಳೇನು?
  – **ಯಾವತ್ತೂ ಹೆಂಡತಿಯೇ ಸರಿ ಎಂದು ಭಾವಿಸಬೇಕು ಮತ್ತು ಅವಳು ತಪ್ಪು ಎಂದು ಮನವರಿಕೆ ಯಾದರೆ ನಿಮ್ಮ ಕೆನ್ನೆಗೆ ಬಾರಿಸಿ ಕೊಂಡು ಮೊದಲ ಸೂತ್ರವನ್ನು ಇನ್ನೊಮ್ಮೆ ಓದಬೇಕು!**

- **ಸುಮಿತ್ರಾ, ನಾರಾಯಣ, ಬೆಂಗಳೂರು**
  ಭಟ್ರೇ, ನನ್ನ ವಾರಭವಿಷ್ಯದಲ್ಲಿ 'ಸುಗಮ ಸಂಚಾರ ಯೋಗ' ಎಂದಿದೆ. ನೀವಾದರೂ ಬಿಡಿಸಿ ಹೇಳಬಾರದಾ?
  – **ಹಾಗಾದ್ರೆ, ಬಿಎಂಟಿಸಿ ಬಸ್ಸಿನಲ್ಲಿ, ಮೆಟ್ರೋದಲ್ಲಿ ಯಾರಿಗೂ ಕಿಂಚಿತ್ತೂ ತಾಕಿಸಿಕೊಳ್ಳದೇ ಪ್ರಯಾಣ ಮಾಡುವ ಭಾಗ್ಯ ಒದಗಿಬಂದಿದೆ!**

ಆಟೋ-ಬೈಕ್ ಟ್ಯಾಕ್ಸಿ ಡಿಕ್ಕಿ ತಪ್ಪಿಸಬಾರದೇಕೆ?

ಲೋಕಮತ
ಲೋಕೇಶ್ ಕಾಯರ್ಗ
vveditoped@gmail.com
kaayarga@gmail.com

ಬಾಡಿಗೆ ಆಟೋ, ಟ್ಯಾಕ್ಸಿ, ಬೈಕ್‌ಗಳಲ್ಲಿ ಸಂಚರಿಸುವಾಗ ಚಾಲಕರನ್ನು ಮಾತಿಗೆಳೆಯುವುದು ನನ್ನ ಅಭ್ಯಾಸ. 'ನಿಮ್ದು ಯಾವೂರು' ಎಂದು ಕೇಳಿದರೆ ಕೆಲವರು 'ನಮ್ದು ಇಲ್ಲೇ' ಎಂದು ಚುಟುಕಾಗಿ ಮುಗಿಸುತ್ತಾರೆ. ಅವರ ಧ್ವನಿಯಲ್ಲಿಯೇ ಅವರ ಮಾತಿನ ಆಸಕ್ತಿ ಉಳ್ಳವರೋ ಇಲ್ಲವೋ ಎಂದು ತಿಳಿಯುತ್ತದೆ. ಕೆಲವರು, ನಮ್ಮ ಮಾತು ಆರಂಭಿಸಲು ಕಾಯ್ತಾ ಇರ್ತಾರೆ. ಯಾವೂರು ಎಂದರೆ ಸಾಕು, ಅವರ ಊರು, ಕುಟುಂಬ, ಅಲ್ಲಿನ ಸಮಸ್ಯೆ, ಇಲ್ಲಿನ ಸಂಕಟ ಎಲ್ಲವನ್ನೂ ಒಂದೇ ಬಾರಿಗೆ ಉಸುರಿ ಬಿಡುತ್ತಾರೆ. ವಾಹನದಿಂದ ಇಳಿಯುವ ಹೊತ್ತಿಗೆ ಅವರ ಪೂರ್ಣ ಪ್ರವರ ನಿಮ್ಮಲ್ಲಿರುತ್ತದೆ. ಇನ್ನು ಕೆಲವರು, ವಾಹನ ಏರುವ ಮುನ್ನವೇ 'ಇಷ್ಟು ಎಕ್ಸ್‌ಟ್ರಾ ಕೊಡಿ, ವಾಪಸ್ ಬರುವಾಗ ಯಾರೂ ಸಿಗುವುದಿಲ್ಲ' ಎಂದು ಹೇಳಿ ನಿಮ್ಮ ಮೂಡ್ ಆಫ್ ಮಾಡಿ ಬಿಡುತ್ತಾರೆ. ಇನ್ನು ಕೆಲವರಿಗೆ ಬೈಕ್ ಸವಾರರು, ಪೊಲೀಸರು, ನಾಯಕರ ಮೇಲೆ ಸಿಟ್ಟು, ಅದೆಲ್ಲವನ್ನೂ ನಿಮ್ಮ ಮುಂದೆ ಕಾರಿಕೊಳ್ಳುತ್ತಾರೆ. ಪತ್ರಕರ್ತರಾದವರಿಗೆ ಇವೆಲ್ಲವೂ ಅನುಭವ ದ್ರವ್ಯಗಳು.

ಒಂದೆರಡು ತಿಂಗಳ ಹಿಂದಿನ ಮಾತು. ರಾತ್ರಿ ಆರ್.ಆರ್. ನಗರದ ನಮ್ಮ ಕಚೇರಿಯಿಂದ ಬೆಂಗಳೂರು ಸೆಟಲೈಟ್ ಬಸ್ ನಿಲ್ದಾಣಕ್ಕೆ ಬೈಕ್ ಟ್ಯಾಕ್ಸಿ ಹಿಡಿದಿದ್ದೆ. ಯಾವೂರು ಎಂದಿದ್ದಕ್ಕೆ 'ಮಂಡ್ಯ' ಎಂದ ಯುವಕನಿಗೆ 'ಮಂಡ್ಯದಲ್ಲಿ ಎಲ್ಲಿ' ಎಂದು ಮರು ಪ್ರಶ್ನೆ ಕೇಳಿದ್ದೆ. ಪಾಂಡವಪುರ ಎಂದ ಆತ ಬಳಿಕ ಬಳಿಕ ತಾನೇ ಮಾತಿಗೆ ಶುರು ಹಚ್ಚಿಕೊಂಡಿದ್ದ. ಆತನ ಹೆಸರು ಜಗದೀಶ. ಡಿಗ್ರಿ ಪಾಸಾಗಿ ನಾಲ್ಕೈದು ವರ್ಷದಿಂದ ಖಾಸಗಿ ಕಂಪನಿಯಲ್ಲಿ ದುಡಿಯುತ್ತಿದ್ದ. ಮಾಸಿಕ 40 ಸಾವಿರಗಳಷ್ಟು ಸಂಪಾದನೆ ಇತ್ತು. ''ಅರ್ಧ ಎಕರೆ ಜಮೀನಿದೆ ಸಾರ್. ಅತ್ಲಾಗೂ ಇಲ್ಲ, ಇತ್ಲಾಗೂ ಇಲ್ಲ. ನನ್ನ ದುಡಿಮೆಯಲ್ಲಿಯೇ ತಂಗಿ ಮದುವೆ ಮಾಡ್ಬೇಕು. ಬೆಳಿಗ್ಗೆ 9ರಿಂದ ಸಂಜೆ 5ರ ತನಕ ಆಫೀಸ್‌ನಲ್ಲಿ ದುಡೀತೀನಿ. ಆರರಿಂದ 12 ಗಂಟೆ ತನಕ ಬೈಕ್ ಓಡಿಸ್ತೀನಿ. ಪರವಾಗಿಲ್ಲ ಸಾರ್, ಕೆಲವು ದಿನ ಒಳ್ಳೆಯ ಸಂಪಾದನೆ ಇರ್ತದೆ. ಕೆಲ ದಿನ ಅಷ್ಟಕ್ಕಷ್ಟೇ'' ಅಂದ. ಆಗಲೇ ಬೈಕ್ ಟ್ಯಾಕ್ಸಿ ನಿಷೇಧದ ಕೂಗು ಜೋರಾಗಿತ್ತು. ''ಬ್ಯಾನ್ ಮಾಡಿದ್ರೆ ಏನು ಮಾಡೋಕಾಗುತ್ತೆ ಸಾರ್, ದುಡಿದು ತಿನ್ನುವ ವರಿಗೆ ಅಷ್ಟಿಷ್ಟು ಕೈ ಸಂಪಾದನೆಗೆ ಇದೊಂದು ಅವಕಾಶ. ನಾವೇನೂ ಲಂಚ ಹೊಡೆಯಕ್ಕಾಗಲ್ಲ, ದರೋಡೆಗಿಳಿಯೊಕ್ಕಾಗಲ್ಲ..'' ಎಂದ.

ತಂಗಿಗಾಗಿ ದಿನದ 14 ತಾಸು ಎಡೆಬಿಡದೆ ದುಡಿಯುತ್ತಿದ್ದ ಜಗದೀಶ ಈಗ ಏನು ಮಾಡುತ್ತಿದ್ದಾನೋ ಗೊತ್ತಿಲ್ಲ. ಬೈಕ್ ಟ್ಯಾಕ್ಸಿಗೆ ಹೈಕೋರ್ಟ್ ನಿಷೇಧ ಹೇರಿ 15 ದಿನಗಳ ಮೇಲಾಯಿತು. ಜಗದೀಶನಂತೆ ನಾನಾ ವೃತ್ತಿಯಲ್ಲಿದ್ದುಕೊಂಡು ಬದುಕಿನ ಬಂಡಿ ಎಳೆಯಲು ಬದಲಿ ಮಾರ್ಗಗಳನ್ನು ಆಶ್ರಯಿಸಿದ್ದ ರಾಜ್ಯದ ಲಕ್ಷಾಂತರ ಯುವಕರು ಈಗ ಏನು ಮಾಡುತ್ತಿದ್ದಾರೋ ಗೊತ್ತಿಲ್ಲ. ಆದರೆ, ''ನಾವೇನು ದರೋಡೆ ಮಾಡೋಕಾಗುತ್ತಾ..'' ಎಂಬ ಆತನ ಮಾತು ಈಗಲೂ ನನ್ನ ಮನಸ್ಸಿನಲ್ಲಿ ಅಚ್ಚೊತ್ತಿ ಬಿಟ್ಟಿದೆ. ಮನೆಯ ಜವಾಬ್ದಾರಿ ಹೊತ್ತು ಬೆಂಗಳೂರಿನಂತಹ ಮಹಾನಗರದಲ್ಲಿ 15 ಸಾವಿರದಿಂದ 40-50 ಸಾವಿರಕ್ಕೆ ದುಡಿಯುವ ಯುವಕರಿಗೆ ತಮ್ಮ ಹೊರೆ ಇಳಿಸಿಕೊಳ್ಳಲು ಇರುವ ಮಾರ್ಗಗಳು ಅಷ್ಟಕ್ಕಷ್ಟೇ. ವೃತ್ತಿಯನ್ನು ಆಧರಿಸಿ ಘನತೆಯನ್ನು ಅಳೆಯುವ ದೇಶದಲ್ಲಿ ಪಾಶ್ಚಾತ್ಯರಂತೆ ಸಿಕ್ಕಿದ ಉದ್ಯೋಗಗಳೆಲ್ಲವನ್ನೂ ಮಾಡುವಂತಿಲ್ಲ. ಅಲ್ಲಿನಂತೆ ಗಂಟೆಗಳ ಲೆಕ್ಕದಲ್ಲಿ ದುಡಿಯುವ ಅವಕಾಶಗಳೂ ಇಲ್ಲ.

ಇಲ್ಲಿ ಜಗದೀಶನಂಥವರು ಮಾತ್ರ ಅಲ್ಲ. ಬೈಕ್ ಟ್ಯಾಕ್ಸಿ ಓಡಿಸಿಕೊಂಡೇ ತಮ್ಮ ವಿದ್ಯಾಭ್ಯಾಸದ ಖರ್ಚನ್ನು ನೋಡಿಕೊಂಡವರಿದ್ದಾರೆ. ಯಾವುದೋ ಕೋರ್ಸಿಗೆ ಸೇರಿಕೊಂಡು ಬೈಕ್ ಟ್ಯಾಕ್ಸಿ ಓಡಿಸುತ್ತಲೇ ಅಪ್ಪ- ಅಮ್ಮನಿಗೆ ಹೊರೆಯಾಗದಂತೆ ಅಥವಾ ಅವರನ್ನೂ ಸಾಕುತ್ತಲೇ ತಮ್ಮ ವಿದ್ಯೆಯ ದಾರಿ ಕಂಡುಕೊಂಡವರಿದ್ದಾರೆ. ಓಲಾ, ಉಬರ್, ರ‍್ಯಾಪಿಡೋ ಬುಕ್ ಮಾಡಿದಾಗ ಅವರ ಹೆಸರು ನೋಡಿದಾಗಲೇ ಅವರು ಇಂಥಾ ರಾಜ್ಯದವರೆಂದು ಗುರುತಿಸಬಹುದು. ಹೊರ ರಾಜ್ಯದವರ ಪೈಕಿ ನಾನು ಮಾತನಾಡಿಸಿದವರಲ್ಲಿ ಹೆಚ್ಚಿನವರು ವಿದ್ಯಾರ್ಥಿಗಳಾಗಿದ್ದರು, ಇಲ್ಲವೇ ಸಣ್ಣ ಪುಟ್ಟ ಉದ್ಯೋಗ ಹಿಡಿದವರಾಗಿದ್ದರು. ಈಗ ಇವರೆಲ್ಲರ ಸಂಪಾದನೆಯ ದಾರಿಗಳು ಬಂದ್ ಆಗಿವೆ. ಬೈಕ್ ಟ್ಯಾಕ್ಸಿ ಸಂಘಟನೆಗಳ ಪ್ರಕಾರ ಬೆಂಗಳೂರು ಒಂದರಲ್ಲಿಯೇ 1 ಲಕ್ಷಕ್ಕೂ ಅಧಿಕ ಗಿಗ್ ಕಾರ್ಮಿಕರು ಬೈಕ್ ಟ್ಯಾಕ್ಸಿ ಸೇವೆಯನ್ನು ಅವಲಂಬಿಸಿದ್ದರು. ನಿಷೇಧದಿಂದಾಗಿ ಇವರೆಲ್ಲರೂ ನಿರುದ್ಯೋಗಿಗಳಾಗಿದ್ದಾರೆ. ಇವರನ್ನು ನಂಬಿದ ಕುಟುಂಬಗಳೂ ಮಕ್ಕಳ ಶಾಲಾ ಶುಲ್ಕ, ಬಾಡಿಗೆ ಮತ್ತು ಆಹಾರಕ್ಕಾಗಿ ಪರದಾಡುತ್ತಿವೆ.

ಬೆಂಗಳೂರಿನಂತಹ ನಗರಗಳಲ್ಲಿ ಬೈಕ್ ಟ್ಯಾಕ್ಸಿಗಳು ಮಿತವ್ಯಯದ ಮತ್ತು ಸುಲಭವಾಗಿ ಲಭ್ಯವಿರುವ ಸಾರಿಗೆ ಆಯ್ಕೆಯಾಗಿದ್ದವು. ಟ್ರಾಫಿಕ್ ದಟ್ಟಣೆಯನ್ನು ತಪ್ಪಿಸಲು ಮತ್ತು ತಮ್ಮ ಆಯ್ಕೆಯ ಗಮ್ಯವನ್ನು ತ್ವರಿತವಾಗಿ ಸೇರಲು ಬೈಕ್ ಟ್ಯಾಕ್ಸಿಗಳು ಸಾರ್ವಜನಿಕರಿಗೆ ಅನುಕೂಲವಾಗಿತ್ತು. ವಿದ್ಯಾರ್ಥಿಗಳು, ಕಚೇರಿ ಉದ್ಯೋಗಿಗಳು, ಸಣ್ಣ ವ್ಯಾಪಾರಿಗಳು ಮತ್ತು ದಿನಗೂಲಿ ಕಾರ್ಮಿಕರು ಸೇರಿದಂತೆ ಪ್ರತಿದಿನ ಲಕ್ಷಾಂತರ ಪ್ರಯಾಣಿಕರು ಈ ಸೇವೆಯನ್ನು ಬಳಸುತ್ತಿದ್ದರು. ನಿಷೇಧದಿಂದ ಅವರ ಪ್ರಯಾಣ ವೆಚ್ಚ ಹೆಚ್ಚಾಗಿದೆ. ಪರ್ಯಾಯ ಮಾರ್ಗಗಳು ಸೀಮಿತವಾಗಿವೆ.

ಹೈಕೋರ್ಟ್‌ನಲ್ಲಿ ಬೈಕ್ ಟ್ಯಾಕ್ಸಿ ನಿಷೇಧ ಆದೇಶ ತಡೆ ಕೋರಿದ ಅರ್ಜಿಗೆ ಪುರಸ್ಕಾರ ಸಿಕ್ಕಿಲ್ಲ. ಮೋಟಾರ್ ವಾಹನ ಕಾಯಿದೆ 1988 ರ ಸೆಕ್ಷನ್ 93 ರ ಅಡಿಯಲ್ಲಿ ಬೈಕ್ ಟ್ಯಾಕ್ಸಿಗಳ ಕಾರ್ಯಾಚರಣೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಯಾವುದೇ ನಿರ್ದಿಷ್ಟ ನಿಯಮಗಳನ್ನು ಅಥವಾ ಮಾರ್ಗಸೂಚಿಗಳನ್ನು ರೂಪಿಸಿಲ್ಲ. ಈ ಕಾರಣದಿಂದ ವೈಯಕ್ತಿಕ ನೋಂದಣಿ ಹೊಂದಿರುವ ದ್ವಿಚಕ್ರ ವಾಹನಗಳನ್ನು ವಾಣಿಜ್ಯ ಉದ್ದೇಶಗಳಿಗಾಗಿ ಬಳಸುವುದು ಕಾನೂನು ಉಲ್ಲಂಘನೆ. ಸರಕಾರವು ಸೂಕ್ತ ನಿಯಮಗಳನ್ನು ರೂಪಿಸುವವರೆಗೂ ಬೈಕ್ ಟ್ಯಾಕ್ಸಿಗಳ ಕಾರ್ಯಾಚರಣೆಯನ್ನು ಅನುಮತಿಸಲು ಸಾಧ್ಯವಿಲ್ಲ ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ. ವಾದ- ಪ್ರತಿವಾದದ ಸಂದರ್ಭದಲ್ಲಿ ಈ ಆದೇಶದಿಂದ ಸಾವಿರಾರು ಯುವಕರ ಬದುಕಿನ ದಾರಿಗೆ ತೊಂದರೆಯಾಗಲಿದೆ ಎಂಬ ವಾದವನ್ನು ನ್ಯಾಯಪೀಠವೂ ಒಪ್ಪಿಕೊಂಡಿದೆ. ಈ ಕಾರಣಕ್ಕಾಗಿಯೇ ಸೂಕ್ತ ನಿಯಮಾವಳಿ ರಚಿಸಲು ರಾಜ್ಯ ಸರಕಾರಕ್ಕೆ ಹಲವು ಬಾರಿ ಗಡುವು ನೀಡಿತ್ತು. ಆದರೆ ಸರಕಾರ ಬೈಕ್ ಟ್ಯಾಕ್ಸಿ ಕಾರ್ಯಾಚರಣೆಗೆ ಸಂಬಂಧಿಸಿ ಯಾವುದೇ ನಿಯಮಗಳನ್ನು ರೂಪಿಸುವ ಉದ್ದೇಶ ಇಲ್ಲ ಎಂದು ಸ್ಪಷ್ಟಪಡಿಸಿದೆ.

ಅಹವಾಲು ಹೊತ್ತು ಯಾರೇ ಬಂದರೂ ಅದನ್ನು ಆಲಿಸಬೇಕಾಗಿರುವುದು ಚುನಾಯಿತ ಸರಕಾರದ ಕೆಲಸ. ಆದರೆ ಬೈಕ್ ಟ್ಯಾಕ್ಸಿ ವಿಚಾರದಲ್ಲಿ ಸಿಎಂ ಸಿದ್ದರಾಮಯ್ಯ ಅವರಾಗಲಿ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಾಗಲಿ ಈ ತನಕ ಯಾವುದೇ ಪ್ರತಿಕ್ರಿಯೆ ನೀಡಿಲ್ಲ ಎನ್ನುವುದು ಗಮನಾರ್ಹ. ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಅವರು ''ವೈಯಕ್ತಿಕ ನೋಂದಣಿ ಹೊಂದಿರುವ ದ್ವಿಚಕ್ರ ವಾಹನಗಳನ್ನು ವಾಣಿಜ್ಯ ಉದ್ದೇಶಗಳಿಗಾಗಿ ಬಳಸುವುದನ್ನು ಸರಕಾರ ವಿರೋಧಿಸುತ್ತದೆ. ಬೈಕ್ ಟ್ಯಾಕ್ಸಿಗಳು ಪ್ರಯಾಣಿಕರಿಗೆ, ವಿಶೇಷವಾಗಿ ಮಹಿಳೆಯರಿಗೆ ಸುರಕ್ಷಿತ ಸಾರಿಗೆ ವಿಧಾನವಲ್ಲ' ಎಂದು ಹೇಳಿದ್ದಾರೆ. ಹಾಗೆಂದು ಮೋಟಾರು ವಾಹನ ನಿಯಮ ತಿದ್ದುಪಡಿ ಮಾಡಿ ಸುರಕ್ಷತೆಯನ್ನು ಖಾತರಿಗೊಳಿಸಬೇಕೆಂಬ ಬೇಡಿಕೆಗೆ ಮಣೆ ಹಾಕಲು ಅವರು ಸಿದ್ದರಿಲ್ಲ.

ಸಾರಿಗೆ ಸುರಕ್ಷತೆ ಎಷ್ಟು ಮುಖ್ಯವೋ ಸಮರ್ಪಕ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸಬೇಕಾಗಿರುವುದು ಸರಕಾರದ ಕರ್ತವ್ಯ. ಬೈಕ್ ಟ್ಯಾಕ್ಸಿ ನಿಷೇಧಿಸಿದ ಸರಕಾರ ಸಾರ್ವಜನಿಕರ ಅನುಕೂಲಕ್ಕೆ ತಕ್ಕಂತೆ ಪರ್ಯಾಯ ಸಾರಿಗೆಯ ವ್ಯವಸ್ಥೆ ಮಾಡಿದ್ದರೆ ಈ ನಡೆಯನ್ನು ಒಪ್ಪಿಕೊಳ್ಳಬಹುದಿತ್ತು. ಆದರೆ ಬೆಂಗಳೂರಿನ ಅರ್ಧಕ್ಕಿಂತ ಹೆಚ್ಚು ಬಡಾವಣೆಗಳಿಗೆ ಇನ್ನೂ ಸಾರ್ವಜನಿಕ ಸಾರಿಗೆಯ ಅನುಕೂಲವಿಲ್ಲ. ಇಲ್ಲಿ ಬಸ್ ಬಿಡಿ, ರಿಕ್ಷಾ ಕೂಡ ಹೋಗಲಾರದ ಅದೆಷ್ಟೋ ಇಕ್ಕಟ್ಟಾದ, ಜನನಿಬಿಡ ಬಡಾವಣೆಗಳಿವೆ. ಇವರು ಈಗಲೂ ಬೇಸಿಗೆ, ಮಳೆ, ಚಳಿಯನ್ನು ಸಹಿಸಿಕೊಂಡು ಕಿ.ಮೀ.ಗಟ್ಟಲೆ ನಡೆದು ಬಸ್ ಅಥವಾ ಮೆಟ್ರೊ ಹಿಡಿಯಬೇಕಾದ ಅನಿವಾರ್ಯತೆ ಇದೆ.

ದುಬಾರಿಯಾದರೂ ಬೆಂಗಳೂರಿನ ಉದ್ಯೋಗಸ್ಥರು, ವಿದ್ಯಾರ್ಥಿಗಳು ಈಗ ಮೆಟ್ರೊ ರೈಲು ನೆಚ್ಚಿಕೊಂಡಿದ್ದಾರೆ. ಆದರೆ ನಾಲ್ಕೈದು ಕಿ.ಮೀ ದೂರವಿರುವ ತಮ್ಮ ಬಡಾವಣೆಗಳಿಂದ ಮೆಟ್ರೋ ಸ್ಟೇಷನ್ ತನಕ ಬರಬೇಕಾದರೆ ನಿಯಮಿತವಾಗಿ ಬಸ್ ಸೌಕರ್ಯಗಳಿಲ್ಲ. ಇದ್ದರೂ 'ಶಕ್ತಿ'ಯುತ ಮಹಿಳೆಯರಿಂದ ತುಂಬಿ ತುಳುಕುವ ಬಸ್‌ಗಳೇ ಹೆಚ್ಚು. ತಮ್ಮ ದ್ವಿಚಕ್ರವನ್ನು ವಾಹನದಲ್ಲಿ ಮೆಟ್ರೋ ತಲುಪುವ ಎಂದರೆ ಪಾರ್ಕಿಂಗ್‌ನದ್ದೇ ದೊಡ್ಡ ತಲೆ ನೋವು. ಇವರೆಲ್ಲರೂ ಅನ್ಯ ಮಾರ್ಗಗಳಿಲ್ಲದೆ ಆಟೋ ಅಣ್ಣಂದಿರನ್ನು ಆಶ್ರಯಿಸಲೇಬೇಕು.

ಬೈಕ್ ಟ್ಯಾಕ್ಸಿಗಳನ್ನು ಖಂಡತುಂಡವಾಗಿ ವಿರೋಧಿಸುವ ರಿಕ್ಷಾ ಚಾಲಕರ ಸಂಘಗಳು, ಈ ಬೆಳವಣಿಗೆಯ ಬಳಿಕವಾದರೂ, ಗ್ರಾಹಕರೊಂದಿಗೆ ಸೌಜನ್ಯದೊಂದಿಗೆ ವರ್ತಿಸುವ, ಅವರು ಕರೆದಲ್ಲಿಗೆ ಬರುವ, ಬಾಡಿಗೆ ವಿಚಾರದಲ್ಲಿ ಜಗಳಕ್ಕಿಳಿಯದಿರುವ ನಿರ್ಣಯ ಅಂಗೀಕರಿಸಿದ್ದರೆ ನಾಗರಿಕರಿಗೆ ತೊಂದರೆ ಇರುತ್ತಿರಲಿಲ್ಲ. ಆದರೆ ಬೈಕ್ ಟ್ಯಾಕ್ಸಿ ಸ್ಥಗಿತಗೊಂಡ ಬಳಿಕ ಬಹುತೇಕ ಕಡೆಗಳಲ್ಲಿ ಆಟೋ ಕನಿಷ್ಠ ಬಾಡಿಗೆ ದರ 50 ರು.ಗಳಿಗೇರಿದೆ. ಈ ಬಗ್ಗೆ ನಾಗರಿಕರಿಂದ ದೂರುಗಳು ಬರುತ್ತಲೇ ಇವೆ. ಜುಲೈ ಒಂದರ ಒಂದೇ ದಿನ ಸಾರಿಗೆ ಇಲಾಖೆ ಅಧಿಕಾರಿಗಳು ಅಧಿಕ ಪ್ರಯಾಣ ದರ ವಸೂಲಿ ಮಾಡಿದ ಆರೋಪದಲ್ಲಿ 299 ಪ್ರಕರಣ ದಾಖಲಿಸಿಕೊಂಡು, 114 ಆಟೋಗಳನ್ನು ಜಪ್ತಿ ಮಾಡಿದ್ದಾರೆ. ಅಂದರೆ ಬೆಂಗಳೂರಿನಾದ್ಯಂತ ವಸೂಲಿ ಪ್ರಮಾಣ ಯಾವ ಪ್ರಮಾಣದಲ್ಲಿರಬಹುದು ನೀವೇ ಊಹಿಸಿ.

ಹೊಟ್ಟೆಪಾಡಿಗೆ ಆಟೋ ಓಡಿಸುವವರನ್ನು ದೂರುವುದು ನನ್ನ ಉದ್ದೇಶವಲ್ಲ. ನಿಯತ್ತಾಗಿ ಒಂದು ರುಪಾಯಿ ಚಿಲ್ಲರೆ ಬಾಕಿ ಇದ್ದರೂ ಮರಳಿಸುವ, ದಾರಿ ಗೊತ್ತಿಲ್ಲದ ಊರಿಗೆ ತಾವೇ ಕರೆದುಕೊಂಡು ಹೋಗಿ ಸುರಕ್ಷಿತವಾಗಿ ತಲುಪಿಸುವ ಆಟೋ ಚಾಲಕರನ್ನು ಕಂಡಿದ್ದೇನೆ. ಕೇಳಿದ್ದೇನೆ. ಆದರೆ ಆಟೋ ಏರಿದಲ್ಲಿಂದ ಇಳಿಯುವ ತನಕ ನಮ್ಮಲ್ಲಿನ ಹಿಂಜರಿಕೆ ಭಾವ ಲಾಗಾಯ್ತಿನಿಂದ ಬಂದದ್ದು. ದುರದೃಷ್ಟವಶಾತ್ ಅದು ಈಗಲೂ ಮುಂದುವರಿದಿದೆ.

ಇಲ್ಲಿ ಪ್ರಧಾನ ತಪ್ಪು ಬಾಡಿಗೆ ಆಟೋ ಚಾಲಕರು ಅಥವಾ ಸ್ವಂತ ಬಳಕೆಗೆಂದು ಖರೀದಿಸಿದ ದ್ವಿಚಕ್ರ ವಾಹನವನ್ನು ಬಾಡಿಗೆಗೆ ಬಳಸುವ ಬೈಕ್ ಟ್ಯಾಕ್ಸಿಯವರದ್ದಲ್ಲ. ಇವರನ್ನು ಬಳಸಿಕೊಂಡು ಅಗ್ರಿಗೇಟರ್ ಸಂಸ್ಥೆಗಳು ಈಗಲೂ ಕುಳಿತಲ್ಲಿಯೇ ಲಾಭ ಮಾಡಿಕೊಳ್ಳುತ್ತಿವೆ. ಆದರೆ ನೀತಿ, ನಿಯಮ ರೂಪಿಸಬೇಕಾದ, ಕಾನೂನಿನ ಉಲ್ಲಂಘನೆಯನ್ನು ನೋಡಿಯೂ ಕಣ್ಣು ಮುಚ್ಚಿ ಕೂರುವ ಸರಕಾರವೇ ಇಲ್ಲಿ ಮುಖ್ಯ ಆರೋಪಿ. ಇದಕ್ಕೂ ಕಾಯಿದೆಯ ನೆಪ ಹೇಳುತ್ತಿರುವುದು ದಿಕ್ಕು ತಪ್ಪಿಸುವ ತಂತ್ರ. 2021ರಲ್ಲಿ ರಾಜ್ಯ ಸರಕಾರವೇ ಇ-ಬೈಕ್ ಟ್ಯಾಕ್ಸಿ ನೀತಿಯನ್ನು ಪರಿಚಯಿಸಿತ್ತು, ಆದರೆ ಸುರಕ್ಷತೆ ಮತ್ತು ದುರುಪಯೋಗದ ನೆಪದಲ್ಲಿ 2024ರಲ್ಲಿ ಈ ಆದೇಶ ವಾಪಸ್ ಪಡೆದಿತ್ತು. ಇದರ ಹಿಂದಿದ್ದ ಒತ್ತಡಗಳೇನೆನ್ನುವುದು ನಾವು ಊಹಿಸಲಾಗದ ವಿಚಾರಗಳಲ್ಲ.

ಕೇಂದ್ರ ಸರಕಾರದ ಮೋಟಾರು ವಾಹನ ಕಾಯ್ದೆ 1988ರ ಅಡಿಯಲ್ಲಿ ದ್ವಿಚಕ್ರ ವಾಹನಗಳನ್ನು 'ಗುತ್ತಿಗೆ ಸಾರಿಗೆ' (ಕಾಂಟ್ರಾಕ್ಟ್ ಕ್ಯಾರೇಜ್) ಎಂದು ಬಳಸಲು ಅವಕಾಶವಿದೆ. ಬೈಕ್‌ಗಳನ್ನು ಟ್ಯಾಕ್ಸಿಯಾಗಿ ಬಳಸಲು ಕಾನೂನಿನಲ್ಲಿ ಅವಕಾಶವಿದೆ ಎಂದು ಕೇಂದ್ರ ಸರಕಾರವೇ ಸ್ಪಷ್ಟಪಡಿಸಿದೆ. ಆದರೆ, ಇದರ ನಿಯಮಾವಳಿಗಳನ್ನು ರೂಪಿಸುವ ಮತ್ತು ಪರವಾನಗಿ ನೀಡುವ ಅಧಿಕಾರವನ್ನು ರಾಜ್ಯ ಸರಕಾರಗಳಿಗೆ ನೀಡಲಾಗಿದೆ.

ಕೇಂದ್ರ ಸರಕಾರವು 2016ರಲ್ಲಿಯೇ ಟ್ಯಾಕ್ಸಿ ಸಂಬಂಧಿತ ಮಾರ್ಗಸೂಚಿಗಳನ್ನು ಮುಂದಿಟ್ಟಿದೆ. ಅದರಲ್ಲಿ ಬೈಕ್ ಟ್ಯಾಕ್ಸಿಗಳಿಗೂ ಅವಕಾಶ ನೀಡುವ ಪ್ರಸ್ತಾಪವೂ ಇದೆ. ಸರ್ವರಿಗೂ ಸಾರ್ವಜನಿಕ ಸಾರಿಗೆ ಇಲ್ಲವೇ ಅಗ್ಗದ ಸಾರಿಗೆ ವ್ಯವಸ್ಥೆ ಕಲ್ಪಿಸಲು ಸಾಧ್ಯವಿಲ್ಲ. ಈ ಕಾರಣದಿಂದ ಬೈಕ್ ಟ್ಯಾಕ್ಸಿಗಳಿಗೆ ಅನುಮತಿ ನೀಡಬಹುದೆನ್ನುವುದು ಕೇಂದ್ರ ಸರಕಾರದ ನಿಲುವು. ರಾಜ್ಯ ಸರಕಾರವೇ ತನ್ನ ಅಫಿಡವಿಟ್ ನಲ್ಲಿ ತಿಳಿಸಿರುವಂತೆ ಮಹಾರಾಷ್ಟ್ರ, ತೆಲಂಗಾಣ, ಉತ್ತರ ಪ್ರದೇಶ, ರಾಜಸ್ಥಾನ, ಗೋವಾ ಸೇರಿದಂತೆ ಸುಮಾರು ಎಂಟು ರಾಜ್ಯಗಳು ಸೂಕ್ತ ನಿಯಮಾವಳಿ ರೂಪಿಸಿ ಬೈಕ್ ಟ್ಯಾಕ್ಸಿಗಳಿಗೆ ಅನುಮತಿ ನೀಡಿವೆ.

ಹಾಗಿದ್ದರೆ ಕರ್ನಾಟಕದಲ್ಲಿ ಈ ನಿಯಮ ರೂಪಿಸಲು ಸರಕಾರದ ಕೈಯನ್ನು ಜಗ್ಗುತ್ತಿರುವ ಶಕ್ತಿಗಳು ಯಾವುದೆಂದು ಸಿಎಂ ಸಿದ್ದರಾಮಯ್ಯ ಅವರೇ ಸ್ಪಷ್ಟಪಡಿಸಬೇಕು. ಉದ್ಯೋಗ ಕಳೆದುಕೊಂಡಿರುವ ಬೈಕ್ ಟ್ಯಾಕ್ಸಿ ಸವಾರರು ಖುದ್ದು ಸಿಎಂ ಅವರನ್ನು ಕಂಡು ಕಣ್ಣೀರಿಟ್ಟು ಮನವಿ ಅರ್ಪಿಸಿದ್ದಾರೆ. ಆದರೆ ಸಿದ್ದರಾಮಯ್ಯ ಅವರು ಈ ತನಕ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಗಿಗ್ ಕಾರ್ಮಿಕರ ಬಗ್ಗೆ ವಿಶೇಷ ಕಾಳಜಿ ತೋರಿಸುವ, ಅವರ ರಕ್ಷಣೆಗಾಗಿ ವಿಶೇಷ ಯೋಜನೆ ರೂಪಿಸಬೇಕೆಂದು ಸಲಹೆ ನೀಡಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಾಗಲಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಾಗಲಿ ಬೈಕ್ ಟ್ಯಾಕ್ಸಿ ಸವಾರರ ಪತ್ರಕ್ಕೆ ಸ್ಪಂದಿಸಿಲ್ಲ.

ಕರ್ನಾಟಕದಲ್ಲಿ ಕಾಂಗ್ರೆಸ್ ಶಾಸಕರ ಅಹವಾಲಿಗೆ ಸ್ಪಂದಿಸಲು ಹೈಕಮಾಂಡ್ ಪ್ರತಿನಿಧಿ ರಣದೀಪ್ ಸುರ್ಜೇವಾಲಾ ಕಳೆದ ಮೂರ್ನಾಲ್ಕು ದಿನಗಳಿಂದ ಬೆಂಗಳೂರಿನಲ್ಲಿ ಬೀಡು ಬಿಟ್ಟಿದ್ದಾರೆ. ಎಲ್ಲರನ್ನೂ ಖುದ್ದಾಗಿ ಕರೆದು ಸಮಸ್ಯೆಗಳು ಮತ್ತು ಬೇಡಿಕೆಗಳ ಬಗ್ಗೆ ವಿಚಾರಿಸುತ್ತಿದ್ದಾರೆ. ಈ ಶಾಸಕರ ಬೇಡಿಕೆ ಅವರ ಹೊಟ್ಟೆಪಾಡಿನದ್ದಾಗಿರಲು ಸಾಧ್ಯವೇ ಇಲ್ಲ. ಆದರೆ ರಾಜ್ಯದ ಕೋಟ್ಯಂತರ ಪ್ರಯಾಣಿಕರು ಮತ್ತು ಲಕ್ಷಾಂತರ ಸವಾರರ ಸುರಕ್ಷತೆ ಮತ್ತು ಜೀವನೋಪಾಯಕ್ಕೆ ಸಂಬಂಧಿಸಿದ ಬೈಕ್ ಟ್ಯಾಕ್ಸಿಯ ಪ್ರಶ್ನೆಯನ್ನು ಕಾನೂನಿನ ಚೌಕಟ್ಟಿನಲ್ಲಿ ಬಗೆಹರಿಸುವುದು ಮತ್ತು ಆಟೋ-ಬೈಕ್ ಟ್ಯಾಕ್ಸಿ ಸವಾರರ ನಡುವಣ ಸಂಭಾವ್ಯ ಘರ್ಷಣೆಯನ್ನು ತಪ್ಪಿಸುವುದು ಸರಕಾರದ ಕರ್ತವ್ಯ. ಪ್ರಜೆಗಳಿಂದ ಆಯ್ಕೆಯಾದ ಸರಕಾರ, ತನಗೆ ಇದರಲ್ಲಿ ಆಸಕ್ತಿ ಇಲ್ಲ ಎನ್ನುವುದಾದರೆ ಈ ಸರಕಾರದ ಮೇಲೆ ಜನರೇ ನಿರಾಸಕ್ತಿ ತಾಳುತ್ತಾರೆ. ಇದರಲ್ಲಿ ಸಂಶಯವಿಲ್ಲ.



ಹೃದಯರಂಗೋಲಿ
ಮರಿಲಿಂಗಗೌಡ ಮಾಲಿಪಾಟೀಲ್

ಘಾಸಿಗೊಳ್ಳುತ್ತಿದೆ ಹೃದಯ, ಕೈ ಮೀರುತ್ತಿದೆ ಸಮಯ

ಕೈ ಕೊಡುತ್ತಿರುವ ಹೃದಯ... ಬಾಗಲಕೋಟೆಯ ಶಿಕ್ಷಕ ಕಾಶೀರಾಯ ಹಿಪ್ಪರಗಿ ಅವರಿಗೆ ವಯಸ್ಸು 48. ಕರ್ತವ್ಯದಲ್ಲಿದ್ದ ಅವರಿಗೆ ಬೆಳಗ್ಗೆ ಪ್ರಾರ್ಥನಾ ಸಮಯದಲ್ಲಿ ಹಠಾತ್ ಹೃದಯಾಘಾತ ಸಂಭವಿಸಿತು. ಆಸ್ಪತ್ರೆಗೆ ಕರೆದುಕೊಂಡು ಹೋದರೂ ಚಿಕಿತ್ಸೆ ಫಲಿಸಲಿಲ್ಲ. ಬೆಂಗಳೂರಿನ ಖಾಸಗಿ ಕಂಪನಿಯಲ್ಲಿ ಕೆಲಸದಲ್ಲಿದ್ದ ಹಾಸನದ ಸುಪ್ರಿಯಾಗೆ 22 ವರ್ಷ. ಕೆಲಸದ ಜತೆಗೆ ಮುಕ್ತ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಾ, ಬದುಕಿನಲ್ಲಿ ಏನನ್ನಾದರೂ ಸಾಧಿಸಬೇಕೆಂಬ ಮಹತ್ವಾಕಾಂಕ್ಷೆ ಹೊಂದಿದ್ದ ಈಕೆಗೆ ಮನೆಯಲ್ಲಿದ್ದಾಗ ಎದೆನೋವು ಕಾಣಿಸಿಕೊಂಡಿತು. ಪೋಷಕರು ಆಸ್ಪತ್ರೆಗೆ ಕರೆದೊಯ್ಯುವ ಮೊದಲೇ ಜವರಾಯ ಆಕೆಯನ್ನು ತನ್ನೊಂದಿಗೆ ಕರೆದೊಯ್ದ...

ಮೇಲಿನ 2 ಸುದ್ದಿಗಳು ಸ್ಯಾಂಪಲ್ ಮಾತ್ರ. ಹಾಸನ ಜಿಲ್ಲೆಯೊಂದರಲ್ಲೇ ಕಳೆದೊಂದು ತಿಂಗಳಲ್ಲಿ, 20ರಿಂದ 38ರವರೆಗಿನ ಹರೆಯದ 21 ಜನರು ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ವರದಿಯ ಪ್ರಕಾರ ಕಳೆದ 2 ವರ್ಷಗಳಲ್ಲಿ 507 ಹೃದಯಾಘಾತಗಳು ಸಂಭವಿಸಿದ್ದು, ಇದರಲ್ಲಿ 140 ಪ್ರಕರಣಗಳು ಸಾವಿನಲ್ಲಿ ಪರ್ಯವಸಾನಗೊಂಡಿವೆ. ವಯಸ್ಸಿನ ಭೇದವಿಲ್ಲದೆ, ಬಡವ-ಬಲ್ಲಿದ ತಾರತಮ್ಯವಿಲ್ಲದೆ ಹೃದಯಾಘಾತ ಸಂಭವಿಸಿದೆ. 9ನೇ ತರಗತಿಯ ವಿದ್ಯಾರ್ಥಿಯೂ ಇಂಥ ಸಾವಿಗೀಡಾಗುವುದಕ್ಕಿಂತ ದೊಡ್ಡ ದುರಂತ ಇನ್ನೇನಿದೆ?

ಪ್ರತಿದಿನವೂ ಹೃದಯಾಘಾತದ ಸುದ್ದಿ ಅಪ್ಪಳಿಸುತ್ತಿದೆ. ಆರೋಗ್ಯವಂತರಾಗಿಯೇ ಇರುವ ಎಳೆಯ ಪ್ರಾಯದವರನ್ನೂ ಜವರಾಯ ಕೈಬೀಸಿ ಕರೆಯುತ್ತಿದ್ದಾನೆ. ಹೃದಯಾಘಾತಕ್ಕೆ ಬಲಿಯಾಗುತ್ತಿರುವ ಯುವಜನರ ಸಂಖ್ಯೆ ಕಳವಳ ಮೂಡಿಸುವಷ್ಟು ಹೆಚ್ಚಾಗಿದೆ. 25ರ ಹರೆಯದ ವರನೊಬ್ಬ ತನ್ನ ಮದುವೆಯ ಶಾಸ್ತ್ರಗಳು ನಡೆಯುತ್ತಿರುವಾಗಲೇ ಮೃತಪಟ್ಟ ಎಂದರೆ ಅದಕ್ಕಿಂತ ದುರ್ದೈವವಿದೆಯೇ?

ಹಿಂದೆಲ್ಲಾ ಅಕಾಲಿಕ ಸಾವುಗಳಿಗೆ ಸ್ಪಷ್ಟ ಕಾರಣಗಳಿರುತ್ತಿದ್ದವು. ಅಪಘಾತದಿಂದಾದ ಸಾವುಗಳಿಗೆ ಹಾಗೆ ಸತ್ತವರ ನಿರ್ಲಕ್ಷ್ಯವೂ ಕಾರಣವಾಗಿರುತ್ತಿತ್ತು. ಧೂಮಪಾನ, ಮದ್ಯಪಾನ, ಸ್ಥೂಲಕಾಯದಿಂದಾಗಿ ಹೃದಯಾಘಾತ ಸಂಭವಿಸಿದ ಬಗ್ಗೆ ಕೇಳುತ್ತಿದ್ದೆವು. ಆಗೆಲ್ಲಾ, 'ವ್ಯಾಯಾಮ ಮಾಡಿ, ದೈಹಿಕ ಚಟುವಟಿಕೆಗಳತ್ತ ಗಮನಕೊಡಿ' ಎನ್ನುವ ಸಲಹೆಗಳಿಗೆ ಬೆಲೆ ಇರುತ್ತಿತ್ತು. 'ಮಾನವಜನ್ಮ ದೊಡ್ಡದು, ಅದನ್ನು ಕೈಯಾರೆ ಹಾಳುಮಾಡಿಕೊಳ್ಳಬೇಡಿ' ಎಂಬ ಹಿರಿಯರ ಮಾತನ್ನು ಉದಾಹರಿಸಿ ನಾವು ಯಾರಿಗಾದರೂ ಸಲಹೆಯಿತ್ತರೆ ಅದಕ್ಕೊಂದು ಅರ್ಥವಿರುತ್ತಿತ್ತು. ಈಗ ಎಲ್ಲವೂ ಪಲ್ಲಟವಾಗಿದೆ. 'ಫಿಟ್‌ನೆಸ್‌ಗೆ ಉದಾಹರಣೆ' ಎಂಬಂತಿದ್ದವರೇ, ಜವರಾಯ ಕರೆದಾಗ ಚಿಕಿತ್ಸೆಗೂ ಅವಕಾಶವಿಲ್ಲದಂತೆ ಬದುಕಿಗೆ 'ಗುಡ್‌ಬೈ' ಹೇಳಿ ನಡೆದುಬಿಟ್ಟರು. ಧೂಮಪಾನ, ಮದ್ಯಪಾನಗಳ ಗೋಜಿಗೆ ಹೋಗದವರು ಕೂಡ ಹೃದಯಾಘಾತಕ್ಕೊಳಗಾಗಿ ಇಹಲೋಕದ ವ್ಯಾಪಾರ ಮುಗಿಸಿದರು. ಆಗಷ್ಟೇ ಜವಾಬ್ದಾರಿಗಳಿಗೆ ತೆರೆದುಕೊಳ್ಳುತ್ತಿದ್ದವರೂ 40ರ ಹರೆಯಕ್ಕೇ ನಿರ್ಗಮಿಸಿ, ತಮ್ಮನ್ನೇ ನೆಚ್ಚಿದ್ದವರನ್ನು ಬದುಕಿನ ಅರ್ಧದಾರಿಯಲ್ಲಿ ಬಿಟ್ಟುಹೋದರು. ಇದಕ್ಕೆಲ್ಲ ಬದುಕಿನ ಸಹಜ ಒತ್ತಡವೇ ಕಾರಣವೇನೋ ಎಂದುಕೊಂಡರೆ, ಬದುಕಿನ ಸವಾಲುಗಳಿಗೆ ಒಡ್ಡಿಕೊಳ್ಳುವ ಮುನ್ನವೇ 20ರ ಹರೆಯದಲ್ಲೇ ಹೃದಯಾಘಾತಕ್ಕೆ ತುತ್ತಾಗಿ ಅಸುನೀಗುವವರ ಪ್ರಕರಣಗಳಿಗೆ ಏನನ್ನುವುದು? ಒಟ್ಟಿನಲ್ಲಿ ಜವರಾಯನಿಗೆ ಕಾರಣ ಬೇಕಿಲ್ಲ, ಹೃದಯಾಘಾತ ಒಂದು ನೆಪವಷ್ಟೇ ಎಂಬ ವೇದಾಂತದ ಮಾತಿಗೆ ಶರಣಾಗುವುದರ ಹೊರತಾಗಿ ಬೇರೇನು ದಾರಿಯಿದೆ?

''ಹಿಂದೆಯೂ ಸಾವುಗಳು ಸಂಭವಿಸುತ್ತಿದ್ದವು, ಆದರೆ ಅವು ವರದಿಯಾಗುತ್ತಿರಲಿಲ್ಲ ಅಥವಾ ವರದಿಯಾಗಿದ್ದನ್ನು ಜನರು ಗಮನಿಸುತ್ತಿರಲಿಲ್ಲ. ಆದರೆ ಕರೋನಾ ಮಹಾಮಾರಿಯ ಬಳಿಕ ಸಾವಿನ ಸುದ್ದಿಗಳ ಬಗ್ಗೆ ಜನರು ಹೆಚ್ಚೆಚ್ಚು ಸ್ಪಂದಿಸುತ್ತಿದ್ದಾರೆ, ಮಾಧ್ಯಮಗಳೂ ಅವನ್ನು 'ಹೈಪ್' ಮಾಡುತ್ತಿವೆ. ಹೀಗಾಗಿ ಸಾವಿನ ಸುದ್ದಿಗಳು ಜನರ ಮನಸ್ಸಿಗೆ ಲಗ್ಗೆ ಹಾಕುತ್ತಿವೆ. ಈಗ ಸಾವಿನ ಸುದ್ದಿಗಳಿಗೆ ಸ್ಪಂದನೆ ಹೆಚ್ಚಾಗಿದೆಯಷ್ಟೇ ಹೊರತು, ಸಾವುಗಳ ಸಂಖ್ಯೆ ಮೊದಲಿನಂತೇ ಇದೆ'' ಎಂದು ಕೆಲವರು ಹೇಳುತ್ತಾರೆ. ಆದರೆ, ವರ್ತಮಾನದ ಪ್ರಕರಣಗಳನ್ನು ಗಮನಿಸಿದರೆ, ಸಾವಿನ ಸಂಖ್ಯೆ ಹೆಚ್ಚಾಗಿರುವುದೇ ಸತ್ಯ ಎನಿಸುತ್ತದೆ. ಮುಂಚೆಯೆಲ್ಲಾ, ಸಾವಿನ ಸುದ್ದಿಗಳು ದೂರದೂರದಿಂದ ವರದಿಯಾಗುತ್ತಿದ್ದವು. ಆದರೀಗ, ಸನಿಹದಿಂದಲೇ ಬರಲಾರಂಭಿಸಿವೆ. ನಮಗೆ ತಿಳಿದವರೇ, ನಿನ್ನೆ-ಮೊನ್ನೆ ಒಡನಾಡಿದವರೇ, ಮುಂದಿನವಾರ ಸೇರೋಣ ಎಂದವರೇ ಇದ್ದಕ್ಕಿದ್ದಂತೆ ಸಾಯುತ್ತಿದ್ದಾರೆ. ಇದಕ್ಕೆ ಕಾರಣ ಹೃದಯಾಘಾತವೇ ವಿನಾ, ದೀರ್ಘಕಾಲಿಕ ಅನಾರೋಗ್ಯವಲ್ಲ. ಹೀಗಿರುವಾಗ, 'ಇದು ಮಾಧ್ಯಮದ ಹೈಪ್' ಎಂಬ ಮಾತಿಗೆ ಅರ್ಥವಿಲ್ಲ.

ವೈದ್ಯರೊಂದಿಗಿನ ಖಾಸಗಿ ಮಾತುಕತೆಗಳಲ್ಲಿ, ಜಾಲತಾಣಗಳಲ್ಲಿ, ಸಂಜೆಯ ಹರಟೆಗಳಲ್ಲಿ ಇಂಥ ಸಾವುಗಳಿಗಿರುವ ವಿವಿಧ ಕಾರಣಗಳ ಬಗ್ಗೆ ಚರ್ಚೆಯಾಗುತ್ತಿದೆ. ಅತಿಯಾದ ವ್ಯಾಯಾಮ, ಧೂಮಪಾನ, ಮದ್ಯಪಾನ, ಜಂಕ್‌ಫುಡ್ ಸೇವನೆ ಮಾತ್ರವಲ್ಲದೆ, ವೈದ್ಯರ ಶಿಫಾರಸಿಲ್ಲದೆ ಮೆಡಿಕಲ್ ಶಾಪ್‌ಗಳಲ್ಲಿ ಔಷಧಿ ಕೊಂಡು ಸೇವಿಸುವುದೂ ಇಂಥ ಸಾವಿಗೆ ಒಂದು ಕಾರಣ ಎನ್ನುವವರಿದ್ದಾರೆ. ವೈದ್ಯರ ಶಿಫಾರಸು ಚೀಟಿಯಿಲ್ಲದೆ ಔಷಧಿ ಕೊಡುವುದು/ತೆಗೆದುಕೊಳ್ಳುವುದು ಎರಡೂ ಆಪತ್ತಿಗೆ ಆಹ್ವಾನವೇ. ಇನ್ನು, ಅನಾರೋಗ್ಯಕರ ಜೀವನಶೈಲಿ, ಆಹಾರದ ವಿಷಯದಲ್ಲಿ 'ರುಚಿ'ಯ ಹಿಂದೆ ಬಿದ್ದಿರುವಿಕೆ/ಅಸಮತೋಲಿತ ಆಹಾರ, ಬದಲಾಗಿರುವ ಔದ್ಯೋಗಿಕ ಜಗತ್ತು, ಅದರಿಂದಾಗಿ ಉದ್ಭವಿಸಿರುವ ಉದ್ಯೋಗದ ಅಸ್ಥಿರತೆ ಮತ್ತು ಯುವಜನರ ಮೇಲಿನ ಒತ್ತಡ ಇವೆಲ್ಲವೂ ಹೃದಯಾಘಾತಕ್ಕೆ ಮುನ್ನುಡಿಯಾಗುತ್ತವೆ ಎನ್ನಲಾಗುತ್ತಿದೆ.

'ಹಸಿವು ನೀಗಿಸಿಕೊಳ್ಳುವುದಕ್ಕಾಗಿ ಆಹಾರ ತಿನ್ನಿ, ಬಾಯಿಚಪಲಕ್ಕಾಗಿ/ರುಚಿಗಾಗಿ ತಿನ್ನಬೇಡಿ. ರುಚಿ ನೀಡಲೆಂದು ಬಳಸುವ ಮಸಾಲೆಗಳು ಅನಾರೋಗ್ಯಕ್ಕೆ ಕಾರಣವಾಗುತ್ತವೆ. ಆಹಾರವಸ್ತುವನ್ನು ಅದರ ನೈಸರ್ಗಿಕ ಸ್ವರೂಪದಲ್ಲೇ ತಿನ್ನಿ' ಎನ್ನುವವರೂ ಇದ್ದಾರೆ. ಆದರೆ, 'ಉಪ್ಪು-ಹುಳಿ-ಖಾರ-ಸಕ್ಕರೆ ಏನನ್ನೂ ಬಳಸದಿದ್ದರೆ, ನಮಗೂ ಪ್ರಾಣಿಗಳಿಗೂ ವ್ಯತ್ಯಾಸವೇನು?' ಎಂಬ ವಾದವೂ ಇದೆ. ಆದ್ದರಿಂದ, ಆರೋಗ್ಯವನ್ನು ಕೆಡಿಸದ ರುಚಿ ಯಾವುದು ಎಂಬುದನ್ನು ತಿಳಿದು ಬಳಸಿ, ಮಿಕ್ಕಿದ್ದನ್ನು ದೂರವಿಡುವುದೇ ಕ್ಷೇಮ.

ಹೃದಯಾಘಾತದ ಸುದ್ದಿಗಳು ಅದೆಷ್ಟು ಪುನರಾವರ್ತನೆಯಾಗುತ್ತವೆಂದರೆ, ಕೇಳಿದವನಿಗೇ ಹೃದಯದಲ್ಲಿ ಸಣ್ಣಗೆ ನೋವು ಕಾಣಿಸಿಕೊಳ್ಳುತ್ತದೆ. ಹೃದಯಾಘಾತಕ್ಕೆ ಒಳಗಾದವನ ಕುಟುಂಬವು ಅತಂತ್ರವಾಗುವುದರಿಂದ, ಅದೊಂದು ಸಾಮಾಜಿಕ ಸಮಸ್ಯೆಯಾಗಿ ಪರಿವರ್ತನೆಯಾಗುತ್ತದೆ. ಹೀಗಾಗಿ, ಕೇಂದ್ರ ಮತ್ತು ರಾಜ್ಯ ಸರಕಾರಗಳು ಈ ವಿಷಯವನ್ನು 'ಆರೋಗ್ಯ ಸಂಬಂಧಿತ ತುರ್ತುಸ್ಥಿತಿ' ಎಂಬಂತೆ ಗಂಭೀರವಾಗಿ ಪರಿಗಣಿಸಿ, ತಲಸ್ಪರ್ಶಿ ಅವಲೋಕನವನ್ನು ನಡೆಸಬೇಕಿದೆ ಹಾಗೂ ಇದರಲ್ಲಿ ಅನುಭವಿ ವೈದ್ಯರನ್ನು ತೊಡಗಿಸಿಕೊಳ್ಳಬೇಕಿದೆ. ಆರೋಗ್ಯ ಇಲಾಖೆಯು ತಜ್ಞರಿಂದ ಸಂಶೋಧನೆ ಕೈಗೊಂಡು, ಹೃದಯಾಘಾತದ ತಡೆಗೆ ಎಲ್ಲಾ ಯತ್ನಗಳನ್ನೂ ಮಾಡಬೇಕಿದೆ ಹಾಗೂ ತನ್ಮೂಲಕ ಸಮಾಜವನ್ನು ಆತಂಕದಿಂದ ಪಾರು ಮಾಡಬೇಕಿದೆ. ಹೃದಯಾಘಾತಕ್ಕೆ ಒಳಗಾಗದಂತೆ ಬದುಕುವುದು ಹೇಗೆ ಎಂಬುದಕ್ಕೆ ತಜ್ಞವೈದ್ಯರು ಮಾರ್ಗಸೂಚಿಗಳನ್ನು ಘೋಷಿಸಬೇಕಿದೆ.

(ಲೇಖಕರು ಸಾಮಾಜಿಕ ಕಾರ್ಯಕರ್ತರು)

ಮರೆಯಬಾರದ ಮಹಾನುಭಾವ: ಫ.ಗು.ಹಳಕಟ್ಟಿ



ತನ್ನಿಮಿತ್ತ
ನಾಡೋಜ ಡಾ. ಮನು ಬಳಿಗಾರ್
vveditoped@gmail.com

ವಚನ ಪಿತಾಮಹ, ಕರ್ನಾಟಕದ ಮ್ಯಾಕ್ಸ್‌ಮುಲ್ಲರ್, ಆಧುನಿಕ ಶರಣ, ವಚನ ಗುಮ್ಮಟ, ರಾವ್ ಸಾಹೇಬ್ ಇತ್ಯಾದಿ ಪದವಿ ಪುರಸ್ಕಾರಗಳಿಗೆ ಭಾಜನರಾದ ಏಕಮೇವ ವ್ಯಕ್ತಿ ಪೂಜ್ಯ ಫಕೀರಪ್ಪ ಗುರುಬಸಪ್ಪ ಹಳಕಟ್ಟಿ ಅವರು. ಇಂದಿಗೆ 145 ವರ್ಷಗಳ ಹಿಂದೆ (1880ರ ಜುಲೈ 2ರಂದು) ಧಾರವಾಡದಲ್ಲಿ ಹುಟ್ಟಿದ ಶ್ರೀಯುತರು ಮಾಡಿದ ಕಾರ್ಯಗಳು ಅದ್ಭುತ ಹಾಗೂ ಅಷ್ಟೇ ಉತ್ಕೃಷ್ಟವಾದಂಥವು. 12ನೇ ಶತಮಾನದಲ್ಲಿ ರಚನೆಯಾದ ಸಾವಿರಾರು ವಚನಗಳನ್ನು, ನೂರಾರು ವಚನಕಾರರನ್ನು ಬೆಳಕಿಗೆ ತಂದ ಶ್ರೇಯಸ್ಸು ಹಳಕಟ್ಟಿ ಅವರಿಗೆ ಸಲ್ಲುತ್ತದೆ.

ಈವರೆಗೆ ದೊರೆತ ಅಂದಾಜು 22,000 ವಚನಗಳಲ್ಲಿ ಸರಿಸುಮಾರು 16,000 ವಚನಗಳನ್ನು ಹಳಕಟ್ಟಿಯವರೊಬ್ಬರೇ ಹೆಕ್ಕಿ ತೆಗೆದು, ಪರಿಷ್ಕರಿಸಿ, ಸಂಪಾದಿಸಿ, ಮುದ್ರಿಸಿ, ಪ್ರಕಟಿಸಿ ಜನರ ಕೈಗೆ ಸಿಗುವಂತೆ ಮಾಡಿದರು. ಈ ಪುಣ್ಯಾತ್ಮರು ಇಂಥ ಕಾರ್ಯವನ್ನು ಕೈಗೊಳ್ಳುವ ಮೊದಲು ಅಂದಾಜು 50 ವಚನಕಾರರು ಮಾತ್ರ ಲೋಕದ ಕಣ್ಣಿಗೆ ಬಿದ್ದಿದ್ದರು. ಆದರೆ ಹಳಕಟ್ಟಿ ಅವರ ಅಹರ್ನಿಶಿ ದುಡಿತ, ಶ್ರಮ, ಶ್ರದ್ಧಾ ಭಕ್ತಿ ಇವೆಲ್ಲವುಗಳಿಂದಾಗಿ 250 ವಚನಕಾರರು ಈ ಜಗಕ್ಕೆ ಹೊಸದಾಗಿ ತಲುಪುವಂತಾಯಿತು.

ಹಳಕಟ್ಟಿಯವರು ಮಧ್ಯಮ ವರ್ಗದಿಂದ ಬಂದವರು. ಇವರ ತಂದೆ ಗುರುಬಸಪ್ಪನವರು ಶಾಲಾ ಶಿಕ್ಷಕರಾಗಿದ್ದರು. ಸ್ವತಃ ಲೇಖಕರಾಗಿದ್ದ ಇವರು ಇಂಗ್ಲಿಷ್‌ನ ಕೆಲವೊಂದು ಗ್ರಂಥಗಳನ್ನು ಕನ್ನಡಕ್ಕೆ ಅನುವಾದಿಸಿದವರೂ, ಪ್ರಗತಿಪರ ವಿಚಾರವಂತರೂ ಆಗಿದ್ದರು. ತಂದೆ ಹಾಗೂ ಹೆಣ್ಣು ಕೊಟ್ಟ ಮಾವ ತಮ್ಮಣ್ಣಪ್ಪ ಇಬ್ಬರೂ ವಿದ್ವಾಂಸರಾಗಿದ್ದರಿಂದ ಅವರ ಪ್ರಭಾವವು ಫಕೀರಪ್ಪನವರ ಮೇಲೆ ತುಂಬಾ ಆಯಿತು. ಪರಿಚಯದ ಒಬ್ಬರ ಮನೆಗೆ ಊಟಕ್ಕೆ ಹೋದಾಗ ಅಕಸ್ಮಾತ್ ಅಲ್ಲಿದ್ದ ತಾಳೆಗರಿಗಳ ಮೇಲೆ ಇವರ ಗಮನ ಬಿದ್ದು ಅವು 12ನೇ ಶತಮಾನದ ಸಾಹಿತ್ಯದ ಅನರ್ಘ್ಯ ರತ್ನಗಳಾದ ವಚನಗಳ ಕಟ್ಟುಗಳು ಎಂಬುದು ಫಕೀರಪ್ಪನವರ ತೀಕ್ಷ್ಣಮತಿಗೆ ಹೊಳೆಯಿತು. ಊಟವನ್ನು ಮರೆತು ಆ ವಚನಗಳ ಕಟ್ಟುಗಳು ತಮಗೆ ಬೇಕೆಂದು ಮನೆಯ ಮಾಲೀಕರನ್ನು ಕೇಳಿ ತೆಗೆದುಕೊಂಡು ಬಂದ ಫಕೀರಪ್ಪ ಅವುಗಳ ಅಧ್ಯಯನದಲ್ಲಿ ತೊಡಗಿಕೊಂಡರರು. ಅವುಗಳನ್ನು ಸಂಸ್ಕರಿಸಿ ಪರಿಷ್ಕರಿಸಿ ಅವುಗಳ ಮಹಿಮೆಯನ್ನು ಕಂಡುಕೊಂಡ ಇವರು, ಈ ಅಪೂರ್ವ ಸಾಹಿತ್ಯವು ಯಾವುದೇ ಕಾರಣಕ್ಕೂ ಕಳೆದುಹೋಗಲು ಬಿಡಬಾರದು ಎಂದು ನಿರ್ಧರಿಸಿಬಿಟ್ಟರು.

ಹೀಗೆ ಶುರುವಾದ ಫಕೀರಪ್ಪನವರ ವಚನಗಳ ಸಂಶೋಧನೆ ಅವರ ವಕೀಲಿ ವೃತ್ತಿಯನ್ನು ಬದಿಗೆ ಸರಿಸುವಂತೆ ಮಾಡಿತು. ಮನೆಮನೆಗಳಿಗೆ ಅಲೆದು ತಾಳೆಗರಿಗಳನ್ನು, ಓಲೆ ಸಂಪುಟಗಳನ್ನು ಸಂಗ್ರಹಿಸುವಾಗ ಅನೇಕ ಕಡೆ ಸ್ವಂತ ಹಣವನ್ನೇ ಕೊಟ್ಟು ತೆಗೆದುಕೊಂಡು ಬರುವಂತಾಗಿತ್ತು. ಮುಂದೆ ಅವುಗಳನ್ನು ಸಂಪಾದನೆ ಮಾಡಿ ಮುದ್ರಣ ಮಾಡಲು ಬಿಜಾಪುರದಲ್ಲಿ ಅಥವಾ ಸಮೀಪದ ಜಿಲ್ಲಾ ಕೇಂದ್ರಗಳಲ್ಲಿ ಅಚ್ಚುಕೂಟಗಳು ಇರಲಿಲ್ಲವಾದ್ದರಿಂದ ಅವುಗಳನ್ನು ಮಂಗಳೂರಿನ ಕ್ರಿಶ್ಚಿಯನ್ ಮಿಶನರಿ ಮುದ್ರಣಾಲಯಕ್ಕೆ ಕಳಿಸಿಕೊಟ್ಟರು.

'ತಾನೊಂದು ಬಗೆದರೆ, ದೈವ ಒಂದು ಬಗೆಯಿತು' ಎಂಬಂತೆ ಹೀಗೆ ಮಂಗಳೂರಿಗೆ ಕಳಿಸಿದ ವಚನದ ಕರಡು ಪ್ರತಿಗಳು ಅಚ್ಚಾಗದೆ ಹಾಗೆಯೇ ತಿರುಗಿ ಕಳಿಸಲ್ಪಟ್ಟವು. ಕಳಿಸಿದ ಕಾರಣ ಏನೇ ಆಗಿರಲಿ ಅವುಗಳನ್ನು ತಾವೇ ಮುದ್ರಣ ಮಾಡಬೇಕೆಂದು ಛಲತೊಟ್ಟು ಫಕೀರಪ್ಪನವರು ಸ್ವಂತ ಮುದ್ರಣಾಲಯವನ್ನು ಹಾಕಬೇಕೆಂದು ನಿರ್ಧರಿಸಿಬಿಟ್ಟರು. ಇದಕ್ಕಾಗಿ ಕೈಯಲ್ಲಿ ಹಣವಿಲ್ಲದ್ದರಿಂದ ತಾವು ವಾಸಿಸುತ್ತಿದ್ದ ಮನೆಯನ್ನೇ ಮಾರಾಟ ಮಾಡಿಬಿಟ್ಟರು. ಅವರಿಗೆ ಬಾಡಿಗೆ ಮನೆಯೇ ಮಹಾಮನೆ ಆಯಿತು. ಆ ಮುದ್ರಣಾಲಯಕ್ಕೆ 'ಹಿತ ಚಿಂತಕ' ಎಂದು ಹೆಸರಿಟ್ಟು ತಮ್ಮ ಮಹತ್ಕಾರ್ಯವನ್ನು ಹಳಕಟ್ಟಿಯವರು ಪೂರೈಸಿಕೊಂಡರು. ವಚನಸಾಹಿತ್ಯದ ಕೆಲಸ ಕಾರ್ಯಗಳ ಜತೆಜತೆಗೆ ಹರಿಹರನ ರಗಳೆಗಳ ಸಂಪಾದನೆ, 'ನವಕರ್ನಾಟಕ' ಎಂಬ ವಾರಪತ್ರಿಕೆ ಮತ್ತು 'ಶಿವಾನುಭವ' ಎಂಬ ಮಾಸಪತ್ರಿಕೆಯನ್ನು ಸ್ವತಃ ಸಂಪಾದಿಸಿ ನಿಯತವಾಗಿ ಹೊರತರತೊಡಗಿದರು. ವಚನ ಸಾಹಿತ್ಯವು ವಿಶ್ವವ್ಯಾಪಿ ಆಗಬೇಕೆಂದು ಹಳಕಟ್ಟಿಯವರು ಸ್ವತಃ ಹಲವಾರು ವಚನಗಳನ್ನು ಇಂಗ್ಲಿಷಿಗೆ ಭಾಷಾಂತರಿಸಿ 'ಇಂಡಿಯನ್ ಆಂಟಿಕ್ವರಿ' ಎಂಬ ಪತ್ರಿಕೆಯಲ್ಲಿ ಪ್ರಕಟಿಸಿದರು. ಸಮಾಜದ ಮೌಢ್ಯವನ್ನು ಅಳಿಸಿಹಾಕಲು, ಅಂತರಂಗವನ್ನು ಅರಳಿಸಲು, ಒಟ್ಟಿನಲ್ಲಿ ಮನುಕುಲವನ್ನು ಉದ್ಧರಿಸಲು ವಚನ ಸಾಹಿತ್ಯವು ಪಂಡಿತ-ಪಾಮರ ಎಲ್ಲರಿಗೂ ತಲುಪಬೇಕೆಂದು ದೃಢ ನಿಶ್ಚಯ ಮಾಡಿದ ಹಳಕಟ್ಟಿಯವರು ತಮ್ಮ ಪುಸ್ತಕಗಳು ಹಾಗೂ ಪತ್ರಿಕೆಗಳು ಮನೆ ಮನೆಗಳಲ್ಲಿ ದೊರಕಬೇಕೆಂದು ಅಲ್ಲಿಗೆ ತಲುಪಿಸುವ ಕೆಲಸವನ್ನು ಕೈಗೊಂಡರು. ಇದರಿಂದಾಗಿ ವಿಪರೀತ ಖರ್ಚು ವೆಚ್ಚಗಳು ಬರತೊಡಗಿ ಆರ್ಥಿಕ ಸ್ಥಿತಿ ದಿನೇ ದಿನೆ ಕುಸಿಯತೊಡಗಿತು, ಆರೋಗ್ಯವೂ ಹದಗೆಡತೊಡಗಿತು.

ಇಂಥ ವಿಷಮ ಪರಿಸ್ಥಿತಿಯಲ್ಲಿಯೂ ಇವರು ಎದೆಗುಂದದೆ ಮುನ್ನಡೆಯತೊಡಗಿದರು. ಹಾನಗಲ್ಲ ಕುಮಾರಸ್ವಾಮಿಗಳು, ಕೆಲವೊಂದು ವಚನ ಸಾಹಿತ್ಯ ಅಭಿಮಾನಿಗಳು ಹಳಕಟ್ಟಿಯವರ ಸಹಾಯಕ್ಕೆ ಬಂದರು. ಇದರಿಂದಾಗಿ ಶ್ರೀಯುತರು ವಚನ ಸಾಹಿತ್ಯಕ್ಕೆ ಅಪೂರ್ವ ಕೊಡುಗೆಯನ್ನು ನೀಡುವಂತಾಯಿತು. ವಚನ ಸಾಹಿತ್ಯದ ಬೆಳಕು ಎಲ್ಲೆಡೆ ಹರಡುವಂತಾಯಿತು. ಇಡೀ ಸಮಾಜ ಹಳಕಟ್ಟಿಯವರನ್ನು ಬಹಳ ಅಭಿಮಾನದಿಂದ 'ವಚನ ಪಿತಾಮಹ' ಎಂದು ಸಂಬೋಧಿಸತೊಡಗಿತು. ಉತ್ತಂಗಿ ಚನ್ನಪ್ಪ, ರಂಗನಾಥ ದಿವಾಕರ, ಅನಕೃ, ಎಂ.ಆರ್. ಶ್ರೀನಿವಾಸಮೂರ್ತಿ ಮುಂತಾದವರು ಹಳಕಟ್ಟಿಯವರನ್ನು ಅವರ ಕಾರ್ಯಗಳನ್ನು ತುಂಬು ಹೃದಯದಿಂದ ಮೆಚ್ಚಿ ಹೊಗಳುವಂತೆ ಆಯಿತು. ಕನ್ನಡದ ಕಣ್ವ ಬಿ.ಎಂ. ಶ್ರೀಕಂಠಯ್ಯನವರು ಒಮ್ಮೆ ರಾಜ್ಯೋತ್ಸವ ಕಾರ್ಯಕ್ರಮಕ್ಕಾಗಿ ಬಿಜಾಪುರಕ್ಕೆ ಬಂದಿದ್ದರು. ಅಲ್ಲಿನ ಜನ ಅವರಿಗೆ ವಿಶ್ವವಿಖ್ಯಾತ ಗೋಳಗುಮ್ಮಟವನ್ನು ತೋರಿಸುತ್ತೇವೆ ಅಂದಾಗ ಅವರು, ''ಅದೇನೋ ಸರಿಯೇ, ಆದರೆ ಅದರಷ್ಟೇ ಮಹತ್ವದ್ದಾದ 'ವಚನ ಗುಮ್ಮಟ' ಒಂದು ನಿಮ್ಮ ಊರಿನಲ್ಲಿದೆ. ಅದನ್ನು ನಾನು ಮೊದಲು ನೋಡಬೇಕು'' ಎಂದು ಹೇಳಿ ಹಳಕಟ್ಟಿ ಅವರನ್ನು ನೋಡಲು ಅವರ ಮನೆಗೆ ಬಂದರು.

ಹಳಕಟ್ಟಿಯವರ ಕಾರ್ಯಗಳು ವಚನ ಸಾಹಿತ್ಯಕ್ಕೆ ಮಾತ್ರವಲ್ಲದೆ ಶಿಕ್ಷಣ, ಕೃಷಿ ಹಾಗೂ ಸಹಕಾರ ಕ್ಷೇತ್ರಗಳಿಗೂ ವಿಸ್ತರಿಸಿದ್ದವು. ಅವರು ಹಲವಾರು ವಿದ್ಯಾಸಂಸ್ಥೆಗಳನ್ನು ಕಟ್ಟಿ ಬೆಳೆಸಿದರು. ಅವುಗಳಲ್ಲಿ ಮುಖ್ಯವಾಗಿ ಬಿ.ಎಲ್.ಡಿ.ಇ. ಸಂಸ್ಥೆಯನ್ನು ಹೆಸರಿಸಬಹುದು. ಇಂದು ಈ ಶಿಕ್ಷಣ ಸಂಸ್ಥೆಯು ಸುಮಾರು 90 ವಿವಿಧ ಬಗೆಯ ಶಾಲಾ ಕಾಲೇಜುಗಳನ್ನು ನಡೆಸುತ್ತಿದೆ. ಪ್ರಸ್ತುತ ಬೃಹತ್ ಹಾಗೂ ಮಧ್ಯಮ ಕೈಗಾರಿಕೆಗಳ ಇಲಾಖೆಯ ಸಚಿವರಾದ ಎಂ.ಬಿ.ಪಾಟೀಲ್ ಅವರು ಇದರ ಕಾರ್ಯಾಧ್ಯಕ್ಷರಾಗಿದ್ದಾರೆ. ಲಕ್ಷಾಂತರ ವಿದ್ಯಾರ್ಥಿಗಳು, ಸಾವಿರಾರು ಅಧ್ಯಾಪಕರು ಅಲ್ಲಿ ಹಳಕಟ್ಟಿಯವರ ಧ್ಯೇಯೋದ್ದೇಶಗಳನ್ನು ಪೂರೈಸುತ್ತಿದ್ದಾರೆ. ಕೃಷಿಕರು, ಕೃಷಿ ಕಾರ್ಮಿಕರು, ನೇಕಾರರು ಇವರೆಲ್ಲರಿಗಾಗಿ ಹಲವಾರು ಸಹಕಾರಿ ಸಂಘಗಳನ್ನು ಹಳಕಟ್ಟಿಯವರು ಸ್ಥಾಪಿಸಿದರು. ಕುಶಲಕರ್ಮಿಗಳಿಗಾಗಿ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಿದರು. ಬರಗಾಲ ನಿವಾರಣೆಗಾಗಿ Anti Famine Institute ಅನ್ನು ಪ್ರಾರಂಭಿಸಿದರು. ಬಿಜಾಪುರ ನಗರದ ಕುಡಿಯುವ ನೀರಿನ ಕೊರತೆಯನ್ನು ಹೋಗಲಾಡಿಸಲು ಭೂತನಾಳ ಕೆರೆಯನ್ನು ಅಭಿವೃದ್ಧಿಪಡಿಸಿ ಅಲ್ಲಿಂದ ನಗರಕ್ಕೆ ನೀರು ಬರುವಂತೆ ಮಾಡಿದರು. ಇದಕ್ಕಾಗಿ ಸರ್ ಎಂ.ವಿಶ್ವೇಶ್ವರಯ್ಯನವರ ಸಹಾಯ, ಮಾರ್ಗದರ್ಶನಗಳೂ ಇವರಿಗೆ ದೊರೆತಿತ್ತು.

ಸ್ವಾತಂತ್ರ್ಯ ಆಂದೋಲನ ಹಾಗೂ ಕರ್ನಾಟಕ ಏಕೀಕರಣ ಚಳವಳಿ ಇವುಗಳಲ್ಲಿಯೂ ಹಳಕಟ್ಟಿಯವರ ಪಾತ್ರ ಮಹತ್ವದ್ದಾಗಿದೆ. ಕರ್ನಾಟಕ ಏಕೀಕರಣ ಪರಿಷತ್ತಿನ ಅಧ್ಯಕ್ಷತೆ ಇವರದಾಗಿತ್ತು. ಹಾಗೆಯೇ, ಸಾಹಿತ್ಯ ಕ್ಷೇತ್ರಕ್ಕೆ ಹಳಕಟ್ಟಿಯವರು ನೀಡಿದ ಗಣನೀಯ ಕೊಡುಗೆಯನ್ನು ಗಮನಿಸಿ ಇವರಿಗೆ 1926ರಲ್ಲಿ ಬಳ್ಳಾರಿಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯು ಒಲಿದುಬಂದಿತು. ಮುಂಬೈಯಲ್ಲಿ ಉನ್ನತ ವ್ಯಾಸಂಗ ಮಾಡುವಾಗ ಆಲೂರು ವೆಂಕಟರಾಯರ ಗೆಳೆತನವಾಗಿ ಕನ್ನಡ ಹೋರಾಟಕ್ಕಾಗಿ ತಮ್ಮನ್ನು ತಾವು ಅರ್ಪಿಸಿಕೊಳ್ಳಬೇಕೆಂಬ ವಾಂಛೆ ಹಳಕಟ್ಟಿಯವರಲ್ಲಿ ತೀವ್ರವಾಯಿತು. ಮುಂದೆ ಇದನ್ನು ಅವರು ಕನ್ನಡ ಮಾಧ್ಯಮ ಶಾಲೆಗಳನ್ನು ತೆರೆಯುವಲ್ಲಿ, ಕನ್ನಡ ಪತ್ರಿಕೆಗಳನ್ನು ಪ್ರಾರಂಭಿಸಿ ಮುನ್ನಡೆಸುವಲ್ಲಿ, ಅಂಕಣಗಳನ್ನು ಬರೆಯುವುದರಲ್ಲಿ ಸಾಕಾರಗೊಳಿಸಿಕೊಂಡರು. ಅವರ ಜನ್ಮದಿನವಾದ ಇಂದು ನಾವೆಲ್ಲರೂ ಅವರನ್ನು ಅತ್ಯಂತ ಭಕ್ತಿ-ಶ್ರದ್ಧೆಗಳಿಂದ ನೆನೆದು ನಮ್ಮ ಗೌರವವನ್ನು ಸಲ್ಲಿಸೋಣ.

(ಲೇಖಕರು ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:169

ಸಮಾಚಾರ ಸಣ್ಣದಲ್ಲ

ಹಿ.ಪ್ರ ಪ್ರವಾಹ: ಒಬ್ಬ ಸಾವು, 18 ಜನ ಕಣ್ಮರೆ

ಶಿಮ್ಲಾ: ಹಿಮಾಚಲ ಪ್ರದೇಶದ ಮಂಡಿ ಜಿಲ್ಲೆಯ ಕರ್ಸೋಗ್ ಉಪ ವಿಭಾಗದಲ್ಲಿ ಸೋಮವಾರ-ಮಂಗಳವಾರ 4 ಬಾರಿ ಮೇಘಸ್ಫೋಟವಾಗಿದ್ದು, ಆ ಬಳಿಕ ಸುರಿದ ಧಾರಾಕಾರ ಮಳೆಯಿಂದ ದಿಢೀರ್ ಪ್ರವಾಹ ಸೃಷ್ಟಿಯಾಗಿ ಹಲವು ಮನೆ, ವಾಹನ, ಸೇತುವೆ ಕೊಚ್ಚಿಕೊಂಡು ಹೋಗಿವೆ. ಪ್ರವಾಹದಲ್ಲಿ ಸಿಲುಕಿ ಒಬ್ಬರು ಸಾವಿಗೀಡಾದರು, 18 ಜನ ಕೊಚ್ಚಿಕೊಂಡು ಹೋದರು. ವಿವಿಧ ಸ್ಥಳಗಳಲ್ಲಿ ಪ್ರವಾಹದಲ್ಲಿ ಸಿಲುಕಿದ್ದ 12 ಮಕ್ಕಳು ಮತ್ತು 4 ಮಹಿಳೆಯರು ಸೇರಿದಂತೆ 41 ಜನರನ್ನು ರಕ್ಷಿಸಲಾಗಿದೆ. ಭಾರಿ ಮಳೆಯಿಂದ ಮಂಡಿ ಜಿಲ್ಲೆಯ ಎಲ್ಲಾ ನದಿಗಳು ಉಕ್ಕಿ ಹರಿಯುತ್ತಿವೆ. ಮಂಡಿ-ಕುಲು ನಡುವಿನ ಹಲವೆಡೆ, ಕಿರಾತ್‌ಪುರ-ಮನಾಲಿ ಹೆದ್ದಾರಿಯನ್ನು ವಾಹನ ಸಂಚಾರಕ್ಕೆ ನಿರ್ಬಂಧಿಸಲಾಗಿದೆ. ಪರಿಣಾಮವಾಗಿ ಹಲವು ವಾಹನ ಸವಾರರು ಇಡೀ ರಾತ್ರಿ ರಸ್ತೆ ಸುರಂಗಗಳಲ್ಲಿ ಸಿಲುಕಿಕೊಂಡಿದ್ದರು. ದಮ್ದ, ಜಯುನಿ ಖಾಡ್ನ ಎರಡು ಮನೆಗಳು ಬಿಯಾಸ್ ನದಿಯಲ್ಲಿ ಕೊಚ್ಚಿಹೋಗಿ 18 ಜನರು ಕಾಣೆಯಾಗಿದ್ದಾರೆ ಎಂದು ವರದಿಯಾಗಿದೆ. ಮುಂದಿನ 24 ರಿಂದ 48 ಗಂಟೆಗಳಲ್ಲಿ ಧರ್ಮಶಾಲಾ, ಕುಲು ಮತ್ತು ಸೋಲನ್ ಪ್ರದೇಶದಲ್ಲಿ ಅತ್ಯಧಿಕ ಮಳೆಯಾಗುವ ಸಾಧ್ಯತೆ ಇದ್ದು, ಆರೆಂಜ್ ಅಲರ್ಟ್ ಘೋಷಿಸಲಾಗಿದೆ.

ವಾಡಿಕೆಗಿಂತ ಜುಲೈ ಮಳೆ ಹೆಚ್ಚು: ಐಎಂಡಿ

ದೆಹಲಿ: ದೇಶದಲ್ಲಿ ಈ ಬಾರಿ ಜುಲೈ ಮಾಸದಲ್ಲಿನ ಮಳೆಯ ಪ್ರಮಾಣ ವಾಡಿಕೆಗಿಂತಲೂ ಅಧಿಕ ಪ್ರಮಾಣದಲ್ಲಿರುತ್ತದೆ. ದೀರ್ಘಾವಧಿಯ ಜುಲೈ ಮಾಸದ ಸರಾಸರಿಗಿಂತಲೂ ಶೇ.106ರಷ್ಟು ಹೆಚ್ಚಿರುತ್ತದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಹೇಳಿದೆ. ಜುಲೈನಲ್ಲಿ ಸಾಮಾನ್ಯವಾಗಿ ಬರುವ ಮಳೆ 280 ಮಿಮೀ.ಗಳಷ್ಟಿರುತ್ತದೆ. ಆದರೆ ಈ ಬಾರಿ ಜುಲೈನಲ್ಲಿ ಸಾಮಾನ್ಯಕ್ಕಿಂತ ಹೆಚ್ಚು ತೇವಾಂಶ ಇರುತ್ತದೆ, ಹವೆ ತುಸು ಹೆಚ್ಚೇ ತಂಪಾಗಿರುತ್ತದೆ. ಹಾಗಾಗಿ, ದೇಶದ ಪ್ರಮುಖ ಭಾಗಗಳಲ್ಲಿ ಸಾಮಾನ್ಯಕ್ಕಿಂತ ಹೆಚ್ಚಿನ ಮಳೆ ಮತ್ತು ಸಾಮಾನ್ಯಕ್ಕಿಂತ ಕಡಿಮೆ ತಾಪಮಾನ ಇರಲಿದೆ. ಈಶಾನ್ಯ ಮತ್ತು ಪೂರ್ವ ಭಾರತದ ಹೆಚ್ಚಿನ ಪ್ರದೇಶಗಳು, ತೀವ್ರ ದಕ್ಷಿಣ ಪರ್ಯಾಯ ದ್ವೀಪದ ಹಲವು ಪ್ರದೇಶಗಳು ಮತ್ತು ವಾಯುವ್ಯ ಭಾರತದ ಕೆಲವೆಡೆ ಸಾಮಾನ್ಯಕ್ಕಿಂತ ಕಡಿಮೆ ಮಳೆಯಾಗುವ ಸಾಧ್ಯತೆಯಿದೆ ಎಂದು ಐಎಂಡಿ ಮುನ್ಸೂಚನೆ ನೀಡಿದೆ.

ದೆಹಲಿ ಹಳೆ ವಾಹನಕ್ಕೆ ಇನ್ನು ಇಂಧನ ಇಲ್ಲ!

ದೆಹಲಿ: ದೆಹಲಿ ಸರಕಾರ ಜು.1ರಿಂದಲೇ 15 ವರ್ಷಗಳಿಗಿಂತ ಹಳೆಯದಾದ ಪೆಟ್ರೋಲ್ ವಾಹನಗಳು ಮತ್ತು 10 ವರ್ಷಗಳಿಗಿಂತ ಹಳೆಯದಾದ ಡೀಸೆಲ್ ವಾಹನಗಳನ್ನು ರಸ್ತೆಯಲ್ಲಿ ಓಡಿಸುವುದನ್ನು ನಿಷೇಧಿಸಿದೆ. ರಾಜಧಾನಿಯಲ್ಲಿನ ವಾಯು ಮಾಲಿನ್ಯ ತಗ್ಗಿಸುವ ದಿಸೆಯಲ್ಲಿ ಹಳೆ ವಾಹನಗಳ ನಿಷೇಧ ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗುತ್ತಿದೆ. ಅದರ ಭಾಗವಾಗಿ ದೆಹಲಿಯಲ್ಲಿ 'ಅವಧಿ ಮೀರಿದ ವಾಹನ'ಗಳಿಗೆ ಪೆಟ್ರೋಲ್-ಡೀಸೆಲ್ ಸಿಗದಂತೆ ಮಾಡಲು ಪೆಟ್ರೋಲ್ ಬಂಕ್‌ಗಳಲ್ಲಿ ನಿಯಮ ಜಾರಿಗೆ ಅಗತ್ಯ ವ್ಯವಸ್ಥೆಗಳನ್ನು ಮಾಡಲಾಗಿದೆ. ದೆಹಲಿ ಸಾರಿಗೆ ಇಲಾಖೆ ಅವಧಿ ಮುಗಿದ ವಾಹನಗಳಿಗೆ ಇಂಧನ ಸಿಗದು ಎಂಬ ಫಲಕವನ್ನು ಪೆಟ್ರೋಲ್ ಬಂಕ್‌ಗಳಲ್ಲಿ ಅಳವಡಿಸಿವೆ. ನಿಯಮ ಜಾರಿಯ ಮೇಲ್ವಿಚಾರಣೆಗೆ ದೆಹಲಿ ಪೊಲೀಸ್ ಮತ್ತು ಸಂಚಾರ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಿದೆ. ಅಲ್ಲದೇ, ನಗರದಲ್ಲಿನ 350 ಪೆಟ್ರೋಲ್ ಬಂಕ್‌ಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನೂ ಅಳವಡಿಸಿದೆ. ಅವಧಿ ಮೀರಿದ ವಾಹನ ರಸ್ತೆ ಅಥವಾ ಪೆಟ್ರೋಲ್ ಬಂಕ್‌ನಲ್ಲಿ ಕಂಡುಬಂದರೆ ಸಂಚಾರ ಪೊಲೀಸ್ ಸಿಬ್ಬಂದಿ ಮುಟ್ಟುಗೋಲು ಹಾಕಿಕೊಳ್ಳಲಿದ್ದಾರೆ ಎಂದು ಸಾರಿಗೆ ಇಲಾಖೆ ಮಂಗಳವಾರ ತಿಳಿಸಿದೆ.

ವಿಶಿಷ್ಟ 'ರೈಲ್‌ಒನ್' ಆ್ಯಪ್ ಬಿಡುಗಡೆ

ದೆಹಲಿ: ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು 'ರೈಲ್‌ಒನ್' ಎಂಬ ಹೊಸದಾದ ಹಾಗೂ ಬಹಳ ವಿಶಿಷ್ಟವಾದ ಮೊಬೈಲ್ ಫೋನ್ ಆ್ಯಪ್ ಬಿಡುಗಡೆ ಮಾಡಿದ್ದಾರೆ. ರೈಲು ಪ್ರಯಾಣದ ಟಿಕೆಟ್ ಖರೀದಿಗೆ, ರೈಲಿನಲ್ಲೇ ಆಹಾರ ಖರೀದಿಗೆ, ಪ್ಲಾಟ್‌ಫಾರ್ಮ್ ಟಿಕೆಟ್ ಪಡೆಯಲು, ರೈಲುಗಳ ಸ್ಥಿತಿಗತಿ ಅರಿಯಲು 'ಸೂಪರ್ ಆ್ಯಪ್' ನೆರವಾಗಲಿದೆ ಎಂದು ಹೇಳಿದ್ದಾರೆ. ಐಆರ್‌ಸಿಟಿಸಿ, ರೈಲ್ ಕನೆಕ್ಟ್, ರೈಲ್ ಮದದ್ ಮತ್ತಿತರ ಹಲವಾರು ಆ್ಯಪ್‌ಗಳ ಬದಲಾಗಿ ಇದೊಂದೇ ಆ್ಯಪ್ ಬಳಸಬಹುದಾಗಿದೆ. ರೈಲ್ವೆ ಪ್ರಯಾಣಿಕರ ಎಲ್ಲಾ ಅಗತ್ಯಗಳನ್ನು ಪೂರೈಸಬಲ್ಲ ಸೂಪರ್ ಆ್ಯಪ್ ಇದಾಗಿದೆ ಎಂದು ಸಚಿವರು ಹೇಳಿದ್ದಾರೆ. 'ರೈಲ್‌ಒನ್' ಮೊಬೈಲ್ ಆ್ಯಪ್ ಆಂಡ್ರಾಯ್ಡ್ ಮತ್ತು ಆ್ಯಪಲ್ ಪ್ಲಾಟ್‌ಫಾರ್ಮ್‌ಗಳಲ್ಲಿ ಲಭ್ಯ ಇದೆ. ರೈಲ್ವೆಗೆ ಸಂಬಂಧಿತ ಯಾವುದೇ ಮಾಹಿತಿಯನ್ನು ಪಡೆಯಲು ಹಾಗೂ ಪ್ರಯಾಣಿಕರಿಗೆ ಅಗತ್ಯವಾಗಿರುವ ಯಾವುದೇ ಸೇವೆಯನ್ನು ಪಡೆಯಲು ಈ ಹೊಸ ಆ್ಯಪ್ ಉಪಯುಕ್ತವಾಗಿದೆ ಎಂದಿದ್ದಾರೆ.

{ ನಾರಾಯಣ್ ರಾಣೆ } ಬಿಜೆಪಿ ಸಂಸದ

ಮಹಾರಾಷ್ಟ್ರ ನವ ನಿರ್ಮಾಣ ಸೇನೆ(ಎಂಎನ್‌ಎಸ್) ನಾಯಕ ರಾಜ್ ಠಾಕ್ರೆ ಸೋದರ ಸಂಬಂಧಿಯೇ ಆಗಿದ್ದರೂ ಶಿವಸೇನೆ ಮುಖಂಡ ಉದ್ಧವ್ ಠಾಕ್ರೆ ಬಹಳ ಕಿರುಕುಳ ನೀಡಿದ್ದರು. ಈಗ ರಾಜ್ ಜತೆ ಸ್ನೇಹದಿಂದಿರಲು ಯತ್ನಿಸುತ್ತಿದ್ದಾರೆ. ಶಿವಸೇನೆ ಒಡೆಯಲು ಉದ್ಧವ್ ಅವರೇ ಕಾರಣ. ಕಳೆದುಕೊಂಡ ಅಧಿಕಾರ ಮರಳಿ ಪಡೆವ ಶಕ್ತಿ-ಸಾಮರ್ಥ್ಯ ಉದ್ಧವ್‌ಗೆ ಈಗ ಇಲ್ಲ.



ತೆಲಂಗಾಣ ಸರಕಾರದಿಂದ 1 ಕೋಟಿ ರು. ಪರಿಹಾರ ಘೋಷಣೆ | ಸಿಗಾಚಿ ಕಂಪನಿಯಿಂದಲೂ ಪರಿಹಾರ ಕೊಡಿಸುವೆ: ಸಿಎಂ ಭರವಸೆ

ಸಿಗಾಚಿ ಔಷಧ ಘಟಕ ಸ್ಫೋಟ: 42 ಜೀವಬಲಿ

ಹೈದರಾಬಾದ್: ತೆಲಂಗಾಣ ರಾಜ್ಯದ ಪಾಶಮೈಲಾರಂನಲ್ಲಿನ 'ಸಿಗಾಚಿ ಇಂಡಸ್ಟ್ರೀಸ್' ಔಷಧ ಘಟಕದಲ್ಲಿ ಸೋಮವಾರ ನಡೆದ ಬಾಯ್ಲರ್ ಸ್ಫೋಟ ದುರಂತಕ್ಕೆ ಬಲಿಯಾದವರ ಸಂಖ್ಯೆ ಮಂಗಳವಾರ ಬೆಳಗ್ಗೆ ವೇಳೆಗೆ 42ಕ್ಕೆ ಏರಿಕೆಯಾಗಿದೆ.

ಸ್ಫೋಟಕ್ಕೆ ಛಿದ್ರಗೊಂಡ ಫ್ಯಾಕ್ಟರಿಯ ಬಾಯ್ಲರ್ ಘಟಕದ ಅವಶೇಷಗಳಡಿಯಿಂದ ಒಟ್ಟು 31 ಕಾರ್ಮಿಕರ ಶವಗಳನ್ನು ಹೊರತೆಗೆಯಲಾಗಿದೆ. ಇನ್ನೊಂದೆಡೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಗಾಯಾಳುಗಳಲ್ಲಿ 11 ಮಂದಿ ಅಸುನೀಗಿದ್ದಾರೆ. ರಕ್ಷಣಾ ಕಾರ್ಯಾಚರಣೆ ಕೊನೆ ಘಟ್ಟದಲ್ಲಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪರಿತೋಷ್ ಪಂಕಜ್ ಸುದ್ದಿಸಂಸ್ಥೆಗೆ ಮಂಗಳವಾರ ತಿಳಿಸಿದ್ದಾರೆ.

ಪಾಶಮೈಲಾರಂ ಕೈಗಾರಿಕಾ ಪ್ರದೇಶದಲ್ಲಿರುವ 'ಸಿಗಾಚಿ ಫಾರ್ಮಾ' ಕಂಪನಿಯ ರಿಯಾಕ್ಟರ್‌ನಲ್ಲಿ ಸೋಮವಾರ ಬೆಳಿಗ್ಗೆ 9.28ರಲ್ಲಿ ರಾಸಾಯನಿಕ ಸೋರಿಕೆಯಾಗಿ ಬೆಂಕಿ ಹೊತ್ತಿಕೊಂಡಿದ್ದು, ಬಳಿಕ ಬಾಯ್ಲರ್ ಸ್ಫೋಟವಾಗಿದೆ ಎಂದು ಮೂಲಗಳು ಹೇಳಿವೆ. ಆದರೆ, ಸ್ಫೋಟಕ್ಕೆ ನಿಖರ ಕಾರಣವೇನು ಎಂಬುದು ಸಮಗ್ರ ತನಿಖೆಯ ಬಳಿಕವಷ್ಟೇ ತಿಳಿಯಲಿದೆ ಎಂದು ತಜ್ಞರು ಹೇಳಿದ್ದಾರೆ. ಸ್ಫೋಟವಾದ ಬಾಯ್ಲರ್ ಇದ್ದ ಸ್ಥಳದಲ್ಲೇ 90 ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಹಾಗಾಗಿ, ಕೆಲವು ಕಾರ್ಮಿಕರ ದೇಹಗಳು ಗುರುತಿಸಲೇ ಆಗದಷ್ಟು ಪೂರ್ಣ ಸುಟ್ಟುಹೋಗಿವೆ. ಮೃತದೇಹಗಳ ಗುರುತು ಪತ್ತೆಗೆ ಡಿಎನ್‌ಎ ಪರೀಕ್ಷೆ ಅಗತ್ಯವಾಗಿದೆ ಎಂದು ಐಜಿಪಿ ವಿ.ಸತ್ಯನಾರಾಯಣ ಹೇಳಿದ್ದಾರೆ.

143 ಕಾರ್ಮಿಕರಲ್ಲಿ 56 ಜನರಷ್ಟೇ ಸಂಪರ್ಕಕ್ಕೆ!

ಒಡಿಶಾ, ಬಿಹಾರ, ಆಂಧ್ರಪ್ರದೇಶ, ಮಧ್ಯಪ್ರದೇಶ ಮತ್ತು ತೆಲಂಗಾಣದವರು ಕಾರ್ಮಿಕರಾಗಿದ್ದಾರೆ. ಸ್ಫೋಟವಾದಾಗ 143 ಕಾರ್ಮಿಕರಿದ್ದರು. ಈವರೆಗೆ 56 ಕಾರ್ಮಿಕರು ಕಾರ್ಖಾನೆ ಅಧಿಕಾರಿಗಳ ಸಂಪರ್ಕಕ್ಕೆ ಸಿಕ್ಕಿದ್ದಾರೆ. 42 ಮಂದಿ ಸಾವಿಗೀಡಾಗಿ, ಹಲವರು ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇನ್ನೂ ಹತ್ತಾರು ಕಾರ್ಮಿಕರ ಇರುವಿಕೆ ಬಗ್ಗೆ ಇನ್ನಷ್ಟೇ ತಿಳಿಯ ಬೇಕಿದೆ ಎಂದು ಕಾರ್ಖಾನೆ ಆಡಳಿತ ತಿಳಿಸಿರುವುದಾಗಿ ವರದಿಯಾಗಿದೆ.

ಸಿಗಾಚಿಯಿಂದ 1 ಕೋಟಿ ರು. ಪರಿಹಾರ ಕೊಡಿಸಲು ಚರ್ಚೆ

ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಮಂಗಳವಾರ ಬೆಳಗ್ಗೆ ಸಿಗಾಚಿ ಔಷಧ ಘಟಕ ಸ್ಫೋಟಗೊಂಡ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದರು. ಪಾಶಮೈಲಾರಂ ಸಿಗಾಚಿ ಫಾರ್ಮಾ ಘಟಕ ಸ್ಫೋಟದಲ್ಲಿ ಜೀವತೆತ್ತ ಕಾರ್ಮಿಕರ ಕುಟುಂಬಗಳಿಗೆ ತಲಾ 1 ಕೋಟಿ ರು. ಹಾಗೂ ಗಂಭೀರವಾಗಿ ಗಾಯಗೊಂಡವರಿಗೆ 10 ಲಕ್ಷ ರು. ಸಣ್ಣಪುಟ್ಟ ಗಾಯಗಳಾದವರಿಗೆ 5 ಲಕ್ಷ ರು. ಪರಿಹಾರ ಕೊಡಿಸಲು ರಾಜ್ಯ ಸರಕಾರ ಸಿಗಾಚಿ ಇಂಡಸ್ಟ್ರೀಸ್ ಲಿ. ಆಡಳಿತ ಮಂಡಳಿ ಜತೆ ಮಾತುಕತೆ ನಡೆಸಲಿದೆ. ಅಲ್ಲದೇ, ಮೃತ ಕಾರ್ಮಿಕರ ಕುಟುಂಬಗಳಿಗೆ ರಾಜ್ಯ ಸರಕಾರದಿಂದಲೂ ತಲಾ 1 ಕೋಟಿ ರು. ಪರಿಹಾರ ನೀಡಲಾಗುವುದು. ಮೃತರ ಕುಟುಂಬಗಳಿಗೆ ತುರ್ತು ವೆಚ್ಚಗಳಿಗಾಗಿ ತಲಾ 1 ಲಕ್ಷ ರು. ಮತ್ತು ಗಾಯಾಳುಗಳಿಗೆ 50,000 ರು.ಗಳನ್ನು ಸರಕಾರ ಪಾವತಿಸಲಿದೆ ಎಂದು ಪ್ರಕಟಿಸಿದರು.

ಸುರಕ್ಷತೆ ಕೊರತೆಗೆ ಕಾರ್ಮಿಕರು ಬಲಿ

ಶಿವಕಾಶಿ ಸೇರಿದಂತೆ ತಮಿಳುನಾಡಿನ ವಿವಿಧೆಡೆಯ ಪಟಾಕಿ ಘಟಕಗಳಲ್ಲಿ ಸ್ಫೋಟ-ಹತ್ತಾರು ಕಾರ್ಮಿಕರು ಬಲಿಯಾಗುವುದು ಪ್ರತಿವರ್ಷದ ಮಾತಾಗಿದೆ. ದೇಶದ ವಿವಿಧೆಡೆಯೂ ಕಾರ್ಖಾನೆಗಳಲ್ಲಿ ಬೆಂಕಿ ಅವಘಡ, ಬಾಯ್ಲರ್ ಸ್ಫೋಟ, ಹತ್ತಾರು ಕಾರ್ಮಿಕರ ಸಾವಿನ ಸುದ್ದಿಗಳೂ ವರದಿಯಾಗುತ್ತಲೇ ಇವೆ. ಈ ಅವಘಡಗಳೆಲ್ಲವೂ, ಕಾರ್ಖಾನೆಗಳಲ್ಲಿ ಕಾರ್ಮಿಕರ ಸುರಕ್ಷತೆಗೆ ಆದ್ಯತೆ ನೀಡಲಾಗುತ್ತಿಲ್ಲ ಎಂಬುದರತ್ತ ಬೊಟ್ಟು ಮಾಡುತ್ತಿವೆ. ಬಾಯ್ಲರ್‌ಗಳಿರುವ ಕಾರ್ಖಾನೆಗಳಲ್ಲಿ ಪರಿಶೀಲನೆ ನಡೆಸಿ ಸುರಕ್ಷತಾ ವ್ಯವಸ್ಥೆಯನ್ನು ಖಚಿತಪಡಿಸಿಕೊಳ್ಳಲೆಂದೇ ಕಾರ್ಮಿಕ ಇಲಾಖೆಯಲ್ಲಿ ಬಾಯ್ಲರ್ ಇನ್‌ಸ್ಪೆಕ್ಟರ್‌ಗಳಿರುತ್ತಾರೆ. ಅವರು ತಮ್ಮ ವ್ಯಾಪ್ತಿಯ ಕಾರ್ಖಾನೆಗಳನ್ನು ಸರಿಯಾಗಿ ಪರಿಶೀಲಿಸಿ ದೃಢೀಕರಿಸುತ್ತಿದ್ದಾರೆಯೇ? ಎಂಬ ಪ್ರಶ್ನೆಯನ್ನು ಈ ಸರಣಿ ಸ್ಫೋಟ ಘಟನೆಗಳು ಮೂಡಿಸುತ್ತಿವೆ.

ತ.ನಾ ಪಟಾಕಿ ಘಟಕ ಸ್ಫೋಟಕ್ಕೆ 7 ಸಾವು

ಶಿವಕಾಶಿ: 'ಭಾರತದ ಪಟಾಕಿಗಳ ರಾಜಧಾನಿ' ಎಂದು ಕರೆಯಲಾಗುವ ಮತ್ತು ಬೆಂಕಿಕಡ್ಡಿ-ಪೆಟ್ಟಿಗೆ ಉದ್ಯಮ ಮತ್ತು ಕಲರ್ ಪ್ರಿಂಟಿಂಗ್ ಉದ್ಯಮದ ಕೇಂದ್ರವಾಗಿರುವ ತಮಿಳುನಾಡು ರಾಜ್ಯದ 'ಶಿವಕಾಶಿ' ಸಮೀಪದ ಪಟಾಕಿ ಘಟಕವೊಂದರಲ್ಲಿ ಸ್ಫೋಟವಾಗಿ 7 ಕಾರ್ಮಿಕರು ಜೀವಂತ ದಹಿಸಿಹೋಗಿದ್ದಾರೆ.

ಶಿವಕಾಶಿ ಸಮೀಪದ ಸತ್ತೂರು ಬಳಿಯ ಚಿನ್ನಕಾಮನ್‌ಪಟ್ಟಿಯಲ್ಲಿನ ಪಟಾಕಿ ತಯಾರಿಕಾ ಘಟಕದಲ್ಲಿ ಮಂಗಳವಾರ ಬೆಳಗ್ಗೆ ಭಾರೀ ಸ್ಫೋಟವಾಗಿದ್ದು, ಲಕ್ಷ್ಮಿ, ಪುಣ್ಣಿಯಮೂರ್ತಿ, ರಾಮಮೂರ್ತಿ, ಚೆಲ್ಲಾಪಾಂಡಿ, ವೈರಾಮಣಿ ಸೇರಿದಂತೆ 7 ಕಾರ್ಮಿಕರು ಸಾವನ್ನಪ್ಪಿದರು.

ಐವರು ಕಾರ್ಮಿಕರು ಗಾಯಗೊಂಡಿದ್ದು, ಮೂವರ ಸ್ಥಿತಿ ಗಂಭೀರವಾಗಿದೆ. ದೇಹದ ಹೆಚ್ಚಿನ ಭಾಗ ದಹಿಸಿರುವುದರಿಂದ ಪ್ರಜ್ಞಾಹೀನರಾಗಿದ್ದಾರೆ. ಸ್ಫೋಟದ ವೇಳೆ ಪಟಾಕಿ ತಯಾರಿಸುತ್ತಿದ್ದ ಲಿಂಗುಸ್ವಾಮಿ, ಕರುಪಸಾಮಿ, ಮಣಿಕಂಡನ್, ಮುರುಗಲಕ್ಷ್ಮಿ ಮತ್ತು ಅಲಗುರಾಜ್ ಗಾಯಗೊಂಡಿದ್ದು, ವಿರುಧನಗರ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಮತ್ತಿಬ್ಬರು ಕಾರ್ಮಿಕರು ಕಣ್ಮರೆಯಾಗಿದ್ದು, ಪಟಾಕಿ ಘಟಕದ ಅವಶೇಷಗಳಡಿ ಸಿಲುಕಿರುವ ಶಂಕೆ ವ್ಯಕ್ತವಾಗಿದೆ. ಪರಿಣಾಮ ಸಾವಿನ ಸಂಖ್ಯೆ ಹೆಚ್ಚುವ ಸಾಧ್ಯತೆ ಇದೆ.

ಸ್ಫೋಟದ ಸುದ್ದಿ ತಿಳಿಯುತ್ತಲೇ ಅಗ್ನಿಶಾಮಕ ದಳ ಸ್ಥಳಕ್ಕೆ ಧಾವಿಸಿ ಬೆಂಕಿ ನಂದಿಸಿದರು. ರಕ್ಷಣಾ ಸೇವಾ ಘಟಕದ ಸಿಬ್ಬಂದಿ ಗಾಯಾಳುಗಳನ್ನು ಆಸ್ಪತ್ರೆಗೆ ಕರೆದೊಯ್ಯಲು ನೆರವಾದರು. ಅವಶೇಷಗಳಡಿ ಸಿಲುಕಿದವರಿಗಾಗಿ ಶೋಧ ನಡೆಸಿದ್ದಾರೆ. ಸತ್ತೂರು ಪಟ್ಟಣ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ. ಕಳೆದ ವರ್ಷ ಶಿವಕಾಶಿಯಲ್ಲಿ ಪಟಾಕಿ ಘಟಕ ಸ್ಫೋಟಗೊಂಡು 10 ಮಂದಿ ಸಾವಿಗೀಡಾಗಿದ್ದರು.

ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್ ₹58 ಅಗ್ಗ!

ದೆಹಲಿ: ವಾಣಿಜ್ಯ ಉದ್ದೇಶಕ್ಕೆ ಬಳಸಲಾಗುವ ಅಡುಗೆ ಅನಿಲ ಸಿಲಿಂಡರ್‌ಗಳ ದರ ಒಂದೇ ದಿನದಲ್ಲಿ ಬಲು ಅಗ್ಗವಾಗಿದೆ. ಆದರೆ, ಗೃಹ ಬಳಕೆಯ(ಸಬ್ಸಿಡಿ ಸಹಿತ) 14.2 ಕಿಲೋ ಎಲ್‌ಪಿಜಿ ಸಿಲಿಂಡರ್ ದರದಲ್ಲಿ ಯಾವುದೇ ಬದಲಾವಣೆ ಆಗಿಲ್ಲ.

19 ಕಿಲೋ ತೂಕದ ಕಮರ್ಷಿಯಲ್ ಎಲ್‌ಪಿಜಿ ಸಿಲಿಂಡರ್ ದರ 58.50 ರು.ಗಳಷ್ಟು ತಗ್ಗಿದೆ. ಇದರಿಂದ ಮುಖ್ಯವಾಗಿ ಹೋಟೆಲ್ ಉದ್ಯಮಕ್ಕೆ ಅನುಕೂಲವಾಗಲಿದೆ. ದಿನಕ್ಕೆ ಹತ್ತಾರು ಎಲ್‌ಪಿಜಿ ಸಿಲಿಂಡರ್‌ಗಳನ್ನು ಬಳಸುವ ದೊಡ್ಡ ಹೋಟೆಲ್‌ಗಳಿಗೆ, ಸಣ್ಣ ಉದ್ಯಮ ಸಂಸ್ಥೆಗಳಿಗೆ ತಿಂಗಳಲ್ಲಿ 10-15 ಸಾವಿರ ರು.ವರೆಗೂ ಉಳಿತಾಯವಾಗಲಿದೆ. ಪೆಟ್ರೋಲಿಯಂ ಉತ್ಪನ್ನಗಳ ಮಾರಾಟ ಕಂಪನಿಗಳು ಅಡುಗೆ ಅನಿಲ ಸಿಲಿಂಡರ್ ದರವನ್ನು ಮಂಗಳವಾರ ಪರಿಷ್ಕರಿಸಿವೆ. ಪರಿಣಾಮ 19 ಕೆಜಿ ಎಲ್‌ಪಿಜಿ ದರ 58.50 ರು.ಗಳಷ್ಟು ತಗ್ಗಿದೆ. ಇದರಿಂದ 19 ಕಿಲೋ ವಾಣಿಜ್ಯ ಬಳಕೆ ಅಡುಗೆ ಅನಿಲ ಸಿಲಿಂಡರ್ ದರ ದೆಹಲಿಯಲ್ಲಿ 1665 ರು.ಗೆ, ಮುಂಬೈನಲ್ಲಿ 1616 ರು.ಗೆ, ಕೋಲ್ಕತ್ತದಲ್ಲಿ 1769 ರು.ಗೆ ಮತ್ತು ಚೆನ್ನೈನಲ್ಲಿ 1823.50 ರು.ಗೆ ಇಳಿಕೆಯಾಗಿದೆ. ಇರಾನ್-ಇಸ್ರೇಲ್ ಯುದ್ಧ ಜೂ.27ರಂದು ಕೊನೆಗೊಂಡು ಕದನ ವಿರಾಮ ಘೋಷಣೆಯಾದ ಬಳಿಕ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲ ಮಾರಾಟ ದರ ಇಳಿಮುಖವಾಗಿದೆ. ಹಾಗಾಗಿ, ತೈಲೋತ್ಪನ್ನಗಳ ಮಾರಾಟ ಕಂಪನಿಗಳು ಎಲ್‌ಪಿಜಿ ದರ ಪರಿಷ್ಕರಿಸಿವೆ ಎಂದು ಹೇಳಲಾಗಿದೆ.

ವಿದ್ಯಾರ್ಥಿ ಸೋಗಿನಲ್ಲಿ 14 ದಿನ ಉಳಿದಿದ್ದ ಮಂಗಳೂರು ಯುವಕ

'ಐಐಟಿ-ಬಿ' ಅಕ್ರಮವಾಸ: ಯುವಕ ಸೆರೆ

ಮುಂಬೈ: ದೇಶದ ಪ್ರತಿಷ್ಠಿತ ತಾಂತ್ರಿಕ ಶಿಕ್ಷಣ ಸಂಸ್ಥೆಯಲ್ಲಿ ಭಾರೀ ಭದ್ರತಾ ಲೋಪವಾಗಿದೆ. ಐಐಟಿ ಬಾಂಬೆ ಕ್ಯಾಂಪಸ್‌ಗೆ ವಿದ್ಯಾರ್ಥಿ ಸೋಗಿನಲ್ಲಿ ನುಸುಳಿ 14 ದಿನಗಳ ಕಾಲ ಉಳಿದುಕೊಂಡಿದ್ದ, ಅಲ್ಲದೇ ದುರುದ್ದೇಶದಿಂದ 21 ಇ-ಮೇಲ್ ಐಡಿಗಳನ್ನು ಸೃಷ್ಟಿಸಿದ್ದ ಮಂಗಳೂರು ಯುವಕನನ್ನು ಮುಂಬೈ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ. ಬಂಧಿತನನ್ನು ಮಂಗಳೂರು ನಗರದ ಬಿಲಾಲ್ ಅಹ್ಮದ್ ತೇಲಿ ಎಂದು ಗುರುತಿಸಲಾಗಿದೆ.

ಕಾಲೇಜು ಕ್ಯಾಂಪಸ್‌ನ ಭದ್ರತಾ ಸಿಬ್ಬಂದಿ ಯುವಕನನ್ನು ಜೂ.17ರ ಸಂಜೆ 4ರ ವೇಳೆ ಸೆರೆ ಹಿಡಿದು ಮುಂಬೈನ ಪೊವೈ ಠಾಣೆ ಪೊಲೀಸರಿಗೆ ಒಪ್ಪಿಸಿದ್ದಾರೆ. ಕಾಲೇಜು ಆಡಳಿತ ಮಂಡಳಿ, ಅಕ್ರಮ ಪ್ರವೇಶ-ವಾಸ ಆರೋಪದಡಿ ದೂರು ದಾಖಲಿಸಿದೆ. ಶಿಕ್ಷಣ ಸಂಸ್ಥೆಯ ಪ್ರಮುಖ ಕಾರ್ಯಕ್ರಮ ಮತ್ತು 1 ದಿನದ ಅಧ್ಯಯನಕ್ಕೆಂದು ಬಂದಿದ್ದ ಬಿಲಾಲ್ ಬಳಿಕ ಕ್ಯಾಪಸ್‌ನಿಂದ ನಿರ್ಗಮಿಸಿರಲಿಲ್ಲ. ಬದಲಾಗಿ ಉಪನ್ಯಾಸಕರ ವಿವಿಧ ತರಗತಿಗಳಿಗೆ ಹಾಜರಾಗುತ್ತಿದ್ದ. ಅಲ್ಲದೇ, 'ನಕಲಿ ವಿದ್ಯಾರ್ಥಿ' ಹಾಸ್ಟೆಲ್ ಕೊಠಡಿಯಲ್ಲಿ ಸೋಫಾ ಮೇಲೆ ಮಲಗುತ್ತಿದ್ದ, ಉಚಿತ ಕಾಫಿ ಲಭ್ಯವಿರುವೆಡೆ ತೆರಳಿ ಕಾಫಿ ಸೇವಿಸುತ್ತಿದ್ದ. ತಾನು ಪಿಎಚ್‌ಡಿ ವಿದ್ಯಾರ್ಥಿ ಎಂದು ಹೇಳಿಕೊಂಡು ನಕಲಿ ದಾಖಲೆಗಳನ್ನು ತೋರಿಸಿದ್ದ. ಗುರುತಿನ ಚೀಟಿ ಕೇಳಿದಾಗ ಪರಾರಿಯಾಗಿದ್ದ ಎಂದು ಕಾಲೇಜು ಆಡಳಿತ ದೂರಿದೆ. 12ನೇ ತರಗತಿ ಬಳಿಕ ಸಾಫ್ಟ್‌ವೇರ್ ವಿಷಯದಲ್ಲಿ 6 ತಿಂಗಳ ಕೋರ್ಸ್ ಮಾಡಿದ್ದ. ವೆಬ್ ವಿನ್ಯಾಸದಲ್ಲಿ 1 ವರ್ಷದ ಡಿಪ್ಲೊಮಾ ಮಾಡಿದ್ದ. ಬಿಲಾಲ್ ತಂದೆಗೆ ಗಾರ್ಮೆಂಟ್ ವ್ಯವಹಾರವಿದೆ. ಬಿಲಾಲ್ ಪ್ರಸ್ತುತ ಗುಜರಾತ್ ರಾಜ್ಯದ ಸೂರತ್ ನಗರದಲ್ಲಿನ ಖಾಸಗಿ ಕಂಪನಿ ಉದ್ಯೋಗಿಯಾಗಿದ್ದು, ಮಾಸಿಕ 1.25 ಲಕ್ಷ ರು. ವೇತನ ಪಡೆಯುತ್ತಿದ್ದ ಎಂದು ತನಿಖೆ ವೇಳೆ ತಿಳಿದುಬಂದಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ನಕಲಿ ವಿದ್ಯಾರ್ಥಿ ಸಿಕ್ಕಿಬಿದ್ದ

ನಕಲಿ ವಿದ್ಯಾರ್ಥಿ ತರಗತಿಯಲ್ಲಿದ್ದಾಗ ಪ್ರಾಧ್ಯಾಪಕರೊಬ್ಬರು ಗುರುತಿನ ಚೀಟಿ ತೋರಿಸುವಂತೆ ಕೇಳಿದ್ದರು. ಆಗ ಏನೋ ಹೇಳಿ ತಪ್ಪಿಸಿಕೊಂಡಿದ್ದ. ಮತ್ತೊಮ್ಮೆ ಶಿಲ್ಪಾ ಕೋಟಿಕ್ಕಲ್ ಎಂಬವರು ಯುವಕನೊಬ್ಬ ಅನುಮಾನಾಸ್ಪದವಾಗಿ ತಮ್ಮ ಕಚೇರಿಗೆ ಪ್ರವೇಶಿಸುವುದನ್ನು ಕಂಡು ಪ್ರಶ್ನಿಸಿದ್ದರು. ಗುರುತಿನ ಚೀಟಿ ತೋರಿಸುವಂತೆ ಕೇಳಿದಾಗ ನಕಲಿ ವಿದ್ಯಾರ್ಥಿ ಅಲ್ಲಿಂದ ಓಡಿ ಹೋಗಿದ್ದ. ಆಗ ಕ್ಯಾಂಪಸ್‌ನ ಭದ್ರತಾ ಸಿಬ್ಬಂದಿಗಳ ಮೂಲಕ ಪರಿಶೀಲನೆ ನಡೆಸಿದಾಗ ನಕಲಿ ವಿದ್ಯಾರ್ಥಿ ಸೆರೆ ಸಿಕ್ಕ. ಅತ ಕ್ಯಾಂಪಸ್‌ನಲ್ಲಿ 14 ದಿನಗಳಿಂದ ಅಕ್ರಮವಾಗಿ ವಾಸ್ತವ್ಯ ಹೂಡಿರುವುದು ಆಗ ಬೆಳಕಿಗೆ ಬಂದಿತು.

ಐ ಲವ್‌ಯು ಎನ್ನುವುದು ಲೈಂಗಿಕ ದೌರ್ಜನ್ಯ ಅಲ್ಲ

ಮುಂಬೈ: 'ಐ ಲವ್ ಯು'(ನಾನು ನಿನ್ನನ್ನು ಪ್ರೀತಿಸುತ್ತೇನೆ) ಎಂದು ಹೇಳುವುದು ಭಾವನೆಗಳ ಅಭಿವ್ಯಕ್ತಿಯೇ ಹೊರತು ಅದು 'ಲೈಂಗಿಕ ಆಕಾಂಕ್ಷೆ' ಹೊಂದಿರುವುದಕ್ಕೆ ಸಮನಲ್ಲ ಎಂದು ಬಾಂಬೆ ಹೈಕೋರ್ಟ್‌ನ ನಾಗಪುರ ಪೀಠ ವ್ಯಾಖ್ಯಾನಿಸಿದೆ.

2015ರಲ್ಲಿ 17 ವರ್ಷದ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಡಿ ಸೆಷನ್ಸ್ ನ್ಯಾಯಾಲಯದಿಂದ ಶಿಕ್ಷೆಗೆ ಒಳಗಾಗಿದ್ದ 35 ವರ್ಷದ ವ್ಯಕ್ತಿಯೊಬ್ಬರು 'ಪ್ರಕರಣ ರದ್ದು ಕೋರಿ' ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾ.ಊರ್ಮಿಳಾ ಜೋಶಿ- ಫಾಲ್ಕೆ ಅವರ ಪೀಠ 'ಐ ಲವ್ ಯು' ಎಂಬ ಪದಗಳನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸಿ ಪದಗಳ ಮಿತಿಗಳನ್ನು ವಿವರಿಸಿದೆ. ಅಲ್ಲದೇ, ಸಂತ್ರಸ್ತ ಬಾಲಕಿ ಜತೆ ಲೈಂಗಿಕ ಸಂಪರ್ಕ ಹೊಂದಬೇಕು ಎನ್ನುವುದು ಆಪಾದಿತನ ಉದ್ದೇಶವಾಗಿತ್ತು ಎಂಬುದನ್ನು ಸಾಬೀತು ಪಡಿಸಲು ಯಾವುದೇ ಪುರಾವೆ ಇಲ್ಲ ಎಂದು ಹೇಳಿದ ಪೀಠ, ಆತನನ್ನು 'ಪೋಸ್ಕೊ' ಪ್ರಕರಣದಿಂದ ಖುಲಾಸೆಗೊಳಿಸಿ ಬಿಡುಗಡೆ ಮಾಡಲು ಆದೇಶಿಸಿದೆ. ಲೈಂಗಿಕ ಕಿರುಕುಳ ಎನ್ನುವುದರಲ್ಲಿ ಹೆಣ್ಣಿನ ದೇಹದ ಅನುಚಿತ ಸ್ಪರ್ಶ, ಬಲವಂತವಾಗಿ ಬಟ್ಟೆ ಕಳಚುವುದು, ಅಸಭ್ಯ ಸನ್ನೆಗಳು, ಮಹಿಳೆಯ ಪ್ರತಿಷ್ಠೆಗೆ ಅವಮಾನ ಮಾಡುವ ಉದ್ದೇಶದ ಟೀಕೆಗಳು ಸೇರಿರುತ್ತವೆ ಎಂದು ನ್ಯಾಯಮೂರ್ತಿ ಹೇಳಿದ್ದಾರೆ. ಅರ್ಜಿದಾರ ನಾಗಪುರ ನಿವಾಸಿಯಾಗಿದ್ದು, ಶಾಲೆಯಿಂದ ಮನೆಗೆ ತೆರಳುತ್ತಿದ್ದ ಬಾಲಕಿಯನ್ನು ತಡೆದು, ಕೈಹಿಡಿದು 'ಐ ಲವ್ ಯು' ಎಂದಿದ್ದ. ಆತನ ವಿರುದ್ಧ ಲೈಂಗಿಕ ಕಿರುಕುಳ ಪ್ರಕರಣ ದಾಖಲಾಗಿ 2017ರಲ್ಲಿ ನಾಗಪುರ ಸೆಷನ್ಸ್ ನ್ಯಾಯಾಲಯ ಐಪಿಸಿ ಮತ್ತು ಪೋಕ್ಸೊ ಕಾಯ್ದೆಯಡಿ ದೋಷಿ ಎಂದು ತೀರ್ಪಿತ್ತು, 3 ವರ್ಷಗಳ ಜೈಲು ಶಿಕ್ಷೆ ವಿಧಿಸಿತ್ತು.

ಅಮರನಾಥ ಯಾತ್ರೆ ನಾಳೆ

ಜಮ್ಮು: ಸಮುದ್ರ ಮಟ್ಟದಿಂದ 3880 ಮೀಟರ್‌ಗಳಷ್ಟು ಎತ್ತರದಲ್ಲಿರುವ ಅಮರನಾಥದಲ್ಲಿನ ಗುಹಾಂತರ ದೇವಾಲಯದಲ್ಲಿನ ಹಿಮಲಿಂಗದ ದರ್ಶನಕ್ಕೆ ಅವಕಾಶ ಮಾಡಿಕೊಡುವ ಪವಿತ್ರ ಅಮರನಾಥ ಯಾತ್ರೆ ಜು.3ರ ಗುರುವಾರ ಆರಂಭಗೊಳ್ಳುತ್ತಿದೆ. 38 ದಿನಗಳ ಯಾತ್ರೆ ಈ ಬಾರಿಯೂ ಎರಡು ಮಾರ್ಗಗಳಲ್ಲಿ ಸಾಗಲಿದೆ. ಅನಂತನಾಗ್ ಜಿಲ್ಲೆಯ 48 ಕಿಮೀ ಅಂತರದ ನುನ್ವಾನ್-ಪಹಲಮ್ ಮಾರ್ಗ ಮತ್ತು 14 ಕಿಮೀ ದೂರದ ಗಂದೇರ್‌ಬಾಲ್ ಜಿಲ್ಲೆಯ ಕಡಿದಾದ ರಸ್ತೆಯ ಮಾರ್ಗಗಳಲ್ಲಿ ಯಾವುದಾದರೂ ಒಂದನ್ನು ಭಕ್ತರು ಆಯ್ಕೆ ಮಾಡಿಕೊಳ್ಳಬಹುದಾಗಿದೆ. ಗುರುವಾರ ಆರಂಭಗೊಳ್ಳುವ ಈ ಪವಿತ್ರ ಯಾತ್ರೆ ಒಟ್ಟು 38 ದಿನಗಳ ಕಾಲ ಜರಗಲಿದೆ.

ಸದ್ಯ ಆನ್‌ಲೈನ್ ಮೂಲಕವೂ ಯಾತ್ರಿಕರಿಗೆ ನೋಂದಣಿ ಮಾಡಿಕೊಳ್ಳಲು ಅವಕಾಶವಿದೆ. ಅಲ್ಲದೇ, ಜಮ್ಮು ಪ್ರದೇಶದಲ್ಲಿನ ಶಿಬಿರದಲ್ಲಿ ನೇರವಾಗಿಯೂ ನೋಂದಣಿ ಮಾಡಿಕೊಳ್ಳಬಹುದಾಗಿದೆ. ಯಾತ್ರೆಗೆ ನೋಂದಣಿ ಮಾಡಿಸಲು ಜಮ್ಮುವಿನ ಶಾಲಿಮಾರ್ ಪ್ರದೇಶದಲ್ಲಿ ಕೌಂಟರ್ ತೆರೆಯಲಾಗಿದೆ. ಅಮರನಾಥ ಯಾತ್ರೆಯ ಆಕಾಂಕ್ಷಿಗಳಾದ ಸನಾತನ ಧರ್ಮದ ಅನುಯಾಯಿಗಳು ನೂರಾರು ಸಂಖ್ಯೆಯಲ್ಲಿ ಸಾಲುಗಟ್ಟಿ ಮಂಗಳವಾರ ನೋಂದಾಯಿಸಿಕೊಂಡರು.

ಇಂಡೊ ಪೆಸಿಫಿಕ್‌ನಲ್ಲಿ ಚೀನಾ ಸವಾಲು ಎದುರಿಸಲು ಪರಸ್ಪರ ಸಹಕಾರ ಅನಿವಾರ್ಯ

ಭಾರತ-ಅಮೆರಿಕ ವ್ಯಾಪಾರ ಒಪ್ಪಂದ ಶೀಘ್ರ: ಶ್ವೇತಭವನ

ವಾಷಿಂಗ್ಟನ್: ಇಂಡೊ-ಪೆಸಿಫಿಕ್ ಪ್ರದೇಶದಲ್ಲಿನ ಪ್ರಮುಖ ಕಾರ್ಯತಂತ್ರ ಪಾಲುದಾರಿಕೆಗೆ ಭಾರತದ ಜತೆಗಿನ ವ್ಯಾಪಾರ ಒಪ್ಪಂದ ಬಹಳ ಪ್ರಮುಖವಾದುದಾಗಿದೆ ಎಂದಿರುವ ಶ್ವೇತಭವನ, ವ್ಯಾಪಾರ ಒಪ್ಪಂದ ಶೀಘ್ರದಲ್ಲೇ ಅಂತಿಮಗೊಳ್ಳಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದೆ.

ಏಷ್ಯಾ ವಲಯದಲ್ಲಿ ಅಮೆರಿಕ ಕಾರ್ಯತಂತ್ರಕ್ಕೆ ಭಾರತ ಅತ್ಯಂತ ಆಪ್ತ ರಾಷ್ಟ್ರವಾಗಿದೆ. ಜತೆಗೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೂ ಪ್ರಧಾನಿ ನರೇಂದ್ರ ಮೋದಿ ಜತೆ ಉತ್ತಮ ಸಂಬಂಧ ಹೊಂದಿದ್ದಾರೆ. ಆ ಸ್ನೇಹವನ್ನು ಸಂಬಂಧವನ್ನು ಟ್ರಂಪ್ ಮುಂದುವರಿಸುತ್ತಾರೆ ಎಂದು ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಕ್ಯಾರೊಲಿನ್ ಲೀವಿಟ್ ಭಾರತದ ಸುದ್ದಿ ಸಂಸ್ಥೆಗೆ ಸೋಮವಾರ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

ಅಧ್ಯಕ್ಷ ಟ್ರಂಪ್ ಕಳೆದ ವಾರವಷ್ಟೇ ಅಮೆರಿಕ- ಭಾರತ ವ್ಯಾಪಾರ ಒಪ್ಪಂದ ಬಹಳ ಹತ್ತಿರದಲ್ಲಿದೆ. ಒಪ್ಪಂದಕ್ಕೆ ಎದುರಾಗಿರುವ ಅಡೆತಡೆಗಳನ್ನು ಪೂರ್ಣ ನಿವಾರಿಸಿ ಶೀಘ್ರದಲ್ಲೇ ಭಾರತದ ಜತೆ ವ್ಯಾಪಾರ ಒಪ್ಪಂದ ಮಾಡಿಕೊಳ್ಳಲಾಗುವುದು ಎಂದಿದ್ದರು. ಅದು ನಿಜವಾಗಲಿದೆ. ಅಮೆರಿಕ ವಾಣಿಜ್ಯ ಸಚಿವರು, ಅಧ್ಯಕ್ಷ ಟ್ರಂಪ್ ಜತೆ ಓವಲ್ ಕಚೇರಿಯಲ್ಲಿದ್ದು, ಭಾರತದ ಜತೆಗಿನ ವ್ಯಾಪಾರ ಒಪ್ಪಂದದ ಅಂಶಗಳನ್ನು ಅಂತಿಮಗೊಳಿಸುತ್ತಿದ್ದಾರೆ. ಶೀಘ್ರದಲ್ಲೇ ಅಧ್ಯಕ್ಷರು ಒಪ್ಪಂದ ಅಂತಿಮಗೊಳಿಸಿದ್ದನ್ನು ಪ್ರಕಟಿಸಲಿದ್ದಾರೆ ಎಂದು ಹೇಳಿದರು.

ಕೃಷಿ ಉತ್ಪನ್ನಗಳಿಗೆ ಸುಂಕ: ಭಾರತದ ಬಿಗಿ ನಿಲುವು

ಅಮೆರಿಕದ ಕೃಷಿ ಉತ್ಪನ್ನಗಳ ಮೇಲೆ ಭಾರತ ಸರಕಾರ ವಿಧಿಸಿರುವ ತೆರಿಗೆಯಲ್ಲಿ ರಿಯಾಯಿತಿ ನೀಡುವ ವಿಚಾರದಲ್ಲಿ ಭಾರತದ ನಿಲುವು ಬಿಗಿಯಾಗಿದೆ. ಈ ಅಂಶವೇ ಪ್ರಮುಖವಾಗಿ ಎರಡೂ ದೇಶಗಳ ನಡುವಿನ ವ್ಯಾಪಾರ ಒಪ್ಪಂದ ಅಂತಿಮಗೊಳ್ಳುವುದಕ್ಕೆ ಅಡ್ಡಿಯಾಗಿದೆ ಎಂಬ ಮಾತುಗಳು ಕೇಳಿಬಂದಿವೆ. ವಾಣಿಜ್ಯ ಇಲಾಖೆ ವಿಶೇಷ ಕಾರ್ಯದರ್ಶಿ ರಾಜೇಶ್ ಅಗರ್ವಾಲ್ ನೇತೃತ್ವದ ಭಾರತದ ತಂಡ ವ್ಯಾಪಾರ ಒಪ್ಪಂದ ಕುರಿತು ಅಮೆರಿಕ ಅಧಿಕಾರಿಗಳ ಜತೆ ಮಾತುಕತೆ ನಡೆಸುತ್ತಲೇ ಇದೆ. ಮಾತುಕತೆ ಸೋಮವಾರದ ವೇಳೆಗೆ ನಿರ್ಣಾಯಕ ಹಂತಕ್ಕೆ ಬಂದಿದೆ. ಆದರೆ, ಇನ್ನೂ ಅಂತಿಮಗೊಂಡಿಲ್ಲ ಎಂದು ಭಾರತದ ಅಧಿಕಾರಿಯೊಬ್ಬರು ಸೋಮವಾರ ತಿಳಿಸಿದ್ದಾರೆ.ಮಾತುಕತೆ ವಿಫಲವಾದರೆ ಜು.10ರಿಂದ ಭಾರತದ ಸರಕುಗಳ ಮೇಲೆ ಶೇ.26ರಷ್ಟು ಪ್ರತಿಸುಂಕ ಜಾರಿಗೊಳ್ಳುತ್ತವೆ. ಪರಿಣಾಮ ಅಮೆರಿಕ ಮಾರುಕಟ್ಟೆಯಲ್ಲಿ ದುಬಾರಿಯಾಗುತ್ತವೆ. ಮಾರುಕಟ್ಟೆ ಸ್ಪರ್ಧೆಯನ್ನು ಎದುರಿಸುವುದು ಕಷ್ಟವಾಗುತ್ತದೆ ಎಂದು ಅಧಿಕಾರಿ ಹೇಳಿದರು.

ಎಲಾನ್ ಮಸ್ಕ್‌ಗೆ ಅಧ್ಯಕ್ಷ ಟ್ರಂಪ್ ಬೆದರಿಕೆ | ಒನ್ ಬಿಗ್ ಬ್ಯುಟಿಫುಲ್ ಬಿಲ್ ವಿರೋಧಿಸಿದ್ದಕ್ಕೆ ಮತ್ತೆ ಜಟಾಪಟಿ

ಎಲೆಕ್ಟ್ರಿಕ್ ಕಾರಿಗೆ ಸಬ್ಸಿಡಿ ನಿಲ್ಲಿಸಿದರೆ ಮಸ್ಕ್ ದೇಶ ಬಿಡುವುದು ಖಚಿತ

ವಾಷಿಂಗ್ಟನ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಟೆಸ್ಲಾ ಕಾರು, ಎಕ್ಸ್ ಸಂದೇಶ ಆಪ್, ಸ್ಪೇಸ್ ಎಕ್ಸ್ ಕಂಪನಿಗಳ ಮಾಲೀಕ ಎಲಾನ್ ಮಸ್ಕ್ ನಡುವೆ ಮತ್ತೆ ಜಟಾಪಟಿ ಶುರುವಾಗಿದೆ. ಈ ಬಾರಿ ತಾರಕಕ್ಕೇರಿದೆ.

ಡೊನಾಲ್ಡ್ ಟ್ರಂಪ್ ದೇಶದಲ್ಲಿ ಜಾರಿಗೆ ತರಲು ಉದ್ದೇಶಿಸಿರುವ 'ಸರಕಾರದ ವೆಚ್ಚ'ಕ್ಕೆ ಸಂಬಂಧಿಸಿದ 'ಒನ್ ಬಿಗ್ ಬ್ಯುಟಿಫುಲ್ ಬಿಲ್' ವಿಧೇಯಕವನ್ನು ತೀವ್ರವಾಗಿ ವಿರೋಧಿಸುತ್ತಿರುವ ಎಲಾನ್ ಮಸ್ಕ್, 'ಈ ವಿಧೇಯಕ ಅಮೆರಿಕಕ್ಕೆ, ಅಮೆರಿಕನ್ನರಿಗೆ ಕೆಡಕು ಮಾಡಲಿದೆ. ಒಂದೊಮ್ಮೆ ಇದು ಸಂಸತ್ತಿನಲ್ಲಿ ಅಂಗೀಕಾರಗೊಂಡರೆ ನಾನೂ ರಾಜಕೀಯ ರಂಗಕ್ಕೆ ದುಮುಕುವೆ. ಹೊಸ ಪಕ್ಷ ಕಟ್ಟುವೆ' ಎಂದು ಸವಾಲೆಸೆದಿದ್ದಾರೆ.

ಮಸ್ಕ್‌ರ ಈ ಬೆದರಿಕೆಗೆ ಪ್ರತಿಯಾಗಿ ಅಧ್ಯಕ್ಷ ಟ್ರಂಪ್, ದೇಶದಲ್ಲಿನ ಎಲೆಕ್ಟ್ರಿಕ್ ವಾಹನಗಳ (ಮುಖ್ಯವಾಗಿ ಟೆಸ್ಲಾ ಕಾರು) ಮೇಲಿನ ಸರಕಾರದ ಸಬ್ಸಿಡಿಯನ್ನೇ ರದ್ದುಗೊಳಿಸುವುದಾಗಿ ಎಚ್ಚರಿಕೆ ನೀಡಿದ್ದಾರೆ. 'ಈ ಬಾರಿಯ ಅಧ್ಯಕ್ಷೀಯ ಚುನಾವಣೆಗೆ ನಾನು ಸ್ಪರ್ಧೆ ಮಾಡಿದಾಗ ಎಲಾನ್ ಮಸ್ಕ್ ನನ್ನನ್ನು ಬಹಳವಾಗಿ ಬೆಂಬಲಿಸಿದ್ದರು. ಆ ಚುನಾವಣೆಯಲ್ಲಿಯೇ ನಮ್ಮ ಪಕ್ಷ ಎಲೆಕ್ಟ್ರಿಕ್ ವಾಹನಗಳಿಗೆ ದೊಡ್ಡ ಮೊತ್ತದ ಸಬ್ಸಿಡಿ ನೀಡುವುದನ್ನು ವಿರೋಧಿಸಿತ್ತು. ಆಗಿನ ಚುನಾವಣೆಯಲ್ಲಿನ ಪ್ರಚಾರದಲ್ಲಿ ಅದುವೇ ಪ್ರಧಾನ ಅಂಶಗಳಲ್ಲೊಂದಾಗಿತ್ತು. ಈ ವಿಚಾರ 'ಡಿಪಾರ್ಟ್‌ಮೆಂಟ್ ಆಫ್ ಗವರ್ನಿಂಗ್ ಈಸ್'(ಡಿಒಜಿಇ- ಡೋಜ್) ಇಲಾಖೆಯ ಮುಖ್ಯಸ್ಥರಾಗಿದ್ದ ಎಲಾನ್ ಮಸ್ಕ್‌ಗೂ ಗೊತ್ತಿತ್ತು. ಈಗ ನಾನೇನಾದರೂ ಆ(ಎಲೆಕ್ಟ್ರಿಕ್ ವಾಹನಗಳಿಗೆ ಸಬ್ಸಿಡಿ ಸ್ಥಗಿತ) ನೀತಿಯನ್ನು ಜಾರಿಗೆ ತಂದರೆ, ಮಸ್ಕ್ ತಮ್ಮ ಎಲೆಕ್ಟ್ರಿಕ್ ಕಾರುಗಳನ್ನು ಅಮೆರಿಕದಲ್ಲಿ ಮಾರುವುದೇ ಕಷ್ಟವಾಗಲಿದೆ. ಆಗ, ಅನಿವಾರ್ಯವಾಗಿ ಕಾರು ಫ್ಯಾಕ್ಟರಿ ಮುಚ್ಚಿ ಬಾಗಿಲಿಗೆ ಬೀಗ ಹಾಕಿ ತವರೂರಿಗೆ(ದಕ್ಷಿಣ ಆಫ್ರಿಕಾಗೆ) ವಾಪಸಾಗಬೇಕಾಗುತ್ತದೆ' ಎಂದು ಟ್ರಂಪ್ ಬಲವಾದ ತಿರುಗೇಟು ನೀಡಿದ್ದಾರೆ.

'ದೇಶಕ್ಕೆ ಎಲೆಕ್ಟ್ರಿಕ್ ಕಾರುಗಳೇನೋ ಜನ ಬಳಕೆಗೆ ಬೇಕಾಗಿದೆ ನಿಜ. ಆದರೆ, ಪ್ರತಿಯೊಬ್ಬರೂ ಎಲೆಕ್ಟ್ರಿಕ್ ಕಾರುಗಳನ್ನೇ ಖರೀದಿಸಬೇಕು ಎಂದು ಒತ್ತಾಯ ಮಾಡುವುದು ಸರಿಯಲ್ಲ' ಎಂದಿರುವ ಟ್ರಂಪ್, 'ಈ ಮೊದಲು ಮಸ್ಕ್ ಮುಖ್ಯಸ್ಥರಾಗಿದ್ದ 'ಡೋಜ್' ಇಲಾಖೆಯೇ ಈಗ ಎಲೆಕ್ಟ್ರಿಕ್ ವಾಹನಗಳಿಗೆ ಸಬ್ಸಿಡಿ ನೀಡುವುದನ್ನು ಮತ್ತು ಟೆಸ್ಲಾ ಕಾರುಗಳು ಈವರೆಗೆ ಪಡೆದುಕೊಂಡ ಸಹಾಯಧನ ಪ್ರಮಾಣವನ್ನು ಪರಿಶೀಲಿಸಲಿದೆ' ಎಂದಿದ್ದಾರೆ. ಆ ಮೂಲಕ ಎಲಾನ್ ಮಸ್ಕ್ ಅವರ ಮಹತ್ವಾಕಾಂಕ್ಷೆಯ ಟೆಸ್ಲಾ ಕಾರು ಕಂಪನಿ ಮೇಲೆಯೇ ಗದಾಪ್ರಹಾರ ಮಾಡುವ ಇರಾದೆ ವ್ಯಕ್ತಪಡಿಸಿದ್ದಾರೆ.

ಉದ್ಯಮಿ ಮಸ್ಕ್‌ಗೆ ಅಮೆರಿಕ ಸರಕಾರದಿಂದ ಬೇರಾರಿಗೂ ಸಿಗದಷ್ಟು ಸಬ್ಸಿಡಿ, ಆರ್ಥಿಕ ನೆರವು ಸಿಕ್ಕಿದೆ. ಇನ್ನು ಮುಂದೆ ಅದೆಲ್ಲವೂ ನಿಲ್ಲಲಿದೆ. ಆಗ ಅಮೆರಿಕದಲ್ಲಿನ್ನು ಮಸ್ಕ್ ಕಂಪನಿಯ ರಾಕೆಟ್ ಆಕಾಶಕ್ಕೆ ಜಿಗಿಯುವುದಿಲ್ಲ, ಉಪಗ್ರಹಗಳು ಉಡಾವಣೆ ಆಗುವುದಿಲ್ಲ, ದುಬಾರಿ ಎಲೆಕ್ಟ್ರಿಕ್ ಕಾರುಗಳು ತಯಾರಾಗುವುದಿಲ್ಲ. ಪರಿಣಾಮ ನಮ್ಮ ದೇಶದ ಭವಿಷ್ಯ ಉಜ್ವಲವಾಗಿರಲಿದೆ.

-ಡೊನಾಲ್ಡ್ ಟ್ರಂಪ್ ಅಮೆರಿಕ ಅಧ್ಯಕ್ಷ

ರಾಜಕೀಯ ಪಕ್ಷ ಕಟ್ಟುವೆ: ಎಲಾನ್ ಮಸ್ಕ್

ಟ್ರಂಪ್ ಆಡಳಿತದ ಪ್ರಸ್ತಾವಿತ 'ಒನ್ ಬಿಗ್ ಬ್ಯುಟಿಫುಲ್ ಬಿಲ್' ವಿಧೇಯಕಕ್ಕೆ ಬೆಂಬಲ ಸೂಚಿಸಿರುವ ಸಂಸದರನ್ನು ಉದ್ಯಮಿ ಎಲಾನ್ ಮಸ್ಕ್, ಟೀಕಿಸಿದ್ದಾರೆ. ಚುನಾವಣೆ ವೇಳೆ ಸರಕಾರಿ ವೆಚ್ಚ ತಗ್ಗಿಸುವ ಬಗ್ಗೆ ಪ್ರಚಾರ ಮಾಡಿ, ಗೆದ್ದ ನಂತರ ವೆಚ್ಚ ಹೆಚ್ಚಿಸುವ ಕ್ರಮಕ್ಕೆ ಮುಂದಾಗಿರುವುದು ಸರಿಯಲ್ಲ. ಇದರಿಂದ ಅಮೆರಿಕದ ಇತಿಹಾಸದಲ್ಲೇ ಭಾರೀ ಪ್ರಮಾಣದಲ್ಲಿ ಸಾಲ ಹೆಚ್ಚಳವಾಗಲಿದೆ. ಟ್ರಂಪ್ ಪ್ರಸ್ತಾವಿತ ಹೊಸ ವಿಧೇಯಕಕ್ಕೆ ಕಣ್ಣು ಮುಚ್ಚಿ ಮತ ಚಲಾಯಿಸಿರುವ ಸಂಸದರು ನಾಚಿಕೆಯಿಂದ ತಲೆ ತಗ್ಗಿಸಬೇಕಿದೆ ಎಂದು ಎಲಾನ್ ಮಸ್ಕ್ ಟೀಕಿಸಿದ್ದಾರೆ. ಹುಚ್ಚುತನದ ಈ ಸರಕಾರಿ ವೆಚ್ಚದ ಹೊಸ ಮಸೂದೆಯೇನಾದರೂ ಸಂಸತ್ತಿನಲ್ಲಿ ಅಂಗೀಕಾರವಾದರೆ ಅದನ್ನು ವಿರೋಧಿಸಿ ನಾನು ಹೊಸ ರಾಜಕೀಯ ಪಕ್ಷ ಸ್ಥಾಪಿಸುವೆ. ಅಮೆರಿಕಕ್ಕೆ ಡೆಮೋಕ್ರಾಟ್ ಮತ್ತು ರಿಪಬ್ಲಿಕನ್ ಪಾರ್ಟಿಗಳಿಗೆ ಪರ್ಯಾಯವಾಗಿ ಹೊಸತೊಂದು ಪಕ್ಷದ ಅಗತ್ಯವಿದೆ. ಅದರಿಂದ ಜನರಿಗೆ ನಿಜವಾದ ಧ್ವನಿ ಸಿಗುತ್ತದೆ ಎಂದು ಮಸ್ಕ್ ಹೇಳಿದ್ದಾರೆ.

ಬಿಜೆಪಿ ಆಂಧ್ರ ಅಧ್ಯಕ್ಷ ಪಿವಿಎನ್ ಮಾಧವ

ಅಮರಾವತಿ: ಭಾರತೀಯ ಜನತಾ ಪಕ್ಷದ ಹಿರಿಯ ನಾಯಕರಾದ ಪಿವಿಎನ್ ಮಾಧವ(51), ಬಿಜೆಪಿ ಆಂಧ್ರಪ್ರದೇಶ ಘಟಕದ ನೂತನ ಅಧ್ಯಕ್ಷರಾಗಿ ಮಂಗಳವಾರ ಅಧಿಕಾರ ಸ್ವೀಕರಿಸಿದರು.



ಅಧ್ಯಕ್ಷರ ಚುನಾವಣೆ ಮೇಲ್ವಿಚಾರಣೆ ನಡೆಸಿದ್ದ ಬೆಂಗಳೂರಿನ ಬಿಜೆಪಿ ಸಂಸದ ಪಿ.ಸಿ.ಮೋಹನ್, ಮಾಧವ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ ಎಂದು ಪಕ್ಷದ ಸಭೆಯಲ್ಲಿ ಮಂಗಳವಾರ ಪ್ರಕಟಿಸಿದರು. ಅಧ್ಯಕ್ಷ ಹುದ್ದೆಯ ಚುನಾವಣೆಯಲ್ಲಿ ಎಂಎಲ್‌ಸಿ ಮಾಧವ ಅವರೊಬ್ಬರಷ್ಟೇ ನಾಮಪತ್ರ ಸಲ್ಲಿಸಿದ್ದರು. ಪೋಕಲ ವಂಶಿ ನಾಗೇಂದ್ರ(ಪಿವಿಎನ್) ಮಾಧವ, 2017ರಲ್ಲಿ ಆಂಧ್ರ ವಿಧಾನಪರಿಷತ್‌ಗೆ ನಡೆದ ಚುನಾವಣೆಯಲ್ಲಿ ಪದವೀಧರ ಕ್ಷೇತ್ರದಿಂದ ಆಯ್ಕೆಯಾದರು. ಸದ್ಯ ಆಂಧ್ರದಲ್ಲಿ ಚಂದ್ರಬಾಬು ನಾಯ್ಡು ನೇತೃತ್ವದ ತೆಲುಗುದೇಶಂ ಪಕ್ಷ, ಚಿತ್ರನಟ ಪವನ್ ಕಲ್ಯಾಣ್ ನೇತೃತ್ವದ ಜನಸೇನಾ ಪಕ್ಷ ಮತ್ತು ಬಿಜೆಪಿ ಒಳಗೊಂಡ ಎನ್‌ಡಿಎ ಮೈತ್ರಿಕೂಟ ಸರಕಾರವಿದೆ.

ಈ ಮೊದಲು ರಾಜಮಂಡ್ರಿ ಕ್ಷೇತ್ರದ ಸಂಸದೆ ದಗ್ಗುಬಾಟಿ ಪುರಂದೇಶ್ವರಿ ಎರಡು ವರ್ಷಗಳಿಂದ ಪಕ್ಷದ ರಾಜ್ಯ ಘಟಕದ ಅಧ್ಯಕ್ಷೆಯಾಗಿದ್ದರು.

ಸಮಾಚಾರ ಸಣ್ಣದಲ್ಲ

ಸಚಿವ ಸ್ಥಾನದ ಆಕಾಂಕ್ಷಿಯಲ್ಲ: ಕಾಗೆ

ಬೆಂಗಳೂರು: ನನಗೆ ಸಚಿವ ಸ್ಥಾನದ ಬಗ್ಗೆಯಾಗಲಿ ಅಥವಾ ಇನ್ನ್ಯಾವುದೇ ಆಸೆಗಳಿಲ್ಲ. ಆದ್ದರಿಂದ ಯಾವುದೇ ಆತಂಕವಿಲ್ಲದೇ ಕ್ಷೇತ್ರಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಹೈಕಮಾಂಡ್ ಗಮನಕ್ಕೆ ತರುತ್ತೇನೆ ಎಂದು ಕಾಗವಾಡ ಶಾಸಕ ರಾಜು ಕಾಗೆ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನನಗೆ ನನ್ನ ಕ್ಷೇತ್ರದ ಜನರ ಹಿತರಕ್ಷಣೆ ಮುಖ್ಯ, ಹೀಗಾಗಿ ಈ ಮೊದಲು ನೀಡಿದ್ದ ಹೇಳಿಕೆಗಳಿಗೆ ಬದ್ಧನಾಗಿದ್ದೇನೆ. ಅದಷ್ಟೂ ಅಭಿಪ್ರಾಯಗಳನ್ನು ಸುರ್ಜೇವಾಲ ಅವರ ಬಳಿ ಪುನರುಚ್ಚರಿಸುತ್ತೇನೆ ಎಂದಿದ್ದಾರೆ. ಜೂನ್ 30ರಂದು ಮಧ್ಯಾಹ್ನ 2 ಗಂಟೆಗೆ ನನಗೆ ಸುರ್ಜೇವಾಲ ಅವರ ಭೇಟಿಗೆ ಸಮಯ ನಿಗದಿಪಡಿಸಲಾಗಿತ್ತು. ಆದರೆ ಬೆಳಗಾವಿ ಜಿಲ್ಲೆಯಲ್ಲಿ ಪೂರ್ವನಿಗದಿತ ಕಾರ್ಯಕ್ರಮ ಇದ್ದಿದ್ದರಿಂದಾಗಿ ಸಭೆಗೆ ಹಾಜರಾಗಲಿಲ್ಲ, ಮಂಗಳವಾರ ಭೇಟಿ ಮಾಡಲು ಸಮಯ ಕೇಳಿದ್ದೇನೆ, ಅವಕಾಶ ಸಿಕ್ಕಿದೆ ಎಂದರು. ಶಾಸಕ ಬಿ.ಆರ್.ಪಾಟೀಲ್ ಹೇಳಿರುವುದು ಅಕ್ಷರಶಃ ನಿಜವಿದೆ, ನಮಲ್ಲೂ ಅನೇಕ ನೋವುಗಳಿವೆ. ಕೆಲ ಸಚಿವರ ನಡವಳಿಕೆಗಳು ಸರಿಯಿಲ್ಲ. ನಮನ್ನು ಕಡೆಗಣಿಸುತ್ತಿದ್ದಾರೆ. ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ನೀಡುವ ಪತ್ರಗಳನ್ನು ಗಮನಿಸುವುದೇ ಇಲ್ಲ. ತಮ ಪಾಡಿಗೆ ತಾವು ಯಾರೊಂದಿಗೋ ಮಾತನಾಡಿಕೊಂಡು ಹೋಗುತ್ತಾರೆ. ಶಾಸಕರು ಸಾರ್ವಜನಿಕವಾಗಿ ಸಚಿವರ ಬಳಿ ಹೋಗಿ ಸಮಸ್ಯೆಗಳನ್ನು ಹೇಳಿಕೊಳ್ಳಲಾಗುವುದಿಲ್ಲ. ಇದಕ್ಕಾಗಿ ಶಾಸಕರಿಗಾಗಿಯೇ ಪ್ರತ್ಯೇಕ ಸಮಯ ನೀಡುವ ಅಗತ್ಯವಿದೆ ಎಂದು ಹೇಳಿದರು.

7 ಮಂದಿ ಭಾರತೀಯ ಮೀನುಗಾರರ ಬಂಧನ

ಕೊಲಂಬೊ: ಶ್ರೀಲಂಕಾ ನೌಕಾಪಡೆ ಮಂಗಳವಾರ ಏಳು ಭಾರತೀಯ ಮೀನುಗಾರರನ್ನು ಬಂಧಿಸಿ ಅವರ ದೋಣಿಗಳನ್ನು ವಶಪಡಿಸಿಕೊಂಡಿದೆ. ತಲೈಮನ್ನಾರ್ ಪ್ರದೇಶದ ಪ್ರಾದೇಶಿಕ ನೀರಿನಲ್ಲಿ ಅಕ್ರಮ ಮೀನುಗಾರಿಕೆ ಆರೋಪದ ಮೇಲೆ ಬಂಧಿಸಲಾಗಿದೆ ಎಂದು ಶ್ರೀಲಂಕಾ ನೌಕಾಪಡೆಯ ವಕ್ತಾರರು ತಿಳಿಸಿದ್ದಾರೆ. ಬಂಧಿತ ಮೀನುಗಾರರು ಮತ್ತು ಅವರ ದೋಣಿಯನ್ನು ಮನ್ನಾರ್‌ನಲ್ಲಿರುವ ಮೀನುಗಾರಿಕೆ ನಿರೀಕ್ಷಕರಿಗೆ ಹಸ್ತಾಂತರಿಸಲಾಗುವುದು ಎಂದು ನೌಕಾಪಡೆ ತಿಳಿಸಿದೆ. ಭಾರತ ಮತ್ತು ಶ್ರೀಲಂಕಾ ಎರಡೂ ದೇಶಗಳ ಮೀನುಗಾರರನ್ನು ಪರಸ್ಪರರ ನೀರಿನೊಳಗೆ ಅಜಾಗರೂಕತೆಯಿಂದ ಅತಿಕ್ರಮಣ ಮಾಡಿದ್ದಕ್ಕಾಗಿ ಆಗಾಗ ಬಂಧಿಸಲಾಗುತ್ತದೆ. ಭಾರತ ಮತ್ತು ಶ್ರೀಲಂಕಾ ನಡುವಿನ ಸಂಬಂಧಗಳಲ್ಲಿ ಮೀನುಗಾರರ ವಿಷಯವು ವಿವಾದಾಸ್ಪದವಾಗಿದೆ, ಲಂಕಾ ನೌಕಾಪಡೆಯ ಸಿಬ್ಬಂದಿ ಪಾಕ್ ಜಲಸಂಧಿಯಲ್ಲಿ ಭಾರತೀಯ ಮೀನುಗಾರರ ಮೇಲೆ ಗುಂಡು ಹಾರಿಸಿ ದ್ವೀಪರಾಷ್ಟ್ರದ ಪ್ರಾದೇಶಿಕ ನೀರಿನಲ್ಲಿ ಅಕ್ರಮವಾಗಿ ಪ್ರವೇಶಿಸಿದ ಹಲವಾರು ಆರೋಪಗಳಲ್ಲಿ ಅವರ ದೋಣಿಗಳನ್ನು ವಶಪಡಿಸಿಕೊಂಡಿದ್ದಾರೆ.

ಬೆಂಗಳೂರು ಸ್ಫೋಟದ ಉಗ್ರನ ಬಂಧನ

ಚೆನ್ನೈ: ಬೆಂಗಳೂರು ನಗರ ಸೇರಿ ದಕ್ಷಿಣ ಭಾರತದ ಹಲವು ಬಾಂಬ್ ಸ್ಫೋಟಗಳ ಪ್ರಮುಖ ಸೂತ್ರಧಾರಿಯನ್ನು ತಮಿಳುನಾಡು ಪೊಲೀಸರು ಬಂಧಿಸಿದ್ದಾರೆ. ತಮಿಳುನಾಡಿನ ನಾಗೂರು ನಿವಾಸಿ ಅಬೂಬಕರ್ ಸಿದ್ದಿಕ್ (60) ಬಂಧಿತ ಉಗ್ರ. 1995ರಿಂದ ತಲೆ ಮರೆಸಿಕೊಂಡಿದ್ದ ಆರೋಪಿಯನ್ನು ತಮಿಳುನಾಡು ಪೊಲೀಸರು ಆಂಧ್ರಪ್ರದೇಶದ ಅನ್ನಮಯ ಜಿಲ್ಲೆಯಲ್ಲಿ ಬಂಧಿಸಿದ್ದಾರೆ. ನಿಷೇಧಿತ ಸಂಘಟನೆಗಳಾದ ತಮಿಳುನಾಡಿದ ಅಲ್ ಉಮ್ಮ ಸೇರಿ ಹಲವು ಸಂಘಟನೆಗಳಿಗೆ ನೇಮಕಾತಿ ಮಾಡುತ್ತಿದ್ದ ಆರೋಪಿಯಾಗಿದ್ದ ಸಿದ್ದಿಕ್. ಈತನ ಜೊತೆಗಿದ್ದ ಮೊಹಮ್ಮದ್ ಅಲಿಯನ್ನು ಕೂಡಾ ಪೊಲೀಸರು ಬಂಧಿಸಿದ್ದಾರೆ. ಈತ 1999ರಿಂದ ತಲೆ ಮರೆಸಿಕೊಂಡಿದ್ದ. ತಮಿಳುನಾಡು, ಕರ್ನಾಟಕ ರಾಜ್ಯಗಳಲ್ಲಿ ನಡೆದ ಹಲವು ಪ್ರಕರಣಗಳಲ್ಲಿ ಸಿದ್ದಿಕ್ ಆರೋಪಿಯಾಗಿದ್ದಾನೆ. 1999ರ ಬೆಂಗಳೂರು ಸ್ಫೋಟ, 2013ರ ಬೆಂಗಳೂರಿನ ಮಲ್ಲೇಶ್ವರಂ ಬಿಜೆಪಿ ಕಚೇರಿ ಸ್ಫೋಟ, 2011ರಲ್ಲಿ ಮಾಜಿ ಉಪಪ್ರಧಾನಿ ಎಲ್.ಕೆ.ಅಡ್ವಾಣಿ ನೇತೃತ್ವದ ರಥಯಾತ್ರೆಯ ಮೇಲೆ ಮಧುರೈಯಲ್ಲಿ ನಡೆದ ಪೈಪ್ ಬಾಂಬ್ ದಾಳಿ, 1991ರ ಚೆನ್ನೈ ಹಿಂದೂ ಮುನ್ನಣಿ ಕಾರ್ಯಾಲಯದ ಮೇಲೆ ನಡೆದ ದಾಳಿಯಲ್ಲೂ ಈತ ಆರೋಪಿಯಾಗಿದ್ದ.

ಉಗ್ರವಾದ: ಪಾಕ್‌ಗೆ ಈಗ ತಿರುಗುಬಾಣ

ಲಾಹೋರ್: ಭಯೋತ್ಪಾದನೆ ವಿಚಾರವಾಗಿ ಸದಾಕಾಲಾ ಭಾರತದೊಂದಿಗೆ ಸಂಘರ್ಷಕ್ಕಿಳಿಯುವ ಪಾಕಿಸ್ತಾನಕ್ಕೆ ಅದೇ ಭಯೋತ್ಪಾದನೆ ಜಾಗತಿಕ ಮುಜುಗರ ತಂದೊಡ್ಡಿದೆ. ಮಂಗಳವಾರ ಬಿಡುಗಡೆಯಾದ ಹೊಸ ವರದಿಯ ಪ್ರಕಾರ, ಈ ವರ್ಷದ ಜೂನ್ ಒಂದೇ ತಿಂಗಳಿನಲ್ಲಿ ಪಾಕಿಸ್ತಾನದಾದ್ಯಂತ ಬರೊಬ್ಬರಿ 78 ಭಯೋತ್ಪಾದಕ ದಾಳಿಗಳು ನಡೆದಿದ್ದು, ಈ ದಾಳಿಗಳಲ್ಲಿ 53 ಭದ್ರತಾ ಸಿಬ್ಬಂದಿ ಸೇರಿದಂತೆ ಕನಿಷ್ಠ 94 ಜನರು ಸಾವನ್ನಪ್ಪಿದ್ದಾರೆ ಎಂದು ಹೇಳಲಾಗಿದೆ.

{ **ಬಿ.ಶ್ರೀರಾಮುಲು** } ಮಾಜಿ ಸಚಿವ

ಅಧಿಕಾರ ಅಥವಾ ಗೆಲುವು ಶಾಶ್ವತವಲ್ಲ. ಸೋತ ಮಾತ್ರಕ್ಕೆ ಸಿದ್ದರಾಮಯ್ಯ ಅವರು ನನ್ನನ್ನು ಗೇಲಿ ಮಾಡುವುದು ಸರಿಯಲ್ಲ. ಸಿದ್ದರಾಮಯ್ಯ ಪ್ರಕಾರ ಸೋತವರು ಏನು ಮಾತನಾಡಲೇ ಬಾರದಾ? ರಾಜಕಾರಣದಲ್ಲಿ ಯಾವುದೂ ಶಾಶ್ವತವಲ್ಲ. ಸೋಲು- ಗೆಲುವು ಸಹಜ. ಸ್ಪರ್ಧೆಗೆ ನಿಂತವರಲ್ಲಿ ಒಬ್ಬರು ಸೋಲಬೇಕು, ಇನ್ನೊಬ್ಬರು ಗೆಲ್ಲಬೇಕು.

ಶಾಸಕರ ಆಕಾಂಕ್ಷೆ, ಬೇಡಿಕೆಗಳು ಸೇರಿದಂತೆ ಪಕ್ಷದ ಹಲವು ವಿಭಾಗಗಳ ಕುರಿತಾದ ಮಾಹಿತಿ ಸಂಗ್ರಹ: ರಣದೀಪ್ ಸುರ್ಜೇವಾಲ ಸ್ಪಷ್ಟನೆ

ನಾಯಕತ್ವ ಬದಲಾವಣೆ: ಅಭಿಪ್ರಾಯ ಸಂಗ್ರಹಿಸುತ್ತಿಲ್ಲ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿ ನಾಯಕತ್ವ ಬದಲಾವಣೆಯ ಬಗ್ಗೆ ಅಭಿಪ್ರಾಯ ಸಂಗ್ರಹಿಸುತ್ತಿಲ್ಲ. ಪಕ್ಷದ ಸಂಘಟನೆಯ ಬಗ್ಗೆ ಮಾತ್ರ ಅಭಿಪ್ರಾಯ ಸಂಗ್ರಹಿಸುತ್ತಿದ್ದೇವೆ ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸುರ್ಜೇವಾಲ ತಿಳಿಸಿದರು.

ಕೆಪಿಸಿಸಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎರಡು ದಿನಗಳಲ್ಲಿ ಮೈಸೂರು ಮತ್ತು ಬೆಂಗಳೂರು ವಿಭಾಗದ ಶಾಸಕರನ್ನು ಭೇಟಿ ಮಾಡಿದ್ದೇನೆ. ಸೋಮವಾರದಿಂದ ಇತರ ವಿಭಾಗದ ಶಾಸಕರನ್ನೂ ಭೇಟಿ ಮಾಡುತ್ತೇನೆ. ನಂತರದಲ್ಲಿ ಸಂಸದರು, ಮಾಜಿ ಸಂಸದರನ್ನು ಭೇಟಿ ಮಾಡಲಾಗುವುದು. ಕಳೆದ ಎರಡು ವರ್ಷಗಳಲ್ಲಿ ಕ್ಷೇತ್ರದಲ್ಲಿ ಮಾಡಿದ ಕೆಲಸ ಕಾರ್ಯಗಳ ಬಗ್ಗೆ ಮಾಹಿತಿ ಸಂಗ್ರಹ ಮಾಡಲಾಗುತ್ತಿದೆ, ಶಾಸಕರ ರಿಪೋರ್ಟ್ ಕಾರ್ಡ್ ಪಡೆದುಕೊಳ್ಳುತ್ತಿದ್ದೇನೆ. ಬ್ಲಾಕ್ ಕಾಂಗ್ರೆಸ್ ಸೇರಿದಂತೆ ಇತರ ವಿಭಾಗಗಳ ಬಗ್ಗೆ ಮಾಹಿತಿ ಸಂಗ್ರಹ ಮಾಡಲಾಗುತ್ತಿದೆ ಎಂದರು. ಶಾಸಕರ ಆಕಾಂಕ್ಷೆಗಳು, ಬೇಡಿಕೆಗಳ ಬಗ್ಗೆ ಮಾಹಿತಿ ಪಡೆದುಕೊಳ್ಳುತ್ತಿದ್ದೇನೆ, ಅದನ್ನು ಸರಕಾರದ ಗಮನಕ್ಕೆ ತರಲಾಗುವುದು. ಮುಂಚೂಣಿ ಘಟಕಗಳ ಬಗ್ಗೆ ಶಾಸಕರಿಂದ ಮಾಹಿತಿ ಪಡೆದುಕೊಳ್ಳಲಾಗುತ್ತಿದೆ. ಪಂಚ ಗ್ಯಾರಂಟಿಗಳ ಬಗ್ಗೆ ಮಾಹಿತಿ ಸಂಗ್ರಹ ಮಾಡಲಾಗ್ತಿದೆ. ಇನ್ನು 5, 6 ದಿನ ಇಲ್ಲೇ ಇರುತ್ತೇನೆ, ಶಾಸಕರನ್ನು, ಸಂಸದರನ್ನು ಭೇಟಿ ಮಾಡುತ್ತೇನೆ ಎಂದು ಅವರು ತಿಳಿಸಿದರು. ಶಾಸಕರು ತಮ್ಮ ಕ್ಷೇತ್ರಕ್ಕೆ, ಜನರಿಗೆ ಏನು ಕೆಲಸ ಮಾಡುತ್ತಿದ್ದಾರೆ? ಪಕ್ಷ ಸಂಘಟನೆಗೆ ಅವರ ಸಹಕಾರ ಹೇಗಿದೆ ಎಂದು ಕಾರಣ ತಿಳಿದುಕೊಳ್ಳುವ ಪ್ರಯತ್ನ ವನ್ನು ಮಾಡುತ್ತಿದ್ದೇನೆ. ಕೆಲ ಶಾಸಕರು ತಮ್ಮ ಅಭಿ ಪ್ರಾಯ ಹೇಳಿದ್ದಾರೆ. ಬ್ಲಾಕ್ ಕಾಂಗ್ರೆಸ್, ಯೂತ್ ಕಾಂಗ್ರೆಸ್, ಸೇವಾದಳ, ಮಹಿಳಾ ಕಾಂಗ್ರೆಸ್, ಕಿಸಾನ್ ಕಾಂಗ್ರೆಸ್ ಇವೆಲ್ಲವೂ ಹೇಗೆ ಕಾರ್ಯ ನಿರ್ವಹಿಸುತ್ತಿವೆ? ಹಾಗೇ ಪ್ರತಿ ಕ್ಷೇತ್ರದಲ್ಲಿ ಗ್ಯಾರಂಟಿ ಸ್ಕೀಮ್ ಹೇಗಿವೆ? ಜನರು ಹೇಗೆ ಸ್ವೀಕಾರ ಮಾಡಿ ದ್ದಾರೆ? ಎಂಬುದರ ಬಗ್ಗೆ ಶಾಸಕರ ಬಳಿ ಮಾತನಾಡಿ ದ್ದೇನೆ, ಶಾಸಕರು ಅವರ ಅಭಿಪ್ರಾಯ ಕೊಟ್ಟಿದ್ದಾರೆ ಎಂದರು.

ಸಿಎಂ ಬದಲಾವಣೆ ಬಗ್ಗೆ ಚರ್ಚೆಯಿಲ್ಲ: ಡಿಕೆಶಿ

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತ ನಾಡಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಪಕ್ಷ ಸಂಘ ಟನೆ ವಿಚಾರ ಹಾಗೂ ಶಾಸಕರ ಅಹವಾಲು ಸ್ವೀಕರಿ ಸಲು ಸಭೆ ಮಾಡುತ್ತಿದ್ದಾರೆಯೇ ಹೊರತು, ಸಿಎಂ ಬದಲಾವಣೆ ಅಥವಾ ಸಚಿವ ಸಂಪುಟ ವಿಸ್ತರಣೆಯ ಬಗ್ಗೆ ಚರ್ಚೆಯಾಗುತ್ತಿಲ್ಲ ಎಂದು ಸ್ಪಷ್ಟಪಡಿಸಿದರು. ಸಭೆ ಬಗ್ಗೆ ಯಾರಿಗೂ ಆತಂಕ ಬೇಡ, ರಾಷ್ಟ್ರಾದ್ಯಂತ ಜಿಲ್ಲಾ ಹಾಗೂ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರ ಬದಲಾ ವಣೆ ಆಗುತ್ತಿದ್ದು, ಸಂಘಟನೆಯ ಹಿನ್ನೆಲೆಯಲ್ಲಿ ಈ ಸಭೆ ಮಾಡಲಾಗುತ್ತಿದೆ. ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರು ಈ ವರ್ಷವನ್ನು ಸಂಘಟನೆ ವರ್ಷ ಎಂದು ಘೋಷಣೆ ಮಾಡಿದ್ದಾರೆ. ಹೀಗಾಗಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಿಗೆ ಶಕ್ತಿ ತುಂಬಲು ಹೇಳಿದ್ದಾರೆ. ಖರ್ಗೆ ಅವರು, ರಾಹುಲ್ ಗಾಂಧಿ ಹಾಗೂ ಪ್ರಧಾನ ಕಾರ್ಯದರ್ಶಿಗಳು ಎಲ್ಲಾ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರನ್ನು ಕರೆಸಿ ದೆಹಲಿಯಲ್ಲಿ ಸಭೆ ಮಾಡಿದ್ದಾರೆ. ಆ ಮೂಲಕ ಕಾಂಗ್ರೆಸ್ ಕಚೇರಿ ನಿರ್ಮಾಣದಿಂದ, ಪಕ್ಷ ಸಂಘಟನೆವರೆಗೂ ಎಲ್ಲಾ ಜವಾಬ್ದಾರಿಯನ್ನೂ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಪಕ್ಷದ ಶಾಸಕರು ಇಲ್ಲದಿರುವ ಕ್ಷೇತ್ರಗಳ ಜವಾಬ್ದಾರಿ ಯನ್ನು ನಮ್ಮ ಪಕ್ಷದ ಬೇರೆ ಶಾಸಕರಿಗೆ ನೀಡಲಾಗಿದೆ. ಸಂಘಟನೆ ಕುರಿತು ಮಾರ್ಗದರ್ಶನ ನೀಡಲು ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಆಗಮಿ ಸಿದ್ದು, ಅವರ ಅಹವಾಲುಗಳನ್ನು ಸ್ವೀಕರಿಸಲಾಗುತ್ತಿದೆ. ಕೆಲವು ಶಾಸಕರ ಹೇಳಿಕೆಗಳ ಮಧ್ಯೆ ಪಕ್ಷದಲ್ಲಿ ಶಿಸ್ತು ತರಲು ಪ್ರಯತ್ನಿಸುತ್ತಿದ್ದಾರೆ. ಅದರ ಹೊರತಾಗಿ ನಾಯಕತ್ವ ಬದಲಾವಣೆ, ಸಚಿವ ಸಂಪುಟ ವಿಸ್ತರಣೆಯ ಕುರಿತು ಯಾವುದೇ ಚರ್ಚೆ ಇಲ್ಲ. ನಾವು ಯಾರೂ ಈಗ ಆತುರದಲ್ಲಿ ಇಲ್ಲ, ನಮಗೆ 2028 ಚುನಾವಣೆ ಬಹಳ ಮುಖ್ಯ ಎಂದು ಸ್ಪಷ್ಟಪಡಿಸಿದರು.

ಸರಕಾರ ಬಜೆಟ್‌ನಲ್ಲಿ ಅಭಿವೃದ್ಧಿ ಕೆಲಸಗಳಿಗಾಗಿಯೇ 1 ಲಕ್ಷ ಕೋಟಿ ರು. ಅನುದಾನ ಮೀಸಲಿಟ್ಟಿದೆ. 54 ಸಾವಿರ ಕೋಟಿ ರು. ಗ್ಯಾರಂಟಿ ಯೋಜನೆಗೆ, 19 ಸಾವಿರ ಕೋಟಿ ರು. ರೈತರಿಗೆ ವಿದ್ಯುತ್ ನೀಡಲು ವ್ಯಯಿಸಲಾಗುತ್ತಿದೆ. ಸಾಮಾಜಿಕ ಕಲ್ಯಾಣ ಯೋಜನೆ ಸೇರಿದಂತೆ ಇತರೆ ಅಭಿವೃದ್ಧಿ ಯೋಜನೆಗಳಿಗೆ ಆದ್ಯತೆ ನೀಡಲಾಗಿದೆ, ಇದು ಜನರು ಹಾಗೂ ಕ್ಷೇತ್ರದ ಅಭಿವೃದ್ಧಿಗಳಿಗೆ ಸಂಬಂಧಿಸಿದ್ದಲ್ಲವೇ? ನಮ್ಮ ರಾಜ್ಯದಲ್ಲಿ ಆಗುತ್ತಿರುವಷ್ಟು ಕಲ್ಯಾಣ ಯೋಜನೆಗಳು ದೇಶದ ಬೇರೆ ರಾಜ್ಯದಲ್ಲಿ ಆಗುತ್ತಿಲ್ಲ.

-ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿ

ದುಬೈನಲ್ಲಿ ಎಚ್‌ಡಿಕೆ ಮಹತ್ವದ ಮಾತುಕತೆ

ಬೆಂಗಳೂರು: ದುಬೈ ಪ್ರವಾಸದಲ್ಲಿರುವ ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಎಚ್.ಡಿ. ಕುಮಾರಸ್ವಾಮಿ ಯುಎಇ ಆಡಳಿತದ ಉನ್ನತ ನಾಯಕರೊಂದಿಗೆ ಮಹತ್ವದ ಮಾತುಕತೆ ನಡೆಸಿದ್ದಾರೆ. ಉಕ್ಕು ಹಾಗೂ ಅಲ್ಯೂಮಿನಿಯಂ ಕುರಿತಾಗಿ ಅವರು ಮಾತುಕತೆ ನಡೆಸಲಾಗಿದ್ದು,ಡಿ ಗ್ರೀನ್‌ಸ್ಟೀಲ್, ಉನ್ನತ ದರ್ಜೆಯ ಅಲ್ಯೂಮಿನಿಯಂ ಕುರಿತ ಭಾರತ-ಯುಎಇ ನಡುವಿನ ದೀರ್ಘಕಾಲೀನ ಸಹಯೋಗಕ್ಕೆ ಒತ್ತು ನೀಡಲಾಗಿದೆ ಎಂದು ಸಚಿವ ಕುಮಾರಸ್ವಾಮಿ ತಿಳಿಸಿದ್ದಾರೆ.

ಈ ಕುರಿತಂತೆ ಯುಎಇ ಹಣಕಾಸು ಸಚಿವರಾದ ಎಚ್.ಇ.ಅಬ್ದುಲ್ಲಾ ಬಿನ್ ತೌಕ್ ಅಲ್ ಮರ್ರಿ ಅವರನ್ನು ಭೇಟಿ ಮಾಡಿ ಮಹತ್ವದ ಸಮಾಲೋಚನೆ ನಡೆಸಿದರು. ಪ್ರಧಾನಿ ಮೋದಿ ನಾಯಕತ್ವದಲ್ಲಿ ಭಾರತವು ಸ್ಥಿತಿ ಸ್ಥಾಪಕತ್ವ, ಸಂಪನ್ಮೂಲಗಳ ಖಾತರಿ ಮತ್ತು ಸುರಕ್ಷಿತೆ, ನಾವೀನ್ಯತೆ ಚಾಲಿತ ಬಲವಾದ ಜಾಗತಿಕ ಕೈಗಾರಿಕಾ ಪಾಲುದಾರಿಕೆಗಳನ್ನು ರೂಪಿಸಿಕೊಳ್ಳಲು ಗಂಭೀರ ಪ್ರಯತ್ನ ಮಾಡುತ್ತಿದೆ. ಈ ಗುರಿ ಮುಟ್ಟಲು ಭಾರತವು ಜಾಗತಿಕವಾಗಿ ಉತ್ತಮ ಪಾಲುದಾರರತ್ತ ಕೈ ಚಾಚಿದೆ ಎಂದು ಮಾತುಕತೆಯ ವೇಳೆ ಅವರು ತಿಳಿಸಿದರು.



ನಮ್ಮ ಹೊಂಗನಸು ಚಾರಿಟಬಲ್ ಟ್ರಸ್ಟ್ ವತಿಯಿಂದ ನಾಗಮಂಗಲ ತಾಲೂಕು ಅದ್ದಿಹಳ್ಳಿ ಮಾನಸ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಕಲಿಕಾ ಸಾಮಗ್ರಿಗಳನ್ನುನೀಡಲಾಯಿತು. ಟ್ರಸ್ಟಿನ ಅಧ್ಯಕ್ಷರಾದ ರಾಮು, ಗೌತಮ್, ಶಾಲೆಯ ಶಿಕ್ಷಕರು ಇದ್ದರು.

ಹೊಸ ಮಾರ್ಗಸೂಚಿ ಹೊರಡಿಸಿದ ಕೇಂದ್ರ ಸರಕಾರ | ರಾಜ್ಯ ಸರಕಾರಗಳಿಗೆ ಅಂತಿಮ ಅಧಿಕಾರ

ಬೈಕ್ ಟ್ಯಾಕ್ಸಿ ಸೇವೆಗೆ ಖಾಸಗಿ ವಾಹನಗಳಿಗೆ ಅನುಮತಿ

ದೆಹಲಿ: ಕರ್ನಾಟಕದಲ್ಲಿ ಭಾರಿ ಸುದ್ದಿಗೆ ಗ್ರಾಸವಾಗಿ ಇತ್ತೀಚೆಗೆ ನಿಷೇಧಕ್ಕೊಳಗಾಗಿದ್ದ ಬೈಕ್ ಟ್ಯಾಕ್ಸಿ ಸೇವೆ ಕುರಿತು ಕೇಂದ್ರ ಸರಕಾರ ಮಹತ್ವದ ಮಾರ್ಗಸೂಚಿ ಬಿಡುಗಡೆ ಮಾಡಿದೆ.

ರಾಪಿಡೊ, ಉಬರ್ ಮತ್ತು ಓಲಾದಂತಹ ಬೈಕ್ ಟ್ಯಾಕ್ಸಿ ಪ್ಲಾಟ್‌ಫಾರ್ಮ್‌ಗಳಿಗೆ ಪರಿಹಾರವಾಗಿ, ಜುಲೈ 1ರಂದು ಕೇಂದ್ರ ಸರಕಾರ ಹೊಸ ಮಾರ್ಗಸೂಚಿಗಳನ್ನು ಹೊರಡಿಸಿದ್ದು, ಅದರನ್ವಯ ಪ್ರಯಾಣಿಕರ ಸವಾರಿಗಳಿಗೆ ಸಾರಿಗೆಯೇತರ (ಖಾಸಗಿ) ಮೋಟಾರ್ ಸೈಕಲ್‌ಗಳ ಬಳಕೆಯನ್ನು ಅನುಮತಿ ನೀಡಲಾಗಿದೆ. ಮಂಗಳವಾರ ಹೊರಡಿಸಲಾದ ಕೇಂದ್ರದ ಮೋಟಾರು ವಾಹನ ಸಂಗ್ರಾಹಕ ಮಾರ್ಗಸೂಚಿಗಳು- 2025, ರಾಜ್ಯ ಸರಕಾರದ ಅನುಮೋದನೆಗೆ ಒಳಪಟ್ಟು ಪ್ರಯಾಣಿಕರ ಸವಾರಿಗಳಿಗೆ ಸಾರಿಗೆಯೇತರ (ಖಾಸಗಿ) ಮೋಟಾರ್‌ಸೈಕಲ್‌ಗಳ ಬಳಕೆಯನ್ನು ಅನುಮತಿಸುತ್ತದೆ ಎನ್ನಲಾಗಿದೆ. ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು ಮೋಟಾರು ವಾಹನ ಸಂಗ್ರಾಹಕ ಮಾರ್ಗಸೂಚಿಗಳು 2025 ಅನ್ನು ಹೊರಡಿಸಿದ್ದು, ರಾಜ್ಯ ಸರಕಾರಗಳು ಅಗ್ರಿಗೇಟರ್ ಪ್ಲಾಟ್‌ಫಾರ್ಮ್‌ಗಳ ಮೂಲಕ ಪ್ರಯಾಣಿಕರನ್ನು ಸಾಗಿಸಲು ಸಾರಿಗೆಯೇತರ ಮೋಟಾರ್‌ಸೈಕಲ್‌ಗಳನ್ನು (ಖಾಸಗಿ ದ್ವಿಚಕ್ರ ವಾಹನಗಳು) ಬಳಸಲು ಅನುಮತಿ ನೀಡಬಹುದು ಎಂದು ಹೇಳಿದೆ. ಇದೇ ವೇಳೆ ಬೈಕ್ ಟ್ಯಾಕ್ಸಿ ಸೇವೆಗಳ ಅನುಮೋದನೆ ಕುರಿತು ಅಂತಿಮ ನಿರ್ಣಯ ಕೈಗೊಳ್ಳುವ ಅಧಿಕಾರ ರಾಜ್ಯ ಸರಕಾರಗಳಿಗೆ ಇರುತ್ತದೆ ಎಂದೂ ಹೇಳಲಾಗಿದೆ.

ಕೇಂದ್ರ ಸರಕಾರದಿಂದ ಮಾರ್ಗಸೂಚಿ ಬಿಡುಗಡೆಯಾಗುತ್ತಲೇ ಈ ಬಗ್ಗೆ ಹೇಳಿಕೆ ಬಿಡುಗಡೆ ಮಾಡಿರುವ ರ್‍ಯಾಪಿಡೋ ಸಂಸ್ಥೆ, 'ಪ್ರಯಾಣಿಕರ ಪ್ರಯಾಣಕ್ಕಾಗಿ ಸಾರಿಗೆ ಯೇತರ ಮೋಟಾರ್ ಸೈಕಲ್‌ಗಳನ್ನು ಒಟ್ಟುಗೂಡಿಸಲು ಅನುಮತಿಸುವ ಹೊಸ ಮೋಟಾರು ವಾಹನಗಳ ಸಂಗ್ರಾಹಕ ಮಾರ್ಗಸೂಚಿಗಳು, 2025ರ ಷರತ್ತು 23 ಅನ್ನು ಕಾರ್ಯಗತಗೊಳಿಸುವ ಭಾರತ ಸರಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ನಿರ್ಧಾರವನ್ನು ನಾವು ಸ್ವಾಗತಿಸುತ್ತೇವೆ. ಮೋಟಾರು ವಾಹನ ಕಾಯ್ದೆಯ ಸೆಕ್ಷನ್ 67(3) ರ ಅಡಿಯಲ್ಲಿ ರಾಜ್ಯದ ಅಧಿಕಾರಗಳಲ್ಲಿ ಸ್ಥಾಪಿತವಾದ ಈ ಕ್ರಮವು, ಅಭಿವೃದ್ಧಿ ಹೊಂದಿದ, ಸ್ವಾವಲಂಬಿ ಮತ್ತು ಅಂತರ್ಗತ ಭಾರತವಾದ ವಿಕಸಿತ ಭಾರತ ಕಡೆಗೆ ಭಾರತದ ಪ್ರಯಾಣದಲ್ಲಿ ಒಂದು ಮೈಲಿಗಲ್ಲು ಎಂದು ತಿಳಿಸಿದೆ. ಅಂತೆಯೇ ಸಾರಿಗೆಯೇತರ ಮೋಟಾರ್ ಸೈಕಲ್‌ಗಳನ್ನು ಹಂಚಿಕೆಯ ಚಲನಶೀಲತೆಯ ಸಾಧನವಾಗಿ ಗುರುತಿಸುವ ಮೂಲಕ, ಸರಕಾರವು ಲಕ್ಷಾಂತರ ಜನರಿಗೆ, ವಿಶೇಷವಾಗಿ ಸೇವೆ ಸಲ್ಲಿಸದ ಮತ್ತು ಹೈಪರ್‌ಲೋಕಲ್ ಪ್ರದೇಶಗಳಲ್ಲಿ ಹೆಚ್ಚು ಕೈಗೆಟುಕುವ ಸಾರಿಗೆ ಆಯ್ಕೆಗಳಿಗೆ ಬಾಗಿಲು ತೆರೆದಿದೆ ಎಂದು ಹೇಳಿಕೆಯಲ್ಲಿ ಹೇಳಿದೆ.

ಸಮಗ್ರ ವರದಿ ಕೇಳಿದ ಅರಣ್ಯ ಸಚಿವ ಖಂಡ್ರೆ | 10 ದಿನಗಳಲ್ಲಿ ವರದಿಗೆ ಸೂಚನೆ

ಐದೂವರೆ ವರ್ಷದಲ್ಲಿ ರಾಜ್ಯದಲ್ಲಿ 82 ಹುಲಿ ಸಾವು

ಬೆಂಗಳೂರು: ರಾಜ್ಯದಲ್ಲಿ ಕಳೆದ ಐದೂವರೆ ವರ್ಷಗಳಲ್ಲಿ 82 ಹುಲಿಗಳು ಮೃತಪಟ್ಟಿರುವುದಾಗಿ ಮಾಧ್ಯಮಗಳಲ್ಲಿ ವರದಿಯಾಗಿರುವ ಬಗ್ಗೆ ಅರಣ್ಯ ಸಚಿವ ಈಶ್ವರ ಖಂಡ್ರೆ ಆಘಾತ ವ್ಯಕ್ತಪಡಿಸಿದ್ದಾರೆ.

ಎಲ್ಲಾ ಹುಲಿಗಳ ಸಾವಿನ ಬಗ್ಗೆ ವರದಿ ಸಲ್ಲಿಸುವಂತೆ ಅರಣ್ಯಾಧಿಕಾರಿಗಳಿಗೆ ಸೂಚನೆ ನೀಡಿರುವ ಸಚಿವರು, ಕಳೆದ ಐದೂವರೆ ವರ್ಷದಲ್ಲಿ ಸಾವನ್ನಪ್ಪಿರುವ 82 ಹುಲಿಗಳ ಪೈಕಿ ಎಷ್ಟು ಹುಲಿಗಳು ಸಹಜವಾಗಿ ಸಾವನ್ನಪ್ಪಿವೆ? ಎಷ್ಟು ಹುಲಿಗಳು ಅಸಹಜವಾಗಿ ಮೃತಪಟ್ಟಿವೆ? ಅಸಹಜವಾಗಿ ಮೃತಪಟ್ಟ ಹುಲಿಗಳ ಸಾವಿಗೆ ಕಾರಣವೇನು? ತನಿಖೆ ನಡೆದು ವರದಿ ಬಂದಿದೆಯೇ? ಮೃತಪಟ್ಟ ಯಾವುದಾದರೂ ಹುಲಿಗಳ ಅಂಗಾಂಗ ಅಂದರೆ ಉಗುರು, ಹಲ್ಲು ಇತ್ಯಾದಿ ಕೀಳಲಾಗಿತ್ತೆ? ಹುಲಿಗಳ ಹತ್ಯೆ ಆಗಿದ್ದಲ್ಲಿ ನಿರ್ಲಕ್ಷ್ಯ ತೋರಿದ ಸಿಬ್ಬಂದಿ, ಅಧಿಕಾರಿಗಳ ವಿರುದ್ಧ ಕ್ರಮ ಆಗಿದೆಯೇ? ಹುಲಿ ಹತ್ಯೆ ಪ್ರಕರಣದಲ್ಲಿ ಎಷ್ಟು ಆರೋಪಿಗಳನ್ನು ಬಂಧಿಸಲಾಗಿದೆ? ಎಂಬ ಸಂಪೂರ್ಣ ವಿವರವನ್ನು 10 ದಿನಗಳ ಒಳಗಾಗಿ ಸಲ್ಲಿಸಲು ಸೂಚನೆ ನೀಡಿದ್ದಾರೆ.

ಮಲೆ ಮಹದೇಶ್ವರ ಕಾಡು ಪ್ರದೇಶದ ಹೂಗ್ಯಂನಲ್ಲಿ 5 ಹುಲಿಗಳು ವಿಷ ಪ್ರಾಶನದಿಂದ ಮೃತಪಟ್ಟಿವೆ ಎನ್ನಲಾದ ಪ್ರಕರಣಕ್ಕೆ ಕೆಲವು ದಿನಗಳ ಮೊದಲು ಕೌದಳ್ಳಿ ವಲಯ, ರಾಮಾಪುರ-ಮಾರ್ಟಳ್ಳಿ ಗಡಿಯಲ್ಲಿ ಚಿರತೆಯೊಂದರ ಹತ್ಯೆ ಆಗಿತ್ತು ಮತ್ತು ಮೃತ ಚಿರತೆಯ ಕಾಲುಗಳನ್ನು ಕತ್ತರಿಸಲಾಗಿತ್ತು ಎಂದು ಮಾಧ್ಯಮಗಳಲ್ಲಿ ಬಂದಿರುವ ವರದಿ ಕುರಿತಂತೆಯೂ ಎಪಿಸಿಸಿಎಫ್ ನೇತೃತ್ವದ ತಂಡದಿಂದ ತನಿಖೆಗೆ ಆದೇಶಿಸಿದ್ದಾರೆ. ಚಿರತೆಯ ಅಂಗಾಂಗ ಕತ್ತರಿಸಿರುವುದು ನಿಜವಾಗಿದ್ದಲ್ಲಿ, ತಪ್ಪಿತಸ್ಥ ಅಧಿಕಾರಿ ಮತ್ತು ಸಿಬ್ಬಂದಿ ವಿರುದ್ಧ ಕೈಗೊಳ್ಳಬೇಕಾದ ಕ್ರಮದ ಶಿಫಾರಸಿನೊಂದಿಗೆ 7 ದಿನಗಳ ಒಳಗಾಗಿ ವರದಿ ಸಲ್ಲಿಸಲು ಸಚಿವ ಈಶ್ವರ್ ಖಂಡ್ರೆ ತಿಳಿಸಿದ್ದಾರೆ.

12 ಕೋಟಿಗೂ ಹೆಚ್ಚು ಗ್ರಾಹಕರು | ಜಾಗತಿಕ ವ್ಯವಹಾರ 25 ಲಕ್ಷ ಕೋಟಿ

ಕೆನರಾ ಬ್ಯಾಂಕ್ 120ನೇ ಸಂಸ್ಥಾಪನಾ ದಿನ

ಬೆಂಗಳೂರು: ಭಾರತದ ಅತಿದೊಡ್ಡ ಸಾರ್ವಜನಿಕ ವಲಯದ ಬ್ಯಾಂಕುಗಳಲ್ಲಿ ಒಂದಾದ ಕೆನರಾ ಬ್ಯಾಂಕ್, 120ನೇ ಸಂಸ್ಥಾಪನಾ ದಿನವನ್ನು ಆಚರಿಸುತ್ತಿದೆ. 1906ರಲ್ಲಿ ಸ್ಥಾಪನೆಯಾದ ಕೆನರಾ ಬ್ಯಾಂಕ್ ಬಲವಾದ ಪರಂಪರೆ ಮತ್ತು ನಂಬಿಕೆಯೊಂದಿಗೆ ಭಾರತದ ಬ್ಯಾಂಕಿಂಗ್ ಕ್ಷೇತ್ರದ ಪ್ರವರ್ತಕರಲ್ಲಿ ಒಂದಾಗಿ ಬೆಳೆದಿದೆ.

ಕೆನರಾ ಬ್ಯಾಂಕ್ ತನ್ನೆಲ್ಲಾ ಉಳಿತಾಯ ಖಾತೆಗಳಲ್ಲಿ ಕನಿಷ್ಠ ಬ್ಯಾಲೆನ್ಸ್ ಅಗತ್ಯವನ್ನು ತೆಗೆದುಹಾಕುವುದಾಗಿ ಇತ್ತೀಚೆಗಷ್ಟೇ ಘೋಷಿಸಿದೆ. ಈ ಮಹತ್ವದ ಕ್ರಮವು ಪ್ರತಿಯೊಬ್ಬ ಗ್ರಾಹಕರು, ಅವರ ಆರ್ಥಿಕ ಹಿನ್ನೆಲೆಯನ್ನು ಲೆಕ್ಕಿಸದೆ, ಕನಿಷ್ಠ ಬ್ಯಾಲೆನ್ಸ್ ಅನ್ನು ನಿರ್ವಹಿಸುವ ಹೊರೆಯಿಲ್ಲದೆ ಉಳಿತಾಯ ಖಾತೆಯನ್ನು ಹೊಂದಬಹುದು ಮತ್ತು ನಿರ್ವಹಿಸಬಹುದನ್ನು ಖಚಿತಪಡಿಸುತ್ತದೆ. ಕೆನರಾ ಬ್ಯಾಂಕ್‌ನ ಜಾಗತಿಕ ವ್ಯವಹಾರವು 25 ಲಕ್ಷ ಕೋಟಿ ರು.ಗಿಂತ ಹೆಚ್ಚಾಗಿದೆ.

ಕೆನರಾ ಬ್ಯಾಂಕ್ ರಾಷ್ಟ್ರಕ್ಕೆ 120 ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದ ಸಂದರ್ಭದಲ್ಲಿ, ಕೆನರಾ ಬ್ಯಾಂಕ್ ಎಂ.ಡಿ ಮತ್ತು ಸಿ.ಇ.ಒ ಸತ್ಯನಾರಾಯಣ ರಾಜು ಅವರು ಮಾತನಾಡಿ, 12 ಕೋಟಿಗೂ ಹೆಚ್ಚು ಗ್ರಾಹಕರ ನಿರಂತರ ನಂಬಿಕೆ, ನಮ್ಮ ಮಧ್ಯಸ್ಥಗಾರರ ದೃಢವಾದ ಬದ್ಧತೆ ಮತ್ತು ರಾಷ್ಟ್ರದಂತ್ಯದ ನಮ್ಮ ಹಿತೈಷಿಗಳ ಅಚಲ ಬೆಂಬಲಕ್ಕೆ ಸಾಕ್ಷಿಯಾಗಿದೆ. ಜುಲೈ 1, 1906ರಂದು ಆರಂಭವಾದಾಗಿನಿಂದ ಇಂದಿನವರೆಗೆ ದೇಶಾದ್ಯಂತ 9,800 ಕ್ಕೂ ಹೆಚ್ಚು ಶಾಖೆಗಳೊಂದಿಗೆ ಕೆನರಾ ಬ್ಯಾಂಕ್ ಬಲವಾಗಿ ನಿಂತಿದೆ. ನಮ್ಮ ಸೇವೆಯನ್ನು ನಂಬಿಕೆ, ಒಗ್ಗಟ್ಟು ಮತ್ತು ಪರಿವರ್ತನೆಯ ಮೂಲ ಮೌಲ್ಯಗಳಿಂದ ವ್ಯಾಖ್ಯಾನಿಸಲಾಗಿದೆ. ಉದ್ದೇಶ, ನಾವೀನ್ಯತೆ ಮತ್ತು ರಾಷ್ಟ್ರ ನಿರ್ಮಾಣದ ಬಗ್ಗೆ ಆಳವಾದ ಜವಾಬ್ದಾರಿಯ ಪ್ರಜ್ಞೆ ಯೊಂದಿಗೆ ಮುಂದುವರಿಯು ವಾಗ ಈ ಮೌಲ್ಯಗಳು ನಮಗೆ ಸ್ಫೂರ್ತಿ ನೀಡುತ್ತಲೇ ಇರುತ್ತವೆ' ಎಂದರು. ಕೆನರಾಬ್ಯಾಂಕ್ ತನ್ನ 120ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿರುವಾಗ, ನವೀನ, ಅಂತರ್ಗತ ಮತ್ತು ಗ್ರಾಹಕಸ್ನೇಹಿ ಬ್ಯಾಂಕಿಂಗ್ ಪರಿಹಾರಗಳನ್ನು ನೀಡುವತ್ತ ಗಮನಹರಿಸಿದೆ. 'ಕೆನರಾ ಟ್ರೂ ಎಡ್ಜ್ ಸೂಟ್' ಸೇರಿದಂತೆ ಬ್ಯಾಂಕ್‌ನ ಇತ್ತೀಚಿನ ಉಪಕ್ರಮಗಳು ಸಾಂಸ್ಥಿಕ ಗ್ರಾಹಕರಿಗೆ ಸೂಕ್ತವಾದ ಡಿಜಿಟಲ್ ಬ್ಯಾಂಕಿಂಗ್ ಮತ್ತು ವಿಮಾ ಪ್ರಯೋಜನಗಳನ್ನು ಒದಗಿಸಿದರೆ, 'ಕೆನರಾ ಆಸ್ಪೈರ್' ವಿಶೇಷ ಶೈಕ್ಷಣಿಕ ಮತ್ತು ವಿಮಾ ಸೌಲಭ್ಯಗಳೊಂದಿಗೆ ಶೂನ್ಯ ಬ್ಯಾಲೆನ್ಸ್ ಯುವ ಕೇಂದ್ರಿತ ಉಳಿತಾಯ ಖಾತೆಯನ್ನು ನೀಡುತ್ತದೆ ಎಂದು ತಿಳಿಸಿದ್ದಾರೆ.

ಆಡಿಯೋ ಸೋರಿಕೆ ಪ್ರಕರಣ | ಥಾಯ್ಲೆಂಡ್‌ನ ಸಾಂವಿಧಾನಿಕ ನ್ಯಾಯಾಲಯದ ತೀರ್ಪು

ಥಾಯ್ಲೆಂಡ್ ಪ್ರಧಾನಿಯ ಕರ್ತವ್ಯ ಅಮಾನತು

ಬ್ಯಾಂಕಾಕ್: ಕಾಂಬೋಡಿಯಾದ ಮಾಜಿ ನಾಯಕನೊಂದಿಗಿನ ದೂರವಾಣಿ ಸಂಭಾಷಣೆ ಸೋರಿಕೆಯಾದ ಆರೋಪದ ಮೇಲೆ ತನಿಖೆ ನಡೆಯುವವರೆಗೂ ಥಾಯ್ಲೆಂಡ್‌ನ ಸಾಂವಿಧಾನಿಕ ನ್ಯಾಯಾಲಯವು ಪ್ರಧಾನಿ ಪೇಟೊಂಗ್‌ಟಾರ್ನ್ ಶಿನವಾತ್ರ ಅವರನ್ನು ಅಧಿಕಾರದಿಂದ ಅಮಾನತುಗೊಳಿಸಿದೆ.

ಮಂಗಳವಾರ ನ್ಯಾಯಾಧೀಶರು ಅವರ ಮೇಲೆ ನೈತಿಕತೆಯ ಉಲ್ಲಂಘನೆ ಆರೋಪ ಹೊರಿಸಿ ಸಲ್ಲಿಸಲಾದ ಅರ್ಜಿಯನ್ನು ಸರ್ವಾನುಮತದಿಂದ ಅಂಗೀಕರಿಸಿದರು ಮತ್ತು ಅವರನ್ನು ಕರ್ತವ್ಯದಿಂದ ಅಮಾನತುಗೊಳಿಸಲು 7ರಿಂದ 2 ಮತಗಳ ಮತ ಚಲಾಯಿಸಲಾಗಿದೆ.

ಮೇ 28ರಂದು ನಡೆದ ಸಶಸ್ತ್ರ ಘರ್ಷಣೆಯಲ್ಲಿ ಒಬ್ಬ ಕಾಂಬೋಡಿಯನ್ ಸೈನಿಕ ಮೃತಪಟ್ಟ ಬಳಿಕ ಕಾಂಬೋಡಿಯಾದೊಂದಿಗಿನ ಇತ್ತೀಚಿನ ಗಡಿ ವಿವಾದವನ್ನು ನಿಭಾಯಿ ಸಿದ ಬಗ್ಗೆ ಪೇಟೊಂಗ್ ಟಾರ್ನ್ ಹೆಚ್ಚುತ್ತಿರುವ ಅಸಮಾಧಾನವನ್ನು ಎದುರಿಸುತ್ತಿದ್ದಾರೆ. ಗಡಿ ವಿವಾದದ ಕುರಿತು ರಾಜತಾಂತ್ರಿಕತೆಯಲ್ಲಿ ತೊಡಗಿದ್ದಾಗ ಫೋನ್ ಕರೆ ದೂರುಗಳು ಸೋರಿಕೆಯಾಗಿವೆ, ಪೇಟೊಂಗ್‌ಟಾರ್ನ್ ನ್ಯಾಯಾಲಯದ ಪ್ರಕ್ರಿಯೆ ಒಪ್ಪಿಕೊಳ್ಳುವುದಾಗಿ ಮತ್ತು ಅನುಸರಿಸುವುದಾಗಿ ಹೇಳಿದ್ದರು. ಮಂಗಳವಾರದಂದು, ಸೋರಿಕೆಯಾದ ಫೋನ್ ಕರೆಯ ಹಿನ್ನೆಲೆಯಲ್ಲಿ ಪ್ರಮುಖ ಪಕ್ಷವೊಂದು ಪೇಟೊಂಗ್‌ಟಾರ್ನ್‌ನ ಸಮ್ಮಿಶ್ರ ಸರಕಾರವನ್ನು ತೊರೆದಿದೆ.

ರಾಜಮಹಾ ವಜಿರಲಾಂಗ್‌ಕಾರ್ನ್ ಅವರು ಸಂಪುಟ ಪುನರ್‌ರಚನೆಯನ್ನು ಅನುಮೋದಿಸಿದ್ದಾರೆ. ರಾಷ್ಟ್ರೀಯ ಭ್ರಷ್ಟಾಚಾರ ನಿಗ್ರಹ ಆಯೋಗದ ಕಚೇರಿಯಿಂದ ನೀತಿ ಸಂಹಿತೆಯ ಉಲ್ಲಂಘನೆಯ ಆರೋಪದ ಮೇಲೆ ಪೇಟೊಂಗ್‌ಟಾರ್ನ್ ತನಿಖೆಗಳನ್ನು ಎದುರಿಸುತ್ತಿದ್ದಾರೆ. ಫೋನ್ ಕರೆಯಲ್ಲಿ ಪೇಟೊಂಗ್‌ಟಾರ್ನ್ ಅವರು ದಂಗೆಯನ್ನು ಹತ್ತಿಕ್ಕಬೇಕು ಎಂದು ಹೇಳಿದ್ದು, ಅವರು ಬಹಿರಂಗವಾಗಿ ಮಾತನಾಡುವ ಪ್ರಾದೇಶಿಕ ಸೇನಾ ಕಮಾಂಡರ್ ಬಗ್ಗೆ ಮಾಡಿದ ಹೇಳಿಕೆಗಳು ಮತ್ತು ಗಡಿಯಲ್ಲಿನ ಉದ್ವಿಗ್ನತೆ ಕಡಿಮೆ ಮಾಡಲು ಕಾಂಬೋಡಿಯನ್ ಸೆನೆಟ್ ಅಧ್ಯಕ್ಷ ಹುನ್ ಸೇನ್ ಅವರನ್ನು ಸಮಾಧಾನಪಡಿಸಲು ಅವರು ಮಾಡಿದ ಪ್ರಯತ್ನಗಳ ಸಂಪೂರ್ಣ ಆಡಿಯೋ ಲೀಕ್ ಆಗಿದೆ.

ಮೊಟ್ಟೆಯ ಸಗಟು ದರದಲ್ಲಿ 70 ಪೈಸೆ ಏರಿಕೆ | ಚಿಲ್ಲರೆ ದರ ಒಂದು ರು. ಹೆಚ್ಚಳ

ದಿನದಿಂದ ದಿನಕ್ಕೆ ಮೊಟ್ಟೆ ಬೆಲೆ ಗಗನಮುಖಿ

ಹೂವಪ್ಪ ಐ.ಹೆಚ್

'ದಿನಕ್ಕೊಂದು ಮೊಟ್ಟೆ, ತುಂಬುವುದು ಹೊಟ್ಟೆ' ಎಂದೇ ಜನಜನಿತವಾರಿರುವ ಮೊಟ್ಟೆ ದರವು ಈಗ ಭಾರೀ ಏರಿಕೆಯಾಗಿದೆ. ಇದು ಬೆಂಗಳೂರಿನ ಪರಿಸ್ಥಿತಿ ಮಾತ್ರವಲ್ಲ, ಹೈದರಾಬಾದ್, ನಾಮಕ್ಕಲ್‌ನ ಮಾರು ಕಟ್ಟೆಯೂ ಸೇರಿದಂತೆ ದೇಶಾದ್ಯಂತ ಮೊಟ್ಟೆಗೆ ಭಾರೀ ಬೇಡಿಕೆ.

ಬೇಸಿಗೆ ಕಳೆದು ಮಳೆಗಾಲದ ವಾತಾವರಣ ಇರುವ ಕಾರಣ ಮೊಟ್ಟೆಗೆ ಈ ರೀತಿ ಬೇಡಿಕೆ ಹೆಚ್ಚಾಗಲು ಪ್ರಮುಖ ಕಾರಣ. ಈ ಬಾರಿ ಪ್ರತೀ ಮೊಟ್ಟೆಗೆ ಸಗಟು ದರ 6.20 ರು.ಗಳಿದ್ದರೆ, 12ಕ್ಕೆ 78 ಇದೆ. ಅದೇ ಚಿಲ್ಲರೆ ಅಂಗಡಿಯಲ್ಲಿ 7 ರು. ಆನ್‌ಲೈನ್‌ನಲ್ಲಿ 7.50 ರು.ಗೆ ಮೊಟ್ಟೆ ಮಾರಾಟವಾಗುತ್ತಿದೆ.

ಸಗಟು ಮಾರುಕಟ್ಟೆಯಲ್ಲಿ 100ಕ್ಕೆ 550 ರು.ಗಳವರೆಗೆ ಮೊಟ್ಟೆ ಮಾರಾಟವಾಗುತ್ತಿತ್ತು. ಸಾಮಾನ್ಯವಾಗಿ 30-40 ಪೈಸೆ ಏರಿಕೆ ಹಿಂದೆಲ್ಲಾ ಆಗುತಿತ್ತು, ಆದರೆ ಈಗ 70 ಪೈಸೆಯಿಂದ 1 ರು. ಏರಿಕೆ ಒಮ್ಮೆಲೇ ಆಗಿದೆ.

ಶಾಲೆಗಳು ಪ್ರಾರಂಭವಾದ ಕೆಲವೇ ದಿನಗಳಲ್ಲಿ ಕೋಳಿ ಮೊಟ್ಟೆಗಳಿಗೆ ಬೇಡಿಕೆ ಹೆಚ್ಚಾಗಿದ್ದು, ಅಮೇರಿಕ, ಸೌದಿ ಅರೇಬಿಯಾ ದೇಶಗಳಿಗೆ ಇದೀಗ ಅಧಿಕ ಪ್ರಮಾಣದಲ್ಲಿ ರಫ್ತಾಗುತ್ತಿರುವುದು ದರ ಏರಿಕೆಗೆ ಕಾರಣವಾಗಿದೆ ಎನ್ನುತ್ತಾರೆ ಮೊಟ್ಟೆ ವ್ಯಾಪಾರಿಗಳು.

ಮೊಟ್ಟೆ ಬೆಲೆ ಏರಿಕೆಗೆ ಕಾರಣ ಏನು?

ಕೋಳಿಗಳಿಗೆ ಬಳಸುವ ಆಹಾರಗಳಾದ ಮೆಕ್ಕೆಜೋಳದ ಬೆಲೆ 2000ರಿಂದ 2,600 ರು.ಗೆ ಏರಿಕೆಯಾಗಿದೆ. ಇನ್ನು ಸೂರ್ಯಕಾಂತಿ ಹಿಂಡಿ, ಕಡ್ಲೆಕಾಯಿ ಹಿಂಡಿ, ಸೋಯಾ ಹಿಂಡಿಯ ಬೆಲೆ ಹಿಂದಿಗಿಂತ ಶೇ. 20ರಷ್ಟು ಏರಿಕೆಯಾಗಿದೆ, ಜತೆಗೆ ಮೊಟ್ಟೆ ಉತ್ಪಾದನೆ ಶೇ. 25ರಷ್ಟು ಕೊರತೆ ಇದೆ, ಇದು ಮೊಟ್ಟೆ ದರ ಏರಿಕೆಗೆ ಪ್ರಮುಖ ಕಾರಣ. ಶಿಕ್ಷಣ ಇಲಾಖೆ ಈ ವರೆಗೆ ವಾರದಲ್ಲಿ 2 ದಿನ ಮಾತ್ರ ಮೊಟ್ಟೆ ವಿತರಣೆ ಮಾಡುತ್ತಿತ್ತು, ಆದರೆ ಇತ್ತೀಚೆಗೆ ಶಿಕ್ಷಣ ಇಲಾಖೆಯು ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಜತೆ ಒಪ್ಪಂದ ಮಾಡಿಕೊಂಡು 1,500 ಕೋಟಿ ರು. ಅನುದಾನ ಪಡೆದಿದೆ, ಆ ಕಾರಣಕ್ಕಾಗಿ ವಾರದಲ್ಲಿ ಎರಡು ದಿನಗಳ ಬದಲಿಗೆ 6 ದಿನ ಮೊಟ್ಟೆ ನೀಡುತ್ತಿದೆ. ಹಾಗಾಗಿ ಶಾಲೆಗಳಲ್ಲಿ ಮೊಟ್ಟೆಗೆ ಬೇಡಿಕೆ ಹೆಚ್ಚಾಗಿದೆ. ಆದರೆ ಬೇಡಿಕೆಗೆ ತಕ್ಕಂತೆ ಮೊಟ್ಟೆ ಪೂರೈಕೆ ಇಲ್ಲ, ಅದು ಕೂಡ ಬೆಲೆ ಏರಿಕೆಗೆ ಮುಖ್ಯ ಕಾರಣ ಎನ್ನಲಾಗುತ್ತಿದೆ.

ಮಾರುಕಟ್ಟೆಯಲ್ಲಿ ಮೊಟ್ಟೆಯ ದರ ಏರಿಕೆಯಾದರೂ ಮೊಟ್ಟೆ ಪೂರೈಕೆದಾರರಿಗೆ ಅದರ ಲಾಭ ಸಿಗುತ್ತಿಲ್ಲ. ಕೋಳಿಫಾರಂನಲ್ಲಿ ಕಡಿಮೆ ಬೆಲೆಗೆ ಖರೀದಿಸಿ, ಮಾರುಕಟ್ಟೆಯಲ್ಲಿ ಅಧಿಕ ಬೆಲೆಗೆ ಮಾರಾಟ ಮಾಡಲಾಗುತ್ತಿದೆ ಎಂದು ಕೋಳಿಫಾರಂ ಮಾಲೀಕರು ಅಸಮಾಧಾನ ವ್ಯಕ್ತಪಡಿಸುತ್ತಾರೆ. ರಾಜ್ಯದಲ್ಲಿ ದಿನಂ ಪ್ರತಿ 1.50 ಕೋಟಿ ಮೊಟ್ಟೆ ಉತ್ಪಾದನೆಯಾಗುತ್ತದೆ. ರಾಜ್ಯದ ಬೆಂಗಳೂರು ನಗರವೊಂದನ್ನು ಕೇಂದ್ರವಾಗಿಟ್ಟುಕೊಂಡು ನೋಡಿದರೆ ಮೈಸೂರು, ದಾವಣಗೆರೆ, ತಮಿಳುನಾಡಿನ ನಮಕ್ಕಲ್ ಭಾಗದಿಂದ ಮೊಟ್ಟೆಯ ಪೂರೈಕೆಯಾಗುತ್ತದೆ. ನಮ್ಮ ರಾಜ್ಯದ ಪೌಲ್ಟ್ರಿಗಳಿಂದ ಬೇಡಿಕೆ ತಕ್ಕಷ್ಟು ಮೊಟ್ಟೆ ಪೂರೈಕೆ ಯಾಗುತ್ತಿಲ್ಲ ಎನ್ನುತ್ತಾರೆ ಗಂಗೇನಹಳ್ಳಿ ಮೊಟ್ಟೆ ಪೂರೈಕೆದಾರರ ಸಂಘದ ಪ್ರತಿನಿಧಿ ರವೀಂದ್ರರೆಡ್ಡಿ.

ಕೋಳಿ ಆಹಾರಗಳ ಬೆಲೆ ದುಬಾರಿಯಾಗಿದೆ, ಮೊಟ್ಟೆ ಉತ್ಪಾದನೆ ಕಡಿಮೆಯಾಗಿದೆ. ಬೇಡಿಕೆಗೆ ತಕ್ಕಷ್ಟು ಮೊಟ್ಟೆ ಪೂರೈಕೆಯಾಗುತ್ತಿಲ್ಲ, ಜೊತೆಗೆ ವಿದೇಶಕ್ಕೆ ರಫ್ತು ಆಗುತ್ತಿದೆ. ಇದು ಮೊಟ್ಟೆ ಬೆಲೆ ಏರಿಕೆಗೆ ಪ್ರಮುಖ ಕಾರಣ.

-ಟಿ. ವೆಂಕಟೇಶ್, ಅಧ್ಯಕ್ಷರು, ಮೊಟ್ಟೆ ಪೂರೈಕೆದಾರರ ಸಮಿತಿ, ಬೆಂಗಳೂರು ವಲಯ

ತರಕಾರಿ ಬೆಲೆ ಏರಿಕೆಯಾಗಿದೆ, ಈ ಕಡೆ ಮೊಟ್ಟೆ ಬೆಲೆಯೂ ಜಾಸ್ತಿಯಾಗಿದೆ. ಚಿಲ್ಲರೆ ದರದಲ್ಲಿ ಈ ಹಿಂದೆ ಮೊಟ್ಟೆ 6 ರು.ಗೆ ಸಿಗುತಿತ್ತು, ಈಗ 7 ರು.ನಿಂದ 7.50 ರು. ಆಗಿದೆ. ದೇಹಕ್ಕೆ ಹೆಚ್ಚು ಪ್ರೊಟೀನ್ ಕೊಡುವ ಮೊಟ್ಟೆಯ ಬೆಲೆ ಈ ಪರಿ ಜಾಸ್ತಿಯಾದರೆ ನಮ್ಮಂತಹ ಕೂಲಿ ಕಾರ್ಮಿಕರು ಮೊಟ್ಟೆ ಸೇವಿಸುವುದು ಹೇಗೆ ಎಂಬ ಚಿಂತೆಯಾಗಿದೆ.

-ದೀಪಾ. ಎಂ., ಗ್ರಾಹಕಿ, ಬೆಂಗಳೂರು.

ಹುಕ್ಕೇರಿ ಪಿಎಸ್‌ಐ ಅಮಾನತು

ಚಿಕ್ಕೋಡಿ: ಇಂಗಳಿ ಗ್ರಾಮದಲ್ಲಿ ಶ್ರೀರಾಮ ಸೇನೆ ಕಾರ್ಯಕರ್ತರ ಮೇಲೆ ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಹುಕ್ಕೇರಿ ಪೊಲೀಸ್ ಠಾಣೆ ಪಿಎಸ್‌ಐ ನಿಖಿಲ್ ಕಾಂಬ್ಳೆ ಅವರನ್ನು ಅಮಾನತು ಮಾಡಲಾಗಿದೆ.

ಶ್ರೀರಾಮ ಸೇನೆ ಕಾರ್ಯಕರ್ತರು ಜೂನ್ 26ರಂದು ಗೋವು ಸಮೇತ ಠಾಣೆಗೆ ಹೋಗಿದ್ದರೂ ಎಫ್‌ಐಆರ್ ಮಾಡದೇ ನಿರ್ಲಕ್ಷ್ಯ ತೋರಿದ್ದಕ್ಕೆ ಎಸ್‌ಪಿ ಭೀಮಾಶಂಕರ್ ಗುಳೇದ್ ಅಮಾನತು ಆದೇಶ ಹೊರಡಿಸಿದ್ದಾರೆ.

ಘಟನೆಯ ಬಗ್ಗೆ ಮೇಲಾಧಿಕಾರಿಗಳ ಗಮನಕ್ಕೆ ತರದೇ ಬೇಜವಾಬ್ದಾರಿ ತೋರಿದ್ದು ಹಾಗೂ ಗಡಿಪಾರಾದ ರೌಡಿ ಶೀಟರ್ ಶ್ರೀರಾಮ ಸೇನೆ ಕಾರ್ಯಕರ್ತ ಮಹಾವೀರ್ ಸೊಲ್ಲಾಪುರೆಯನ್ನ ಕೂಡ ಬಿಟ್ಟು ಕಳುಹಿಸಿದ ಅಂಶಗಳನ್ನು ಪರಿಗಣಿಸಿ ಅಮಾನತು ಮಾಡಲಾಗಿದೆ.

ಶ್ರೀರಾಮ ಸೇನೆಯ ಕಾರ್ಯಕರ್ತರು ಗೋ ಕಳ್ಳಸಾಗಣಿಕೆಯ ವಿಷಯ ತಿಳಿದು ಅದನ್ನು ತಡೆಯಲು ತೆರಳಿದ್ದರು. ಆದರೆ, ಹೆಚ್ಚಿನ ಸಂಖ್ಯೆಯಲ್ಲಿದ್ದ ಕಳ್ಳ ಸಾಗಾಣಿಕೆದಾರರು ಶ್ರೀರಾಮ ಸೇನೆ ಕಾರ್ಯಕರ್ತರನ್ನು ಮರಕ್ಕೆ ಕಟ್ಟಿ ಥಳಿಸಿದ್ದರು.

ಇವಿ ಕ್ಷೇತ್ರದಲ್ಲಿ ಭಾರತದ ಕ್ರಾಂತಿಕಾರಿ ಹೆಜ್ಜೆ

ಕರಿಯಪ್ಪ ಹೆಗ್ಗಡದಿನ್ನಿ

ಭೂಗರ್ಭದಲ್ಲಿ ಹುದುಗಿರುವ ಪಳಿಯುಳಿಕೆ ಇಂಧನ ಪೆಟ್ರೋಲಿಯಂ ಬರಿದಾಗುತ್ತಿದ್ದು, ಪೆಟ್ರೋಲ್, ಡಿಸೇಲ್, ಎಲ್‌ಪಿಜಿ ವಾಹನಗಳಿಗೆ ಪರ್ಯಾಯವಾಗಿ ಇವಿ ಬೈಕ್, ಕಾರು, ಟ್ರಕ್, ಬಸ್‌ಗಳ ಉತ್ಪಾದನೆ ಮಾಡಲಾಗುತ್ತಿದೆ. ಹೀಗಾಗಿ ಇವಿ ಉದ್ಯಮ ಜಾಗತಿಕ ಮಟ್ಟದಲ್ಲಿ ಅತಿ ವೇಗವಾಗಿ ಬೆಳೆಯುತ್ತಿದೆ. ಈ ನಿಟ್ಟಿನಲ್ಲಿ ಭಾರತವೂ ಇವಿ ಕ್ಷೇತ್ರದಲ್ಲಿ ಕ್ರಾಂತಿಕಾರಿ ಹೆಜ್ಜೆ ಇಟ್ಟಿದೆ. ಇವಿ ಜಾಗತಿಕ ಮಾರುಕಟ್ಟೆ, ಭಾರತದಲ್ಲಿ ಇವಿ ಉದ್ಯಮಕ್ಕೆ ಸರಕಾರ ನೀಡುತ್ತಿರುವ ಪ್ರೋತ್ಸಾಹದ ಕುರಿತ ಮಾಹಿತಿ ಇಲ್ಲಿದೆ.

ಎಲೆಕ್ಟ್ರಿಕ್ ವಾಹಗಳ ಉತ್ಪಾದನೆ ಮಾರಾಟದಲ್ಲಿ ಚೀನಾ ಮುಂದಿದೆ. ಭಾರತವಷ್ಟೆ ಅಲ್ಲದೇ ಅಮೆರಿಕ ಮತ್ತು ಯೂರೋಪಿಯನ್ ಯೂನಿಯನ್ ದೇಶಗಳು ಚೀನಾವನ್ನು ಇವಿ ಉದ್ಯಮದಲ್ಲಿ ಸರಿಗಟ್ಟಲು ಸಾಧ್ಯವಾಗಿಲ್ಲ. ಜಗತ್ತಿನ ಬಹುತೇಕ ರಾಷ್ಟ್ರಗಳು ವಿದ್ಯುತ್ ಚಾಲಿತ ವಾಹನಗಳ ಉತ್ಪಾದನೆಗೆ ಚೀನಾ ಪೂರೈಸುವ ಬಿಡಿಗಳ ಭಾಗಗಳ ಮೇಲೆ ಹೆಚ್ಚು ಅವಲಂಬನೆ ಆಗಿವೆ. ಇವಿ ಬ್ಯಾಟರಿಗೆ ಉಪಯೋಗಿಸುವ ಖನಿಜ, ಲೋಹಗಳು ಚೀನಾದಲ್ಲಿ ಹೇರಳವಾಗಿ ಲಭ್ಯ ಇರುವುದು ಇದಕ್ಕೆ ಮುಖ್ಯ ಕಾರಣ.

ಇವಿಗೆ ಪ್ರಾಶಸ್ತ್ಯ ಯಾಕೆ?

ಕಲುಷಿತ ಗಾಳಿಯಿಂದ ಜಾಗತಿಕ ತಾಪಮಾನ ಏರಿಕೆ, ಹಸಿರು ಮನೆ ಅನಿಲಗಳ ಹೆಚ್ಚಳ, ಓಜೋನ್ ಪದರ ಕ್ಷೀಣಿಸುತ್ತಿದೆ. ಪರಿಸರ ಹಾಗೂ ವಾಯುಮಾಲಿನ್ಯ ತಡೆಗಟ್ಟಲು ಇವಿ ವಾಹನಗಳನ್ನು ಉತ್ಪಾದನೆ ಹೆಚ್ಚಾಗುತ್ತಿದೆ. ಜಾಗತಿಕ ಆಟೋ ಮೊಬೈಲ್ ಮಾರುಕಟ್ಟೆಯಲ್ಲಿ ಇವಿ ಉದ್ಯಮ ಅತಿ ವೇಗವಾಗಿ ಬೆಳೆಯುತ್ತಿದೆ.

ಇವಿ ಜಾಗತಿಕ ಮಾರುಕಟ್ಟೆ ಮೌಲ್ಯ

2023ರಲ್ಲಿ ಜಾಗತಿಕ ಎಲೆಕ್ಟ್ರಿಕ್ ವಾಹನ ಮಾರುಕಟ್ಟೆಯ ಮೌಲ್ಯ ಅಮೆರಿಕನ್ ಡಾಲರ್ 255.54 ಬಿಲಿಯನ್ ಆಗಿತ್ತು. 2024ರಿಂದ 2033ರ ವೇಳೆಗೆ ಇದರ ವಾರ್ಷಿಕ ಬೆಳವಣಿಗೆ ದರ (ಇಅಫ್ರ) 23.42% ಆಗಿದ್ದು, 2033ರ ವೇಳೆಗೆ ಮೌಲ್ಯವು ಸುಮಾರು 2,108.80 ಬಿಲಿಯನ್ ಆಗಲು ನಿರೀಕ್ಷಿಸಲಾಗಿದೆ.

ಇವಿ ಬ್ಯಾಟರಿಗಳಲ್ಲಿ ಚೀನಾ ಪಾರಮ್ಯ

ಎಲೆಕ್ಟ್ರಿಕ್ ವಾಹಗಳ ತಯಾರಿಕೆ ಲಿಥಿಯಂ, ನಿಕ್ಕಲ್, ಕೊಬಾಲ್ಟ್, ಮ್ಯಾಂಗನೀಸ್, ಗ್ರಾಫೈಟ್, ಅಲ್ಯೂನಿಮಿಯಂ, ಕಾಪರ್ ಸೇರಿ ಹಲವು ಲೋಹಗಳ ಅಗತ್ಯವಿದೆ. ಈ ಲೋಹಗಳು ಭಾರತದ ಗಣಿಗಳಲ್ಲಿ ಸುಮಾರು 60 ಮಿಲಿಯನ್ ಟನ್‌ನಷ್ಟು ಇದೆ ಎಂದು ಸಂಶೋಧಿಸಲಾಗಿದೆ. ಆದರೆ, ಈ ಲೋಹಗಳ ಗಣಿಗಾರಿಕೆ ಮತ್ತು ಶುದ್ಧೀಕರಣದ ಮೂಲಸೌಕರ್ಯ ಭಾರತದಲ್ಲಿ ಕಡಿಮೆ. ಹಾಗಾಗಿ ಭಾರತ ಇನ್ನೂ ಇವಿ ಬ್ಯಾಟರಿ ತಯಾರಿಕಾ ಬಿಡಿಭಾಗಗಳನ್ನು ಚೀನಾದಿಂದ ಆಮದು ಮಾಡಿಕೊಳ್ಳುತ್ತಿದೆ. ಅಲ್ಲದೇ ಉಪಗ್ರಹಗಳು, ನವೀಕರಿಸಬಹುದಾದ ಶಕ್ತಿ ಸಾಧನಗಳು, ಸೇನಾ ತಂತ್ರಜ್ಞಾನಗಳು ಮತ್ತು ದಿನನಿತ್ಯದ ಎಲೆಕ್ಟ್ರಾನಿಕ್ ವಸ್ತುಗಳ ಕಚ್ಚಾವಸ್ತುಗಳನ್ನು ಚೀನಾದಿಂದಲೇ ತರಿಸಿಕೊಳ್ಳಲಾಗುತ್ತಿದೆ. 2024 ರಲ್ಲಿ ಭಾರತ ಸುಮಾರು 5,000 ಕೋಟಿ ಮೌಲ್ಯದ ಇವಿ ಬ್ಯಾಟರಿಗಳನ್ನು ಚೀನಾದಿಂದ ಆಮದು ಮಾಡಿಕೊಂಡಿದೆ.

ಭಾರತದ ಅತ್ಯುತ್ತಮ ಇವಿ ಬೈಕ್, ಸ್ಕೂಟರ್‌ಗಳ ಪಟ್ಟಿ

ಮಾದರಿ ಹೆಸರು	ಗರಿಷ್ಠ ವೇಗ (ಪ್ರತಿಗಂಟೆಗೆ)	ಬೆಲೆ ಶ್ರೇಣಿ (?)
ಅಥರ್ 450	80 ಕಿ.ಮೀ.	1.38/1.60 ಲಕ್ಷ
ಓಲಾ ಎಸ್1	95 ಕಿ.ಮೀ.	1.10/ 1.40 ಲಕ್ಷ
ಟಿವಿಎಸ್ ಐಕ್ಯೂಬ್	82 ಕಿಮೀ	1.25/1.55 ಲಕ್ಷ
ರಿವೋಲ್ಟ್ ಆರ್‌ವಿ400	85 ಕಿ.ಮೀ.	1.24/1.40 ಲಕ್ಷ
ಹೀರೋ ಎಲೆಕ್ಟ್ರಿಕ್ ಆಪ್ಟಿಮಾ ಎಚ್‌ಎಕ್ಸ್	45 ಕಿ.ಮೀ.	70,000/1.05 ಲಕ್ಷ
ಬಜಾಜ್ ಚೇತಕ್	70 ಕಿ.ಮೀ.	1.22/1.50 ಲಕ್ಷ
ಪ್ಯೂರ್ ಉ್ವ ಉಕ್ಷಿಟ7ಗಿ	60 ಕಿ.ಮೀ.	85,000/95,000
ಆಂಪಿಯರ್ ಮ್ಯಾಗ್ನಸ್ ಪ್ರೊ	55 ಕಿ.ಮೀ.	77,000/90,000
ಟಾರ್ಕ್ ಟಿ6ಎಕ್ಸ್	100 ಕಿ.ಮೀ.	1.25/1.50 ಲಕ್ಷ
ಅಲ್ಟ್ರಾವೈಲೇಟ್ ಎಫ್77	152 ಕಿಮೀ	3.80/4.55 ಲಕ್ಷ

ಭಾರತದ ಇವಿ ಕಂಪನಿಗಳು

2020ರಿಂದ ದೇಶದಲ್ಲಿ ಅತ್ಯಾಕರ್ಷಕ ಹಾಗೂ ಸ್ಪರ್ಧಾತ್ಮಕ ಬೆಲೆಯಲ್ಲಿ ಇವಿ ಬೈಕ್ ಹಾಗಗೂ ಕಾರುಗಳನ್ನು ಮಾರುಕಟ್ಟೆಗೆ ಪರಿಚಾಯಿಸಲಾಯಿತು. ಅತ್ತರ್ ಎನರ್ಜಿ, ಓಲಾ ಎಲೆಕ್ಟ್ರಿಕ್, ಗ್ರೀವ್ಸ್ ಎಲೆಕ್ಟ್ರಿಕ್ ಮೊಬೈಲ್, ಓಕಿನ್ ಗ್ರೀನ್ ಇತ್ಯಾದಿ ಕಂಪನಿಗಳ ಇವಿ ಬೈಕ್‌ಗಳು ಭಾರತದ ಮಾರುಕಟ್ಟೆಯಲ್ಲಿ ಪಾರಮ್ಯ ಸಾಧಿಸಿವೆ. ಭಾರತದಲ್ಲಿ 2024ರ ವರ್ಷಾಂತ್ಯಕ್ಕೆ 19,49,114 ಎಲೆಕ್ಟ್ರಿಕ್ ವಾಹನಗಳ ಮಾರಾಟವಾಗಿದೆ. ಜಾಗತಿಕ ಮಟ್ಟದಲ್ಲಿ ಇವಿ ವಾಹನಗಳ ಮಾರಾಟದ ಅಂಕಿಅಂಶಗಳಲ್ಲಿ ಭಾರತದ ಪಾಲು 7.43% ರಷ್ಟಿದೆ.

ಬ್ಯಾಟರಿ ಬಲು ದುಬಾರಿ

ಇಂಧನ ಆಧಾರಿತ ವಾಹನಗಳಿಗಿಂತ ಇವಿ ವಾಹನಗಳು 10% ಹೆಚ್ಚು ದುಬಾರಿಯಾಗಿವೆ. ಇವಿ ಬೈಕ್ ಹಾಗೂ ಕಾರೊಂದನ್ನು ತಯಾರಿಸಬೇಕಾದರೆ ವಾಹನ ತಯಾರಿಕಾ ವೆಚ್ಚದ ಶೇಕಡಾ 100ರಷ್ಟರಲ್ಲಿ 40 ರಷ್ಟು ಹಣ ಬ್ಯಾಟರಿ ತಯಾರಿಕೆಗೆ ಖರ್ಚಾಗುತ್ತದೆ.

ತೆರಿಗೆ ವಿನಾಯಿತಿ

ಇವಿಗಳಿಗೆ ಉಪಯೋಗಿಸುವ ಲಿಥಿಯಂ-ಅಯಾನ್ ಬ್ಯಾಟರಿಗಳ ಕೇಂದ್ರ ಸರಕಾರ ಪ್ರೋತ್ಸಾಹ ನೀಡುತ್ತಿದೆ. ಬ್ಯಾಟರಿ ಉತ್ಪಾದನೆಗೆ ಅಗತ್ಯವಿರುವ ಖನಿಜಗಳ ಮತ್ತು ಉಪಕರಣಗಳ ಮೇಲೆ ಆದಾಯ ತೆರಿಗೆ ವಿನಾಯಿತಿ ಇದೆ. FAME (Faster Adoption and Manufacturing of Hybrid and Electric Vehicles) ಯೋಜನೆಗಳಂತಹ ಉಪಕ್ರಮಗಳ ಮೂಲಕ, ಭಾರತವು ಇವಿಗಳ ಅಳವಡಿಕೆಯನ್ನು ಗಣನೀಯವಾಗಿ ಹೆಚ್ಚಿಸುವ ಉದ್ದೇಶ ಹೊಂದಿದ್ದು, ದೀರ್ಘಕಾಲಿಕ ಸುಸ್ಥಿರತೆ ಹಾಗೂ ನಾವೀನ್ಯತೆಯ ದಿಶೆಯಲ್ಲಿ ಹೊಸ ಕ್ರಾಂತಿ ಮಾಡುವ ಉದ್ದೇಶವಿದೆ.

80 ಮಿಲಿಯನ್ ಇವಿಗಳ ಓಡಾಟದ ಗುರಿ

ಭಾರತವು 2030ರೊಳಗೆ ಖಾಸಗಿ ಕಾರುಗಳಲ್ಲಿ 30%, ವಾಣಿಜ್ಯ ವಾಹನಗಳಲ್ಲಿ 70%, ಬಸ್‌ಗಳಲ್ಲಿ 40%, ಹಾಗೂ ದ್ವಿಚಕ್ರ ಮತ್ತು ತ್ರಿಚಕ್ರ ವಾಹನಗಳಲ್ಲಿ 80% ಇವಿ ಮಾರಾಟದ ಪಾಲು ಸಾಧಿಸುವ ಗುರಿಯನ್ನು ಇದೆ. ಮೇಕ್ ಇನ್ ಇಂಡಿಯಾ ಮೂಲಕ ಸಂಪೂರ್ಣ ದೇಶಿ ಮಾಡೆಲ್ ಇವಿಗಳನ್ನು ಉತ್ಪಾದಿಸಿ 2030ರ ಹೊತ್ತಿಗೆ ಭಾರತದ ರಸ್ತೆಗಳ ಮೇಲೆ 80 ಮಿಲಿಯನ್ ಇವಿ ವಾಹನಗಳ ಓಡಾಟದ ಗುರಿಯನ್ನು ಕೇಂದ್ರ ಸರಕಾರ ಹೊಂದಿದೆ.

ಎಲೆಕ್ಟ್ರಿಕ್ ಬ್ಯಾಟರಿ ತಯಾರಿಕಾ ಲೋಹಗಳು

- **ಲಿಥಿಯಂ:** ಲಿಥಿಯಂ-ಐಯಾನ್ ಬ್ಯಾಟರಿಗಳ ಪ್ರಮುಖ ಅಂಶ, ಇದು ವಿದ್ಯುತ್ ವಾಹನಗಳಲ್ಲಿ ಸಾಮಾನ್ಯವಾಗಿ ಬಳಸುವ ಲೋಹ. ಶಕ್ತಿಯನ್ನು ಸಂಗ್ರಹಿಸುವ ಮತ್ತು ಬಿಡುಗಡೆ ಮಾಡುವ ಬ್ಯಾಟರಿಯ ಸಾಮರ್ಥ್ಯಕ್ಕೆ ಇದು ಅತ್ಯಗತ್ಯ.



- **ನಿಕಲ್:** ನಿಕಲ್ ಮ್ಯಾಂಗನೀಸ್ ಕೋಬಾಲ್ಟ್ ಮತ್ತು ನಿಕಲ್ ಕೋಬಾಲ್ಟ್ ಅಲ್ಯೂಮಿನಿಯಂ ಸೇರಿದಂತೆ ವಿವಿಧ ಲಿಥಿಯಂ-ಐಯಾನ್ ಬ್ಯಾಟರಿ ಅನ್ನು ವಿದ್ಯುತ್ ವಾಹನಗಳಲ್ಲಿ ಬಳಸಲಾಗು ತ್ತದೆ. ಇವು ಬ್ಯಾಟರಿ ಸುದೀರ್ಘ ಬಾಳಿಕೆ ಬರಲು ಕಾರಣ ಆಗುತ್ತವೆ.



- **ಮ್ಯಾಂಗನೀಸ್:** ಇವಿ ಬ್ಯಾಟರಿಗಳ ಸ್ಥಿರತೆ ಮತ್ತು ಸುರಕ್ಷತೆಯನ್ನು ಸುಧಾರಿಸಲು ಸಹಾಯ ಮಾಡುತ್ತದೆ.

- **ಗ್ರಾಫೈಟ್:** ಲಿಥಿಯಂ- ಐಯಾನ್ ಬ್ಯಾಟರಿಗಳ ಆನೋಡ್ (ಋಣಾತ್ಮಕ ವಿದ್ಯುದ್ವಾರ) ನಲ್ಲಿ ಪ್ರಮುಖ ವಸ್ತುವಾಗಿ ಬಳಸಲಾಗುತ್ತದೆ.
- **ಅಲ್ಯೂಮಿನಿಯಂ:** ಬ್ಯಾಟರಿಗಳಲ್ಲಿ ಕರೆಂಟ್ ಕಲೆಕ್ಟರ್‌ಗಳಾಗಿ ಬಳಸಲಾಗುತ್ತದೆ.
- **ತಾಮ್ರ:** ವಿದ್ಯುತ್ ಸಂಗ್ರಾಹಕ ವಾಗಿಯೂ ಬಳಸಲಾಗುತ್ತದೆ.



ಬೆಂಗಳೂರಿನ ಮೂಲದ ರೇವಾ ಕಂಪನಿ ತಯಾರಿಸಿದ ಭಾರತದ ಮೊದಲ ಇವಿ ಕಾರು.

ರೆವಾ ಭಾರತದ ಮೊದಲ ಎಲೆಕ್ಟ್ರಿಕ್ ಕಾರು

2001ರಲ್ಲಿ ಬೆಂಗಳೂರಿನ ರೇವಾ ಎಲೆಕ್ಟ್ರಿಕ್ ಕಾರ್ ಕಂಪನಿ ಭಾರತ ದೇಶದ ಮೊದಲ ಎಲೆಕ್ಟ್ರಿಕ್ ಕಾರನ್ನು ಪರಿಚಯಿಸಿತು. ಆ ಸಮಯದಲ್ಲಿ ಸರಕಾರದ ಬೆಂಬಲದ ಕೊರತೆ ಮತ್ತು ಎಲೆಕ್ಟ್ರಿಕ್ ವಾಹನಗಳ ಮೇಲಿನ ಕಠಿಣ ಕಾನೂನು ನೀತಿಗಳಿಂದ ರೇವಾ ಮುಂದು ವರಿಯಲಿಲ್ಲ. 2013ರಲ್ಲಿ ಪ್ರಾರಂಭವಾದ ರಾಷ್ಟ್ರೀಯ ಎಲೆಕ್ಟ್ರಿಕ್ ಮೊಬಿಲಿಟಿ ಮಿಷನ್ ಯೋಜನೆ ಇವಿ ಅಭಿವೃದ್ಧಿಗೆ ಹೊಸ ತಿರುವನ್ನು ಕೊಟ್ಟಿತು. ಕೇಂದ್ರ ಸರಕಾರದ ಉತ್ತೇಜನದಿಂದ ಹೆಚ್ಚಿನ ಇವಿಗಳನ್ನು ದೇಶದಲ್ಲೇ ಉತ್ಪಾದಿಸಲಾಗುತ್ತಿದೆ.

ಇವಿ ಚಾರ್ಜಿಂಗ್ ಸ್ಟೇಷನ್‌ಗೆ ಸಹಕಾರ

ಇವಿ ಚಾರ್ಜಿಂಗ್ ಮೂಲಸೌಕರ್ಯದ ಕೊರತೆ ನೀಗಿಸಲು 2024 ಡಿಸೆಂಬರ್ ವೇಳೆಗೆ ದೇಶಾದ್ಯಾಂತ 25,202 ಚಾರ್ಜಿಂಗ್ ಸ್ಟೇಷನ್‌ಗಳ ಸ್ಥಾಪನೆ ಮಾಡುವ ಗುರಿ ಇದೆ. PJ C&BSMXC ಯೋಜನೆಯಡಿ ಇವಿ ಚಾರ್ಜಿಂಗ್ ಸ್ಟೇಷನ್‌ಗಳನ್ನು ಅಭಿವೃದ್ಧಿ ಪಡಿಸಲು 2,000 ಕೋಟಿ ಅನುದಾನ ಒದಗಿಸಲಾಗಿದೆ.

ಇವಿ ಜಾಗತಿಕ ಟಾಪ್ 4 ಕಂಪನಿಗಳು

- **ಟೆಸ್ಲಾ:** ಇವಿ ಕಾರುಗಳ ದೈತ್ಯ ಕಂಪನಿ ಟೆಸ್ಲಾ. ಎಲಾನ್ ಮಸ್ಕ್ ಒಡೆತನದ ಟೆಸ್ಲಾ ನವೀನ ವಿನ್ಯಾಸಗಳು, ಅತ್ಯಾಧುನಿಕ ಬ್ಯಾಟರಿ ತಂತ್ರಜ್ಞಾನ, ಸೂಪರ್‌ಚಾರ್ಜರ್ ನೆಟ್‌ವರ್ಕ್‌ಗೆ ಹೆಸರುವಾಸಿಯಾಗಿದೆ.
- **ಟಾಟಾ ಮೋಟಾರ್ಸ್:** ಭಾರತೀಯ ಇವಿ ಮಾರುಕಟ್ಟೆಯಲ್ಲಿ ಪ್ರಮುಖ ಕಂಪನಿ, ವೈಯಕ್ತಿಕ ಮತ್ತು ವಾಣಿಜ್ಯ ಬಳಕೆಗಾಗಿ ಕಾರುಗಳು ಸೇರಿ ಹಲವಾರು ವಿದ್ಯುತ್ ವಾಹನಗಳನ್ನು ತಯಾರು ಮಾಡುತ್ತಿದೆ.
- **ಬಿವೈಡಿ:** ಚೀನಾ ಮೂಲದ ಈ ಕಂಪನಿಯೂ ಎಲೆಕ್ಟ್ರಿಕ್ ಬಸ್‌ಗಳು ಮತ್ತು ಟ್ರಕ್‌ಗಳ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿದೆ. ಉತ್ತಮ ಗುಣಮಟ್ಟದ ಬ್ಯಾಟರಿ ತಂತ್ರಜ್ಞಾನಕ್ಕೆ ಜಗತ್ತಿನಲ್ಲೇ ಬಿವೈಡಿ ಛಾಪು ಮೂಡಿಸಿದೆ.
- **ನಿಯೋ:** ಹೆಚ್ಚಿನ ಕಾರ್ಯಕ್ಷಮತೆಯ ವಾಹನಗಳು ಮತ್ತು ಬ್ಯಾಟರಿ ವಿನಿಮಯ ತಂತ್ರಜ್ಞಾನಕ್ಕೆ ಹೆಸರುವಾಸಿಯಾದ ಚೀನಾದ ಇವಿ ತಯಾರಕ ಕಂಪನಿ.

ಕೊನೆ ಭಾಗದ ಭದ್ರಾ ಅನ್ನದಾತನಿಗೆ ಸಂಕಷ್ಟ ▸▸ ಕುಡಿಯುವ ನೀರಿಗೆ ಐಐಎಸ್‌ಸಿ ತಂಡ ಸಮ್ಮತಿ

ರಾಜಕೀಯ ತಿರುವು ಪಡೆದ ಭದ್ರಾ ಜಲ ಜಗಳ

ಜಿಲ್ಲಾ ನೋಟ

ಗಣೇಶ್ ಕಮ್ಮಾಪುರ, ದಾವಣಗೆರೆ

ಭದ್ರಾ ಜಲಾಶಯದ ಬಲದಂಡೆ ನಾಲೆಯಿಂದ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲೂಕು ಹಾಗೂ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲೂಕುಗಳಿಗೆ ಕುಡಿಯುವ ನೀರಿನ ಯೋಜನೆಗೆ ಐಐಎಸ್‌ಸಿ ವಿಜ್ಞಾನಿಗಳ ತಂಡ ಸಮ್ಮತಿ ನೀಡಿದೆ. ಆದರೆ, ಇದೇ ನೀರಿನಿಂದ ಕೃಷಿ ಮಾಡಿ ಬದುಕು ಕಟ್ಟಿಕೊಂಡಿದ್ದವರ ಕಥೆ ಮುಂದೇನು? ಎಂಬ ಪ್ರಶ್ನೆ ಉದ್ಭವಿಸಿದೆ.

ಹೌದು. ಐಐಎಸ್‌ಸಿ ವಿಜ್ಞಾನಿಗಳ ತಂಡ ನೀರಿನ ಭದ್ರೆಗೆ ಜಾಕ್‌ವೆಲ್ ಹಾಕಿದ ಜಲಜೀವನ್ ಮಿಷನ್ ಯೋಜನೆಯಿಂದ ನಾಲೆ ಅಥವಾ ಜಲಾಶಯಕ್ಕೆ ಯಾವುದೇ ಅಪಾಯವಿಲ್ಲ. ಗ್ರಾವಿಟಿ ಮೂಲಕ ತೆಗೆದುಕೊಂಡು ಹೋಗುವುದರಿಂದ ನಾಲೆಗೆ ಯಾವುದೇ ಸಮಸ್ಯೆ ಇಲ್ಲ ಎಂದು ಅಭಿಪ್ರಾಯಪಟ್ಟಿದ್ದು, ಸ್ಥಗಿತಗೊಂಡಿದ್ದ ಕಾಮಗಾರಿ ಮತ್ತೆ ಮಂಗಳವಾರದಿಂದಲೇ ಆರಂಭಗೊಂಡಿದೆ. ಆದರೆ, ಮಧ್ಯ ಕರ್ನಾಟಕ ಭಾಗದ ಜೀವನಾಡಿ ಭದ್ರೆ ಮೂಲಕ ನೀರೆತ್ತಿಕೊಳ್ಳುವ ಕಾಮಗಾರಿ ಯಿಂದ ಅಚ್ಚುಕಟ್ಟು ಪ್ರದೇಶದ ಅಸಂಖ್ಯಾತ ಅನ್ನದಾತರು ಆತಂಕಕ್ಕೆ ಸಿಲುಕಿದ್ದಾರೆ.

ಕುಡಿಯುವ ನೀರಿಗೆ ಡ್ಯಾಂ

ಭದ್ರೆ ಜನ್ಮ ತಾಳಿದ್ದೇ ಕುಡಿಯುವ ನೀರಿಗಾಗಿ ಮಾತ್ರ ಎಂಬುದನ್ನು ಎಲ್ಲರೂ ಒಪ್ಪಬೇಕಾದರೂ ತರೀಕೆರೆ ಭಾಗ ಸೇರಿದಂತೆ ದಾವಣಗೆರೆ ಭಾಗದ ರೈತಾಪಿ ವರ್ಗ ಬದುಕು ಕಟ್ಟಿಕೊಂಡಿದ್ದು ಇದೇ ನೀರಿನಿಂದ ಎಂಬುದನ್ನೂ ಅಲ್ಲಗಳೆಯುವಂತಿಲ್ಲ. ನಿತ್ಯ ನೂರಾರು ಕ್ಯೂಸೆಕ್ ನೀರು ಬಳಸಿಕೊಳ್ಳುವ ಯೋಜನೆ ಕಾರ್ಯಗತವಾದರೆ ಶಿವಮೊಗ್ಗ, ತರೀಕೆರೆ ದಾವಣಗೆರೆ ಇತರ ಕಡೆಯ ಲಕ್ಷಾಂತರ ಹೆಕ್ಟೇರ್ ಕೃಷಿ ಭೂಮಿ ಬತ್ತುವುದು ನಿಶ್ಚಿತ. ಇನ್ನೂ, ಅಚ್ಚುಕಟ್ಟಿನ ಕೊನೇ ಭಾಗದ ರೈತರಂತೂ ಕೃಷಿಯಿಂದಲೇ ವಿಮುಖರಾಗುವ ಲಕ್ಷಣಗಳು ಹೆಚ್ಚಿವೆ.

ಮನೆ ಮಾಡಿದ ಆತಂಕ

ಕುಡಿಯುವ ನೀರಿಗಾಗಿ 30 ಕ್ಯೂಸೆಕ್ ನೀರು ಹರಿಸಿದರೆ ನಾಲೆಗೆ ತೊಂದರೆ ಇಲ್ಲ ಎನ್ನುತ್ತದೆ ತಜ್ಞರ ತಂಡ. ಆದರೆ, ಭದ್ರಾ ಬಲದಂಡೆ ನಾಲೆಗಿಂತ 5 ಅಡಿಯಷ್ಟು ಕೆಳಮಟ್ಟದಲ್ಲಿ ಕಾಮಗಾರಿ ನಡೆಸುವುದರಿಂದ ಬಹುಪಾಲು ನೀರು ಆ ಭಾಗಕ್ಕೆ ಹರಿಯುತ್ತದೆ. ಈಗಾಗಲೇ ಮಳೆಗಾಲದಲ್ಲಿಯೇ ನೀರಿಗಾಗಿ ಪರದಾಡುತ್ತಿರುವ ಕೊನೆ ಭಾಗದ ರೈತರಿಗೆ ಬೇಸಿಗೆ ಬೆಳೆ ಮರಿಚಿಕೆಯಾಗಲಿದೆ. ಜತೆಗೆ, ಅಕ್ರಮ ಪಂಪ್‌ಸೆಟ್ ಅಳವಡಿಕೆಯೂ ಕೊನೆ ಭಾಗಕ್ಕೆ ನೀರು ಬಾರದಿರಲು ಮತ್ತೊಂದು ಕಾರಣವಾಗಿದೆ.

ಐಐಎಸ್‌ಸಿ ತಜ್ಞರ ವರದಿ

ಭದ್ರಾ ಡ್ಯಾಂನ ನಾಲೆಯ ಆರಂಭಿಕ ಸ್ಥಳದಲ್ಲಿಯೇ ನೀರು ತೆಗೆಯುತ್ತಿರುವುದು ಹಾಗೂ ಈಗ ಹರಿಸುತ್ತಿರುವ 2,650 ಕ್ಯೂಸೆಕ್ ಜತೆಗೆ ಹೆಚ್ಚುವರಿಯಾಗಿ 30 ಕ್ಯೂಸೆಕ್ ನೀರು ಸೇರಿಸುವುದರಿಂದ ನಾಲೆಯಲ್ಲಿ ಹರಿಯುವ

ನೀರಿನ ವೇಗ ಕಡಿಮೆಯಾಗುವುದಿಲ್ಲವೆಂದು ಐಐಎಸ್‌ಸಿ ತಜ್ಞರ ತಂಡ ವರದಿಯಲ್ಲಿ ಉಲ್ಲೇಖಿಸಿದೆ. ಜತೆಗೆ, ಬಲದಂಡೆ ನಾಲೆಯಿಂದ ಕುಡಿಯುವ ನೀರಿನ ಉದ್ದೇಶಕ್ಕೆ 30 ಕ್ಯೂಸೆಕ್ ಹರಿಸುವುದರಿಂದ ಕೊನೆಯ ಭಾಗದ ರೈತರಿಗೆ ನೀರು ಹರಿಯಲು ಯಾವುದೇ ತೊಂದರೆ ಇಲ್ಲ. ಅಲ್ಲದೆ, ತಾಂತ್ರಿಕವಾಗಿ ಹೆಚ್ಚು ನೀರನ್ನು ಶುದ್ಧೀಕರಣ ಘಟಕಕ್ಕೂ ತೆಗೆದುಕೊಂಡು ಹೋಗಲಾಗುವುದಿಲ್ಲ. ಹೀಗಾಗಿ ರೈತರು ಭಯಪಡುವ ಅವಶ್ಯಕತೆ ಇಲ್ಲವೆನ್ನುತ್ತಾರೆ ಇಂಜಿನಿಯರ್‌ಗಳು.

ಎಲ್ಲೆಲ್ಲಿಗೆ ನೀರು?

ಭದ್ರೆ ಜಲಾಶಯದ ಬಲದಂಡೆ ನಾಲೆಯ ಮೂಲಕ 2,187 ಕೋಟಿ ರೂ. ವೆಚ್ಚದಲ್ಲಿ ಹೊಸದುರ್ಗ ತಾಲೂಕಿನ 346 ಗ್ರಾಮ ಅಜ್ಜಂಪುರ ಹಾಗೂ ತರೀಕೆರೆ ತಾಲೂಕಿನ 172 ಗ್ರಾಮಗಳ ಜನವಸತಿ ಪ್ರದೇಶಗಳಿಗೆ ನೀರು ತೆಗೆದುಕೊಂಡು ಹೋಗಲು ಈ ಯೋಜನೆ ರೂಪಿಸಲಾಗಿದೆ.

ರಾಜಕೀಯ ತಿರುವು

ನಾಲೆ ಸೀಳಿ ನೀರು ಹರಿಸುವ ವಿಚಾರ ರಾಜಕೀಯಕ್ಕೆ ತಿರುಗಿದ್ದು, ಬಿಜೆಪಿ, ಕಾಂಗ್ರೆಸ್ ಪಕ್ಷಗಳು ಇದರಲ್ಲೂ ಲಾಭ ಕಾಣುವ ತವಕದಲ್ಲಿವೆ. ಇದಕ್ಕಾಗಿ ನಿತ್ಯ ಪ್ರತಿಭಟನೆ, ಬಂದ್, ಮನವಿ ನಡೆಯುತ್ತಿವೆ. ಇದು ಬಿಜೆಪಿ ಅವಧಿಯಲ್ಲೇ ಆಗಿರುವ ಯೋಜನೆ ಎಂದು ಕಾಂಗ್ರೆಸ್ ಆರೋಪಿಸಿದರೆ, ನಾವು ಯೋಜನೆ ರೂಪಿಸಿದ್ದನ್ನು ತಿರುಚಿ ಅವೈಜ್ಞಾನಿಕವಾಗಿ ಕಾಮಗಾರಿ ಮಾಡಲಾಗುತ್ತಿದೆ ಎಂದು ಬಿಜೆಪಿ ತಿರುಗೇಟು ನೀಡಿದೆ. ಇದರಿಂದ ಚಿತ್ರದುರ್ಗ, ದಾವಣಗೆರೆ, ಚಿಕ್ಕಮಗಳೂರು ಭಾಗದ ಜನರ ನಡುವೆ ಕಲಹಕ್ಕೆ ಕಾರಣವಾಗಿದೆ. ಆಡಳಿತ ಪಕ್ಷದ ಹೊಸದುರ್ಗ, ದಾವಣಗೆರೆ ಭಾಗದ ಕಾಂಗ್ರೆಸ್ಸಿಗರು ಕುಡಿಯಲು ನೀರಿಗೆ ಬೇಡಿಕೆ ಇಟ್ಟಿದ್ದು, ಈ ನಡುವೆ ಬಿಜೆಪಿ ಮಾತ್ರ ರೈತರ ಪರ ಹೋರಾಟಕ್ಕಿಳಿದಿದೆ.

ನಮ್ಮ ಸಂವಿಧಾನ ಕುಡಿಯುವ ನೀರು, ಅನ್ನಕ್ಕೆ ಯಾವುದೇ ಬೇಲಿ ಹಾಕಿಲ್ಲ. ಅಲ್ಲದೆ, ಭದ್ರೆ ನೀರು ಕುಡಿಯುವುದಕ್ಕಾಗಿಯೇ ಕಟ್ಟಿರುವುದು. ಇದಕ್ಕೆ ಅಡ್ಡಿಪಡಿಸುವುದು ಅಕ್ಷಮ್ಯ ಎಂದು ಸುಪ್ರೀಂಕೋರ್ಟ್ ಹಲವು ಪ್ರಕರಣಗಳಲ್ಲಿ ಆದೇಶಿಸಿದೆ. ಹಾಗಾಗಿ, ವಿರೋಧಿಸುವವರು ಇದನ್ನು ಮೊದಲು ಅರಿಯಲಿ.

-ಗೋವಿಂದ ಕಾರಜೋಳ, ಚಿತ್ರದುರ್ಗ ಸಂಸದ

ಕುಡಿಯಲು ನೀರು ಕೊಡಲು ನಮ್ಮ ಅಭ್ಯಂತರವಿಲ್ಲ. ಭದ್ರೆ ಬಲದಂಡೆಯಿಂದ ನೀರು ಕೊಂಡ್ಯೊಯ್ಯದೇ ಭದ್ರಾ ಹಿನ್ನೀರು, ನದಿ ಮೂಲಕ ನೀರೆತ್ತಲು ಅವಕಾಶವಿದೆ. ಆದರೂ, ನಾಲೆ ಸೀಳಿ ನೀರು ಹರಿಸುವುದು ಸರಿ ಯಲ್ಲ. ಈ ಕುರಿತು ಈಗಾಗಲೇ ಹಲವು ಹೋರಾಟ ನಡೆಸಿದ್ದು, ರೈತ ಸಂಘಟನೆಗಳೊಂದಿಗೆ ಚರ್ಚಿಸಿ ಮುಂದೆ ಮತ್ತಷ್ಟು ಉಗ್ರ ಹೋರಾಟ ಮಾಡಲಾಗುವುದು.

-ಎಂ.ಪಿ. ರೇಣುಕಾಚಾರ್ಯ, ಮಾಜಿ ಸಚಿವ

ಭದ್ರಾ ನಂಬಿಕೊಂಡೆ ಈ ಭಾಗದ ರೈತರು ಬದುಕಿರುವುದು. ನಾಲೆ ಸೀಳಿ ಬೇರೆಡೆ ನೀರು ಹರಿಸುವುದನ್ನು ಜಿಲ್ಲಾ ಉಸ್ತು ವಾರಿ ಸಚಿವರು, ಸಂಸದರು ಹಾಗೂ ಕಾಂಗ್ರೆಸ್ ಮುಖಂಡರು ವಿರೋಧಿಸಿ, ಸರಕಾರದ ಮೇಲೆ ಒತ್ತಡ ತಂದು ಕಾಮಗಾರಿ ನಿಲ್ಲಿಸಲಿ. ಅದನ್ನು ಬಿಟ್ಟು ಕಾಮಗಾರಿ ಸ್ಥಳಕ್ಕೆ ಹೋಗಿ ಕಲ್ಲು, ಮಣ್ಣು ಹಾಕುವ ಬೂಟಾಟಿಕೆ ಬೇಡ. ರೈತರ ಪರ ನೈಜ ಹೋರಾಟ ನಡೆಸಲಿ.

-ಎಚ್.ಎಸ್. ಶಿವಶಂಕರ್, ಮಾಜಿ ಶಾಸಕ, ಜೆಡಿಎಸ್

ಅಡಕೆ ಹಾಳೆ ಉತ್ಪನ್ನಗಳಿಂದ ಕ್ಯಾನ್ಸರ್ ಅಂಶ ▸▸ ಅಮೆರಿಕಾದ ಎಫ್‌ಡಿಎ ಹೇಳಿಕೆಗೆ ಆತಂಕ

ಮಗುಚಿ ಬಿದ್ದ ಮಲೆನಾಡ ಅಡಕೆ ತಟ್ಟೆ ಉದ್ಯಮ

ಜಿಲ್ಲಾ ನೋಟ

ಹೆಗ್ಗೆರೆ ರೇಣುಕಾರಾಧ್ಯ, ಶಿವಮೊಗ್ಗ

ಅಡಕೆ ಹಾಳೆಯ ಉತ್ಪನ್ನಗಳಲ್ಲಿ ಕ್ಯಾನ್ಸರ್‌ಕಾರಕ ರಾಸಾಯನಿಕಗಳಿವೆ ಎಂಬ ಅಮೆರಿಕಾದ ಎಫ್‌ಡಿಎ ಹೇಳಿಕೆ ಮಲೆನಾಡಿನ ಸಾವಿರಾರು ಮಂದಿಯ ಉದ್ಯೋಗ ಕಸಿದುಕೊಂಡಿದೆ. ನೂರಾರು ಸ್ವ ಉದ್ಯೋಗ ಮಾಡುತ್ತಿದ್ದ ಸಣ್ಣ ಉದ್ಯಮಿಗಳು ಬೀದಿಗೆ ಬಂದು ನಿಂತಿದ್ದಾರೆ..!

ಅಮೆರಿಕದ ಆಹಾರ ಮತ್ತು ಔಷಧ ಆಡಳಿತ ಅಡಿಕೆ ಹಾಳೆಯ ಉತ್ಪನ್ನಗಳಾದ ತಟ್ಟೆ, ಲೋಟ, ಬಟ್ಟಲುಗಳನ್ನು ನಿಷೇಧಿಸಿದೆ. ಏಕೆಂದರೆ ಈ ಉತ್ಪನ್ನಗಳಲ್ಲಿರುವ ಅಲ್ಕಲಾಯ್ಡ್ ಎಂಬ ರಾಸಾಯನಿಕ ಕ್ಯಾನ್ಸರ್‌ಗೆ ಕಾರಣವಾಗಬಹುದು ಎಂದು ಹೇಳಲಾಗಿದೆ. ಈ ನಿಷೇಧದಿಂದ ಕರ್ನಾಟಕ ಸೇರಿದಂತೆ ಅಡಕೆ ಹಾಳೆ ತಯಾರಿಸುವ ಅನೇಕ ರಾಜ್ಯಗಳಲ್ಲಿ ಉದ್ಯೋಗ ನಷ್ಟವಾಗುವ ಆತಂಕವಿದೆ.

ನಿಷೇಧಗಳಿಗೆ ಕಾರಣ

ಅಡಕೆ ಹಾಳೆಯ ಉತ್ಪನ್ನಗಳಲ್ಲಿ ಕ್ಯಾನ್ಸರ್ ಕಾರಕ ರಾಸಾಯನಿಕಗಳಿವೆ ಎಂದು ಅಮೆರಿಕದ ಎಫ್‌ಡಿಎ ಹೇಳಿದೆ. ಈ ಉತ್ಪನ್ನಗಳು ಆರೋಗ್ಯಕ್ಕೆ ಹಾನಿಕಾರಕವೆಂದು ವರದಿಯಾಗಿದೆ. ಈ ಕಾರಣದಿಂದ ಅಡಕೆ ಹಾಳೆ ಉದ್ಯಮದಲ್ಲಿ ತೊಡಗಿರುವ ಸಾವಿರಾರು ಜನರ ಜೀವನೋಪಾಯಕ್ಕೆ ತೊಂದರೆಯಾಗುವ ಸಾಧ್ಯತೆ ಇದೆ. ಕರ್ನಾಟಕದಂತಹ ರಾಜ್ಯಗಳಲ್ಲಿ ಅಡಕೆ ಹಾಳೆ ಉತ್ಪನ್ನಗಳ ರಫ್ತು ವಹಿವಾಟಿಗೆ ಹೊಡೆತ ಬೀಳುವ ಆತಂಕವಿದೆ. ಬೆಳೆಗಾರರು ಮತ್ತು ಉದ್ಯಮಿಗಳಿಗೆ ಆರ್ಥಿಕ ನಷ್ಟವಾಗುವ ಸಾಧ್ಯತೆ ಯಿದೆ ಎಂಬ ಮಾತುಗಳು ಕೇಳಿ ಬರುತ್ತಿವೆ.

ನಿಷೇಧವಾದರೂ ಏಕೆ?

ಮಲೆನಾಡಿಗೆ ಆರ್ಥಿಕವಾಗಿ ಬಲ ತರುವ ಅಡಕೆ ಮರದ ಹಾಳೆಗಳಿಂದ ತಯಾರಿಸಲಾಗುವ ತಟ್ಟೆಗೆ ಅಮೆರಿಕ ನಿಷೇಧ ಮಾಡಿದೆ. ಅಡಕೆ ತಟ್ಟೆಯಲ್ಲಿ ‘ಅಲ್ಕಲೈಡ್’ ಎಂಬ ಹಾನಿಕರಕ ಅಂಶವಿದೆ, ಇದನ್ನು ಬಳಸಿದರೆ ಮನುಷ್ಯರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ ಎಂಬ ವರದಿ ನೀಡಿದ್ದರಿಂದ ಭಾರತದಿಂದ ಆಮದಾಗುತ್ತಿರುವ ಅದರಲ್ಲೂ ಮುಖ್ಯವಾಗಿ, ಶಿವಮೊಗ್ಗ ಜಿಲ್ಲೆಯಿಂದ ರಫ್ತಾಗುತ್ತಿದ್ದ ಅಡಕೆ ತಟ್ಟೆಗಳು ನಿಷೇಧಕ್ಕೊಳಗಾಗಿವೆ. ಇದರಿಂದಾಗಿ ಇದನ್ನೇ ನಂಬಿದ ಉದ್ಯಮಿಗಳು ಕಂಗಾಲಾಗಿದ್ದಾರೆ. ಲಕ್ಷಾಂತರ ರೂಪಾಯಿ ಹೂಡಿಕೆ ಮಾಡಿ ಅಡಕೆ ತಟ್ಟೆ ಉದ್ಯಮ ಪ್ರಾರಂಭಿಸಿದವರು, ಬ್ಯಾಂಕ್‌ಗಳಿಂದ ಸಾಲ ಮಾಡಿಕೊಂಡವರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಮಾರುಕಟ್ಟೆ ಅವಲಂಬನೆ

ಮಲೆನಾಡಿನಲ್ಲಿ ತಯಾರಾಗುವ ಅಡಕೆ ತಟ್ಟೆಗಳು ಮುಖ್ಯವಾಗಿ ಅಮೆರಿಕದ ಮಾರುಕಟ್ಟೆಯನ್ನೇ ಅವಲಂಬಿಸಿವೆ. ಆ ದೇಶದಿಂದ ಹೆಚ್ಚೆಚ್ಚು ಆಮದು ಮಾಡಿಕೊಳ್ಳುವ ಬೇಡಿಕೆಯನ್ನು ಪೂರೈಸುವ ನಿಟ್ಟಿನಲ್ಲಿ ಕೆಲಸ ಅಮೆರಿಕದಲ್ಲಿ ಭಾರತದ ಒಂದು ಅಡಕೆ ತಟ್ಟೆಯನ್ನು ಅವರ ಹೇಳಿದ ಅಳತೆಯಲ್ಲಿ ರವಾನಿಸಿದರೆ, ಇಲ್ಲಿನವರಿಗೆ 19 ರೂ. ಸಿಗುತ್ತದೆ. ಇದೀಗ ಅಡಕೆ ತಟ್ಟೆ ನಿಷೇಧ ಮಾಡಿರುವುದರಿಂದ ರಫ್ತು ನಿಂತು ಹೋಗಿ ಇಲ್ಲಿನ ಉದ್ಯಮಗಳು ಬಂದ್ ಆಗು ತ್ತವೆ. ಅಲ್ಲದೆ, ಅದನ್ನೆ ನೆಚ್ಚಿಕೊಂಡಿರುವ ಸಾವಿರಾರೂ ಮಂದಿಗೆ ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತಾರೆ.

ಈ ನಿಷೇಧ ಭಾರತದ ಅಡಿಕೆ ಉದ್ಯಮದ ಮೇಲೆ ದೊಡ್ಡ ಪರಿಣಾಮ ಬೀರಬಹುದು, ಆದ್ದರಿಂದ ತುರ್ತು ಕ್ರಮ ಕೈಗೊಳ್ಳುವುದು ಅವಶ್ಯಕವಾಗಿದೆ. ಅಡಕೆ ತಟ್ಟೆ ಉದ್ಯಮ ಈಗ ಬೆಳೆದು ನಿಂತಿದೆ. ಅಮೆರಿಕಾದ ನಿಷೇಧವೂ ಸ್ಥಳೀಯವಾಗಿ ನೂರಾರು ಉದ್ಯಮಗಳನ್ನು ಮುಚ್ಚುವ ಸ್ಥಿತಿಗೆ ತಂದಿದೆ. ಆಡಿಕೆ ತಟ್ಟೆ ಹಾನಿಕಾರಕವೇ ಎಂಬ ಬಗ್ಗೆ ವರದಿ ನಿರೀಕ್ಷೆ ಮಾಡಲಾಗುತ್ತಿದೆ. ನಂತರದಲ್ಲಿ ಕೇಂದ್ರ ಸರಕಾರಕ್ಕೆ ಈ ಕುರಿತು ಮನವರಿಕೆ ಮಾಡಿಕೊಡಲು ಯತ್ನಿಸಲಾಗುತ್ತದೆ.

-ಡಿ.ಎಸ್.ಅರುಣ್, ವಿಧಾನ ಪರಿಷತ್ ಸದಸ್ಯರು

ತಟ್ಟೆ ತಯಾರು ಹೇಗೆ?

ಅಡಕೆ ತಟ್ಟೆಯನ್ನು ಅಡಕೆ ಮರದಿಂದ ಉದುರುವ ಎಲೆ ಅಥವಾ ಗರಿಯಿಂದ ತಯಾರು ಮಾಡಲಾಗುತ್ತದೆ. ಮೊದಲು ಕಚ್ಚಾ ಎಲೆಯನ್ನು ಅಡಕೆ ತೋಟದಿಂದ ತಂದು ಅದನ್ನು ಬಿಸಿಲಿನಲ್ಲಿ ಒಣಗಿಸಿ, ನೀರಿನಲ್ಲಿ ನೆನೆಸಿ ನಂತರ ತಮಗೆ ಬೇಕಾದ ಡೈನಲ್ಲಿ ಗಾತ್ರ ಹಾಗೂ ವಿವಿಧ ವಿನ್ಯಾಸಕ್ಕೆ ತಕ್ಕಂತೆ ತಯಾರು ಮಾಡಲಾಗುತ್ತದೆ. ನಂತರ ಪಾಲಿಶ್ ಮಾಡಿ, ಪ್ಯಾಕ್ ಮಾಡಿ ಕಳುಹಿಸಲಾಗುತ್ತದೆ. ಇವುಗಳನ್ನು ಹಡುಗಿನ ಮೂಲಕ ವಿದೇಶಗಳಿಗೆ ಕಳುಹಿಸಲಾಗು ತ್ತದೆ. ಇದನ್ನು ಖರೀದಿಸಿ ಕಳುಹಿಸುವದಕ್ಕೆ ಏಜೆಂಟರಿದ್ದಾರೆ.

ಅಡಕೆ ತಟ್ಟೆಗಳ ಸ್ಯಾಂಪಲ್

ಶಿವಮೊಗ್ಗ ಜಿಲ್ಲೆಯ ಜಿಲ್ಲಾ ಅಡಕೆ ತಟ್ಟೆ ತಯಾರಕರು ಹಾಗೂ ವ್ಯಾಪಾರಿಗಳ ಸಂಘದ ಜಿಲ್ಲಾಧ್ಯಕ್ಷ ಮಂಜುನಾಥ್ ಮತ್ತು ಅವರ ತಂಡ ಕಳೆದ ಒಂದು ತಿಂಗಳಿಂದ ದೇಶದ ವಿವಿಧ ಪ್ರಯೋಗಾಲಯಗಳಿಗೆ ಅಡಕೆ ತಟ್ಟೆಗಳ ಸ್ಯಾಂಪಲ್ ಕಳುಹಿಸಿ ಕೊಟ್ಟಿದೆ. ಅದರ ವರದಿಗಾಗಿ ಕಾಯುತ್ತಿದೆ. ವರದಿ ಬಂದ ಅನಂತರದಲ್ಲಿ ಆ ವರದಿಯ ಆಧಾರವಾಗಿಟ್ಟುಕೊಂಡು ಕೇಂದ್ರ ಸರಕಾರವನ್ನು ಮಧ್ಯ ಪ್ರವೇಶ ಮಾಡಲು ಒತ್ತಾಯ ಮಾಡುವುದಕ್ಕೂ ಸಿದ್ಧತೆ ನಡೆಸಿದೆ. ಇದಕ್ಕೆ ವಿಧಾನ ಪರಿಷತ್ ಸದಸ್ಯ ಅರುಣ್ ಬೆಂಬಲಕ್ಕೆ ನಿಂತಿದ್ದಾರೆ.

ದೇಶದ ವಿವಿಧ ಪ್ರಯೋಗಾಲಯಗಳಲ್ಲಿ ವರದಿಗಾಗಿ ಕಾಯುತ್ತಿರುವುದನ್ನು ಮಂಜುನಾಥ ಅವರು ಅರುಣ್ ಅವರ ಗಮನಕ್ಕೆ ತರುತ್ತಿದ್ದಂತೆ ಸಂಬಂಧಪಟ್ಟ ಪ್ರಯೋಗಾಲಯದಿಂದ ಬೇಗನೇ ವರದಿ ತರಿಸಿಕೊಳ್ಳಲು ಪ್ರಯತ್ನವನ್ನು ಮಾಡಲಾಗುತ್ತಿದೆ. ಈಗಾಗಲೇ ಉದ್ಯಮಗಳು ಮುಚ್ಚುತ್ತಿರುವ ಆತಂಕ ಹೆಚ್ಚಾಗುತ್ತಿದೆ. ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರನ್ನು ಭೇಟಿ ಮಾಡಿ ಕೇಂದ್ರದ ನೆರವು ಕೋರಲು ಸಂಘ ತೀರ್ಮಾನ ಮಾಡಿದೆ.

ಮಂಜುನಾಥ ಪ್ರಕಾರ ಹಲವು ವರ್ಷಗಳಿಂದ ಅಡಕೆ ತಟ್ಟೆ ಉದ್ಯಮ ನಡೆಯುತ್ತಿದೆ. ಅಮೆರಿಕಕ್ಕೆ ಹೆಚ್ಚು ಅಡಿಕೆ ತಟ್ಟೆಗಳ ರಫ್ತಾಗುತ್ತದೆ. ಆದರೆ ಕಳೆದ ತಿಂಗಳು ಆರೋಗ್ಯಕ್ಕೆ ಹಾನಿಕರಕ ಎಂಬ ವರದಿ ನೀಡಿದೆ. ತಪ್ಪಾಗಿ ಸಂಶೋಧನೆ ನಡೆಸಿ ಈ ವರದಿ ನೀಡಿರಬಹುದು. ಇದನ್ನೇ ನಂಬಿಕೊಂಡು ಸಾಲ ಮಾಡಿ ಬಂಡವಾಳ ಹಾಕಿರುವ ನೂರಾರು ಉದ್ಯಮಿಗಳು ಬೀದಿಗೆ ಬಂದಿದ್ದಾರೆ. ಇದಕ್ಕೆ ಪರಿಹಾರ ಕಂಡುಕೊಳ್ಳಲು ನಿರಂತರ ಪ್ರಯತ್ನ ಮಾಡುತ್ತಿದ್ದೇವೆ. ವಿಧಾನ ಪರಿಷತ್ ಸದಸ್ಯ ಅರುಣ್ ನಮಗೆ ಸಹಾಯ ಮಾಡುತ್ತಿದ್ದಾರೆ ಎಂದು ಹೇಳುತ್ತಾರೆ. ಅಂದಾಜಿನ ಪ್ರಕಾರ ಅಡಕೆ ತಟ್ಟೆ ತಯಾರಿಕೆ ಯಲ್ಲಿಯೇ ಸುಮಾರು 50 ಸಾವಿರ ಕಾರ್ಮಿಕರಿ ದ್ದಾರೆ. ಹೀಗಾಗಿ ಕೇಂದ್ರ ಮತ್ತು ರಾಜ್ಯ ಸರಕಾರ ಗಳು ಮಧ್ಯಪ್ರವೇಶ ಮಾಡಿ ಸಮಸ್ಯೆ ಪರಿಹರಿಸ ಬೇಕೆಂಬುದು ನಮ್ಮ ಬೇಡಿಕೆ. ಸುಮಾರು ಎರಡು ಸಾವಿರ ಕೋಟಿ ರೂ. ನಷ್ಟ ಉಂಟಾಗುತ್ತದೆ ಎಂಬ ಆತಂಕವೂ ವ್ಯಕ್ತವಾಗಿದೆ.

ವಿಶ್ವವಾಣಿ
@vishwavaninews
ಬೆಂಗಳೂರು
02-07-2025
ಬುಧವಾರ

ಆರಾಮ

ಗ್ರಾಮೀಣ ಪ್ರದೇಶದಲ್ಲಿ ಜನಿಸಿ, ಸರಕಾರಿ ಶಾಲೆಯಲ್ಲಿ ವಿದ್ಯಾಭ್ಯಾಸ ಪಡೆದ ಆತ್ಮ ವಿ. ಹಿರೇಮಠ ಅವರು, ಇಂದು ರಾಜ್ಯದ ಉತ್ತಮ ಕಾನೂನು ತಜ್ಞರಾಗಿ ಗುರುತಿಸಿಕೊಂಡಿರುವುದು ಹೆಮ್ಮೆಯ ಸಂಗತಿ. ನಮ್ಮ ರಾಜ್ಯದ ಹೈಕೋರ್ಟಿನ ಕಾರ್ಯಕಾರಿ ಸಮಿತಿ ಸದಸ್ಯರಾಗಿಯೂ ಜವಾಬ್ದಾರಿ ನಿರ್ವಹಿಸುತ್ತಿರುವ ಇವರು, ಹಳ್ಳಿಯ ವಿದ್ಯಾರ್ಥಿಗಳಿಗೆ ಸಹಾಯ ಮಾಡಿದ್ದಾರೆ. ಜತೆಗೇ, ಜನರಿಗೆ ಅನುಕೂಲವಾಗುವಂತಹ ನಿಯಮಗಳನ್ನು ಜಾರಿಗೊಳಿಸುವಲ್ಲಿ ಸಕ್ರಿಯವಾಗಿ ತೊಡಗಿಕೊಂಡಿದ್ದಾರೆ. ಕಾನೂನು ಕ್ಷೇತ್ರದಲ್ಲಿ ಇವರ ಕೊಡುಗೆಯನ್ನು ಗುರುತಿಸಿ, 'ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ'ಯನ್ನು ಇತ್ತೀಚೆಗೆ ಇವರಿಗೆ ಕೊಡಮಾಡಲಾಯಿತು. ಜಾರ್ಜಿಯ ದೇಶದಲ್ಲಿ ನಡೆದ ಸಮಾರಂಭದಲ್ಲಿ, ಗಣ್ಯರ ಸಮ್ಮುಖದಲ್ಲಿ ಇವರಿಗೆ ಇತ್ತೀಚೆಗೆ ಪ್ರಶಸ್ತಿಯನ್ನುನೀಡಿ ಗೌರವಿಸಲಾಯಿತು.

ಗ್ರಾಮೀಣ ಪ್ರದೇಶದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಪಡೆದು, ತದನಂತರ ಅಪಾರ ಪರಿಶ್ರಮದಿಂದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಕೆಲವು ಗಣ್ಯರನ್ನು ನಾವಿಂದು ಗುರುತಿಸಬಹುದು. ಅಂತಹವರಲ್ಲಿ, ಆತ್ಮ ವಿ. ಹಿರೇಮಠ ಒಬ್ಬರು. ಅವರು ತಮ್ಮ ಸ್ವಂತ ಪರಿಶ್ರಮದಿಂದ ಉನ್ನತ ವಿದ್ಯಾಭ್ಯಾಸ ಕೈಗೊಂಡಿದ್ದರ ಜತೆಯಲ್ಲೇ, ಹಲವು ಸಕಾರಾತ್ಮಕ ಚಟುವಟಿಕೆಗಳನ್ನು ತೊಡಗಿಕೊಂಡು, ಸಮಾಜದ ಹಿತಚಿಂತೆನಯನ್ನೂ ನಡೆಸಿದ್ದಾರೆ. ಆತ್ಮ ವಿ. ಹಿರೇಮಠ ಅವರು ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ಸರಕಾರಿ ಪ್ರಾಥಮಿಕ ಶಾಲೆ, ಶಿರಶ್ಯಾಡ, ಇಂಡಿ ತಾಲೂಕು, ಬಿಜಾಪುರ ಜಿಲ್ಲೆಯಲ್ಲಿ ಪಡೆದು, ಪ್ರೌಢಶಾಲಾ ವಿದ್ಯಾಭ್ಯಾಸವನ್ನು ಸಿದ್ಧಗಂಗಾ ಮಠದಲ್ಲಿ ಪಡೆದರು. ಬೆಂಗಳೂರಿನಲ್ಲಿ ಮುಂದಿನ ವಿದ್ಯಾಭ್ಯಾಸ ಕೈಗೊಂಡು, ತದನಂತರ, ಬೆಳಗಾವಿಯಲ್ಲಿ ಕಾನೂನು ಪದವಿಯನ್ನು ಅಭ್ಯಾಸ ಮಾಡಿದರು.

ಬೆಂಗಳೂರು ಉಚ್ಚನ್ಯಾಯಾಲಯದಲ್ಲಿ 2011ರಲ್ಲಿ ತಮ್ಮ ವಕೀಲ ವೃತ್ತಿಯನ್ನು ಕೈಗೊಂಡು, ಹಲವು ಪ್ರಕರಣಗಳನ್ನು ಯಶಸ್ವಿಯಾಗಿ ನಡೆಸಿಕೊಂಡುಬರುತ್ತಿದ್ದಾರೆ. ಇಂದು ಇವರು ನಮ್ಮ ರಾಜ್ಯದ ಹೈಕೋರ್ಟಿನ ಕಾರ್ಯಕಾರಿ ಸಮಿತಿ ಸದಸ್ಯರಲ್ಲಿ ಒಬ್ಬರಾಗಿದ್ದಾರೆ.

ವಿವಿಧ ಸಂಸ್ಥೆಗಳಲ್ಲಿ ಸಕ್ರಿಯ

ಆತ್ಮ ವಿ. ಹಿರೇಮಠ ಅವರು, ವಿವಿಧ ಸಂಸ್ಥೆಗಳ ಜವಾಬ್ದಾರಿಯುತ ಸ್ಥಾನಗಳಲ್ಲಿದ್ದುಕೊಂಡು, ತಮ್ಮ ಸೇವೆಯನ್ನು ನೀಡುತ್ತಿದ್ದಾರೆ. ಎಸ್‌ಜಿಇ ಸಂಸ್ಥೆಯ ಶಾಲಾ ಮತ್ತು ಪಿಯು ಕಾಲೇಜಿನ ನಿರ್ದೇಶಕರಾಗಿ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದಾರೆ. 2018ರಿಂದ ಇಲ್ಲಿಯ ತನಕ ಕೇಂದ್ರ ಸರಕಾರದ ಪರ ವಕೀಲರಾಗಿ (ಸೆಂಟ್ರಲ್ ಗವರ್ನಮೆಂಟ್ ಕೌನ್ಸೆಲ್) ಕಾರ್ಯನಿರ್ವಹಿಸುತ್ತಿದ್ದಾರೆ. 2018 ರಿಂದ ನಿರಂತರವಾಗಿ ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾದ (ಯುತ್ ವಿಂಗ್) ರಾಷ್ಟ್ರೀಯ ಕಾರ್ಯಕಾರಣಿ ಸದಸ್ಯರಾಗಿದ್ದಾರೆ. 2021-2023ರ ಅವಧಿಯಲ್ಲಿ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿ, ಮೂರು ವರ್ಷಗಳ ಕಾಲ, ಹಲವು ಜವಾಬ್ದಾರಿಗಳನ್ನು ನಿರ್ವಹಿಸಿದ್ದಾರೆ. ಜತೆಗೆ, ನಾಲ್ಕು ಕಾಲೇಜುಗಳ ಗವರ್ನಿಂಗ್ ಕೌನ್ಸಿಲ್ ಸದಸ್ಯರೂ ಆಗಿದ್ದರು.

ಹಲವು ಚಟುವಟಿಕೆಗಳು

ಕಾನೂನು ಕ್ಷೇತ್ರದಲ್ಲಿನ ಇವರ ವಿಶೇಷ ಜ್ಞಾನವನ್ನು ಗಮನಿಸಿ, ಹಲವು ಜವಾಬ್ದಾರಿಗಳನ್ನು ಕಾಲದಿಂದ ಕಾಲಕ್ಕೆ ಇವರಿಗೆ ವಹಿಸಲಾಗಿದ್ದು, ಅವೆಲ್ಲವನ್ನೂ ಆತ್ಮ ವಿ.ಹಿರೇಮಠ ಅವರು ಶಿಸ್ತಿನಿಂದ ನಿಭಾಯಿಸಿಕೊಂಡು ಬಂದಿರುವುದು ವಿಶೇಷ. ಅವರು ನಿರ್ವಹಣೆ ಮಾಡಿದ ಕೆಲವು ಜವಾಬ್ದಾರಿಗಳನ್ನು ಇಲ್ಲಿ ಪಟ್ಟಿ ಮಾಡಲಾಗಿದೆ:

- ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನ ಬೀದರ ಜಿಲ್ಲೆಯ ಚುನಾವಣಾ ಅಧಿಕಾರಿಯಾಗಿದ್ದರು.
- ಬೆಂಗಳೂರು ವಕೀಲರ ಸಾಹಿತ್ಯ ಕೂಟದ ಚುನಾವಣಾ ಅಧಿಕಾರಿ ಆಗಿದ್ದರು.
- ಮೂರು ವರ್ಷ ಬಿಜೆಪಿಯ ಕಾನೂನು ಪ್ರಕೋಷ್ಠದ ಕಾರ್ಯಕಾರಿಣಿ ಸದಸ್ಯರಾಗಿದ್ದರು. (2018-21)
- ಬೆಂಗಳೂರು ವಕೀಲರ ಸಂಘದ ಕಾರ್ಯಕಾರಿಣಿ ಸದಸ್ಯರಾಗಿದ್ದಾರೆ. ಈ ಕುರಿತು, 2025ರಲ್ಲಿ ನಡೆದ ಚುನಾವಣೆಯಲ್ಲಿ ಅತ್ಯಧಿಕ ಮತ ಪಡೆದು ಆಯ್ಕೆಯಾಗಿದ್ದಾರೆ.
- ಶರಣ ವಕೀಲ ವೇದಿಕೆಯ ಯುವ ಘಟಕದ ರಾಜ್ಯಾಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.
- ಅಡ್ವೋಕೇಟ್ ಫಾರ್ ನ್ಯೂ ಭಾರತ ಫೋರಂ ಇದರ ಸಹ ಸಂಚಾಲಕರಾಗಿ ಹಲವಾರು ದೇಶಾಭಿಮಾನ ಬೆಳೆಸುವ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದಾರೆ.

ಸಮಾಜದ ಹಿತ ಚಿಂತಿಸುವ ಆತ್ಮ ವಿ. ಹಿರೇಮಠ

ನಾಯಕತ್ವದ ಗುಣ

ಆತ್ಮ ವಿ.ಹಿರೇಮಠ ಅವರು ಪ್ರೌಢಶಾಲಾ ವಿದ್ಯಾರ್ಥಿಯಾಗಿದ್ದಾಗಲೇ, ವಿವಿಧ ಚಟುವಟಿಕೆಗಳಲ್ಲಿ ಆಸಕ್ತಿ ತೋರಿ, ನಾಯಕತ್ವದ ಗುಣವನ್ನು ಪ್ರದರ್ಶಿಸಿದ್ದರು. ಅಲ್ಲಿನ ಸ್ಕೌಟ್ ತಂಡಕ್ಕೆ ಸೇರ್ಪಡೆಗೊಂಡಿದ್ದರು, ಹಲವು ಸ್ಕೌಟ್ ಶಿಬಿರಗಳಲ್ಲಿ ಪಾಲ್ಗೊಂಡಿದ್ದರು ಮತ್ತು ಅದರ ಮೂಲಕ ಹಲವು ಚಟುವಟಿಕೆ ನಡಸಿದರು. ತದನಂತರ ಎಬಿವಿಪಿಯ ಸಕ್ರಿಯ ಕಾರ್ಯಕರ್ತರಾಗಿದದರು. ವಕೀಲರಾದ ನಂತರ, ರಾಷ್ಟ್ರೀಯ ಸ್ವಯಂಸೇವಾ ಸಂಘದಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ಜತೆಗೆ ಮೂರು ವರ್ಷಗಳ ಕಾಲ ವಸತಿ ಪ್ರಮುಖ ಜವಾಬ್ದಾರಿಯನ್ನು ನಿಭಾಯಿಸಿದರು. ಇಂದು ಸಮಾಜದ ಬಡ ವಿದ್ಯಾರ್ಥಿಗಳಿಗೆ ಪ್ರತಿ ವರ್ಷ ನೋಟ್ ಪುಸ್ತಕಗಳನ್ನು ನೀಡುವ ಮೂಲಕ ಮತ್ತು ಇತರ ಅಗತ್ಯ ಸಹಾಯಗಳನ್ನು ಮಾಡುವ ಮೂಲಕ, ಸಮಾಜದ ಸ್ವಾಸ್ಥ್ಯ ಕಾಪಾಡುವ ನಿಟ್ಟನಲ್ಲಿ ತೊಡಗಿಕೊಂಡಿದ್ದಾರೆ.

ಸಮಾಜದ ಹಿತಕ್ಕಾಗಿ

ಆತ್ಮ ವಿ. ಹಿರೇಮಠ ರವರು, 2011ರಿಂದ ಆರಂಭಿಸಿ, ಸಮಾಜದ ಹಿತಕ್ಕಾಗಿ ಹಲವು ಪ್ರಮುಖ ಪ್ರಕರಣಗಳನ್ನು ನಡೆಸುಕೊಂಡು ಬರುತ್ತಿದ್ದು, ಅವುಗಳಲ್ಲಿ ಕೆಲವು ಹೀಗಿವೆ.

- ಶರಾವತಿ ನದಿ ತೀರದಲ್ಲಿ ಅಕ್ರಮ ಮರಳು ಗಣಿಗಾರಿಕೆಯನ್ನು ಪಿಐಎಲ್ ಮೂಲಕ ಪ್ರಶ್ನಿಸಿ, ಪರಿಸರವಿರೋಧಿ ಎನಿಸಿದ ಇದನ್ನು ಬಂದ್ ಮಾಡಿಸಿದ್ದಾರೆ.
- ಸರಕಾರಿ ವಕೀಲರ ನೇಮಕ (ಎಪಿಪಿ)ದಲ್ಲಿ ಪಾರದರ್ಶಕ ತನಿಖೆ ನಡೆಸಬೇಕೆಂದು ಪಿಐಎಲ್ ಹಾಕಿ, ನಿರ್ದೇಶನ ಹೊರಿಡಿಸಿದ್ದರು.
- ಹೈಕೋರ್ಟ್ ಚೆಕ್ ಲಿಸ್ಟ್‌ನ್ನು ಫೈಲಿಂಗ್ ಸಮಯದಲ್ಲಿ ಹಾಕಬೇಕು ಎಂಬ ನಿಯಮವನ್ನು ಚಾಲೆಂಜ್ ಮಾಡಿ, ಸ್ಟೇ ಮಾಡಿಸಿ, ಅನೇಕ ವಕೀಲರಿಗೆ ಸಹಾಯವಾಗುವಂತೆ ಮಾಡಿದ್ದಾರೆ.
- ಇವರು ಕೆಳಕಂಡ ಸಂಸ್ಥೆಗಳಿಗೆ ಪೆನಲ್ ಅಡ್ವೋಕೇಟ್ ಆಗಿದ್ದಾರೆ : ಕರ್ನಾಟಕ ಹೌಸಿಂಗ್ ಬೋರ್ಡ್, ಕರ್ನಾಟಕ ಪೊಲ್ಯೂಷನ್ ಕಂಟ್ರೋಲ್ ಬೋರ್ಡ್, ಬಿಡಿಎ, ಎನ್ ಕೆಆರ್‌ಟಿವಿ ಲೀಗಲ್ ಅಡ್ವೈಸರ್.

ಕಾನೂನು ಕ್ಷೇತ್ರದಲ್ಲಿನ ಸಾಧನೆಗೆ ಮತ್ತು ಸಮಾಜದ ಹಿತಕ್ಕಾಗಿ ಕೈಗೊಂಡ ಚಟುವಟಿಕೆಗಳಿಗಾಗಿ, ಆತ್ಮ ವಿ.ಹಿರೇಮಠ ಅವರು 'ವಿಶ್ವವಾಣಿ ಗ್ಲೋಬಲ್ ಅಚೀವರ್ಸ್' ಪ್ರಶಸ್ತಿಗೆ ಭಾಜನರಾಗಿದ್ದಾರೆ. ಜಾರ್ಜಿಯಾ ದೇಶದಲ್ಲಿ ನಡೆದ ಸಮಾಂಭದಲ್ಲಿ ಈ ಪ್ರಶಸ್ತಿಯನ್ನು ಸ್ವೀಕರಿಸಿದ ನಂತರ, ಇನ್ನಷ್ಟು ಜವಾಬ್ದಾರಿಯಿಂದ ಇಂತಹ ಚಟುವಟಿಕೆಗಳನ್ನು ಮುಂದುವರಿಸುವ ಸ್ಫೂರ್ತಿ ದೊರೆತಿದೆ ಎಂದು ಆತ್ಮ ವಿ.ಹಿರೇಮಠ ಅವರು ಹೇಳಿದ್ದಾರೆ.

ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ

ಕಾನೂನು ಕ್ಷೇತ್ರದಲ್ಲಿ ಆತ್ಮ ವಿ. ಹಿರೇಮಠ ಅವರು ಸಕ್ರಿಯವಾಗಿ ತೊಡಗಿಕೊಂಡಿದ್ದಾರೆ ಮತ್ತು ತಮ್ಮ ವಿವಿಧ ಜವಾಬ್ದಾರಿಯ ನಡುವೆಯೂ, ಜನಸಾಮಾನ್ಯರಿಗೆ ಅನುಕೂಲವಾಗುವ ನಿಯಮಗಳನ್ನುರೂಪಿಸುವಲ್ಲಿ ಪಿಐಎಲ್ ಮೊದಲಾದ ಮಾರ್ಗಗಳ ಮೂಲಕ ಸಹಾಯಮಾಡುತ್ತಿದ್ದಾರೆ. ಕಾನೂನು ಕ್ಷೇತ್ರದಲ್ಲಿನ ಇವರ ಕೊಡುಗೆಗಾಗಿ, 'ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ'ಗೆ ಭಾಜನರಾಗಿದ್ದಾರೆ. ಇತ್ತೀಚೆಗೆ ಜಾರ್ಜಿಯಾ ದೇಶದಲ್ಲಿ ನಡೆದ ಅದ್ದೂರಿ ಸಮಾರಂಭದಲ್ಲಿ, ಆ ದೇಶದ ಮತ್ತು ನಮ್ಮ ದೇಶದ ಹಲವು ಗಣ್ಯರ ಸಮ್ಮುಖದಲ್ಲಿ, ಇವರಿಗೆ ಈ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಬಡಜನರಿಗೆ ಸಹಾಯಹಸ್ತ

ಆತ್ಮ ವಿ ಹಿರೇಮಠ ಅವರು, ಜನಸಾಮಾನ್ಯರಿಗೆ ಸಹಾಯ ಮಾಡುವ ಅತೀವ ಆಸಕ್ತಿ ಹೊಂದಿದ್ದಾರೆ. ಸಮಾಜದಕ್ಕೆ ನಾವು ಏನಾದರೂ ಸಹಾಯ ಮಾಡಬೇಕು ಎಂಬ ತುಡಿತವನ್ನು ಸದಾ ತುಂಬಿಕೊಂಡಿರುವ ಇವರು, ಬಡ ಜನರಿಗೆ ಮತ್ತು ಜನಸಾಮಾನ್ಯರಿಗೆ ಉಪಯೋಗವಾಗುವ ಹಲವು ಕಾರ್ಯಗಳನ್ನು ಕೈಗೊಂಡಿದ್ದಾರೆ. ಅವುಗಳಲ್ಲಿ ಕೆಲವನ್ನು ಹೆಸರಿಸಬಹುದು.

- ಕೋವಿಡ್ ಸಮಯದಲ್ಲಿ ಅಗತ್ಯವಿರುವವರಿಗೆ ಸಹಾಯದ ಕಿಟ್‌ನ್ನು ವಿತರಣೆ ಮಾಡಿದ್ದಾರೆ. ಕೊಳೆಗೇರಿ ಮತ್ತು ಬಡತನದಲ್ಲಿರುವ ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕಗಳನ್ನು ವಿತರಿಸಿದ್ದಾರೆ.
- ತಾವು ಕಲಿತ ಸರಕಾರಿ ಶಾಲೆಯಲ್ಲಿ, ಪ್ರತಿ ವರ್ಷ ಮೊದಲ ಸ್ಥಾನ ಪಡೆಯುವ ವಿದ್ಯಾರ್ಥಿಗೆ ರು.7500/- ಪ್ರೋತ್ಸಾಹ ಧನ ನೀಡುತ್ತಿದ್ದಾರೆ. ಇದನ್ನು ತಮ್ಮ ತಾಯಿನ ಸ್ಮರಣಾರ್ಥ ನಡೆಸಿಕೊಂಡು ಬಂದಿದ್ದಾರೆ.

ನವಗುಂಜರದ ಭಕ್ತಿ ಸಾರ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV Special
ಯೂಟ್ಯೂಬ್ ಚಾನೆಲ್‌ನಲ್ಲಿ

ನವಗುಂಜರ ಕಥೆ ಮಹಾಭಾರತದ ಅಧ್ಯಾಯಗಳಲ್ಲಿ ನೇರವಾಗಿ ಕಾಣಿಸುವುದಿಲ್ಲ, ಆದರೆ ಇದು ಮಹಾಭಾರತದ ಒಂದು ಪುರಾಣ ಪ್ರಸಿದ್ಧ ಉಪಕಥೆ, ವಿಶೇಷವಾಗಿ ಒಡಿಯಾ ಮತ್ತು ಕನ್ನಡ ಸಂಸ್ಕೃತಿಗಳಲ್ಲಿ ಬಹಳ ಪ್ರಚಲಿತವಾಗಿದೆ. ಭಕ್ತಿಯಿಂದ ದೇವರ ದರ್ಶನವನ್ನು ಹೇಗೆ ಪಡೆಯಬಹುದು ಎಂಬುದನ್ನು ಈ ಕಥೆ ನಿರೂಪಿಸುತ್ತದೆ.

ನವಗುಂಜರ ಎಂದರೇನು? ನವಗುಂಜರ ಎಂಬುದು ಅನೇಕ ಪ್ರಾಣಿಗಳ ಅಂಗಾಂಗಗಳಿಂದ ಕೂಡಿದ ಒಂದು ಅದ್ಭುತ ರೂಪ. 'ನವ' ಅಂದರೆ ಒಂಬತ್ತು ಮತ್ತು 'ಗುಂಜರ' ಅಂದರೆ ಪ್ರಾಣಿ. ನವ ಗುಂಜರದ ಆಕಾರದಲ್ಲಿ ತಲೆಯು ಕೋಳಿಯ ಒಂದು ತಂಗಳಿ ಆನೆ ಒಂದು ತಂಗಳಿ ಹಸು ಒಂದು ತಂಗಳಿ ವೃಶ್ಚಿಕ ಕತ್ತೆ ಅಥವಾ ಸಿಂಹದ ಅಂಗ ಹಕ್ಕಿಯ ಮೇಲ್ತೋಳು ಮನುಷ್ಯನ ಕೈ, ಅದರಲ್ಲಿ ತ್ರಿಶೂಲ ಅಥವಾ ಹೂವಿನ ತೆನೆ, ಹಾವುಗಳ ಶಿರೋಪರಿ, ಇಡೀ ರೂಪವು ಭಯಾನಕವೂ ಜೊತೆ ಜೊತೆಗೆ ಅದ್ಭುತವೂ ಆಗಿರುವುದು ವಿಶೇಷ.

ಕಥೆಯ ಪ್ರಕಾರ, ಪಾಂಡವರಲ್ಲಿ ಧರ್ಮ ರಾಜನು (ಯುದ್ಧಿಷ್ಠಿರ) ವನವಾಸದಲ್ಲಿದ್ದಾಗ, ಅರ್ಜುನನು ಪರಮೇಶ್ವರನ ದರ್ಶನಕ್ಕಾಗಿ ತಪಸ್ಸು ಮಾಡುತ್ತಿದ್ದನು. ಈ ಸಂದರ್ಭದಲ್ಲಿಯೇ, ಅರ್ಜುನನು ತಪಸ್ಸಿನಲ್ಲಿ ಲೀನವಾಗಿರುವಾಗ, ಅವನಿಗೆ ನವಗುಂಜರ ರೂಪದಲ್ಲಿ ಹರಿಯು (ವಿಷ್ಣು ಅಥವಾ ಶಿವ) ದರ್ಶನ ನೀಡುತ್ತಾನೆ. ಈ ವಿಚಿತ್ರ ರೂಪವನ್ನು ನೋಡಿ ಅರ್ಜುನನು ಅಚ್ಚರಿಗೊಳ್ಳುತ್ತಾನೆ ಮತ್ತು ಗಬ್ಬಾಗಿಯೇ ಧನುಸ್ಸನ್ನು ಎತ್ತಿ ಶಸ್ತ್ರ ಹಿಡಿಯುತ್ತಾನೆ. ಆದರೆ, ಆಗ ಅವನಿಗೆ ಈ ರೂಪದಲ್ಲಿ ಭಗವಂತನ ದರ್ಶನವಾಗುತ್ತಿದೆ ಎಂಬ ಅರಿವು ಬರುತ್ತದೆ. ಆಗ ಅರ್ಜುನನು ಭಕ್ತಿಯಿಂದ ಶಸ್ತ್ರವನ್ನು ಕಳಸಿ ಭಗವಂತನಿಗೆ ನಮನ ಮಾಡುತ್ತಾನೆ. ನವಗುಂಜರ ಎಂಬ ಈ ರೂಪವು ಸೃಷ್ಟಿಯಲ್ಲಿ ಎಲ್ಲರೂ ದೇವರ ಅಂಶವಾಗಿದ್ದಾರೆ ಎಂಬ ತತ್ತ್ವವನ್ನು ತೋರಿಸುತ್ತದೆ. ದೇವರು ಎಲ್ಲರೂ ಆಗಿದ್ದಾನೆ ಹಸುವಿನಲ್ಲಿ, ಹಕ್ಕಿಯಲ್ಲಿ, ಹಾವುಗಳಲ್ಲಿ, ಮನುಷ್ಯನಲ್ಲಿ, ಪ್ರತಿ ರೂಪದಲ್ಲೂ. ಭಗವಂತನ ರೂಪ ನಿರ್ವಚನಾತೀತ, ಅಪಾರ, ಅಪರೂಪ ಎಂಬುದೇ ಕಥೆಯ ಭಾವಾರ್ಥ.

ಈ ಕಥೆ ಒಡಿಶಾ ರಾಜ್ಯದ ಪಟಚಿತ್ರ ಶೈಲಿಯ ಚಿತ್ರಕಲೆಯಲ್ಲೂ ಬಹಳ ಪ್ರಸಿದ್ಧವಾಗಿದೆ. ಪುರಾಣದ ಕಥೆಗಳಲ್ಲಿ ಇದು 'ಜಗನ್ನಾಥ'ನ ಅವತಾರ ರೂಪವಾಗಿದೆ.

ಇಂದಿನ ದಿನಗಳಲ್ಲಿ ಮನುಷ್ಯನ ಪ್ರಾಣಕ್ಕೆ ಬೆಲೆ ಇಲ್ಲದಿರುವುದಾಗ, ಪಶು ಪಕ್ಷಿಗಳ ಮಾತಂತೂ ಹೇಳುವುದೇ ಬೇಡ. ಗೋವು ನಮ್ಮ ಭಾರತದಲ್ಲಿ ಪೂಜಾರ್ಹವಾದುದು. ಅದನ್ನು ರಕ್ಷಿಸಬೇಕು ಕೊಲ್ಲಬಾರದು ಎಂದು ಸರ್ಕಾರ ಆಜ್ಞೆ ಮಾಡಿದ್ದರೂ ಸಹ, ಕದ್ದು ಗೋವುಗಳನ್ನು ಸಾಗಿಸುವ ಅವುಗಳನ್ನ ಕಸಾಯಿ ಖಾನೆಗೆ ಮಾರುವ ಮನುಷ್ಯರನ್ನ ನಾವು ನೋಡುತ್ತೇವೆ.

ಬೀದಿ ನಾಯಿಗಳನ್ನು ಹಿಂಸೆ ಮಾಡಿ ವಿಕೃತ ಸುಖವನ್ನು ಅನುಭವಿಸುವ ಮನುಷ್ಯರ ನಡುವಳಿಕೆಗಳು ಕೂಡ ನಮಗೆ ಕಾಣಸಿಗುತ್ತವೆ. ತಮ್ಮ ವಿಕೃತ ಸಂತೋಷಕ್ಕಾಗಿ ಪ್ರಾಣಿ ಪಕ್ಷಿಗಳನ್ನ ಕೂಡಿಟ್ಟು, ಅವುಗಳಿಗೆ ಹಿಂಸೆ ಕೊಟ್ಟು ಆನಂದಿಸುವ ಅನೇಕ ದುರುಳರು ನಮ್ಮ ಮಧ್ಯೆ ಇದ್ದಾರೆ. ಆದ್ದರಿಂದಲೇ ನಮ್ಮ ಮಕ್ಕಳಿಗೆ ಚಿಕ್ಕವರಾಗಿದ್ದಾಗಿನಿಂದಲೇ, ಪ್ರತಿಯೊಂದು ಪ್ರಾಣಿ ಪಕ್ಷಿ ಪ್ರಕೃತಿ ಎಲ್ಲವನ್ನು ಗೌರವಿಸುವ ಗುಣವನ್ನು ಕಲಿಸಬೇಕು. ಪ್ರಾಣಿ ಪಕ್ಷಿಗಳಾದರೆ ಹಸಿವಿಗಾಗಿ ತಿನ್ನುತ್ತವೆ. ಆದರೆ ಹಸಿವಿಲ್ಲದಿದ್ದರೂ, ಚಟಕ್ಕಾಗಿ ತಿನ್ನುವ ಹಿಂಸೆ ಮಾಡುವ ಪ್ರಕೃತಿ ಕೇವಲ ಮನುಷ್ಯರದ್ದು.

ಎಲ್ಲಾ ಪ್ರಾಣಿಗಳಿಗಿಂತ ವಿಕಸಿತವಾದ ಮೆದುಳು ಮನುಷ್ಯನಿಗೆ ಇದ್ದರೂ ತಪ್ಪು ಸರಿ ಧರ್ಮ ಕರ್ಮಗಳ ವಿವೇಚನೆಯನ್ನು ದೇವರು ನೀಡಿದ್ದರೂ ಸಹ ಎಲ್ಲಾ ಪ್ರಾಣಿಗಳಿಗಿಂತ ಹೀನಾಯವಾಗಿ ಬೇಟೆಯಾಡುವ, ಕೊಲ್ಲುವ ಮತ್ತೊಬ್ಬರಿಗೆ ಹಿಂಸೆ ಕೊಡುವ ಕೆಟ್ಟ ಸಂಸ್ಕಾರ ಮನುಷ್ಯನದ್ದು.

ಇನ್ನಾದರೂ ಇಂತಹದ್ದನ್ನು ಕಂಡಾಗ ಅದನ್ನು ಖಂಡಿಸಿ ಅವರಿಗೆ ಸರಿಯಾದ ಬುದ್ಧಿ ಕಲಿಸುವ ಕೆಲಸವನ್ನು ಮಾಡೋಣ. ಮುಂದಿನ ಜನಾಂಗವಾದರೂ ಪ್ರೀತಿ, ಪ್ರೇಮ ಸಹನೆ, ಕರುಣೆ ಈ ಎಲ್ಲ ಗುಣಗಳನ್ನು ಮೈಗೂಡಿಸಿಕೊಂಡು ಪ್ರಕೃತಿ ಪ್ರಾಣಿಗಳ ಜೊತೆ ಸೌಹಾರ್ದತೆಯಿಂದ ಬದುಕುವ ಸಂಸ್ಕಾರ ಬಳಸಿಕೊಳ್ಳಲಿ.

ಅಜ್ಜನ ಗುಣ ಮೊಮ್ಮಕ್ಕಳಲ್ಲಿ!

ಶುಭೋದಯಕ್ಕೊಂದು ಕಗ್ಗ

ರವೀ ಚಿಕ್ಕನಾಯಕನಹಳ್ಳಿ

ನಿನ್ನಜ್ಜ ಮುತ್ತಜ್ಜ ಮೂಲಜ್ಜರೆಲ್ಲರುಂ
ನಿನ್ನೊಳವತರಿಸಿ ಮುಂದಿನ್ನು ಜನಿಸಲಿಹ
ನಿನ್ನ ಮಗ ಮರಿಮೊಮ್ಮರೊಳು ಜೀವಿಪ್ಪರ್
ಅನ್ವಯ ಚಿರಂಜೀವಿ - ಮಂಕುತಿಮ್ಮ॥

ನಿನ್ನಜ್ಜ, ಮುತ್ತಜ್ಜ, ಮೂಲಜ್ಜನ ವಂಶವಾಹಿನಿಯ ಗುಣಗಳು ನಿನ್ನೊಳು ಅವತರಿಸಿ ನಿನ್ನಲ್ಲಿ ಆ ಗುಣಗಳೇ ಪ್ರವಹಿಸಿವೆ. ಹಾಗೆಯೇ ನಿನ್ನ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳಲ್ಲೂ ನಿನ್ನ ವಂಶವಾಹಿನಿಯೇ ಪ್ರವಹಿಸಿರುತ್ತದೆ. ಆದುದರಿಂದ ನಿನ್ನಲ್ಲಿ ಬಂದಿರುವ, ಇರುವ ವಂಶವಾಹಿನಿಯ ಅಂಶಗಳಿಗೆ ಎಂದಿಗೂ ಸಾವಿರದೆ ಅದೊಂದು ಚಿರಂಜೀವಿಯಾಗಿ ಹರಿಯುತ್ತಲೇ ಇರುತ್ತದೆ ಎಂದು ಅನುವಂಶೀಯ ನಡವಳಿಕೆ ಬಗ್ಗೆ ಈ ಕಗ್ಗದಲ್ಲಿ ಹೇಳಿದ್ದಾರೆ.

ಈ ಒಂದು ಪದ್ಯವು ಮೇಲ್ನೋಟಕ್ಕೆ ಸಾಹಿತ್ಯದ ಒಂದು ಚೌಪದಿಯಾದರೂ ವಿಜ್ಞಾನದ ವಿಷಯದ ಮೇಲೆ ಬೆಳಕು ಚೆಲ್ಲುತ್ತದೆ. ತಲೆಮಾರಿನಿಂದ ತಲೆಮಾರಿಗೆ ಪ್ರವಹಿಸುವ ಅನುವಂಶೀಯ ಗುಣಗಳ ಮೇಲೆ ಅಧ್ಯಯನಕ್ಕೆ ದಾರಿ ಮಾಡಿಕೊಡುತ್ತದೆ. ಇಂದು ನಾವು ನೋಡುತ್ತಿರುವ ಡಿಎನ್‌ಎ (ಡೈ ಆಕ್ಸಿರೈಬೊ ನ್ಯೂಕ್ಲಿಯಿಕ್ ಆಮ್ಲ) ಬಗೆಗೆ ಒತ್ತುಕೊಟ್ಟಂತೆ ಇರುವ ಪದ್ಯ ಇದಾಗಿದೆ. ಮುತ್ತಜ್ಜ, ಮೂಲಜ್ಜರಿಂದ ಹರಿದು ಬಂದಿರುವ ಹಾಗೂ ಮುಂದಕ್ಕೆ ಮಕ್ಕಳಿಗೋ, ಮೊಮ್ಮಕ್ಕಳಿಗೋ ಹರಿಯಲಿರುವ ವಂಶವಾಹಿನಿಯ ಉಲ್ಲೇಖವನ್ನು ಹಿಡಿದಿಟ್ಟಿದೆ. ನಮ್ಮ ವಂಶವಾಹಿನಿಯ ಪ್ರಭಾವಳಿಯು ನಮ್ಮ ಮೂಲ ಪುರುಷರಿಂದ ಹಿಡಿದು, ಮುಂದಿನ ತಲೆಮಾರಿನವರೆಗೂ ಹರಿಯುತ್ತದೆ ಎಂಬುದನ್ನು ಹೇಳಿದ್ದಾರೆ. ಅಂದರೆ ಈ ವಮಶವಾಹಿನಿಯ ಪ್ರವಹಿಸುವಿಕೆಗೆ ಯಾವುದೇ ಸಾವಿರದೆ ಅದೊಂದು ಚಿರಂಜೀವಿಯಾಗಿರುತ್ತದೆ ಎಂಬುದು ಈ ಒದ್ಯದ ಮೂಲ ತಾತ್ಪರ್ಯ. ಇದನ್ನೇ 1950 ರ ಸುಮಾರಿನಲ್ಲಿ ಡಿಎನ್‌ಎ ಅವಿಷ್ಕಾರ ಮಾಡಿ ವಿಜ್ಞಾನ ಜಗತ್ತಿಗೆ ಪರಿಚಯವೂ ಆಯ್ತು. ಹಾಗೆಯೇ ನಮ್ಮ ವೇದಗಳಲ್ಲಿ ಸಪ್ತಧಾತು ಸಮಪಿಂಡಂ ಸಮಯೋನಿ ಸಮುದ್ಭವಂ । ಆತ್ಮಜೀವ ಸಮಾಯುಕ್ತಂ ಸೃಷ್ಟಿಕಾರ್ಯ ನಿರಂತರಂ॥ ಎಂದು ಹೇಳಿದ್ದಾರೆ. ಅಂದರೆ ತಂದೆ, ತಾಯಿಯರಿಂದ ಉತ್ಪತ್ತಿಯಾದ ಸಪ್ತಧಾತುಗಳು ಸೇರಿ ತಾಯಿಯ ಗರ್ಭದಲ್ಲಿ ಸಮಪಿಂಡವಾಗಿ ಇಬ್ಬರ ಅಂಶದಿಂದಲೂ ಬಂದ ಭ್ರೂಣವು ಪ್ರಾಣ, ಆತ್ಮ ಹಾಗೂ ಪ್ರಜ್ಞೆಯ ಅಂಶಗಳು ಸೇರಿ ಅವುಗಳು ಸಂಯೋಗಗೊಂಡು ನಮ್ಮಗಳ ಸೃಷ್ಟಿಕಾರ್ಯವು ನಡೆಯುತ್ತದೆ ಎಂಬುದು ಸತ್ಯವೇ ಆಗಿರುತ್ತದೆ. ಈ ಕಾರ್ಯದಲ್ಲಿ ಮೂರು ಅಂಶಗಳು ಮುಖ್ಯ: ಭೌತಿಕಾಂಶಗಳು, ಯಾಂತ್ರಿಕಾಂಶಗಳು ಹಾಗೂ ಜೈವಿಕಾಂಶಗಳೆಂಬ ಮೂರು ಗುಣಗಳಿಂದ ನಮ್ಮ ಜೀವನ ನಿರ್ಧರಿಸಲ್ಪಡುತ್ತದೆ. ನಮ್ಮ ಜೀವನ ಈ ಜಗದಲ್ಲಿ ಪರಿಚಯಿಸಲು ಮೊದಲಿಗೆ ದೇಹಧಾತು ಇರಲೇ ಬೇಕು, ದೇಹವಿಲ್ಲದಿದ್ದರೆ ನಮ್ಮ ಅಸ್ತಿತ್ವವೇ ಇರುವುದಿಲ್ಲ. ನಂತರ ಇರುವ ದೇಹ ಯಂತ್ರದಂತೆ ಕೆಲಸ ಮಾಡುವ ಕ್ಷಮತೆ ಹೊಂದಿರಬೇಕು, ಇಲ್ಲದೆ ಹೋದರೆ ದೇಹ ಉಳಿಯುವುದಿಲ್ಲ. ಮೂರನೆಯದಾಗಿ ಜೈವಿಕ ಅಂಶಗಳು ಮುಖ್ಯವಾಗುತ್ತವೆ. ಜೈವಿಕ ಅಂಶಗಳು ಎಂದರೆ ನಮ್ಮ ಪೂರ್ವಜರಿಂದ ಹರಿದು ಬಂದ ಅನುವಂಶೀಯ ಗುಣಗಳು ಹಾಗೂ ಅವರಿಂದ ಕಲಿತ ಸಂಸ್ಕಾರಗಳು. ಹೀಗೆ ಮೂರು ಗುಣಗಳು ಸೇರಿ ನಾವು ಮನುಷ್ಯರಾಗಿ ಜೀವಿಸುತ್ತಿದ್ದೇವೆ. ಆದುದರಿಂದ ಈ ದೇಹಕ್ಕೆ ಅಳಿವು ಇರಬಹುದು, ದೇಹದಲ್ಲಿಯ ಯಂತ್ರವು ತನ್ನ ಕೆಲಸವನ್ನು ಬಹುದು, ಆದರೆ ನಮ್ಮಲ್ಲಿ ಹರಿದು ಬಂದಿರುವ ವಂಶವಾಹಿನಿಯ ಗುಣಗಳಿಗೆ ಸಾವು ಎಂಬುದಿರುವುದಿಲ್ಲ. ಈ ವಂಶವಾಹಿನಿ, ಅನುವಂಶೀಯ ಗುಣಗಳು ಚಿರಂಜೀವವಾಗಿರುತ್ತದೆ ಎಂದು ಈ ಕಗ್ಗದಲ್ಲಿ ಹೇಳಿದ್ದಾರೆ.

ಇಂದಿಗೂ ಜನರ ಆಡು ನುಡಿಗಳಲ್ಲಿ ಹುಟ್ಟಿದ ಮಗುವಿಗೆ ಅಪ್ಪನಂತಿದೆ, ಅಮ್ಮನಂತಿದೆ, ಅವರ ಅಜ್ಜನಂತಿದೆ ಎಂಬುದಾಗಿ ಮಾತನಾಡುವುದನ್ನು ನಾವು ನೋಡಿದ್ದೇವೆ. ಅಜ್ಜನ ನಡವಳಿಕೆಯು ಮೊಮ್ಮಕ್ಕಳಲ್ಲಿ ಕಂಡು ಬರುತ್ತದೆ ಎಂದು ಸಹ ಮಾತನಾಡುತ್ತಾರೆ. ಅಂದರೆ ಅನುವಂಶಿಯ ನಡವಳಿಕೆಗಳು, ವಂಶವಾಹಿನಿಗಳು ತಲೆ ತಲಾಂತರಗಳಿಗೆ ಪ್ರವಹಿಸದಿದ್ದರೆ ಇದು ಸಾಧ್ಯವಿಲ್ಲ. ಇದನ್ನೇ ವಿಜ್ಞಾನವೂ ಸಹ ಡಿಎನ್ ಎಂದು ಸಾದರಪಡಿಸಿದೆ. ನಮ್ಮ ನಮ್ಮ ನಡವಳಿಕೆಗಳಲ್ಲಿ ನಮ್ಮ ಪೂರ್ವಜರ ಸಂಸ್ಕಾರಗಳು ಪ್ರತಿಬಿಂಬಿತವಾಗುತ್ತವೆ ಎಂಬುದು ಕಟು ಸತ್ಯವೂ ಹೌದು. ಆದುರಿಂದ ಈ ವಂಶವಾಹಿನಿಗೆ ಸಾವಿಲ್ಲದೆ ಅದು ಚಿರಂಜೀವಿ ಎಂದು ಈ ಪದ್ಯದಲ್ಲಿ ಹೇಳಿರುವುದು ನೂರಕ್ಕೆ ನೂರು ಸತ್ಯವೇ ಆಗಿದೆ.

ಉಪ್ಪಿನ ರುಚಿ ಎಲ್ಲಿದೆ?

● ಮಂಜುನಾಥ ಡಿ. ಎಸ್.

ಉಪ್ಪನ್ನು ನಾನಾ ವಿಧಾನಗಳಿಂದ ತಯಾರಿಸಬಹುದು. ಸಮುದ್ರದ ನೀರನ್ನು ಇಂಗಿಸಿ ಉಪ್ಪು ಉತ್ಪಾದಿಸುವ ವಿಧಾನ ಇವುಗಳಲ್ಲಿ ಪ್ರಮುಖವಾದುದು. ಸಮುದ್ರದ ನೀರನ್ನು ದೊಡ್ಡ ಕೊಳಗಳಲ್ಲಿ ಸಂಗ್ರಹಿಸಿ, ಅದನ್ನು ಸೂರ್ಯನ ತಾಪದಲ್ಲಿ ಇಂಗಿಸುತ್ತಾರೆ. ನೀರು ಆವಿಯಾಗುತ್ತಿದ್ದಂತೆ ಉಪ್ಪಿನ ಹರಳುಗಳು ಘನೀಭವಿಸುತ್ತವೆ. ಈ ಹರಳುಗಳನ್ನು ಶುದ್ಧೀಕರಿಸಿ, ಪುಡಿ ಮಾಡಿ, ಅಗತ್ಯವಿದ್ದಲ್ಲಿ ಐಯೋಡಿನ್ ಸೇರಿಸಿ ಮಾರುಕಟ್ಟೆಗೆ ಒದಗಿಸುತ್ತಾರೆ.

ಇತ್ತೀಚಿನ ಪ್ರವಾಸ ಸಂದರ್ಭದಲ್ಲಿ, ತಮಿಳುನಾಡಿನ ತೂತ್ತುಕುಡಿ ಜಿಲ್ಲೆಯಲ್ಲಿ ಸಾಗುತ್ತಿದ್ದಾಗ ರಸ್ತೆಯ ಇಕ್ಕೆಲೆಗಳಲ್ಲಿ, ಸಮುದ್ರದ ನೀರು ಸಂಗ್ರಹ ಕೊಳಗಳು ಹಾಗು ಉಪ್ಪಿನ ರಾಶಿಗಳು ದೃಗ್ಗೋಚರವಾದವು. ಕಣ್ಣು ಹಾಯಿಸಿದಷ್ಟು ದೂರ ಕಂಡು ಬಂದ ಈ ದೃಶಗಳು ರುಚಿಕಾರಕ ಉಪ್ಪಿನ ಹುಟ್ಟಿನ ಗುಟ್ಟನ್ನು ಅನಾವರಣಗೊಳಿಸಿದವು. ಚರಿತ್ರೆಯನ್ನು ನೆನಪಿಸಿದವು. ನಮ್ಮ ರಾಜ್ಯದ ಕರಾವಳಿಯಲ್ಲಿರುವ ಸಾಣೆಕಟ್ಟಾದಲ್ಲೂ ಉಪ್ಪನ್ನು ತಯಾರಿಸುತ್ತಾರೆ; ಇಲ್ಲೂ ಸಹ ಸಮುದ್ರದ ನೀರನ್ನು ಇಂಗಿಸುವ ಮೂಲಕ ಉಪ್ಪನ್ನು ತಯಾರಿಸುತ್ತಾರೆ.

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಟೆ



ಎಡದಿಂದ ಬಲಕ್ಕೆ

1. ಪೂಜಿಸುವವನು (4)
4. ದಶಾವತಾರಗಳಲ್ಲಿ ಒಂದು ಅಸ್ತವ್ಯಸ್ತವಾಗಿದೆ (3)
7. ಕಾಪಾಡು ಎಂದರ್ಥ (3)
9. ನದಿ, ಸಮುದ್ರದ ದಡ (3)
11. ಬುದ್ಧನ ಮತ್ತೊಂದು ಹೆಸರು (3)
13. ಎರಡಕ್ಷರದ ಬಾಗಿಲು (2)
16. ಕತ್ತಲೆ, ಅಜ್ಞಾನ ಕೂಡಾ (2)
18. ಬಲಿಷ್ಠವಾದ ಗಂಡಾನೆ ತಿರುಗಿ ಬಂದಿದೆ (3)
20. ಮಾಡಲೇಬೇಕೆಂಬ ಆಜ್ಞೆ (3)
22. ಇದೊಂದು ಜೀರ್ಣಾಂಗ (3)
23. ಮುಲಾಮು ಹಚ್ಚಿದರೂ ಬೇಕಿದೆ ಕಡಿವಾಣ (3)
24. ಮೃತ್ಯುದೇವನೊಂದಿಗೆ ಬಂದಿದೆ ಜೋಡಿ (3)
25. ಮೂಗಿನ ಮೇಲೆ ಕೊಂಬು (4)

ಮೇಲಿಂದ ಕೆಳಕ್ಕೆ

2. ಪ್ರಕಾಶಿಸು (4)
3. ಅಧೀನ, ಕೈವಶ (4)
4. ಅಷ್ಟ ಸರ್ಪಗಳಲ್ಲಿ ಒಂದು (3)
5. ಸಾರಾಯಿಗೆ ಮತ್ತೊಂದು ಹೆಸರು (3)
6. ಪುಸ್ತಕಗಳನ್ನು ಪ್ರಕಟಿಸುವವನು (4)
10. ತಂದೆಯೊಂದಿಗೆ ಬಂದಿರುವ ಕ್ಷೌರಿಕ (3)
12. ಬತ್ತ ಬೆಳೆಯುವ ನೆಲ (2)
14. ಪಣಕ್ಕಿಟ್ಟ ಕನ್ನಡಿ (3)
15. ಸೇವಕ (2)
17. ಚಿತ್ತಕ್ಕೆ ಆನಂದವನ್ನು ಕೊಡುವ (4)
18. ಆನೆಯ ಮುಖವಿದು (4)
19. ಮರೀಚಿಕೆ ಇಲ್ಲಿ ತಿರುಗಿ ಬಂದಿದೆ (4)
20. ಗಳಿಕೆ ಅಥವಾ ವರಮಾನ (3)
21. ಹಣೆಗಿಟ್ಟುಕೊಳ್ಳುವ ಬೊಟ್ಟು (3)

ಸರಿಯುತ್ತರಗಳು

ನೀವೂ ಬರೆಯಬಹುದು

ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲಿ

ಯಶಸ್ವಿ ಜೈಸ್ವಾಲ್ ಮುಂಬೈ ತಂಡದಲ್ಲೇ ಮುಂದುವರಿಕೆ

ದೆಹಲಿ: ಭಾರತ್ ತಂಡದ ಆರಂಭಿಕ ಬ್ಯಾಟ್ಸ್‌ಮನ್ ಯಶಸ್ವಿ ಜೈಸ್ವಾಲ್ ಮುಂದಿನ ದೇಶಿ ಕ್ರಿಕೆಟ್ ಋತುವಿನಲ್ಲಿಯೂ ತಮ್ಮ ತವರು ತಂಡವಾದ ಮುಂಬೈ ಪರ ಮುಂದುವರಿಯಲಿದ್ದಾರೆ. ಈ ಮೂಲಕ ಗೋವಾ ತಂಡಕ್ಕೆ ಹೋಗಬೇಕೆನ್ನುವ ತಮ್ಮ ನಿರ್ಧಾರದಿಂದ ಹಿಂದೆ ಸರಿದಿದ್ದಾರೆ. ಹಲವು ವರ್ಷಗಳಿಂದ ಜೈಸ್ವಾಲ್ ಮುಂಬೈ ತಂಡದ ಪರ ಸಾಕಷ್ಟು ಸಾಧನೆ ಮಾಡಿರುವ ಅವರು, ಕಳೆದ ಏಪ್ರಿಲ್ ತಿಂಗಳಲ್ಲಿ ಬೇರೆ ರಾಜ್ಯದ ಪರ ಆಡಬೇಕೆಂಬ ಉದ್ದೇಶದಿಂದ ಮುಂಬೈ ಕ್ರಿಕೆಟ್ ಅಸೋಸಿಯೇಷನ್‌ಗೆ ಎನ್‌ಒಸಿ ಕೋರಿ ಅರ್ಜಿ ಸಲ್ಲಿಸಿದ್ದರು. ಗೋವಾ ತಂಡಕ್ಕೆ ತೆರಳಿ ನಾಯಕನಾಗಬೇಕೆಂಬ ಉದ್ದೇಶವನ್ನು ಅವರು ಹೊಂದಿದ್ದರೂ, ಕೊನೆಯ ಕ್ಷಣದಲ್ಲಿ ತಮ್ಮ ನಿರ್ಧಾರದಿಂದ ಹಿಂದೆ ಸರಿದಿದ್ದಾರೆ. ಎನ್‌ಒಸಿಗೆ ಸಲ್ಲಿಸಿದ್ದ ಅರ್ಜಿಯನ್ನು ವಾಪಸ್ ಪಡೆದಿದ್ದಾರೆ. 'ಯಶಸ್ವಿ ಜೈಸ್ವಾಲ್ ಯಾವಾಗಲೂ ಮುಂಬೈ ಕ್ರಿಕೆಟ್‌ನ ಹೆಮ್ಮೆಯ ಆಟಗಾರ. ಅವರ ಎನ್‌ಒಸಿ ಹಿಂಪಡೆಯುವಿಕೆ ಅರ್ಜಿಯನ್ನು ನಾವು ಸ್ವೀಕರಿಸಿದ್ದೇವೆ ಮತ್ತು ಮುಂಬರುವ ದೇಶಿ ಋತುವಿನಲ್ಲಿ ಅವರು ಮುಂಬೈ ಪರ ಲಭ್ಯವಿರುತ್ತಾರೆ' ಎಂದು ಎಂಸಿಎ ಅಧ್ಯಕ್ಷ ಅಜಿಂಕ್ಯ ನಾಯಕ್ ಹೇಳಿದರು. ಎಂಸಿಎಗೆ ಬರೆದ ಪತ್ರದಲ್ಲಿ ಜೈಸ್ವಾಲ್, 'ಗೋವಾಕ್ಕೆ ಸ್ಥಳಾಂತರವಾಗುವ ನನ್ನ ಯೋಜನೆ ರದ್ದಾಗಿವೆ, ಹಾಗಾಗಿ ತಾವು ನನಗೆ ನೀಡಿರುವ ಎನ್‌ಒಸಿಯನ್ನು ರದ್ದುಗೊಳಿಸಬೇಕೆಂದು ವಿನಂತಿಸುತ್ತೇನೆ' ಎಂದು ತಿಳಿಸಿದ್ದಾರೆ.

ಬಾಂಗ್ಲಾ ಪ್ರವಾಸ ಅನುಮಾನ

ಢಾಕಾ: ಆಗಸ್ಟ್‌ನಲ್ಲಿ ನಿಗದಿಯಾಗಿರುವ ತಲಾ 3 ಏಕದಿನ, ಟಿ20 ಪಂದ್ಯಗಳ ಬಾಂಗ್ಲಾದೇಶ ವಿರುದ್ಧದ ವೈಟ್ ಬಾಲ್ ಸರಣಿಯ ಕುರಿತು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯು (ಬಿಸಿಸಿಐ ಕೇಂದ್ರ ಸರಕಾರದ ಅನುಮತಿಗೆ ಕಾಯುತ್ತಿದೆ ಎಂದು ಬಾಂಗ್ಲಾದೇಶ ಕ್ರಿಕೆಟ್ ಮಂಡಳಿಯ ಅಧ್ಯಕ್ಷ ಅಮೀನುಲ್ ಇಸ್ಲಾಂ ಹೇಳಿದ್ದಾರೆ. ಹೀಗಾಗಿ ಬಾಂಗ್ಲಾ ಪ್ರವಾಸಕ್ಕೆ ಭಾರತ ತಂಡವನ್ನು ಬಿಸಿಸಿಐ ಕಳುಹಿಸುವುದು ಅನುಮಾನವೆನಿಸಿದೆ. ಹಿಂದುಗಳ ಮೇಲಿನ ದೌರ್ಜನ್ಯದಿಂದ ಭಾರತದ ಜತೆ ಸಂಬಂಧ ಕೆಡಿಸಿಕೊಂಡಿರುವ ಕಾರಣ ಬಾಂಗ್ಲಾ ಜತೆ ಕ್ರಿಕೆಟ್ ಆಡಬೇಕಾದರೆ ಕೇಂದ್ರ ಸರಕಾರದ ಅನುಮತಿ ಪಡೆಯುವುದು ಕಡ್ಡಾಯವೆನಿಸಿದೆ. ಸದ್ಯದ ಪರಿಸ್ಥಿತಿಯಲ್ಲಿ ಬಿಸಿಸಿಐಗೆ ಕೇಂದ್ರ ಸರಕಾರ ಅನುಮತಿ ನೀಡುವ ಸಾಧ್ಯತೆ ಇಲ್ಲವೆನಿಸಿದೆ. ಸರಣಿ ಆಯೋಜನೆ ಬಗ್ಗೆ ಮಾತನಾಡಿರುವ ಅಮೀನುಲ್ ಇಸ್ಲಾಂ, ಮುಂಬರುವ ದಿನಗಳಲ್ಲಿ ಭಾರತದ ಜತೆ ಕ್ರಿಕೆಟ್ ಸರಣಿ ಆಯೋಜಿಸುವ ಭರವಸೆ ಇದೆ' ಎಂದು ಹೇಳಿದ್ದಾರೆ.

ಟೀಮ್ ಇಂಡಿಯಾಕ್ಕೆ ಗೆಲುವಿನ ಲಯಕ್ಕೆ ಮರಳುವ ನಿರೀಕ್ಷೆ | ಜಯದ ಆತ್ಮವಿಶ್ವಾಸದಲ್ಲಿ ಆಂಗ್ಲರು

ಇಂದಿನಿಂದ ಭಾರತ-ಇಂಗ್ಲೆಂಡ್ 2ನೇ ಟೆಸ್ಟ್

ಬರ್ಮಿಂಗ್‌ಹ್ಯಾಮ್: ಐದು ಶತಕಗಳ ಹೊರತಾಗಿಯೂ ಇಂಗ್ಲೆಂಡ್ ವಿರುದ್ಧ ಮೊದಲನೇ ಟೆಸ್ಟ್ ಪಂದ್ಯದಲ್ಲಿ ಸೋಲು ಅನುಭವಿಸಿದ್ದ ಶುಭಮನ್ ಗಿಲ್ ನಾಯಕತ್ವದ ಭಾರತ ತಂಡವು ಬುಧವಾರ ಇಲ್ಲಿನ ಎಜ್‌ಬಾಸ್ಟನ್ ಕ್ರೀಡಾಂಗಣದಲ್ಲಿ ಆರಂಭವಾಗುವ ಎರಡನೇ ಟೆಸ್ಟ್ ಹಣಾಹಣಿಗೆ ಸಜ್ಜಾಗಿದೆ. ಲೀಡ್ಸ್ ಪಂದ್ಯದಲ್ಲಿ ಮಾಡಿದ್ದ ತಪ್ಪುಗಳನ್ನು ತಿದ್ದಿಕೊಂಡು ಟೀಮ್ ಇಂಡಿಯಾ ಕಣಕ್ಕೆ ಇಳಿಯುವ ಯೋಚನೆ ಮಾಡಿದ್ದು, ಇಂಗ್ಲೆಂಡ್ ತಂಡವು ಕಳೆದ ಪಂದ್ಯದಲ್ಲಿ ತೋರಿದ್ದ ಅದೇ ಗೆಲುವಿನ ಲಯವನ್ನು ಮುಂದುವರಿಸುವ ವಿಶ್ವಾಸವನ್ನು ಹೊಂದಿದೆ.

ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ ಹಾಗೂ ಆರ್.ಅಶ್ವಿನ್ ಅವರು ಟೆಸ್ಟ್ ಕ್ರಿಕೆಟ್‌ಗೆ ವಿದಾಯ ಹೇಳಿದ್ದರೂ, ಶುಭಮನ್ ಗಿಲ್ ನಾಯಕತ್ವದ ಟೆಸ್ಟ್ ತಂಡ ಲೀಡ್ಸ್ ಟೆಸ್ಟ್‌ನಲ್ಲಿ ಗಮನಾರ್ಹ ಪ್ರದರ್ಶನವನ್ನು ತೋರಿತ್ತು. ಯಶಸ್ವಿ ಜೈಸ್ವಾಲ್, ಶುಭಮನ್ ಗಿಲ್, ರಿಷಭ್ ಪಂತ್ ಹಾಗೂ ಕೆ.ಎಲ್ ರಾಹುಲ್ ಅವರಿಂದ ಐದು ಶತಕಗಳು ಮೂಡಿ ಬಂದಿದ್ದರೂ, ಭಾರತ ತಂಡ ಗೆಲ್ಲಲು ಸಾಧ್ಯವಾಗಿರಲಿಲ್ಲ. ಆ ಮೂಲಕ ಬೆನ್ ಸ್ಟೋಕ್ಸ್ ನಾಯಕತ್ವದ ಇಂಗ್ಲೆಂಡ್ ತಂಡ ಟೆಸ್ಟ್ ಸರಣಿಯಲ್ಲಿ 1-0 ಮುನ್ನಡೆಯನ್ನು ಪಡೆದಿತ್ತು.

ಉತ್ತಮ ಬ್ಯಾಟಿಂಗ್ ಲಯ: ಭಾರತ ತಂಡದ ಅಗ್ರ ಬಾಟಿಂಗ್ ಕ್ರಮಾಂಕ ಬಲಿಷ್ಠವಾಗಿದೆ. ಯಶಸ್ವಿ ಜೈಸ್ವಾಲ್, ನಾಯಕ ಶುಭಮನ್ ಗಿಲ್, ಕೆ.ಎಲ್ ರಾಹುಲ್ ಹಾಗೂ ರಿಷಭ್ ಪಂತ್ ಉತ್ತಮ ಲಯದಲ್ಲಿದ್ದಾರೆ. ಈ ನಾಲ್ವರು ಬ್ಯಾಟ್ಸ್‌ಮನ್‌ಗಳು ಕಳೆದ ಪಂದ್ಯದಲ್ಲಿ ಶತಕಗಳನ್ನು ಬಾರಿಸಿದ್ದರು. ಆದರೆ ಕೆಳ ಮಧ್ಯಮ ಕ್ರಮಾಂಕದ ಬ್ಯಾಟ್ಸ್‌ಮನ್‌ಗಳು ಎರಡನೇ ಟೆಸ್ಟ್‌ನಲ್ಲಿ ಕಮ್‌ಬ್ಯಾಕ್ ಮಾಡಬೇಕಾದ ಅಗತ್ಯವಿದೆ. ಲೀಡ್ಸ್‌ನಲ್ಲಿ ಕೆಳ ಮಧ್ಯಮ ಕ್ರಮಾಂಕದ ಬ್ಯಾಟ್ಸ್‌ಮನ್‌ಗಳು ಎರಡೂ ಇನಿಂಗ್ಸ್‌ಗಳಲ್ಲಿ ವೈಫಲ್ಯ ಅನುಭವಿಸಿದ್ದರು, ಅದು ಭಾರತ ಸೋಲಿಗೆ ಇದು ಕೂಡ ಒಂದು ಕಾರಣವಾಗಿತ್ತು.

ಬೌಲಿಂಗ್‌ನಲ್ಲಿ ಸುಧಾರಣೆ ಅಗತ್ಯ: ಕಳೆದ ಪಂದ್ಯದಲ್ಲಿ ಭಾರತ ತಂಡದ ಬೌಲಿಂಗ್ ವಿಭಾಗದಲ್ಲಿ ಜಸ್‌ಪ್ರೀತ್ ಬುಮ್ರಾ ಏಕಾಂಗಿ ಹೋರಾಟ ನಡೆಸಿದ್ದರು. ಅವರು ಪ್ರಥಮ ಇನಿಂಗ್ಸ್‌ನಲ್ಲಿ 5 ವಿಕೆಟ್ ಸಾಧನೆ ಮಾಡಿದ್ದರು. ಆದರೆ ಅವರಿಗೆ ಇತರೆ ಬೌಲರ್‌ಗಳು ಸರಿಯಾಗಿ ಜತೆ ನೀಡಿರಲಿಲ್ಲ. ಎರಡೂ ಇನಿಂಗ್ಸ್‌ಗಳಿಂದ ಪ್ರಸಿದ್ಧ್ ಕೃಷ್ಣ 5 ವಿಕೆಟ್ ಪಡೆದಿದ್ದರೂ ಹೆಚ್ಚಿನ ರನ್‌ಗಳನ್ನು ಬಿಟ್ಟುಕೊಟ್ಟಿದ್ದರು. ಮೊಹಮ್ಮದ್ ಸಿರಾಜ್ ಕೇವಲ ಎರಡು ವಿಕೆಟ್ ಪಡೆದಿದ್ದರು.

ಇಂಗ್ಲೆಂಡ್‌ಗೆ 2ನೇ ಗೆಲುವಿನ ನಿರೀಕ್ಷೆ: ಮೊದಲನೇ ಟೆಸ್ಟ್ ಪಂದ್ಯದಲ್ಲಿ ಗೆಲುವಿನ ವಿಶ್ವಾಸದಲ್ಲಿ ತೇಲುತ್ತಿರುವ ಇಂಗ್ಲೆಂಡ್ ತಂಡವು ಎಜ್‌ಬಾಸ್ಟನ್‌ನಲ್ಲಿಯೂ ಅದೇ ಲಯವನ್ನು ಮುಂದುವರಿಸಲು ಎದುರು ನೋಡುತ್ತಿದೆ. ಬೆನ್ ಡಕೆಟ್, ಒಲ್ಲಿ ಪೋಪ್, ಜೋ ರೂಟ್, ಹ್ಯಾರಿ ಬ್ರೂಕ್ ಮೊದಲನೇ ಟೆಸ್ಟ್ ಪಂದ್ಯದಲ್ಲಿ ಉತ್ತಮ ಬ್ಯಾಟಿಂಗ್ ಪ್ರದರ್ಶನವನ್ನು ತೋರಿದ್ದರು. ಅದೇ ಲಯವನ್ನು ಅವರೆಲ್ಲರೂ ಮುಂದುವರಿಸುವ ನಿರೀಕ್ಷೆ ತಂಡಕ್ಕಿದೆ. ಎರಡನೇ ಟೆಸ್ಟ್ ಪಂದ್ಯಕ್ಕೆ ಇಂಗ್ಲೆಂಡ್ ತಂಡವು ಆಡುವ ಹನ್ನೊಂದರ ಬಳಗವನ್ನು ಈಗಾಗಲೇ ಪ್ರಕಟಿಸಲಾಗಿದ್ದು, ಲೀಡ್ಸ್‌ನಲ್ಲಿ ಆಡಿದ್ದ ಅದೇ ತಂಡವನ್ನು ಈ ಪಂದ್ಯಕ್ಕೂ ಉಳಿಸಿಕೊಳ್ಳಲಾಗಿದೆ.

ಪಿಚ್ ಮತ್ತು ಹವಾಮಾನ ವರದಿ: ಬರ್ಮಿಂಗ್‌ಹ್ಯಾಮ್‌ನ ಎಜ್‌ಬಾಸ್ಟನ್ ಪಿಚ್ ಪಂದ್ಯದ ಆರಂಭದ ಎರಡು ದಿನ ವೇಗದ ಬೌಲಿಂಗ್‌ಗೆ ನೆರವು ನೀಡಲಿದೆ. ಆದರೆ ಮೂರನೇ ದಿನದ ಬಳಿಕ ಪಿಚ್ ಸ್ಪಿನ್ನರ್‌ಗಳಿಗೆ ನೆರವು ನೀಡಲಿದೆ. ಒಂದು ವೇಳೆ ದಿನವಿಡೀ ಮೋಡವಿದ್ದರೆ, ಆ ವಾತಾವರಣ ಬೌಲರ್‌ಗಳಿಗೆ ನೆರವಾಗಲಿದೆ.

ಪಂದ್ಯದ ಪ್ರಸಾರ ವಿವರ

ಪಂದ್ಯಾರಂಭ: ಮಧ್ಯಾಹ್ನ 3: 30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್
ಲೈವ್ ಸ್ಟ್ರೀಮಿಂಗ್: ಡಿಸ್ನಿ ಹಾಟ್‌ಸ್ಟಾರ್

ಇಂಗ್ಲೆಂಡ್ ತಂಡ

ಝ್ಯಾಕ್ ಕ್ರಾವ್ಲಿ, ಬೆನ್ ಡಕೆಟ್, ಒಲ್ಲಿ ಪೋಪ್, ಜೋ ರೂಟ್, ಹ್ಯಾರಿ ಬ್ರೂಕ್, ಬೆನ್ ಸ್ಟೋಕ್ಸ್ (ನಾಯಕ), ಜೇಮಿ ಸ್ಮಿತ್ (ವಿಕೆಟ್ ಕೀಪರ್), ಕ್ರಿಸ್ ವೋಕ್ಸ್, ಬ್ರೈಡನ್ ಕಾರ್ಸ್, ಜಾಶ್ ಟಾಂಗ್, ಶೋಯೆಬ್ ಬಷೀರ್.

ಭಾರತ ಸಂಭಾವ್ಯ ತಂಡ

ಯಶಸ್ವಿ ಜೈಸ್ವಾಲ್, ಕೆ.ಎಲ್ ರಾಹುಲ್, ಸಾಯಿ ಸುದರ್ಶನ್, ಶುಭಮನ್ ಗಿಲ್ (ನಾಯಕ), ರಿಷಭ್ ಪಂತ್, ಕರುಣ್ ನಾಯರ್, ರವೀಂದ್ರ ಜಡೇಜಾ, ನಿತೇಶ್ ಕುಮಾರ್ ರೆಡ್ಡಿ, ಅರ್ಷದೀಪ್ ಸಿಂಗ್, ಮೊಹಮ್ಮದ್ ಸಿರಾಜ್, ಪ್ರಸಿದ್ಧ್ ಕೃಷ್ಣ.

ಮುಖಾಮುಖಿ ವಿವರ

ಎಜ್‌ಬಾಸ್ಟನ್‌ನಲ್ಲಿ ಭಾರತ ತಂಡ ಇಲ್ಲಿಯವರೆಗೂ 8 ಟೆಸ್ಟ್ ಪಂದ್ಯಗಳನ್ನು ಆಡಿದೆ. ಇದರಲ್ಲಿ 7 ರಲ್ಲಿ ಸೋಲು ಅನುಭವಿಸಿದ್ದು, ಇನ್ನುಳಿದ ಒಂದು ಪಂದ್ಯ ಡ್ರಾನಲ್ಲಿ ಅಂತ್ಯ ಕಂಡಿತ್ತು. 1986ರಲ್ಲಿ ಕಪಿಲ್ ದೇವ್ ನಾಯಕತ್ವದಲ್ಲಿ ಭಾರತ ತಂಡ ಒಂದು ಪಂದ್ಯದಲ್ಲಿ ಡ್ರಾ ಸಾಧಿಸಿತ್ತು. 2022ರಲ್ಲಿ ಇದೇ ಅಂಗಣದಲ್ಲಿ ಭಾರತ ಹಾಗೂ ಇಂಗ್ಲೆಂಡ್ ತಂಡಗಳು ಮುಖಾಮುಖಿಯಾಗಿದ್ದವು. ಆ ವೇಳೆ ಭಾರತ ನೀಡಿದ್ದ 378 ರನ್‌ಗಳ ಗುರಿಯನ್ನು ಇಂಗ್ಲೆಂಡ್ ಬೆಂಬತ್ತಿ ಆಂಗ್ಲರು ಗೆಲುವು ಪಡೆದಿದ್ದರು.

ಐಸಿಸಿ ಮಹಿಳಾ ಟಿ20 ಕ್ರಿಕೆಟ್ ಬ್ಯಾಟಿಂಗ್ ಶ್ರೇಯಾಂಕ ಪ್ರಕಟ

3ನೇ ಸ್ಥಾನಕ್ಕೇರಿದ ಮಂಧನಾ

ದುಬೈ: ಇಂಗ್ಲೆಂಡ್ ಎದುರಿನ ಮೊದಲ ಟಿ20 ಪಂದ್ಯದಲ್ಲಿ ಸಿಡಿಲಬ್ಬರದ ಆಟವಾಡಿ ಶತಕ ಸಿಡಿಸಿದ್ದ ಟೀಮ್ ಇಂಡಿಯಾದ ಆರಂಭಿಕ ಎಡಗೈ ಆಟಗಾರ್ತಿ ಸ್ಮೃತಿ ಮಂಧನಾ ಅವರು ಐಸಿಸಿ ಮಹಿಳಾ ಟಿ20 ಕ್ರಿಕೆಟ್‌ನ ಬ್ಯಾಟಿಂಗ್ ಶ್ರೇಯಾಂಕದಲ್ಲಿ 3ನೇ ಸ್ಥಾನಕ್ಕೆ ಜಿಗಿದಿದ್ದಾರೆ. ಇದು ಅವರ ಜೀವನಶ್ರೇಷ್ಠ ಶ್ರೇಯಾಂಕವಾಗಿದ್ದು, ಅವರು ಒಂದು ಸ್ಥಾನದ ಪ್ರಗತಿ ಸಾಧಿಸಿದ್ದಾರೆ. ಎರಡನೇ ಸ್ಥಾನದಲ್ಲಿರುವ ವೆಸ್ಟ್ ಇಂಡೀಸ್‌ನ ಹೇಲಿ ಮ್ಯಾಥ್ಯೂಸ್‌ಗಿಂತ ಕೇವಲ ಮೂರು ಅಂಕಗಳ ಹಿಂದಿದ್ದಾರೆ. ಆಸ್ಟ್ರೇಲಿಯಾದ ಬೆತ್ ಮೂ ಅಗ್ರಸ್ಥಾನ ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಇಂಗ್ಲೆಂಡ್ ವಿರುದ್ಧ ಉಳಿದಿರುವ ನಾಲ್ಕು ಪಂದ್ಯಗಳಲ್ಲಿ ಮಂಧಾನ ಉತ್ತಮ ಬ್ಯಾಟಿಂಗ್ ಪ್ರದರ್ಶನ ತೋರಿದರೆ ವಿಶ್ವದ ನಂ.ಒನ್. ಬ್ಯಾಟರ್ ಆಗುವ ಅವಕಾಶವನ್ನು ಹೊಂದಿದ್ದಾರೆ. ಅಗ್ರ ಶ್ರೇಯಾಂಕಿತ ಆಸ್ಟ್ರೇಲಿಯಾದ ಬೆತ್ ಮೂನಿ 794 ರೇಟಿಂಗ್ ಪಾಯಿಂಟ್‌ಗಳನ್ನು ಹೊಂದಿದ್ದರೆ, ಮಂಧನಾ 771 ರೇಟಿಂಗ್ ಹೊಂದಿದ್ದಾರೆ. ಮಂಧನಾ ಮಾತ್ರವಲ್ಲದೆ, ಆರಂಭಿಕ ಆಟಗಾರ್ತಿ ಶಫಾಲಿ ವರ್ಮಾ ಮತ್ತು ಹರ್ಲೀನ್ ಡಿಯೋಲ್ ಕೂಡ ತಮ್ಮ ಬ್ಯಾಟಿಂಗ್ ಶ್ರೇಯಾಂಕದಲ್ಲಿ ಜಿಗಿತ ಕಂಡಿದ್ದಾರೆ.

ಅಕ್ಟೋಬರ್ 2024ರ ನಂತರ ಮೊದಲ ಬಾರಿಗೆ ಟಿ20 ಆಡಿದ್ದ ಶಫಾಲಿ 13ನೇ ಸ್ಥಾನದಿಂದ 12ನೇ ಸ್ಥಾನಕ್ಕೆ ಜಿಗಿದಿದ್ದಾರೆ. ಇಂಗ್ಲೆಂಡ್ ಎದುರಿನ ಮೊದಲ ಪಂದ್ಯದಲ್ಲಿ 23 ಎಸೆತಗಳಿಂದ 43 ರನ್ ಬಾರಿಸಿದ್ದ ಹರ್ಲೀನ್ ಡಿಯೋಲ್ 86ನೇ ಸ್ಥಾನದಲ್ಲಿ ಕಾಣಿಸಿಕೊಂಡಿದ್ದಾರೆ.

ಟಾಪ್-5 ಬ್ಯಾಟರ್ಸ್

- ಬೆತ್ ಮೂನಿ ▸▸ ಆಸ್ಟ್ರೇಲಿಯಾ
- ಹೇಲಿ ಮ್ಯಾಥ್ಯೂಸ್ ▸▸ ವೆಸ್ಟ್ ಇಂಡೀಸ್
- ಸ್ಮೃತಿ ಮಂಧನಾ ▸▸ ಭಾರತ
- ತಾಲಿಯಾ ಮೆಕ್‌ಗ್ರಾತ್ ▸▸ ಆಸ್ಟ್ರೇಲಿಯಾ
- ಲಾರಾ ವೋಲ್ವಾರ್ಡ್ಟ್ ▸▸ ದಕ್ಷಿಣ ಆಫ್ರಿಕಾ

ಗುಜರಾತ್ ಕ್ರೀಡಾ ಸಚಿವ ಹರ್ಷ ಸಾಂಘ್ವಿ ನೇತೃತ್ವದ ನಿಯೋಗ

ಒಲಿಂಪಿಕ್ ಕಚೇರಿಗೆ ಭಾರತೀಯ ನಿಯೋಗ ಭೇಟಿ

ದೆಹಲಿ: ಇತ್ತೀಚೆಗಷ್ಟೇ ಅಂತಾರಾಷ್ಟ್ರೀಯ ಒಲಿಂಪಿಕ್ ಸಮಿತಿಯ (ಐಒಸಿ) ನೂತನ ಅಧ್ಯಕ್ಷೆ ಕಿಸ್ಟಿ ಕೋವೆಂಟ್ರಿ ಅವರು ಒಲಿಂಪಿಕ್ ಆತಿಥೇಯ ನಗರ ಆಯ್ಕೆ ಪ್ರಕ್ರಿಯೆಗೆ ತಡೆಯೊಡ್ಡಿದ್ದ ಬೆನ್ನಲ್ಲೇ, ಕೂಟದ ಬಿಡ್ಡಿಂಗ್ ಪ್ರಯತ್ನದಲ್ಲಿರುವ ಭಾರತವು ಅಂತಾರಾಷ್ಟ್ರೀಯ ಒಲಿಂಪಿಕ್ ಸಮಿತಿಯ (ಐಒಸಿ) ಪ್ರಧಾನ ಕಚೇರಿಗೆ 3 ದಿನಗಳ ಪ್ರಮುಖ ಭೇಟಿಗಾಗಿ ಸ್ವಿಟ್ಜರ್‌ಲ್ಯಾಂಡ್‌ನ ಲೌಸೇನ್ ತಲುಪಿದೆ. ಇದು ಒಲಿಂಪಿಕ್ ರಾಜಧಾನಿಗೆ ಭಾರತದ ಮೊದಲ ಅಧಿಕೃತ ಭೇಟಿಯಾಗಿದೆ.

ಗುಜರಾತ್ ಕ್ರೀಡಾ ಸಚಿವ ಹರ್ಷ ಸಾಂಘ್ವಿ ನೇತೃತ್ವದ ನಿಯೋಗದಲ್ಲಿ ಭಾರತೀಯ ಒಲಿಂಪಿಕ್ ಅಸೋಸಿಯೇಷನ್(ಐಒಎ) ಅಧ್ಯಕ್ಷೆ ಪಿ.ಟಿ ಉಷಾ, ಕ್ರೀಡಾ ಕಾರ್ಯದರ್ಶಿ ಹರಿರಂಜನ್ ರಾವ್, ಗುಜರಾತ್ ಮುಖ್ಯ ಕ್ರೀಡಾ ಕಾರ್ಯದರ್ಶಿ ಅಶ್ವಿನಿ ಕುಮಾರ್ ಮತ್ತು ಕಾರ್ಯದರ್ಶಿ ತೆನ್ನರಸನ್ ಒಲಿಂಪಿಕ್ ಪ್ರಧಾನ ಕಚೇರಿಗೆ ಭೇಟಿ ನೀಡಿದ ಪ್ರಮುಖರಾಗಿದ್ದಾರೆ.

ಭಾರತೀಯ ಒಲಿಂಪಿಕ್ ಒಕ್ಕೂಟವು ಕಳೆದ ವರ್ಷವೇ ಆತಿಥ್ಯದ ಪ್ರಸ್ತಾವ ಸಲ್ಲಿಸಿತ್ತು. ಭಾರತದೊಂದಿಗೆ ಕತಾರ್ ಮತ್ತು ಸೌದಿ ಅರೇಬಿಯಾ ಸೇರಿದಂತೆ 10 ರಾಷ್ಟ್ರಗಳು ಆಯೋಜನೆಯ ಇಂಗಿತವನ್ನು ವ್ಯಕ್ತಪಡಿಸಿವೆ. 2036ರ ಒಲಿಂಪಿಕ್ಸ್ ಅನ್ನು ಯಾವ ರಾಷ್ಟ್ರ ಆಯೋಜಿಸಲಿದೆ ಎಂಬುದು 2026ರಲ್ಲೇ ಘೋಷಣೆಯಾಗಲಿದೆ. ಐಒಸಿ ಪ್ರಧಾನ ಕಚೇರಿಗೆ ಭೇಟಿ ನೀಡಿರುವ ಭಾರತೀಯ ನಿಯೋಗ ಒಲಿಂಪಿಕ್ಸ್ ಆಯೋಜನೆಯ ಸಾಧಕ ಭಾದಕಗಳ ಕುರಿತು ಮತ್ತು ಆಯೋಜನೆಗೆ ಅವಕಾಶ ಕೋರಿ ಅನೌಪಚಾರಿಕ ಮಾತುಕತೆ ನಡೆಸಿದೆ ಎಂದು ಮೂಲಗಳು ಹೇಳಿವೆ.

ಕೆಲವು ದಿನಗಳ ಹಿಂದೆ ಕೋವೆಂಟ್ರಿ ಅವರು, 'ಕೆಲವೊಂದು ಪ್ರಕ್ರಿಯೆಗಳು ಪ್ರಗತಿಯಲ್ಲಿವೆ, ಭವಿಷ್ಯದಲ್ಲಿ ಯಾವ ರಾಷ್ಟ್ರದಲ್ಲಿ ಒಲಿಂಪಿಕ್ಸ್ ಆಯೋಜನೆಗೊಳ್ಳಲಿದೆ ಎಂಬ ಚರ್ಚೆಯಲ್ಲಿ ಸದಸ್ಯರ ಅಭಿಪ್ರಾಯ ಮುಖ್ಯ. ನನ್ನಲ್ಲೂ ಹಲವು ಆಲೋಚನೆಗಳಿದ್ದು, ಬಹುಶಃ ಮುಂದಿನ ದಿನಗಳಲ್ಲಿ ಅದನ್ನು ಹಂಚಿಕೊಳ್ಳುತ್ತೇನೆ' ಎಂದು ಹೇಳಿದ್ದರು.



ಅಂತಾರಾಷ್ಟ್ರೀಯ ಒಲಿಂಪಿಕ್ ಸಮಿತಿಯ ಪ್ರಧಾನ ಕಚೇರಿಗೆ ಭೇಟಿ ನೀಡಿದ ಭಾರತದ ನಿಯೋಗ.

ಟಾಕೀಸ್

ಹುಟ್ಟುಹಬ್ಬದ ಸಂಭ್ರಮದಲ್ಲಿ ಗಣೇಶ್

ನಟ ಗಣೇಶ್ ಹುಟ್ಟುಹಬ್ಬದ ಸಂಭ್ರಮದಲ್ಲಿದ್ದಾರೆ. ಅಭಿಮಾನಿಗಳು ನೆಚ್ಚಿನ ನಟನ ಹುಟ್ಟುಹಬ್ಬವನ್ನು ಆಚರಿಸಲು ಕಾತರರಾಗಿದ್ದಾರೆ. ಗಣೇಶ್ ಸದ್ಯ ಪಿನಾಕ ಚಿತ್ರದಲ್ಲಿ ನಟಿಸುತ್ತಿದ್ದು, ಗಣಿಯ ಹುಟ್ಟುಹಬ್ಬಕ್ಕೆ ಪಿನಾಕ ಚಿತ್ರತಂಡ ಹೊಸ ಪೋಸ್ಟರ್ ಬಿಡುಗಡೆ ಮಾಡುವ ಮೂಲಕ ಹುಟ್ಟುಹಬ್ಬಕ್ಕೆ ಶುಭಕೋರಿದೆ. ರಣರಂಗದಲ್ಲಿ ಕುದುರೆಯ ಮೇಲೆ ಕತ್ತಿ ಹಿಡಿದು ಕುಳಿತ ಗಣೇಶ್, ವೀರ ಯೋಧನಂತೆ ಮಿಂಚಿದ್ದಾರೆ. ಇದನ್ನು ನೋಡಿದರೆ ಪಿನಾಕ ಐತಿಹಾಸಿಕ ಕಥೆಯ ಜತೆಗೆ ಥ್ರಿಲ್ಲಿಂಗ್ ಅಂಶಗಳು ಬೆರೆತಿವೆ ಎಂಬುದು ತಿಳಿಯುತ್ತದೆ. ಧನಂಜಯ ನಿರ್ದೇಶನದ ಈ ಚಿತ್ರ ಅದ್ದೂರಿಯಾಗಿ ಮೂಡಿಬರುತ್ತಿದ್ದು, ಪೀಪಲ್ ಮೀಡಿಯಾ ಫ್ಯಾಕ್ಟರಿ ಬ್ಯಾನರ್‌ನಲ್ಲಿ ನಿರ್ಮಾಣವಾಗುತ್ತಿದೆ. ಬೆಂಗಳೂರಿನ ಹೊರ ವಲಯದಲ್ಲಿ ಅದ್ದೂರಿ ಸೆಟ್ ಹಾಕಿ ಚಿತ್ರೀಕರಣ ನಡೆಸಲಾಗುತ್ತಿದೆ.

ಈ ಚಿತ್ರದ ಜತೆಗೆ ಯುವರ್ ಸಿನ್ಸಿಯರ್ಲಿ ರಾಮ್ ಸಿನಿಮಾದಲ್ಲಿಯೂ ಗಣೇಶ್ ನಟಿಸುತ್ತಿದ್ದಾರೆ. ಈ ಚಿತ್ರದಲ್ಲಿ ರಮೇಶ್ ಅರವಿಂದ್ ಕೂಡ ಅಭಿನಯಿಸುತ್ತಿದ್ದು, ಇಬ್ಬರು ತ್ಯಾಗರಾಜರು ಒಂದಾಗಿರುವ ಈ ಚಿತ್ರ ಆರಂಭದಿಂದಲೂ ಕುತೂಹಲ ಮೂಡಿಸಿದೆ. ಈ ಸಿನಿಮಾದ ಚಿತ್ರೀಕರಣವೂ ಭರಸದಿಂದ ಸಾಗುತ್ತಿದೆ. ಈ ವರ್ಷವೇ ಎರಡು ಸಿನಿಮಾಗಳು ತೆರೆಗೆ ಬರುವ ನಿರೀಕ್ಷೆಯಿದೆ. ಗಣೇಶ್ ಪ್ರತಿವರ್ಷವೂ ತಮ್ಮ ಹುಟ್ಟುಹಬ್ಬವನ್ನು ಅಭಿಮಾನಿಗಳೊಂದಿಗೆ ಆಚರಿಸಿಕೊಳ್ಳುತ್ತಿದ್ದರು. ಆದರೆ ಈ ಬಾರಿ ಅಪಾರ ವೆಚ್ಚದಲ್ಲಿ ಅದ್ದೂರಿಯಾಗಿ ಮೂಡಿಬರುತ್ತಿರುವ ಪಿನಾಕ ಚಿತ್ರೀಕರಣದಲ್ಲಿ ಗಣೇಶ್ ಬ್ಯುಸಿಯಾಗಿರುವುದರಿಂದ ಗಣೇಶ್ ಅಭಿಮಾನಿಗಳ ಜತೆಗೆ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿಲ್ಲ. ಇದಕ್ಕೆ ಗಣೇಶ್ ವಿಷಾದ ವ್ಯಕ್ತಪಡಿಸಿದ್ದಾರೆ. ತಾವು ಅಂದುಕೊಂಡ ಹಾಗೆ ಸಿನಿಮಾ ಮಾಡಿ ಅಭಿಮಾನಿಗಳಿಗೆ ಅದು ಮೆಚ್ಚುಗೆಯಾಗಿ ಅವರು ಚಿತ್ರಮಂದಿರಗಳಿಗೆ ಬಂದರೆ ಅದಕ್ಕಿಂತ ಖುಷಿ ಕಲಾವಿದರಿಗೆ ಮತ್ತೊಂದಿಲ್ಲ ಎಂದು ಗಣೇಶ್ ಹೇಳಿದ್ದಾರೆ.

ಆಂಜನೇಯನ ಅವತಾರವೆತ್ತಿದ ಗಣಿ

ರಮೇಶ್ ಅರವಿಂದ್ ಹಾಗೂ ಗೋಲ್ಡನ್ ಸ್ಟಾರ್ ಗಣೇಶ್ ಕಾಮಬಿ ನೇಷನ್‌ನಲ್ಲಿ ಯುವರ್ ಸಿನ್ಸಿಯರ್ಲಿ ರಾಮ್ ಚಿತ್ರ ಮೂಡಿಬರುತ್ತಿದೆ. ಈ ಚಿತ್ರದ ಶೂಟಿಂಗ್ ಭರದಿಂದ ಸಾಗುತ್ತಿದ್ದು, ಗಣೇಶ್ ಹುಟ್ಟುಹಬ್ಬಕ್ಕೆ ಚಿತ್ರತಂಡ ಹೊಸ ಪೋಸ್ಟರ್ ಬಿಡುಗಡೆ ಮಾಡಿದೆ. ಗಣಿ ಜನ್ಮದಿನಕ್ಕೆ ಅನಾವರಣಗೊಂಡಿರುವ ಪೋಸ್ಟರ್ ಬಹಳ ವಿಶೇಷವಾಗಿದೆ.

ಭಜರಂಗಿ ಅವತಾರದಲ್ಲಿ ಮಳೆ ಹುಡುಗ ದರ್ಶನ ಕೊಟ್ಟಿದ್ದಾರೆ. ಹಿಮಾಲಯದ ಬ್ಯಾಕ್ ಡ್ರಾಪ್‌ನಲ್ಲಿ ಮೂಡಿಬಂದಿ ರುವ ಪೋಸ್ಟರ್‌ನಲ್ಲಿ ರಾಮ ಸೈಕಲ್ ಮೇಲೆ ಕುಳಿತಿದ್ದು, ಭಜರಂಗಿ ಭುಜದಲ್ಲಿ ಪೋಸ್ಟ್ ಮ್ಯಾನ್ ಬ್ಯಾಗ್ ಕಾಣಿಸುತ್ತದೆ. ಈ ಪೋಸ್ಟರ್ ಚಿತ್ರದ ಬಗ್ಗೆ ನಿರೀಕ್ಷೆ ಹೆಚ್ಚಿಸಿದೆ. ಪುಷ್ಪಕ ವಿಮಾನ, ಇನ್ಸ್‌ಪೆಕ್ಟರ್ ವಿಕ್ರಮ್, ಮಾನ್ಸೂನ್ ರಾಗದಂತಹ ಸಿನಿಮಾಗಳನ್ನು ನಿರ್ಮಾಣ ಮಾಡಿರುವ ವಿಖ್ಯಾತ್ ಈ ಚಿತ್ರವನ್ನು ನಿರ್ದೇಶನ ಮಾಡುತ್ತಿದ್ದು, ಈ ಸಿನಿಮಾದ ಮೂಲಕ ನಿರ್ದೇಶಕರಾಗಿ ಗುರುತಿಸಿಕೊಳ್ಳುತ್ತಿದ್ದಾರೆ. ಐರಾ ಫಿಲಂಸ್ ಮತ್ತು ದಿ ರಾಯಲ ಸ್ಟುಡಿಯೋಸ್ ಬ್ಯಾನರ್‌ನಲ್ಲಿ ಚಿತ್ರ ನಿರ್ಮಾಣ ವಾಗುತ್ತಿದೆ.

ಜಸ್ಟ್‌ಮ್ಯಾರೀಡ್‌ನಲ್ಲಿ ಅಚ್ಯುತ್

ಸಂಗೀತ ನಿರ್ದೇಶಕ ಅಜನೀಶ್ ಲೋಕನಾಥ್ ನಿರ್ಮಾಣ ಮಾಡುತ್ತಿರುವ ಜಸ್ಟ್ ಮ್ಯಾರೀಡ್ ಟೈಟಲ್‌ನಲ್ಲಿಯೇ ಕುತೂಹಲ ಮೂಡಿಸಿದೆ. ತಾರಾಗಣದ ಮೂಲಕವೂ ಗಮನಸೆಳೆಯುತ್ತಿದೆ. ಇಲ್ಲಿ ನವಿರಾದ ಪ್ರೇಮ ಕಥೆಯ ಜತೆಗೆ ಕೌಟುಂಬಿಕ ಸ್ಟೋರಿಯೂ ಇದೆ ಎಂಬುದು ತಿಳಿಯುತ್ತದೆ. ಸಿ.ಆರ್.ಬಾಬಿ ಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಬಿಗ್ ಬಾಸ್ ಖ್ಯಾತಿಯ ಶೈನ್ ಶೆಟ್ಟಿ ನಾಯಕನಾಗಿ ನಟಿಸಿದ್ದು, ಅಂಕಿತಾ ಅಮರ್ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ.

ತಮ್ಮ ಅಮೋಘ ಅಭಿನಯದ ಮೂಲಕ ಅಭಿಮಾನಿಗಳ ಮನಗೆದ್ದಿರುವ ಅಚ್ಯುತ್ ಕುಮಾರ್ ಕೂಡ ಜಸ್ಟ್ ಮ್ಯಾರೀಡ್ ಚಿತ್ರದಲ್ಲಿ ಪ್ರಮುಖ ಪಾತ್ರ ದಲ್ಲಿ ಅಭಿನಯಿಸಿದ್ದಾರೆ. ಚಿತ್ರತಂಡ ಅವರ ಪಾತ್ರದ ಫಸ್ಟ್‌ಲುಕ್ ರಿಲೀಸ್ ಮಾಡಿದೆ. ಈ ಚಿತ್ರದಲ್ಲಿ ಅಚ್ಯುತ್ ಕುಮಾರ್, ಕರುಣಾಕರ ಎಂಬ ಪಾತ್ರವನ್ನು ನಿರ್ವಹಿಸಿದ್ದಾರೆ. ವಿಭಿನ್ನ ಪಾತ್ರ ಹಾಗೂ ನಟನೆಯಲ್ಲಿ ಗಮನಸೆಳೆಯುವ ಅಚ್ಯುತ್ ಕುಮಾರ್ ಈ ಸಿನಿಮಾದಲ್ಲಿಯೂ ವಿಭಿನ್ನ ವಾಗಿಯೇ ಕಂಗೊಳಿಸಲಿದ್ದಾರೆ ಎಂಬುದು ಸದ್ಯ ಬಿಡುಗಡೆಯಾಗಿರುವ ಫಸ್ಟ್ ಲುಕ್‌ನಿಂದ ತಿಳಿಯು ತ್ತದೆ. ಚಿತ್ರೀಕರಣ ಮುಗಿಸಿರುವ ಜಸ್ಟ್ ಮ್ಯಾರೀಡ್ ಶೀಘ್ರದಲ್ಲಿಯೇ ತೆರೆಗೆ ಬರಲಿದೆ. ಸಿನಿಮಾದ ಹಾಡುಗಳಿಗೆ ಅಜನೀಶ್ ಸಂಗೀತ ಸಂಯೋಜಿಸಿದ್ದು, ಹಾಡುಗಳನ್ನು ಕೇಳಲು ಸಂಗೀತ ಪ್ರಿಯರು ಕಾತರರಾಗಿದ್ದಾರೆ.